3. ವಿತ್ತೀಯ ಕಾರ್ಯಕಲಾಪಗಳು

(ಅ) 2015–16 ನೇ ಸಾಲಿನ ಈ ಕೆಳಕಂಡ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ

ಬೇಡಿಕೆ ಸಂಖ್ಯೆ 01 : ಕೃಷಿ ಮತ್ತು ತೋಟಗಾರಿಕೆ.

ಬೇಡಿಕೆ ಸಂಖ್ಯೆ 07: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್

ಶ್ರೀ ಬಸವರಾಜ ಬೊಮ್ಮಾಯಿ (ಶಿಗ್ಗಾಂವಿ):– ಮಾನ್ಯ ಅಧ್ಯಕ್ಷರೆ, ಕೃಷಿ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುವ ಅವಕಾಶವನ್ನು ತಾವು ಕೊಟ್ಟಿದ್ದೀರಿ, ತಮಗೆ ಧನ್ಯವಾದಗಳು. ಮಾನ್ಯ ಸಭಾಧ್ಯಕ್ಷರೆ, ಕೃಷಿ ಬಗ್ಗೆ ಬಹಳಷ್ಟು ಚರ್ಚೆ ಎಲ್ಲಾ ಸದನಗಳಲ್ಲಿ ಪ್ರತಿ ಬಾರಿಯೂ ಆಗಿದೆ. ವಿಶ್ವದಲ್ಲಿ ಎಲ್ಲಾ ಕಡೆಯೂ ಆಗುತ್ತದೆ. ಆದರೂ ಕೂಡ ಹೊಸ ಹೊಸ ವಿಚಾರಗಳು ಅನುಭವದ ಮುಖಾಂತರ ನಮಗೆ ಬರುತ್ತದೆ. ಮಾನ್ಯ ಸಭಾಧ್ಯಕ್ಷರೆ, Agriculture ಎಂದರೆ, ಅದರಲ್ಲಿ ಕೇವಲ ಆಹಾರಧಾನ್ಯ ಉತ್ಪಾದನೆ ಅಷ್ಟೇ ಅಲ್ಲ, ಆ ಉತ್ಪಾದನೆಯ ಜೊತೆ ಜೊತೆಗೆ ಇಡೀ ನಮ್ಮ ಭೂಮಂಡಲದ ಫಲವತ್ತಾದ ಭೂಮಿಯ ರಕ್ಷಣೆ, ಅದರ ಜೊತೆ ಜೊತೆಗೆ ಆಗುವಂಥ ಒಂದು ಪ್ರಕ್ರಿಯೆ. ತಲಾತಲಾಂತರದಿಂದ ನಮ್ಮ ಹಿರಿಯರು ನಮಗೆ ಇದನ್ನು ಬಳುವಳಿಯಾಗಿ ಕೊಟ್ಟಿದ್ದಾರೆ. ಒಂದು ಕ್ಷಣ ನಾವು ಯೋಚನೆ ಮಾಡೋಣ. ಕೃಷಿ ಇಲ್ಲದಿದ್ದರೆ ಏನಾಗುತ್ತಿತ್ತು? ಭೂಮಿ ಇದೇ ರೀತಿ ಉಳಿಯುತ್ತಿತ್ತಾ? ಬಂಜರಾಗುತ್ತಿರಲಿಲ್ಲವೇ? ಆಹಾರಧಾನ್ಯ ಉತ್ಪಾದನೆಯನ್ನು ಒಂದು ಕಡೆ ಇಡೋಣ. ಇವತ್ತು ವಿಜ್ಞಾನಿಗಳು ಹೇಳುತ್ತಾರೆ, ಸುಮಾರು ಒಂದು ಇಂಚು ಫಲವತ್ತಾದ ಮಣ್ಣು ಭೂಮಿ ಮೇಲೆ ಸ್ಥಾಪನೆ ಆಗಬೇಕಾದರೆ 500 ವರ್ಷಗಳು ಬೇಕಾಗುತ್ತದೆ. ಈ ಸೂಕ್ಷ್ಮತೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಇದೇ ಒಂದೇ ನೋಡಿ, ನಿಸರ್ಗದಲ್ಲಿರುವಂಥದ್ದು renewable ಇದೆ. ನೀರು ತೆಗೆದುಕೊಳ್ಳಿ, energy ತೆಗೆದುಕೊಳ್ಳಿ, ನಮ್ಮ ಭೂಮಿ ತೆಗೆದುಕೊಳ್ಳಿ, ಮನುಷ್ಯ ತಯಾರು ಮಾಡುವುದಕ್ಕೆ renewable ಇಲ್ಲ. ನಿಸರ್ಗ ಸಿದ್ಧಮಾಡಿರುವಂಥದ್ದು, ನಿಸರ್ಗದಲ್ಲಿರುವಂಥದ್ದು ಮಾತ್ರ

renewable ಇದೆ. ಎಲ್ಲಿಯವರೆಗೆ ಆ ನಿಸರ್ಗದ ಜೊತೆಗೆ ನಮ್ಮ ಕೃಷಿ ಚಟುವಟಿಕೆಗಳು ಇರುತ್ತವೆ, ಅಲ್ಲಿಯವರೆಗೆ ನಮ್ಮ ಕೃಷಿಯನ್ನು ನಾವು ಸುರಕ್ಷಿತವಾಗಿ ಮುಂದಿನ ಪೀಳಿಗೆಗೆ ಬಿಟ್ಟುಕೊಡಬಹುದು. ನಮ್ಮ ಕೃಷಿ ಚಟುವಟಿಕೆಗಳು, ಸಂಶೋಧನೆಗಳು ಅದರ ತದ್ವಿರುದ್ಧವಾಗಿ ಆದರೆ ಖಂಡಿತವಾಗಿಯೂ ಮಾರಕವಾಗುತ್ತದೆ. ಆದ್ದರಿಂದ ಕೃಷಿ ಇಲಾಖೆಯ ಮೇಲೆ ಬಹಳ ದೊಡ್ಡ ಜವಾಬ್ದಾರಿ ಇದೆ. ಕೇವಲ ಎಷ್ಟು ಆಹಾರ ಉತ್ಪಾದನೆ ಆಯಿತು? ಎಷ್ಟು ಕಡಿಮೆ ಆಯಿತು? ಮಳೆ ಬಂದಾಗ ಏನಾಯಿತು? ಇವೆಲ್ಲಾ ವಿಚಾರಗಳ ಜೊತೆಜೊತೆಗೆ ಈ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಂಡ ಕೃಷಿ ಇಲಾಖಾ ಮುಖ್ಯಸ್ಥರು ಇವತ್ತು ನಮಗೆ ಬೇಕಾಗಿದೆ. ಆದರೆ ನಮ್ಮ ಈ ವ್ಯವಸ್ಥೆಯಲ್ಲಿ ಕೃಷಿಗೆ ಎಷ್ಟರಮಟ್ಟಿಗೆ ಪ್ರಾಧಾನ್ಯತೆ ಕೊಡಬೇಕಾಗಿತ್ತೋ ಅದನ್ನು ಕೊಡುತ್ತಿಲ್ಲ. ಕೃಷಿ ಇಲಾಖೆಯ ಮುಖ್ಯಸ್ಥರನ್ನು ನಾವು ಬೇಕಾಬಿಟ್ಟಿಯಾಗಿ ನೇಮಿಸುತ್ತೇವೆ, ಬೇಕಾಬಿಟ್ಟಿಯಾಗಿ ವರ್ಗಾಯಿಸುತ್ತೇವೆ. ಈ ಆಡಳಿತ ವರ್ಗದಲ್ಲಿ ಏನಿದೆ ಎಂದರೆ, Agriculture Commissioner ಆಗುವುದು ಮತ್ತು Agriculture Director ಆಗುವುದು, ಅದು ಒಂದು ತರಹ ಎರಡನೇ ದರ್ಜೆಯ ಕೆಲಸ ಎನ್ನುವ ರೀತಿಯ ಮನೋಭಾವನೆಯಲ್ಲಿ ಈ ಇಲಾಖೆಯನ್ನು ಇವತ್ತು ನಡೆಸಿಕೊಂಡು ಬಂದಿದ್ದಾರೆ. ಅದು ಇವತ್ತು implementation ನಲ್ಲಿ ನಮಗೆ ಗೊತ್ತಾಗುತ್ತಿದೆ.

ಇವತ್ತಿನ ದಿವಸ ಈ demands ಮೇಲೆ ನಾವು ಏನು ಚರ್ಚೆ ಮಾಡಬೇಕಾಗಿದೆ ಅದರ ಹಿನ್ನೆಲೆಯಲ್ಲಿ ಇವತ್ತು ನಮಗೆ ಏನು ಬಜೆಟ್ ಕೊಟ್ಟಿದ್ದಾರೆ, ಈ ಬಜೆಟ್‌ನಲ್ಲಿ ಕೊಟ್ಟಿರುವ ಮೊತ್ತಕ್ಕೆ ಸದನ ಏನು ಒಪ್ಪಿಗೆ ಕೊಡಬೇಕಾಗಿದೆ, ಇದರ ಹಿನ್ನೆಲೆ, ಹಿಂದಿನ ವರ್ಷ ಯಾವ performance ಇತ್ತು, ಸ್ಥಿತಿಗತಿ ಏನಿತ್ತು, ಅದರ ಆಧಾರದ ಮೇಲೆ ಇವತ್ತು ಬಜೆಟ್ ಅನ್ನು ನಾವು pass ಮಾಡಬೇಕಾಗಿದೆ ಹಾಗೂ ಬಜೆಟ್ ಅನ್ನು ನಿರ್ವಹಣೆ ಮಾಡಬೇಕಾಗಿದೆ. ಹಿಂದಿನ ವರ್ಷದ ವಿಚಾರವನ್ನು ನಾವು ಗಣನೆಗೆ ತೆಗೆದುಕೊಂಡರೆ, 2015–16ನೇ ಸಾಲಿಗೆ 3,835 ಕೋಟಿ ರೂ.ಗಳ allocation ನಮಗೆ ಇದೆ. ನಾವು ಹಿಂದಿನ ವರ್ಷದ ಅಂಕಿ–ಅಂಶ ನೋಡಿದಾಗ

growth ನಲ್ಲಿ ಸುಮಾರು 4.5 ಕಡಿಮೆ ಆಗಿದೆ. ಅಂದರೆ ಅದರ ಹಿಂದಿನ ವರ್ಷ ಸುಮಾರು 9.4 ಇತ್ತು, ಅದು ಈಗ 4.5ಕ್ಕೆ ಕಡಿಮೆ ಆಗಿದೆ. ಅದಕ್ಕೆ ಸಕಾರಣಗಳು ಇರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ಅದರ ಜೊತೆಗೆ, ನಮ್ಮ ಆಹಾರದ ಉತ್ಪಾದನೆ ಬಗ್ಗೆ ಹೇಳುವುದಾದರೆ, ನಾವು 119 ಲಕ್ಷ ಟನ್‌ಗಳ ಆಹಾರ ಉತ್ಪಾದನೆ ಮಾಡುತ್ತೇವೆಂದು ಅಂದಾಜು ಮಾಡಿದ್ದೆವು. ಅದರಲ್ಲಿ 114 ಲಕ್ಷ ಟನ್‌ಗೆ ಕಡಿಮೆ ಆಗಿದೆ. Oil seeds ಬಗ್ಗೆ ಹೇಳಬೇಕೆಂದರೆ, 14.8 ಲಕ್ಷ ಟನ್ ಉತ್ಪಾದನೆ ಮಾಡುತ್ತೇವೆಂದು ನಾವು ಅಂದಾಜು ಮಾಡಿದ್ದೆವು. ಅದು 11.67 ಲಕ್ಷ ಟನ್‌ಗೆ ಕಡಿಮೆ ಆಗಿದೆ. ಅದೇ ರೀತಿ ಕಾಟನ್, 20.55 ಲಕ್ಷ bales ಗಳನ್ನು ನಾವು ಉತ್ಪಾದನೆ ಮಾಡುತ್ತೇವೆಂದು ಬಿತ್ತನೆ ಮಾಡಿದಂಥ ಸಂದರ್ಭದಲ್ಲಿ ನಿರೀಕ್ಷೆ ಮಾಡಿದ್ದೆವು. ಈಗ ಕೇವಲ 13.5 ಲಕ್ಷ bales ಮಾತ್ರ ಆಗಿವೆ. ಈ ಮೂರು ಆಹಾರ ಉತ್ಪಾದನೆ oil seeds, cotton ಮತ್ತು ಇತರೆ ಎಲ್ಲ ದ್ವಿದಳ ಧಾನ್ಯ ಮತ್ತು ಏಕದಳ ಧಾನ್ಯದಲ್ಲಿ ಆಹಾರ ಉತ್ಪಾದನೆ ಕಡಿಮೆ ಆಗಿರುವಂಥದ್ದನ್ನು ಕೂಡ ನಾವು ನೋಡುತ್ತಿದ್ದೇವೆ. ಅದೇ ರೀತಿ Horticulture ನಲ್ಲಿ ಕೂಡ ಈ ವರ್ಷ ಕಡಿಮೆ ಆಗಿದೆ. Water Shed Programme ಬಗ್ಗೆ ಹೆಳುವುದಾದರೆ, ಮಾನ್ಯ ರಮೇಶ್‌ಕುಮಾರ್‌ರವರು ಕೋಲಾರ, ಚಿಕ್ಕಬಳ್ಳಾಪುರ, ಮಧ್ಯ ಕರ್ನಾಟಕದಲ್ಲಿರುವಂಥ ಸ್ಥಿತಿಗತಿಗಳ ಬಗ್ಗೆ ಮಾತನಾಡಿದ್ದಾರೆ. ಬೋರ್‌ವೆಲ್‌ನಲ್ಲಿ ನೀರು ಕಡಿಮೆ ಆಗಿದೆ, 1500 feet ಗೆ arsenic ಬರುತ್ತಿದೆ ಎನ್ನುವ ವಿಷಯವನ್ನು ಅವರು ಏನು ಹೇಳುತ್ತಿದ್ದಾರೆ ಅದಕ್ಕೆ ಪರಿಹಾರ ಎಂದರೆ, ಪಶ್ಚಿಮ ನದಿಗಳಿಂದ ತರುವಂಥ ನೀರಿನ ಯೋಜನೆಯನ್ನು ಜಾರಿಗೆ ತಂದು, ಕೆರೆಗಳನ್ನು ತುಂಬಿಸಿ ಅಂತರ್ಜಲ ಹೆಚ್ಚಿಸುವಂಥದ್ದು ಒಂದು ಕಡೆ ಆದರೆ, ಇನ್ನೊಂದು ಕಡೆ ನಿರಂತರವಾಗಿ Water Shed Programme ಗಳನ್ನು ಇವತ್ತಿನ ದಿವಸ ಮಾಡಬೇಕಾಗಿದೆ. ಕೋಲಾರ, ಚಿಕ್ಕಬಳ್ಳಾಪುರ, Part of Tumkur, Part of Raichur, ಇದು drought prone ಅಲ್ಲ desert prone ಆಗಿದೆ. ಕೆಲವೇ ವರ್ಷಗಳಲ್ಲಿ ರಾಜಸ್ಥಾನದ ಮರುಭೂಮಿ ತರಹ ಆಗುತ್ತದೆ ಎಂದು ಹೇಳಿ 10 ವರ್ಷ ಆದರೂ ಕೂಡ ನಾವು ಅದರ ಬಗ್ಗೆ ಯಾವುದೇ ಗಮನವನ್ನು ತೆಗೆದುಕೊಂಡಿಲ್ಲ. ಅದೇ ರೀತಿ ಗುಲಬರ್ಗ ಭಾಗದಲ್ಲಿ

ಸುಮಾರು ಮೂರುವರೆ ಲಕ್ಷ ಎಕರೆಗಳ ಪ್ರದೇಶ ಬಂಜರು ಭೂಮಿ ಇದೆ. ಯಾವುದೂ ಕೂಡ cultivation ಆಗದೆ ಇರತಕ್ಕಂಥ ಬಂಜರು ಭೂಮಿ ಆಗಿದೆ. ನಾನು ಏನು ಹೇಳುತ್ತಿದ್ದೇನೆಂದರೆ, ಈ Water Shed Programme ಏನಿದೆ, ಇದನ್ನು ಕೃಷಿ ಇಲಾಖೆ ಗಂಭೀರವಾಗಿ ತೆಗೆದುಕೊಂಡಿಲ್ಲ. ಮಾನ್ಯ ಕೃಷ್ಣ ಬೈರೇಗೌಡರು ಸಚಿವರಾದ ಮೇಲೆ ಅದೇ ಕೋಲಾರ ಭಾಗದವರಾದ ಅವರು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡು, Warfooting ನಲ್ಲಿ ಈ ಕೆಲಸಗಳನ್ನು ಮಾಡಿ, ಬರುವಂಥ ದಿನಗಳಲ್ಲಿ water resource ಹೆಚ್ಚಾದಂಥ ಸಂದರ್ಭದಲ್ಲಿ ಆ ನೀರನ್ನು ಉಳಿಸಿಕೊಳ್ಳುವುದಕ್ಕೆ ಒಂದು infrastructure ಅನ್ನು create ಮಾಡುತ್ತಾರೆ, ಅವರ ಇಲಾಖೆಯಲ್ಲಿಯೇ ಇದಕ್ಕೆ ಅವಕಾಶ ಇದೆ, ಅದನ್ನು ಮಾಡುತ್ತಾರೆಂದು ನಾವು ನಿರೀಕ್ಷೆ ಮಾಡಿದ್ದೆವು. ಆದರೆ, ಆ ನಿರೀಕ್ಷೆಯನ್ನು ಮಾನ್ಯ ಕೃಷ್ಣಬೈರೇಗೌಡರು ಹುಸಿಗೊಳಿಸಿದ್ದಾರೆ. ನಮ್ಮ ಕರ್ನಾಟಕದ ಒಟ್ಟು ಭೂಮಿ ಪ್ರದೇಶದಲ್ಲಿ ಏನೊಂದು ಕೃಷಿ ಚಟುವಟಿಕೆಗಳನ್ನು ನಾವು ಮಾಡಬೇಕಾಗಿತ್ತೋ, ಅದನ್ನು ಮಾಡಲು ಸಾಧ್ಯವಾಗುತ್ತಿಲ್ಲ. ನಮ್ಮ geographical area 190 ಲಕ್ಷ ಹೆಕ್ಟೇರ್ ಪ್ರದೇಶ ಇದೆ, Net cropping area ಸುಮಾರು 97.73 ಲಕ್ಷ ಹೆಕ್ಟೇರ್ ಮಾತ್ರ. ಅಂದರೆ ನಾವು 51% arable land ಮಾಡಿದ್ದೇವೆ. ನಾವು ಇದನ್ನು ಹೆಚ್ಚಿಗೆ ಮಾಡಬೇಕಾಗಿದೆ. ಮೂಲವಾಗಿ ಕೃಷಿ ಇಲಾಖೆ ಸುಮಾರು 10 ರಿಂದ 15 ಲಕ್ಷ ಎಕರೆ ಪ್ರದೇಶವನ್ನು ಕೃಷಿಗೆ ತರುವಂಥ ಸವಾಲನ್ನು ಸ್ವೀಕಾರ ಮಾಡಬೇಕಾಗಿತ್ತು. ರೈತ ಇದ್ದ ಭೂಮಿಯನ್ನು ಉಳುತ್ತಿದ್ದಾನೆ. ಮಳೆ ಬಂದರೆ ಹೆಚ್ಚಿಗೆ ಬೆಳೆಯಬಹುದು, ಇಲ್ಲವಾದರೆ ಇಲ್ಲ, ಆ ಮಾತು ಬೇರೆ. ಆದರೆ, ಇಲಾಖೆ ಆಗಿ ನಿಮ್ಮ ಮುಂದೆ ಏನು ಗುರಿ ಇದೆ? ದೊಡ್ಡ ಇಲಾಖೆಯಾಗಿ ಸಾವಿರಾರು ಕೋಟಿ ರೂ.ಗಳ ಹಣವನ್ನು ವೆಚ್ಚ ಮಾಡಿ, ನಾವು ಪ್ರತಿ ವರ್ಷ ಇಷ್ಟು ಭೂಮಿ ಕೃಷಿಯಿಂದ ಹೊರಗೆ ಇರುವಂಥದ್ದನ್ನು ನಾವು ಮತ್ತೆ ಕೃಷಿಗೆ ಲಾಯಕ್ಕಾಗಿ ಮಾಡುತ್ತೇವೆನ್ನುವಂಥ ಒಂದೇ ಒಂದು ಕಾರ್ಯಕ್ರಮ ಇವತ್ತು ಆಗಿಲ್ಲ. ಈಗಾಗಲೇ agricultural ನಲ್ಲಿರುವಂಥ dry land development ಅನ್ನು ಕೂಡ ನಾವು ಇವತ್ತಿನ ದಿವಸ ಉಳಿಸಿಕೊಳ್ಳುವುದಕ್ಕೆ ಆಗಿಲ್ಲ. ಇನ್ನು ಹೊಸದಾಗಿ ಬಂಜರು ಭೂಮಿ, ಖರಾಬ್ ಭೂಮಿ, ಇತರೆ ಭೂಮಿಗಳನ್ನು

ನಾವು ಎಲ್ಲಿ ಕೃಷಿಗೆ ತರಬೇಕಾಗಿದೆ, ಅಲ್ಲಿ ತರಲು ಇವತ್ತು ಸಂಪೂರ್ಣವಾಗಿ ವಿಫಲವಾಗಿದ್ದೇವೆ. ಯಾವುದಾದರೂ ಒಂದು ತಾಲ್ಲೂಕಿನಲ್ಲಿ ಒಂದು ಉದಾಹರಣೆ ಕೊಡಿ. ಸುಮಾರು 500 ಎಕರೆ ಬಂಜರು ಭೂಮಿ ಇತ್ತು, ಖರಾಬ್ ಭೂಮಿ ಇತ್ತು, ಅದನ್ನು ನಾವು ಕೃಷಿಗೆ ಯೋಗ್ಯ ಮಾಡಿದ್ದೇವೆ ಎನ್ನುವುದು ಏನಾದರೂ ಇದ್ದರೆ ಒಂದು ಉದಾಹರಣೆ ಕೊಡಿ. ಇವತ್ತಿನ ದಿವಸ ನಮ್ಮ ಮುಂದೆ ಒಂದೂ ಉದಾಹರಣೆ ಇಲ್ಲ. ನಾವು ಇವತ್ತಿನ ದಿವಸ ಸುಮಾರು 10 ರಿಂದ 15 ಲಕ್ಷ ಎಕರೆಯನ್ನು ಕೃಷಿಗೆ ತಂದರೆ ನಮ್ಮ ಕೃಷಿ ಆದಾಯದಲ್ಲಿ ಎಷ್ಟು ಹೆಚ್ಚಾಗುತ್ತದೆ? ಇವತ್ತು ಅದರ ಮೇಲೆ ಅವಲಂಬಿತವಾಗಿರುವಂಥ ರೈತರ ಬದುಕು ಎಷ್ಟು ಒಳ್ಳೆಯದು ಆಗುತ್ತದೆ? ಅದರ ಮೇಲೆ ಅವಲಂಬಿತವಾಗಿರುವಂಥ ಕೃಷಿ ಕಾರ್ಮಿಕರ ಬದುಕು ಎಷ್ಟು ಒಳ್ಳೆಯದು ಆಗುತ್ತದೆ? ನಗರೀಕರಣದಿಂದ ವಲಸೆ ಹೋಗುವುದನ್ನು ತಡೆಯುವುದಕ್ಕೆ ಎಷ್ಟು ಸಾಧ್ಯವಾಗುತ್ತದೆ? ಅದರ ಬಗ್ಗೆ ನಾವು ಎಲ್ಲಿಯೂ ಕೂಡ ಚಿಂತನೆ ಮಾಡಿಲ್ಲ. In Utilization of our total land, we are under utilizing our land, which can be irrigated as well as dry land farming ಮಾಡಬಹುದು.

ಅಧ್ಯಕ್ಷರು:- Dry land farming ಆಗದೆ ಇರುವಂಥವುಗಳು ಇವೆಯೇ?

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಇವೆ.

ಅಧ್ಯಕ್ಷರು:- ಅವು Government land ಆಗಿವೆಯೇ ಅಥವಾ ownership land ಆಗಿವೆಯೇ?

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಎರಡೂ ತರಹ ಇದೆ. Government land ಅದರಲ್ಲಿ ಹೆಚ್ಚು ಇದೆ. ಎಲ್ಲಿ ನೀರಾವರಿ ಆಗಿಲ್ಲ, ಅಲ್ಲಿ ಬಹಳಷ್ಟು 300 ಎಕರೆಯಿಂದ 1000 ಎಕರೆಯಷ್ಟು ಭೂಮಿ.....

ಅಧ್ಯಕ್ಷರು:- ಸಾಗುವಳಿ ಆಗದೆ ಇದೆಯೇ?

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಹೌದು, ಸಾಗುವಳಿ ಆಗದೆ ಇದೆ. ಅದನ್ನು ಸಾಗುವಳಿ ಮಾಡಬಹುದು. ಸಾಗುವಳಿ ಆಗದೆ ಬಂಜರು ಆಗಿರುವಂಥ ಸುಮಾರು ಎರಡೂವರೆಯಿಂದ ಮೂರುವರೆ ಎಕರೆಗಳಷ್ಟು ಭೂಮಿ ಹೈದರಾಬಾದ್ ಕರ್ನಾಟಕದ ಭಾಗದಲ್ಲಿದೆ. ಮಲೆನಾಡು ಭಾಗಗಳಲ್ಲಿ ಕಡಿಮೆ ಇರುತ್ತದೆ, ಈ ಕಡೆ ಹೆಚ್ಚಿಗೆ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ರೈತರು ಬಹಳ ವರ್ಷ ಉಳುಮೆ ಮಾಡದೆ, ಅದು ಕೂಡ ಆ ರೀತಿ ಆಗಿರುತ್ತದೆ.

ಅಧ್ಯಕ್ಷರು:- ನಮ್ಮಲ್ಲಿ ಏನಾಗಿತ್ತು ಎಂದರೆ, ಎತ್ತು ಮೇಯಿಸುವುದು ಬೇಡವೆಂದು 5-10 ಎಕರೆ ಹಾಗೆ ಇಟ್ಟುಕೊಳ್ಳುತ್ತಿದ್ದರು. ಈ ಜೋಳ ಮತ್ತು ರಬ್ಬರ್ ಬಂದು ಎಲ್ಲಾ ಸಾಗುವಳಿ ಆದವು.

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಹೌದು. ಅದು ಬಂದ ಮೇಲೆ ಪುನ: ಎಲ್ಲರೂ ಹಾಕುವುದಕ್ಕೆ ಪ್ರಾರಂಭ ಮಾಡಿದರು. ನಮ್ಮ ಕಡೆ ಹಾಗೂ ನಿಮ್ಮ ಕಡೆಯೆಲ್ಲ convention ಬೆಳೆಗಳನ್ನು ಬೆಳೆಯುವುದನ್ನು ನಿಲ್ಲಿಸಿದ್ದಾರೆ.

ಅಧ್ಯಕ್ಷರು:- ಶುಂಠಿ ನಿಮ್ಮಲ್ಲಿ ಪ್ರಾರಂಭ ಆಗಿದೆಯೇ?

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಹೌದು. ಅರಿಶಿನ, ಶುಂಠಿ ಬೆಳೆಯುವುದು ಪ್ರಾರಂಭವಾಗಿದೆ. ಶುಂಠಿ ಮಾತ್ರ ಸಂಪೂರ್ಣವಾಗಿ ಭೂಮಿಯ ಸಾರವನ್ನು ತಿಂದು ಹಾಕುತ್ತದೆ. ಆದರೂ ಕೂಡ ತಮಿಳುನಾಡಿನಿಂದ ಬಂದಂಥ ರೈತರಿಗೆ ಶುಂಠಿ ಕೊಡುವುದು ಬಹಳ ದೊಡ್ಡ ಪ್ರಮಾಣದಲ್ಲಿ ಆಗಿದೆ. ಹಾಸನ ಮುಂತಾದ ಕಡೆಗಳಲ್ಲಿ ರೈತರು ಶುಂಠಿ ಬೆಳೆದು ತೊಂದರೆಗೆ ಈಡಾಗಿ ಪುನ: ವಾಪಸ್ಸು ತಮ್ಮ ಬೆಳೆಯನ್ನು ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ರೈತನ ಪರಿಸ್ಥಿತಿ ಆರ್ಥಿಕವಾಗಿ ಕ್ಷೀಣಿಸಿರುವುದರಿಂದ, ಯಾವುದರಿಂದ ಹಣ ಬರುತ್ತದೋ, ಅದಕ್ಕೆ ಆತ ಕೊಡುವಂಥ ಪರಿಸ್ಥಿತಿ ಇದೆ. ಇಲ್ಲಿ ಇಲಾಖೆಯ ಕೆಲಸ ಬಹಳ ಇದೆ. ಒಂದು ಸಲ ಆ ಭೂಮಿಯ ಮಣ್ಣಿನ ಶಕ್ತಿ ಕಡಿಮೆಯಾದರೆ, ಆತನಿಗೆ ಅದನ್ನು

ತುಂಬುವುದಕ್ಕೆ ಎಷ್ಟು ಖರ್ಚು ಬರುತ್ತದೆ? ಎನ್ನುವಂಥ ಜ್ಞಾನ, ತಿಳುವಳಿಕೆ ಕೊಡುವಂಥದ್ದು ಇವತ್ತು extension service ನಲ್ಲೂ ಆಗುತ್ತಿಲ್ಲ, ಎಲ್ಲಿಯೂ ಕೂಡ ಆಗುತ್ತಿಲ್ಲ. Extension service ಎನ್ನುವಂಥ ವಿಚಾರ ಏನಿದೆ, ಅದನ್ನು ನಾವು ಕೇಳಿ ತುಂಬಾ ದಿನವಾಯಿತು. ಸುಮಾರು 15–20 ವರ್ಷದ ಹಿಂದೆಯೇ ಅದು ನಿಂತು ಬಿಟ್ಟಿದೆ. Extension service ಅನ್ನು re-define ಮಾಡಬೇಕು. ಒಂದು ಹೊಸ ಚಿಂತೆ ನಡೆಸಿ, ಅದಕ್ಕೆ ಒಂದು ಹೊಸ ಆಯಾಮವನ್ನು ಕೊಡುವಂಥ ಕೆಲಸ ಇವತ್ತಿನ ದಿವಸ ಆಗಬೇಕಾಗಿದೆ. Extension Service ರೈತರಿಗೆ, ಇಲಾಖೆಗೆ ಸಂಬಂಧವಿರುವಂಥಹ ಒಂದು ಕೊಂಡಿ. ಇವತ್ತು ಇಲಾಖೆ ಮತ್ತು ರೈತರ ನಡುವೆ ಸಂಪರ್ಕ ಸಂಪೂರ್ಣವಾಗಿ disconnect ಆಗಿದೆ. ರೈತರಿಗೆ ಒಂದು ರೀತಿಯಲ್ಲಿ ಪ್ರತಿ Season ಗಿಂತ ಮುಂಚೆ, Season ನಡೆಯುವಾಗ, Season ನಂತರ ಈ ಮೂರು ಹಂತದಲ್ಲಿ ಇಲಾಖೆಯ ಮಾರ್ಗದರ್ಶನ ಬೇಕಾಗುತ್ತದೆ. ಈ ರೀತಿ ಮೂರು ಹಂತದಲ್ಲಿ ಇವತ್ತು ಮಾರ್ಗದರ್ಶನ ಆಗುತ್ತಿಲ್ಲ. ರೈತ ಸಂಪರ್ಕ ಕೇಂದ್ರಗಳು ಇವತ್ತು, ಒಂದು ರೀತಿಯಲ್ಲಿ ಬಾಗಿಲು ಮುಚ್ಚಿರುವಂಥಹ, ಯಾವುದೇ ರೀತಿಯ ವ್ಯವಸ್ಥೆ ಇಲ್ಲದೆ ಇರುವಂಥ, ಕಿಟಕಿ ಮುಚ್ಚಿರುವಂಥ office ಗಳು ಆಗಿವೆ. ರೈತರೂ ಇಲ್ಲ, ಸಂಪರ್ಕನೂ ಇಲ್ಲ, ಕೇಂದ್ರ ಮಾತ್ರ ಉಳಿದಿದೆ. ಆದ್ದರಿಂದ, ಇಲಾಖೆ ಏನು ಮಾಡುತ್ತಿದೆ? ಮುಖ್ಯಸ್ಥರು ಏನು ಮಾಡುತ್ತಿದ್ದಾರೆ? Agriculture Commissioner ಎಷ್ಟು ಕಡೆ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿದ್ದಾರೆ? ಎಲ್ಲಿಯೂ ಕೂಡ ಒಂದು ಸಲವೂ ಕೂಡ ಭೇಟಿ ಕೊಟ್ಟಿಲ್ಲ. ಯಾವ ಭಾಗದಲ್ಲಿಯೂ ಕೂಡ Higher Officers ಬಂದರು, Director of Agriculture ಬಂದರು, ರೈತರ ಸಂಪರ್ಕ ಕೇಂದ್ರಕ್ಕೆ ಭೇಟಿ ಕೊಟ್ಟರು. ರೈತರನ್ನು ಮಾತನಾಡಿಸಿದರು, ಒಂದು ಕಡೆಯೂ ಕೂಡ ಆ ಸುದ್ದಿ ಇಲ್ಲ. ಈ ಎರಡು ವರ್ಷದಲ್ಲಿ ಒಬ್ಬ ಅಧಿಕಾರಿಯು ಬೆಂಗಳೂರಿನಿಂದ ಯಾವುದೇ ಹಳ್ಳಿಗೆ ಹೋಗಿರುವುದನ್ನು ನಾವು ಕೇಳಿಲ್ಲ. ಯಾವುದಾದರೂ Minister visit ಜೊತೆಗೆ ಆ ಅಧಿಕಾರಿಗಳು ಹೋಗಿರಬಹುದು. ಜಿಲ್ಲಾ ಮಟ್ಟದ ಅಧಿಕಾರಿಗಳು ಹೋಗುತ್ತಾರೆ. ರಾಜ್ಯ ಮಟ್ಟದಲ್ಲಿರುವಂಥ ಅಧಿಕಾರಿಗಳು ಎಲ್ಲಿಯೂ ಕೂಡ ಹೋಗಿದ್ದನ್ನು ನಾವು

ನೋಡಿಲ್ಲ. ದೆಹಲಿ, ಮನಿಲಾಗೆ ಕೃಷಿ conference ಗೆ ಬೇಕಾದರೆ ಹೋಗುತ್ತಾರೆ. ಆದರೆ, ಇಲ್ಲಿ ರೈತರ ಜೊತೆ conference ಯಾರು ಮಾಡುತ್ತಾರೆ? ವಿಜ್ಞಾನಿಗಳಿಗೆ ದೊಡ್ಡ ದೊಡ್ಡ conference ಮಾಡುತ್ತೀರಿ. ಆದರೆ, ಇಲ್ಲಿ ರೈತರ ಜೊತೆ conference ಯಾರು ಮಾಡಬೇಕು?

ಮಾನ್ಯ ಅಧ್ಯಕ್ಷರೆ, ಕೃಷಿ ಇವತ್ತು ನಿರಂತರವಾಗಿ ಬದಲಾವಣೆ ಆಗುತ್ತಿದೆ. ಹವಾಮಾನದ ಜೊತೆಗೆ ನಿರಂತರವಾಗಿ ಹೊಸ ಹೊಸ ಸವಾಲುಗಳು ಬರುತ್ತಿವೆ, ಹೊಸ ರೋಗಗಳು ಬರುತ್ತಿವೆ. ಅಲ್ಲಿ ಬಂದಿರುವಂತಹ ರೋಗಕ್ಕೆ ತತ್‌ಕ್ಷಣ ಯಾವುದೇ ರೀತಿಯಾದಂತಹ ಔಷಧಗಳಿರುವುದಿಲ್ಲ. ಅವನಿಗೆ ಇರುವುದೇ ಅಷ್ಟು ಭೂಮಿಯಾಗಿರುತ್ತದೆ. ನಾವೆಲ್ಲಾ ಹೇಗೆ ಎಂದರೆ, ನಮಗೆ ರೋಗ ಬಂದರೆ ನಮಗೆ ತಡೆದುಕೊಳ್ಳುವ ಶಕ್ತಿಯಿದೆ. ರೈತನಿಗೆ ತನಗೆ ರೋಗ ಬಂದರೆ ತಡೆದುಕೊಳ್ಳೂವ ಶಕ್ತಿಯಿದೆ. ಆದರೆ, ರೈತನ ಬೆಳೆಗೆ ರೋಗ ಬಂದರೆ ಅವನಿಗೆ ತಡೆದುಕೊಳ್ಳುವ ಶಕ್ತಿಯಿಲ್ಲ. ಇಲಾಖೆ ಈ ಸೂಕ್ಷ್ಮತೆಯನ್ನು ಅರ್ಥಮಾಡಿಕೊಂಡಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸುಮಾರು ಶೇಕಡ 80ರಷ್ಟು ಸಣ್ಣ ಮತ್ತು ಮಧ್ಯಮ ವರ್ಗದ ಹಿಡುವಳಿದಾರರಿದ್ದಾರೆ. ಅದರಲ್ಲಿ ಶೇಕಡ 76ರಷ್ಟು ಸಣ್ಣ ಹಿಡುವಳಿದಾರರೇ ಇದ್ದಾರೆ. ಆದ್ದರಿಂದ, ಇದರ ಬಗ್ಗೆ ತಾವು ಏನು ಗಮನಕೊಟ್ಟಿದ್ದೀರಿ? ಇದರ ಬಗ್ಗೆ ಯಾವ ರೀತಿ ಕ್ರಮ ಕೈಗೊಂಡಿದ್ದೀರಿ? ಈ fragmentation of land ಆದಮೇಲೆ ಕೃಷಿಯಲ್ಲಿ ಯಾವುದೂ ಲಾಭದಾಯಕವಿಲ್ಲವೆನ್ನುವುದು ನಮಗೆ ಗೊತ್ತಿದೆ. Fragmentation of land ಆದಮೇಲೆ, ಕೃಷಿ ಇವತ್ತು ನಮಗೆ ಲಾಭದಾಯಕವಿಲ್ಲವೆನ್ನುವುದು ಗೊತ್ತಾದ ಮೇಲೆಯೂ ಕೂಡ, ನಾವು ಅಲ್ಲಿ ಮಧ್ಯಪ್ರವೇಶ ಮಾಡುವಂತಹ ಕೆಲಸವನ್ನು ಮಾಡುತ್ತಿಲ್ಲ. ಇಲಾಖೆ ಮಧ್ಯಪ್ರವೇಶ ಮಾಡಿ ಆ ಕೃಷಿಯನ್ನು ಉಳಿಸಬೇಕು, ಆ ಕೃಷಿಕನನ್ನು ಉಳಿಸಬೇಕು ಎನ್ನುವ ಕೆಲಸ ಇವತ್ತು ಆಗುತ್ತಿಲ್ಲವೆನ್ನುವುದು ಬಹಳ ಸ್ಪಷ್ಟವಾಗಿದೆ. ಮಾನ್ಯ ಅಧ್ಯಕ್ಷರೆ, ಇವತ್ತು ಒಂದು ಕಡೆಗೆ rural credit system ಬಗ್ಗೆ ನಾವು ಮಾತನಾಡುತ್ತೇವೆ. ಸಾಲ ಅವನಿಗೆ ಒಂದೇ ಒಂದು ರೂಪದಲ್ಲಿ ಸಿಗುತ್ತಿರುವಂತಹದ್ದು ಬೆಳೆ ಸಾಲ. ಅವನು ಬೀಜ–ಗೊಬ್ಬರ

ಹಾಕಿ, ಕಳೆ ತೆಗೆದು, ಬೆಳೆದು, ಬೆಳೆ ಬರುವಂತಹ ಸಂದರ್ಭದಲ್ಲಿ ರೈತನಿಗೆ ಬೆಳೆ ಸಾಲ ಸಿಗುತ್ತದೆ. ಅದು ಎಷ್ಟು ಎಂದರೆ, ಇವತ್ತು co-operative ನಲ್ಲಿ land to credit ratio ಎಂದು ಇದೆ. ಒಂದು ಎಕರೆ ಜೋಳ ಬೆಳೆದರೆ ಸುಮಾರು ರೂ. 6,000 ಗಳ ಸಾಲ ಕೊಡಬೇಕೆಂದು ಇದೆ. ಆದರೆ ಲಾಭದಾಯಕವಿರುವಂತಹ ಡಿ.ಸಿ.ಸಿ. ಬ್ಯಾಂಕ್ ತೆಗೆದುಕೊಳ್ಳಲಿ. ಇನ್ಯಾರೇ ಆಗಲಿ ಇದನ್ನೂ ಪಾಲಿಸುತ್ತಿಲ್ಲ. ಇಲ್ಲಿ ಲುಕ್ಸಾನು ಆಗುವಂತಹ ಪ್ರಶ್ನೆಯಿಲ್ಲ. ಈ land to credit ratio ಅನ್ನು ಒಬ್ಬರೂ ಕೂಡ ಪಾಲನೆ ಮಾಡುವುದಿಲ್ಲ. ಅದು ತಾವು ಬರೆದಿರುವಂತಹ ಕೋಷ್ಟಕವಾಗಿದೆ, ರೈತ ಬರೆದಿದ್ದಲ್ಲ. ಅದು ತಾವೇ ಮಾಡಿಕೊಂಡಿರುವಂತಹ ಒಂದು ಕಾನೂನು ಅಥವಾ ಕೋಷ್ಟಕ. ಒಬ್ಬರೂ ಕೂಡ ಅದನ್ನು ಪಾಲನೆ ಮಾಡುತ್ತಿಲ್ಲ. ನಾನು ಬಹಳಷ್ಟು ಕೇಳಿಕೊಂಡರೂ ಅದನ್ನು ಒಂದು ಸಲವೂ ಕೂಡ, ಒಬ್ಬರೂ review ಸಹಿತ ಮಾಡುತ್ತಿಲ್ಲ. ಮಾನ್ಯ Co-operative Minister ಇಲ್ಲಿಯೇ ಇದ್ದಾರೆ. Land to credit ratio ದಲ್ಲಿ ಒಬ್ಬ ರೈತನಿಗೆ ಎಷ್ಟು ಸಾಲ ಕೊಡಬೇಕು? Land to credit ratio ಅನ್ನು ಯಾವುದೇ ಡಿ.ಸಿ.ಸಿ. ಬ್ಯಾಂಕ್ ಆಗಲಿ, ಮಧ್ಯವರ್ತಿಗಳಾಗಲಿ, ಒಬ್ಬರೂ ಕೂಡ ಇವತ್ತು follow ಮಾಡುತ್ತಿಲ್ಲ. ಒಮ್ಮೆಯಾದರೂ ನೀವು ಇದರ ಬಗ್ಗೆ review ಮಾಡಿದ್ದೀರಾ? ಆ ವಿಷಯವನ್ನು ಒಮ್ಮೆಯಾದರೂ ನೀವು ಮೀಟಿಂಗ್‌ನಲ್ಲಿ ತೆಗೆದುಕೊಂಡಿದ್ದೀರಾ? ಏಕೆ ನೀವು ಕೊಡುತ್ತಿಲ್ಲ? ಅದಕ್ಕೆ ಏನು support system ಬೇಕು? ನಬಾರ್ಡ್‌ನವರ ಹತ್ತಿರ ಈ ಬಗ್ಗೆ ಮಾತನಾಡಿದ್ದೀರಾ? ಇಲ್ಲ. ಒಂದು ರೀತಿಯಲ್ಲಿ ನಬಾರ್ಡ್ ಹೀಗೆ ಹೇಳುತ್ತದೆ, Government of India ಹೀಗೆ ಹೇಳುತ್ತದೆ. ನೀವು 50:50, 60:40 ಈ ಮಾನದಂಡದಲ್ಲಿ ಹೋಗುತ್ತಿದ್ದೀರಿ. ಆದರೆ, ಯಾರಿಗಾಗಿ ಆ credit system ಇದೆ, ಆ ಕೊನೆಯ ಮನುಷ್ಯನ ಬಗ್ಗೆ ಚಿಂತನೆ ಮಾಡುವುದಿಲ್ಲ. ಅದಕ್ಕೆ ಇವತ್ತು ಪಾಲಿಸಿ fail ಆಗುತ್ತಿದೆ. ಮಾನ್ಯ ಜೀವರಾಜ್‌ರವರೆ, ನಮ್ಮ ವಿರೋಧ ಪಕ್ಷದ ಕಡೆಗೆ ಬಂದರೆ ನಮಗೆ ಈ ಕಡೆಗೆ support ಸಿಗುತ್ತದೆ.

ಶ್ರೀ ಡಿ.ಎನ್. ಜೀವರಾಜ್:- ನಾನು ಮಾತನಾಡುತ್ತಿಲ್ಲ ಸರ್.

ಶ್ರೀ ಬಸವರಾಜ್ ಬೊಮ್ಮಾಯಿ:– ಮೀಸೆ ಮರೆಯಲ್ಲಿ ಮಾತನಾಡುವುದು ಗೊತ್ತಾಗುತ್ತದೆ. ಒಂದು ನಿಮಿಷ ಬನ್ನಿ. ಅವರ ಗಮನ ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ ಅಷ್ಟೆ. ಅವರು ಉಸ್ತುವಾರಿ ಸಚಿವರಾಗಿದ್ದಾರೆ. ಅವರು ನಮಗೆ ಸಿಗುವುದೇ ಕಷ್ಟವಾಗಿದೆ. ಅದಕ್ಕೆ ಒಂದು ಸಲವಾದರೂ ದಯವಿಟ್ಟು ಪುಸ್ತಕ ತೆಗೆದು ನೋಡಿ, review ಮಾಡಿ. ಇದ್ದ ರೈತರಿಗೇ ಸಮರ್ಪಕವಾದ ರೀತಿಯಲ್ಲಿ ಒಂದು ಭಾಗ ಸಾಲ ಸಿಗುತ್ತಿಲ್ಲ. ಹೊಸ ರೈತರಿಗೆ ಪ್ರತಿ ವರ್ಷ ಎಷ್ಟು ಹೆಚ್ಚಾಗಬೇಕೋ ಅಷ್ಟು ಹೆಚ್ಚಾಗುತ್ತಿಲ್ಲ. ಬಹಳ ಎಂದರೆ 10% ಹೆಚ್ಚಿಗೆ ಮಾಡುತ್ತೀರಿ. ನಿಮ್ಮ co-operative ಸಾಲವನ್ನು ಸುಮಾರು 18 ಅಥವಾ 20 ಲಕ್ಷ family unit ಗಳಿಗೆ ಕೊಡುತ್ತಿದ್ದೀರಿ. ಪ್ರತಿ ವರ್ಷ ಬಹಳ ಎಂದರೆ 10% ಹೆಚ್ಚಿಗೆ ಮಾಡುವಂತಹ ಪ್ರಯತ್ನವನ್ನು ನೀವು ಮಾಡುತ್ತೀರಿ. ಅದು ಸಾಕಾಗುತ್ತದೆಯೇ? ಸುಮಾರು 72 ಲಕ್ಷ ಕುಟುಂಬಗಳ ಯೂನಿಟ್‌ಗಳಲ್ಲಿ ನೀವು ಕೊಡುತ್ತಿರುವುದು 20 ಲಕ್ಷ ಕುಟುಂಬಗಳಿಗೆ ಮಾತ್ರ. ಪ್ರತಿ ವರ್ಷ 10% ಹೆಚ್ಚಿಗೆ ಆದರೆ ನೀವು complete ಆಗಿ ಎಲ್ಲರಿಗೂ ಸಾಲ ಕೊಡುವಂತಹ ಸಾಮರ್ಥ್ಯ ನಿಮಗೆ ಎಷ್ಟು ವರ್ಷಕ್ಕೆ ಬರುತ್ತದೆ? ಇನ್ನೂ 50 ವರ್ಷ ಅಥವಾ 60 ವರ್ಷಗಳು ಕಾಯಬೇಕೇ?

ಅಧ್ಯಕ್ಷರು:– ಇವರು ಇನ್ನೊಂದು ಮಾಡಿಕೊಂಡಿದ್ದರು. ಹಿಂದಿನ ವರ್ಷ ಯಾರು ಸಾಲ ತೆಗೆದುಕೊಂಡಿಲ್ಲ, ಅವರಿಗೆ ಸಾಲವಿಲ್ಲವೆಂದು ಮಾಡಿಕೊಂಡಿದ್ದರು.

ಶ್ರೀ ಬಸವರಾಜ್ ಬೊಮ್ಮಾಯಿ:– ಅದೂ ಒಂದು.

ಅಧ್ಯಕ್ಷರು:– ಅವರಿಗೆ ನಾನು ಪತ್ರ ಬರೆದು ಒಂದು circular issue ಮಾಡಿಸಿದ್ದೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಈಗ ಏನಾಗಿದೆ ಎಂದರೆ, ನಾವು ಪ್ರತಿವರ್ಷ ಒಂದೊಂದು ಪ್ರಮಾಣದಲ್ಲಿ 15–20% ಅಂದರೆ ಹೆಚ್ಚಿಗೆ 25% ಹೊಸ ಸದಸ್ಯರಿಗೆ ಸಾಲ ಕೊಡಬೇಕೆಂದು ಸುತ್ತೋಲೆ ಕಳುಹಿಸಿದ್ದೇವೆ. ಅಲ್ಲಿ ಏನಾಗುತ್ತದೆ ಎಂದರೆ, ನಾವು Government ನಿಂದ ಯಾವುದೂ ಹಣ

ಕೊಡುವುದಿಲ್ಲ. ಆ ಸೊಸೈಟಿಗಳಿಗೆ 50% ಅನ್ನು ನಬಾರ್ಡ್ refinance ಮಾಡುತ್ತದೆ. ಅಪೆಕ್ಸ್ ಬ್ಯಾಂಕ್‌ನಲ್ಲಿರುವ ಹಣ ಮತ್ತು ನಮ್ಮ ಡಿ.ಸಿ.ಸಿ. ಬ್ಯಾಂಕ್‌ಗಳಲ್ಲಿರುವ ಬೇರೆ deposits ಎಲ್ಲಾ ಸೇರಿ ಅವರು ಇನ್ನೂ 50% mobilize ಮಾಡಿ ಸೊಸೈಟಿಗಳ ಮುಖಾಂತರ ಸಾಲ ವಿತರಣೆ ಮಾಡುತ್ತಾರೆ. ಇದು ಏನಾಗಿದೆ ಎಂದರೆ, ನಮಗೆ ಸಾಲ ಕೊಡುವ ಹಣದ ಪ್ರಮಾಣ ಜಾಸ್ತಿಯಾದರೆ ಹೆಚ್ಚು ಹೆಚ್ಚು ರೈತರಿಗೆ ಸಾಲ ಕೊಡಬಹುದು. ಈಗ ನಬಾರ್ಡ್ ಗೈಡ್‌ಲೈನ್ಸ್ ಏನಾಗಿದೆ ಎಂದರೆ, ಹೊಸ ಸರ್ಕಾರ ಕೇಂದ್ರದಲ್ಲಿ ಬಂದ ಮೇಲೆ 50% refinance ಮಾಡುತ್ತಿದ್ದಿದ್ದು ಈಗ 40% ಗೆ ಇಳಿಸಿದ್ದಾರೆ. ನಾವು ರೂ.9,000 ಕೋಟಿ ರೂ.ಗಳನ್ನು ಹೋದ ವರ್ಷ ಸಾಲ ಕೊಟ್ಟಿದ್ದರೆ, ಅದರಲ್ಲಿ 4,500 ಕೋಟಿ ರೂಪಾಯಿಗಳನ್ನು ನಬಾರ್ಡ್‌ನವರು ಕೊಡುತ್ತಿದ್ದರು. ಈಗ ಅದರಲ್ಲಿ 40% ಮಾಡಿರುವುದರಿಂದ ನಮಗೆ ಈ ಸಲ 3,500 ರಿಂದ 3,750 ಕೋಟಿ ರೂಪಾಯಿಗಳು ಮಾತ್ರ ಬರುತ್ತದೆ. So, ಮುಂದಿನ ಸಾಲಿನಲ್ಲಿ ಇನ್ನೂ ಪ್ರಮಾಣ ಕಡಿಮೆಯಾಗಿ ಬಿಡುತ್ತದೆ. ಆದ್ದರಿಂದ, ತಾವು ಕೂಡ ನಬಾರ್ಡ್‌ನವರು ಏನು 50% ಕೊಡುತ್ತಿದ್ದರು...

ಅಧ್ಯಕ್ಷರು:– ಒಂದು ಕೆಲಸ ಮಾಡ್ರಿ. ನಿಮ್ಮ cooperative society ಯವರದು ಇದೊಂದು vested interest ಆಗಿದೆ. ಹೋದ ವರ್ಷ ಯಾರು ಸಾಲ ತೆಗೆದುಕೊಂಡಿದ್ದಾರಲ್ಲಾ, ಅವರಿಗೆ ಕೊಡಬೇಡಿ. ತೆಗೆದುಕೊಳ್ಳದೇ ಇರುವವರಿಗೆ ಹೊಸದಾಗಿ ಈಗ ಕೊಡಿ.

ಶ್ರೀ ಬಸವರಾಜ್ ಬೊಮ್ಮಾಯಿ:– ಹೊಸದಾಗಿ ಕೊಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಸೊಸೈಟಿಗಳೇ ನಡೆಯುವುದಿಲ್ಲ

(ಗೊಂದಲ)

ಶ್ರೀ ಶಿವಾನಂದ ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ತೀರಾ ಈ ರೀತಿ ನೀವು...

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರು ಏನು ಹೇಳಿದ್ದಾರೋ, ಅದನ್ನು ಪಾಲನೆ ಮಾಡಿ ಸಾಕು. ಮಾನ್ಯ ಅಧ್ಯಕ್ಷರು ಹೇಳಿರುವುದನ್ನು ಪಾಲನೆ ಮಾಡಿದರೆ ಎಲ್ಲಾ ಬಡವರಿಗೇ ಸಿಗುತ್ತದೆ.

(ಗೊಂದಲ)

ಶ್ರೀ ಶಿವಾನಂದ ಎಸ್. ಪಾಟೀಲ್:- ಕುಮಾರ್ ಸ್ವಾಮಿಯವರೆ,...

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, ಪದ್ಧತಿ ಹೇಗಿದೆ ಎಂದರೆ, ಯಾರು renewal ಮಾಡಿಸುತ್ತಾರೆ ಎಂದರೆ, renewal ಅಂದರೆ ಯಾವ ರೈತನೂ ಸಾಲ ಕಟ್ಟುವುದಿಲ್ಲ. ಆ society secretary ಗಳು ಮತ್ತು ಅಲ್ಲಿರುವವರು ಅದನ್ನು ಒಂದು ತಿಂಗಳಿಗೆ ಇಂತಿಷ್ಟು ದುಡ್ಡು ಎಂದು adjustment ಗೆ ಏನೋ ವ್ಯವಹಾರ ಮಾಡಿಕೊಂಡು ಅದನ್ನು ಕಟ್ಟುತ್ತಾರೆ. ಈಗ ನಾನು ಸಚಿವರಲ್ಲಿ ಬಯಸುವುದು ಏನೆಂದರೆ, ನೀವು ಏನು ಒಂದು ಕಾನೂನು ತಂದಿದ್ದೀರಿ ಎಂದರೆ, ಏನು ಸಬ್ಸಿಡಿ ಬಡ್ಡಿ ಅಮೌಂಟ್ ಕೊಡುತ್ತಿದ್ದೀರಿ ಅದನ್ನು ನೀವೇ ಭರಿಸಿಕೊಳ್ಳಿ, ಆಮೇಲೆ ನೋಡೋಣ ಎಂದು ನೀವು ಏನೋ ಒಂದು circular ಕಳುಹಿಸಿದ್ದೀರಂತೆ. ಅದು ಏನಾದರೂ ನೀವು ಮಾಡಿದರೆ, ಒಬ್ಬರು ರೈತರಿಗೂ ಸಾಲ ಸಿಗುವುದಿಲ್ಲ. ನೀವು ಆಗಿಂದಾಗ್ಗೆ ಸಬ್ಸಿಡಿ ಬಡ್ಡಿ ಅಮೌಂಟ್ ಅನ್ನು ಏನಾದರೂ ನೇರವಾಗಿ finance bank ಗಳಿಗೆ ಕಳುಹಿಸಿದರೆ ಕೃಷಿಗೆ ಸಂಬಂಧಿಸಿದಂತೆ ರೈತರಿಗೆ ಸಾಲ ಸಿಗುತ್ತದೆ. ಇಲ್ಲದಿದ್ದರೆ ಈ ಸಲ ಮುಂಗಾರಿನಲ್ಲಿ ರೈತರಿಗೆ ಸಾಲ ಸಿಗುವುದಿಲ್ಲ. ಇದನ್ನು ಸಚಿವರು ಮನದಲ್ಲಿ ಇಟ್ಟುಕೊಳ್ಳಬೇಕು. ಒಂದು ಕಡೆಗೆ ನಬಾರ್ಡ್‌ನಲ್ಲಿ 40% ಗೆ ಇಳಿಸಿದ್ದಾರೆ. ಒಂದು ಕಡೆಗೆ ನೀವು ಏನು ಸಬ್ಸಿಡಿ ಅಮೌಂಟ್ ಅನ್ನು ಬಡ್ಡಿಯನ್ನು ತುಂಬಿಕೊಡುತ್ತೀರಿ, ಆ ಹಣವನ್ನು ಆಮೇಲೆ ನಾವು ತುಂಬಿಕೊಡುತ್ತೇವೆ, ಆ ಬ್ಯಾಂಕ್‌ನವರಿಗೆ ನೀವೇ ಭರಿಸಿ ಎಂದು ಏನು ನೀವು direction ಕೊಟ್ಟಿದ್ದೀರಿ, ಇದರಿಂದ ನಿಜವಾಗಲೂ ರೈತರಿಗೆ ಹೊಸ ಸಾಲ ಕೊಡುವುದಕ್ಕೆ ಹೊಡೆತ ಬೀಳುತ್ತದೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ:- ಬಡ್ಡಿ ಪ್ರಮಾಣದ ಹಣ ಏನಿದೆ, ಅದು ಕಾಲ ಕಾಲಕ್ಕೆ ಸರ್ಕಾರ ಕೊಡುತ್ತಿರುತ್ತದೆ.

ಅಧ್ಯಕ್ಷರು:– ನಿಮ್ಮ ಡಿಮ್ಯಾಂಡ್ ಅನ್ನು move ಮಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಇಲ್ಲ, ತೀರಿಸುತ್ತಿಲ್ಲ. ಅಲ್ಲಿ ಬ್ಯಾಂಕ್ ಎಂ.ಡಿ.ಗಳ ಹತ್ತಿರಕ್ಕೆ ಹೋದರೆ ಅವರು ನಮಗೆ ಈ ಬಗ್ಗೆ ಹೇಳುವುದಿಲ್ಲವೇ? ಇಲ್ಲ ನಮಗೆ ಬಡ್ಡಿ repayment ಆಗುತ್ತಿಲ್ಲ, ಅದರಿಂದ ನಮಗೆ ತೊಂದರೆಯಾಗುತ್ತಿದೆ ಎಂದು ಹೇಳುತ್ತಾರೆ. ಅದನ್ನು ದಯವಿಟ್ಟು ಆಗಿಂದಾಗ್ಗೆ ಭರಿಸುವಂತೆ ಮಾಡಿ.

ಅಧ್ಯಕ್ಷರು:– ಸಹಕಾರ ಸಚಿವರೆ, ನಿಮ್ಮ ಡಿಮ್ಯಾಂಡ್ ಅನ್ನು move. ಮಾಡಿಬಿಡಿ. ಅದರ ಚರ್ಚೆಯನ್ನೂ ಮಾಡಿಬಿಡೋಣ.

ಶ್ರೀ ಶಿವಾನಂದ ಎಸ್. ಪಾಟೀಲ್:– ಮಾನ್ಯ ಬೊಮ್ಮಾಯಿಯವರು ಯಾವ ಡಿ.ಸಿ.ಸಿ. ಬ್ಯಾಂಕ್ ನೋಡಿ ಹೇಳಿದರೋ ಗೊತ್ತಿಲ್ಲ. ಅವರು ಧಾರವಾಡ ಡಿ.ಸಿ.ಸಿ. ಬ್ಯಾಂಕ್ ನೋಡಿ ಹೇಳಿದರೋ ಏನೋ ಗೊತ್ತಿಲ್ಲ. ಆದರೆ Government support ಇಲ್ಲದೇ ಇರುವುದರಿಂದ, ಯಾವುದೇ ಡಿ.ಸಿ.ಸಿ. ಬ್ಯಾಂಕ್ ಎಲ್ಲಾ ರೈತರಿಗೆ ಸಾಲ ಕೊಡುವುದಕ್ಕೆ ಆಗುವುದಿಲ್ಲ. ನಮ್ಮ ದುರ್ದೈವ ಎಂದರೆ, Cooperative Minister ಇರಲಿ, Agriculture Minister ಇರಲಿ, ಯಾರೇ ಇರಲಿ, ಇವತ್ತಿನವರು ಆಗಲಿ, ಹಿಂದಿನವರು ಆಗಲಿ, ಅವರು ಯಾವುದೇ Cooperative D.C.C. bank support ಗೆ ಬರುವುದಿಲ್ಲ. ಅವರೇ ಒಯ್ದು Commericial bank ನಲ್ಲಿ deposit ಇಡುತ್ತಾರೆ. ಒಂದು ಕಡೆಗೆ ನಬಾರ್ಡ್‌ನಿಂದ ಸಾಲ ತರಬೇಕು, ರೈತರಿಗೆ ಸಾಲ ಕೊಡಬೇಕು. Depositor ಕಡೆಗೆ deposit mobilize ಮಾಡುವುದಕ್ಕೆ ಹೋದರೆ ಸರ್ಕಾರಕ್ಕೇ ಡಿ.ಸಿ.ಸಿ. ಬ್ಯಾಂಕ್ ಮೇಲೆ ವಿಶ್ವಾಸವಿಲ್ಲ, ಇನ್ನು ನಾವು ಎಲ್ಲಿಂದ ಕೊಡಲಿ? ಎಂದು depositor ನಮಗೆ ಹೇಳುತ್ತಾರೆ. ಇನ್ನೊಂದು ಕಡೆಗೆ RBI ನವರು ಏನು ಮಾಡಿದ್ದಾರೆ ಎಂದು ನಿಮಗೆ ಗೊತ್ತೇ? ಏನು urban banks ದು SLR amount ಇತ್ತು ಅದನ್ನು ಕೂಡ Government Securities ನಲ್ಲಿ

investment ಮಾಡಿ ಎಂದು ಹೇಳುತ್ತಾರೆ. ಮೂರು ಕಡೆಯಿಂದ ಹೊಡೆತ ಬಿದ್ದಿದೆ. ಇನ್ನೂ ಬೇಕಾದರೆ ಅವರಿಗೆ ಸ್ವಲ್ಪ advise ಮಾಡಿ. Commericial bank ನಲ್ಲಿ ಸರ್ಕಾರಿ Officers ಹೋಗಿ deposit ಇಡುತ್ತಾರೆ, . . .

ಅಧ್ಯಕ್ಷರು:- Advise ಮಾಡುವ ವಿಚಾರದಲ್ಲಿ ಇಲಾಖೆ demand ಬಂದಾಗ ಚರ್ಚೆ ಮಾಡೋಣ. ಈಗ ನೀವು ಮುಂದುವರೆಸಿ.

ಶ್ರೀ ಬಸವರಾಜ್ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಇದರಲ್ಲಿ ಇವರೆಲ್ಲರೂ ಹೇಳಿದ್ದು ಕೂಡ ಸತ್ಯ ಇರುವುದರಿಂದ, ಕೇಂದ್ರ ಮತ್ತು ರಾಜ್ಯ ಸರ್ಕಾರ rural credit system ಬಗ್ಗೆ ಪುನರ್‌ಚಿಂತನೆ ಮಾಡುವಂತಹ ಅವಶ್ಯಕತೆಯಿದೆ. ಇಷ್ಟು ವರ್ಷಗಳಾದರೂ ಕೂಡ ಇಲ್ಲಿ Capital investment agriculture ಗೆ ಬರುತ್ತಿಲ್ಲ. ಈಗ ಒಂದು industry ಮಾಡಿದಾಗ capital loan and working capital loan ಎಂದು ಇರುತ್ತದೆ. ಕೇವಲ working capital ಗೆ ಪೂರ್ಣ ಪ್ರಮಾಣದಲ್ಲಿರುವಂತಹ ವ್ಯವಸ್ಥೆ ಇಲ್ಲಿದೆ. Capital investment ಆಗುತ್ತಿಲ್ಲ. ಆದ್ದರಿಂದಲೇ ಇವತ್ತು ಕೃಷಿ ಬಡವಾಗಿದೆ. ಇದರ ಬಗ್ಗೆ ಮರುಚಿಂತನೆಯಾಗಬೇಕು. ಅದರ ಬಗ್ಗೆ ಡಿಮ್ಯಾಂಡ್ ಬಂದಾಗ ಮಾತನಾಡೋಣ. ಈಗ ಆ ಬಗ್ಗೆ ಮಾತನಾಡುವುದು ಮತ್ತೆ diversion ಆಗುತ್ತದೆ. ಮಾನ್ಯ ಅಧ್ಯಕ್ಷರೆ, ಇವತ್ತು ಕೃಷಿ ಇಲಾಖೆಯ ಕಾರ್ಯಕ್ರಮಗಳು ಏನಿವೆ, ಅದರಲ್ಲಿ ಎಲ್ಲದರ ಬಗ್ಗೆಯೂ ಕೂಡ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಪ್ರಮುಖವಾಗಿ 'ಭೂಚೇತನ' ಮತ್ತು 'ಕೃಷಿ ಭಾಗ್ಯ' pilot projects, ಅಂದರೆ ಮುಖ್ಯವಾಗಿರುವ ಕಾರ್ಯಕ್ರಮಗಳ ಬಗ್ಗೆ ಮಾತ್ರ ಮಾತನಾಡುತ್ತೇನೆ. 'ಭೂಚೇತನ' ಬಹಳ ಒಳ್ಳೆಯ ಕಾರ್ಯಕ್ರಮವೆಂದು ಅಂತರಾಷ್ಟ್ರೀಯ ಮಟ್ಟದಲ್ಲೂ ಕೂಡ ಹೇಳಿದ್ದಾರೆ. ಎರಡನೇ ಹಂತವಾಗಿ 2017 ರವರೆಗೆ extension ಮಾಡಬೇಕೆಂದು ಸರ್ಕಾರ ಪ್ರಯತ್ನ ಮಾಡುತ್ತಿದೆ. ಆದರೆ 'ಭೂಚೇತನ plus ಎಂದು ತಾವು ಕರೆದಿದ್ದೀರಿ, ಅದರಲ್ಲಿ, under irrigated agriculture extension system, budget head 021 last number, ಅದರಲ್ಲಿ financial target 2014-15 ರಲ್ಲಿ ಸುಮಾರು 14 ಕೋಟಿ ರೂ.ಗಳನ್ನು ತಾವು ಇಟ್ಟಿದ್ದೀರಿ. ಈ ಬಾರಿ ಅಂದರೆ 2015-16 ರಲ್ಲಿ ಅದನ್ನು

7.50 ಕೋಟಿ ರೂ.ಗಳಿಗೆ ಇಳಿಸಿದ್ದೀರಿ. ಏಕೆ ಇಳಿಸಿದ್ದೀರಿ? ಇದು ಅತ್ಯಂತ ಸಮರ್ಪಕವಾಗಿದೆ'. almost 50% of the farmers ಗೆ ಈ ಯೋಜನೆ ತಲುಪುತ್ತಿದೆ. ಇದು ಒಂದು ರೀತಿಯಲ್ಲಿ ತನ್ನದೇ ಆದಂತಹ ಗಾಂಭೀರ್ಯತೆ ಮತ್ತು maturity ಯನ್ನು ಪಡೆದುಕೊಂಡು ಹೆಚ್ಚಿನ ರೈತರಿಗೆ ಲಾಭವಾಗುವಂತಹ ಒಂದು ಯೋಜನೆಯಾಗಿದ್ದು, ಈ ಯೋಜನೆಗೆ ತಾವು extension ಕೊಟ್ಟು ಕಡಿಮೆ ಹಣವನ್ನೇಕೆ ಕೊಟ್ಟಿದ್ದೀರಿ, ಹೆಚ್ಚು ಮಾಡುವುದಕ್ಕೆ ಏಕೆ ಆಗುವುದಿಲ್ಲ? ಇದು ಬಹಳ ಸುಲಭವಾಗಿ ರೈತರಿಗೆ ಮುಟ್ಟುವಂತಹ ಯೋಜನೆಯಾಗಿದೆ. Nutrients ಅನ್ನು ಭೂಮಿಗೆ ಹಾಕಿ, ಉತ್ಪಾದನೆ ಹೆಚ್ಚಾಗಿ, productivity and production ಹೆಚ್ಚಾಗುವ ಜೊತೆಗೆ ಭೂಮಿಯ ಸಾರವು ಕೂಡ ಉಳಿಯುತ್ತದೆ. ಇಂತಹ ಒಳ್ಳೆಯ ಕಾರ್ಯಕ್ರಮಕ್ಕೆ ನೀವು ಹೆಚ್ಚಿನ ಹಣವನ್ನು ಕೊಡಬೇಕಲ್ಲವೇ? 14 ಕೋಟಿ ರೂ.ಗಳು ಕೂಡ ಬಹಳ ಕಡಿಮೆಯಾಗಿದ್ದು, ಇನ್ನೂ ಕಡಿಮೆ ಮಾಡಿ ರಾಜ್ಯ ಮಟ್ಟದಲ್ಲಿ 7.50 ಕೋಟಿ ರೂ.ಗಳನ್ನು ಕೊಟ್ಟರೆ, ಆ ಹಣ ಜಿಲ್ಲೆಗೆ ಬಂದು, ತಾಲ್ಲೂಕಿಗೆ ಬರುವಷ್ಟರಲ್ಲಿ 10 ರಿಂದ 30 ಲಕ್ಷ ರೂ.ಗಳಾಗುತ್ತದೆ. ಅದು ಮುಟ್ಟುತ್ತದೆಯೇ? ಬಜೆಟ್‌ನಲ್ಲಿ provision ಮಾಡುವಾಗ ಇದರ ಬಗ್ಗೆ ಗಂಭೀರವಾಗಿ ಏಕೆ ಚಿಂತನೆ ಮಾಡುವುದಿಲ್ಲ? ಎಂಬ ಪ್ರಶ್ನೆಯನ್ನು ತಮ್ಮಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಹಿಂದಿನ ವರ್ಷ 'ಭೂಚೇತನ'ದಲ್ಲಿ ಸುಮಾರು 30 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದರು. ಅದು ಸಮರ್ಪಕವಾಗಿ ಕೆಲಸ ಮಾಡಿದ್ದು, ಸುಮಾರು 80% ಸಾಧನೆ ಆಗಿದೆ. Target 25 ಲಕ್ಷ ಹೆಕ್ಟೇರ್ ಇದ್ದರೆ, 19.32 ಲಕ್ಷ ಹೆಕ್ಟೇರ್ achieve ಮಾಡಿದ್ದೀರಿ, ಇನ್ನಷ್ಟು achieve ಮಾಡುವಂತಹ small gap ಇದೆ. ಅದನ್ನು ಕೂಡ ತಾವು ಮಾಡಬೇಕಾಗುತ್ತದೆ. ಇದಕ್ಕೆ ಪ್ರಾಶಸ್ತ್ಯ ಕೊಡುವಲ್ಲಿ ಸರ್ಕಾರ ವಿಫಲವಾಗಿದೆಯೆಂಬುದು ಬಹಳ ಸ್ಪಷ್ಟವಾಗುತ್ತದೆ. ಯಾವುದಕ್ಕೆ ಪ್ರಾಶಸ್ತ್ಯ ಕೊಡಬೇಕು, ಅದಕ್ಕೆ ಕೊಟ್ಟಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಇದರ ಬಗ್ಗೆ ನಿಮ್ಮ ಚಿಂತನೆ ಏನು? ಎಂಬುದನ್ನು ತಿಳಿಸಬೇಕು. ಇದು ಸಾಧ್ಯವಿದ್ದರೆ ಇದನ್ನೂ correction ಮಾಡಬೇಕೆಂಬ ಬೇಡಿಕೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಎರಡನೆಯದಾಗಿ 'ಕೃಷಿ ಭಾಗ್ಯ' ಯೋಜನೆ ಬಗ್ಗೆ ಹೇಳುವುದಾದರೆ, ತಾವು 2014-15 ರಲ್ಲಿ 500 ಕೋಟಿ ರೂ.ಗಳನ್ನು

ಇದಕ್ಕಾಗಿ ಕೊಟ್ಟಿದ್ದೀರಿ. ಈ ಬಾರಿ ಕೂಡ 500 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದೀರಿ. 'ಕೃಷಿ ಭಾಗ್ಯ' ಯೋಜನೆ, ಜಲಾನಯನದ ಒಂದು ಭಾಗ ಮತ್ತು ಕೃಷಿ extension ಭಾಗ ಎರಡನ್ನು ಸೇರಿಸಿ integrated ಆಗಿ ಮಾಡುವ ಪ್ರಯತ್ನವನ್ನು ಮಾಡಿದ್ದಾರೆ. ಇದರಲ್ಲಿ ಅಧಿಕಾರಿಗಳ ದೊಡ್ಡ ಲಾಬಿ ನಡೆಯಿತು. ಕೆಲವರು ಜಲಾನಯನ ಭಾಗವನ್ನು ಸೇರಿಸಬೇಕೆಂದರು, ಮತ್ತೆ ಕೆಲವರು ಸೇರಿಸಬಾರದು ಎಂದು, ಕೊನೆಗೆ ಎರಡನ್ನೂ ಸೇರಿಸಿ ಮಾಡಬೇಕೆಂಬ ತೀರ್ಮಾನವನ್ನು ಸರ್ಕಾರ ಮಾಡಿದೆ. ಈ ಕಡೆ ಜಲಾನಯನಕ್ಕೂ ಪ್ರಾಶಸ್ತ್ಯವಿಲ್ಲದ ಹಾಗೆ, ಮತ್ತೊಂದು ಕಡೆ ಕೃಷಿಗೆ ಪ್ರಾಶಸ್ತ್ಯವಿಲ್ಲದ ಹಾಗೆ, ಕೂಡಿಸಿದ ನಂತರ ಇವತ್ತು ನಡೆಯುತ್ತಿದೆ. 'ಕೃಷಿ ಭಾಗ್ಯ' ಯೋಜನೆ intent ಒಳ್ಳೆಯದಿದೆ. ಸಮಗ್ರವಾದಂತಹ integrated farming, ಅದರ ಬಗ್ಗೆ soil conservation, drip, micro irrigation, poly houses, cropping pattern ಮತ್ತು bund ಗಳನ್ನು ಇಟ್ಟುಕೊಂಡಿದ್ದೀರಿ ಅಂದರೆ ಒಂದು ಇಲಾಖೆ ಏನೆಲ್ಲಾ ಮಾಡಬಹುದು ಅದನ್ನೆಲ್ಲಾ ಒಂದೇ head ನಲ್ಲಿ ತರಬೇಕೆಂಬ ಆಸೆಯನ್ನು ತಾವು ಇಟ್ಟುಕೊಂಡಿದ್ದೀರಿ, ಆದರೆ ಅನುಷ್ಠಾನದಲ್ಲಿ ಬಹಳಷ್ಟು ಗೊಂದಲಗಳು ಸೃಷ್ಟಿಯಾಗಿವೆ. ಲಾಟರಿ ಮುಖಾಂತರ ಎತ್ತಿ ಸುಮಾರು 8–10 ತಿಂಗಳುಗಳಾಯಿತು. ಯಾವುದೇ ರೀತಿಯಲ್ಲಿಯೂ ground level ನಲ್ಲಿ ಕೆಲಸವಾಗುತ್ತಿಲ್ಲ. 10–20% ಕೆಲಸವಾಗಿರಬಹುದೆಂಬುದು ನನ್ನ ಭಾವನೆಯಾಗಿದೆ. 80% ರಷ್ಟು ಕೂಡ ground level ನಲ್ಲಿ ಕೆಲಸವಾಗಿಲ್ಲ. ಆ ರೈತನಿಗೆ ಆ ಯೋಜನೆ ಬಗ್ಗೆ ಯಾವುದೇ ರೀತಿಯ ತರಬೇತಿ ಕೂಡ ಸಿಕ್ಕಿಲ್ಲ. ಮೊದಲು ಒಂದು ತರಬೇತಿ ಕೊಡಬೇಕು, ಅದು ಕೂಡ ಸಿಗುವ ವ್ಯವಸ್ಥೆ ಆಗಿಲ್ಲ. ಕೃಷಿ ಭಾಗ್ಯದಲ್ಲಿ ಐದು component ಗಳಿವೆ. ಒಂದು component ಕೂಡ ಪ್ರಾರಂಭವಾಗಿಲ್ಲ. ಕೇವಲ ಅಲ್ಲಲ್ಲಿ ಹೊಂಡಾ ತೆಗೆಯುವ ಕೆಲಸ ಮಾತ್ರ ಆಗಿರಬಹುದು, ಇಲ್ಲವೆಂದು ಹೇಳುವುದಿಲ್ಲ. ಅದು ಮೊದಲಿನಿಂದಲೂ ಇತ್ತು. "ದೊಡ್ಡ ಉದ್ದೇಶ, ಸಣ್ಣ ಪ್ರಯತ್ನ, ವಿಫಲವಾದಂತಹ ಫಲಿತಾಂಶ" ಇದು ಕೃಷಿ ಇಲಾಖೆ ನಡೆದುಕೊಳ್ಳುವ ರೀತಿಯಾಗಿದೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ):- ಮಾನ್ಯ ಅಧ್ಯಕ್ಷರೆ, ಸಚಿವರು ಜಾರಿಗೆ ತಂದಿರುವ 'ಕೃಷಿ ಭಾಗ್ಯ' ಯೋಜನೆಯಲ್ಲಿ ಕೃಷಿ ಹೊಂಡ ನಿರ್ಮಾಣ ಮಾಡುತ್ತಿದ್ದಾರೆ. ಕೃಷಿ ಹೊಂಡ ನಿರ್ಮಾಣ ಮಾಡುವುದಕ್ಕೆ ನೇರವಾಗಿ ರೈತರ ಖಾತೆಗಳಿಗೆ ಹಣವನ್ನು ಒದಗಿಸಿಕೊಟ್ಟಿದ್ದಾರೆ. ಆ ರೈತನಿಗೆ ಹೊಂಡ ಇಷ್ಟು ಅಗಲ, ಇಷ್ಟು ಉದ್ದ, ಇಷ್ಟು ಆಳವಿರಬೇಕೆಂದು ಒಂದು size ಕೊಟ್ಟಿದ್ದಾರೆ. ರೈತರೆಲ್ಲರೂ ಕೃಷಿ ಹೊಂಡವನ್ನು ತೆಗೆದಿದ್ದು, ಅದಕ್ಕೆ ಪ್ಲಾಸ್ಟಿಕ್ ಹೊದಿಕೆ ಹಾಕಬೇಕಾಗಿದೆ. ರೈತ ತನಗೆ ಬೇಕಾಗಿರುವ ಪ್ಲಾಸ್ಟಿಕ್ ಅನ್ನು ಖರೀದಿಸಿ ಹಾಕುವಂತಹ ಅಧಿಕಾರ ಅವನಿಗೆ ಇಲ್ಲ. ಇಡೀ ರಾಜ್ಯದ ನಾಲ್ಕು ವಿಭಾಗಗಳಲ್ಲಿ ಇದಕ್ಕಾಗಿ agency ಯನ್ನು fix ಮಾಡಿದ್ದು, ಅವರುಗಳ ಮುಖಾಂತರವೇ ಪ್ಲಾಸ್ಟಿಕ್ ಹೊದಿಕೆ ಖರೀದಿಸಬೇಕಾಗಿದೆ. ಇವರು ಹೊರಗೆ ಮಾರುಕಟ್ಟೆಯಲ್ಲಿ 500 ಎಂ.ಎಂ.ಪ್ಲಾಸ್ಟಿಕ್‌ಗೇನು rate ಇದೆಯೋ, ಅದೇ same rate ಅನ್ನು 300 ಎಂ.ಎಂ.ಗೆ ಇಟ್ಟಿದ್ದಾರೆ. ಈ ಪ್ಲಾಸ್ಟಿಕ್ ಹಾಕಿದರೆ 6 ತಿಂಗಳು ಅಥವಾ ವರ್ಷದಲ್ಲಿ ಅದು ಕೆಟ್ಟು ಹೋಗುತ್ತದೆ, ಹರಿದು ಹೋಗುತ್ತದೆ, ಏನೂ ಪ್ರಯೋಜನವಾಗುವುದಿಲ್ಲವೆಂದು ಎಲ್ಲಾ ರೈತರು ಆಲೋಚನೆ ಮಾಡಿ, ಯಾರೂ ಕೂಡ ಅಂತಹ ಪ್ಲಾಸ್ಟಿಕ್ ಖರೀದಿಸಿ ಹಾಕುವುದಕ್ಕೆ ಮುಂದೆ ಬರುತ್ತಿಲ್ಲ. ನೀವೊಂದು condition fix ಮಾಡಿ ಇಂತಹ ಅಳತೆಯ, ಇಂತಹ ಗಟ್ಟಿಯಿರುವ ಪ್ಲಾಸ್ಟಿಕ್ ಹಾಕಬೇಕೆಂದು ಹೇಳಿ ನೇರವಾಗಿ ರೈತರ ಖಾತೆಗೆ ಕೊಟ್ಟಿರುವ ಹಣದ ಮುಖಾಂತರ ಅವನು ಬೇಕಾದಂತಹ ಪ್ಲಾಸ್ಟಿಕ್ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ. ನೀವು ನಾಲ್ಕು ಭಾಗಗಳಲ್ಲಿ ಕೊಟ್ಟಿರುವ ಏಜೆನ್ಸಿಗಳನ್ನು ತೆಗೆದು ಹಾಕಬೇಕೆಂದು ನಿಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು):- ಮಾನ್ಯ ಅಧ್ಯಕ್ಷರೆ, ಉತ್ತರ ಕೊಡುವಾಗ ಬೇರೆ ವಿಚಾರವನ್ನು ಮಾತನಾಡುತ್ತೇನೆ. ಈಗ ಇದೊಂದು ವಿಷಯವನ್ನು ಸ್ಪಷ್ಟೀಕರಿಸುತ್ತೇನೆ. ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರೂ ಕೂಡ ಸಚಿವರಾಗಿ ಕೆಲಸ ಮಾಡಿದ್ದಾರೆ. ಅವರು ಮಾರುವ ಹೊದಿಕೆಗೆ ಮೂರು ವರ್ಷ guarantee ಇದೆ. ಇಷ್ಟ ಬಂದವರಿಗೆ ನಾವು enlist

ಮಾಡಿಲ್ಲವೆಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಎಲ್ಲದ್ದಕ್ಕೂ ಕೂಡ ಒಂದು ಕಾನೂನು, ಕಾಯಿದೆಯೆಂಬುದು ಇರುತ್ತದೆ. ಪಾರದರ್ಶಕ ನಿಯಮದ ಪ್ರಕಾರವಾಗಿ tender ಕರೆದು ಅವರನ್ನು ನೇಮಕ ಮಾಡಿದ್ದೇವೆ. ಯಾವುದಾದರೂ ಸಂಸ್ಥೆಯವರು ಬಿಟ್ಟು ಹೋಗಿದ್ದರೆ ಧಾರಾಳವಾಗಿ ಅವರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿತ್ತು. ಇನ್ನೂ ಕಡಿಮೆ rate ಗೆ ಕೊಡುವವರು ಟೆಂಟರ್‌ನಲ್ಲಿ ಭಾಗವಹಿಸಿದ್ದರೆ ನನ್ನಷ್ಟು ಸಂತೋಷ ಬೇರೆ ಯಾರಿಗೂ ಕೂಡ ಇರುವುದಿಲ್ಲ. ನನ್ನ ದುಡ್ಡು ಉಳಿದರೆ, ಅದಕ್ಕಿಂತ ಬೇರೆ ಇನ್ನೇನು ಸಂತೋಷಬೇಕು? ಈಗ ಮತ್ತೊಮ್ಮೆ ಇದಕ್ಕಾಗಿ tender ಕರೆಯುತ್ತಿದ್ದು, ಬಿಟ್ಟು ಹೋಗಿರುವ ಸಂಸ್ಥೆಗಳಿದ್ದರೆ ಧಾರಾಳವಾಗಿ ಭಾಗವಹಿಸಲಿ, ಯಾರು ಬೇಕಾದರೂ ಕೂಡ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಅಧ್ಯಕ್ಷರು:– ರೈತ ಎಲ್ಲಿ ಬೇಕಾದರೂ ಖರೀದಿ ಮಾಡುವುದಕ್ಕೆ ಅವಕಾಶ ಕೊಡಬೇಕೆಂಬುದು ಅವರ ಬೇಡಿಕೆ ಆಗಿದೆ.

ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು):– ಆ ಸಂಸ್ಥೆಯ ಮಾಲಿನಿಂದ ಏನಾದರೂ ಹೆಚ್ಚು ಕಡಿಮೆ ಆದರೆ ನಾಳೆ ನಾವು ಯಾರನ್ನು ಜವಾಬ್ದಾರಿ ಮಾಡಬೇಕು? ನಾವು ಯಾವುದೇ ಕಂಪನಿಯನ್ನು ಹೊರಗೆ ಹಾಕಿಲ್ಲ. Empanel ಮಾಡುತ್ತೇವೆ, ಆ empanelled list ನಲ್ಲಿರುವ ಯಾವ ಸಂಸ್ಥೆಯನ್ನಾದರೂ ರೈತ ಹಾಕಿಸಿಕೊಳ್ಳಬಹುದು. ನಾವು ಇಂತಹವರಿಂದಲೇ ಖರೀದಿಸಿ ಹಾಕಬೇಕೆಂದು ನಿಬಂಧನೆ ಮಾಡಿಲ್ಲ. ಆಯ್ಕೆಯನ್ನು ರೈತರಿಗೆ ಬಿಟ್ಟಿದ್ದೇವೆ. ಯಾವುದಾದರೂ ಕಂಪನಿ ಈ list ನಲ್ಲಿ ಸೇರಿಲ್ಲವೆಂದರೆ tender ನಲ್ಲಿ ಭಾಗವಹಿಸಲಿ, ಆ ಸಂಸ್ಥೆಯನ್ನು ಕೂಡ empanel ಮಾಡುತ್ತೇವೆ. ಅವರಿಂದ ಕೂಡ ರೈತರು ಖರೀದಿಸಿ ಹಾಕಿಸಿಕೊಳ್ಳಬಹುದು. ನಮ್ಮ ಹತ್ತಿರ ಯಾವುದೇ ನಿಬಂಧನೆಯಿಲ್ಲ. ಅವರನ್ನು ಮುಕ್ತವಾಗಿ ಬಿಟ್ಟು, ಏನು ಬೇಕಾದರೂ ತೆಗೆದುಕೊಂಡು ಹಾಕಿ ನಂತರ ನಾಳೆ ದಿವಸ ಅನಾಹುತವಾದರೆ ನಾವು ಉತ್ತರ ಕೊಡಬೇಕಾಗುತ್ತದೆ. ಅವರು ಕೊಟ್ಟಿರುವ ವಾಯಿದೆಯೊಳಗೆ ಗುಣಮಟ್ಟ ಅಥವಾ ಮತ್ತೊಂದರಲ್ಲಿ ಹೆಚ್ಚು ಕಡಿಮೆ

ಆದರೆ ಅವರನ್ನು ಕೇಳುವಂತಹ ಹಕ್ಕು ನಮಗಿರುತ್ತದೆ. ಈ ಉದ್ದೇಶ ಬಿಟ್ಟರೆ ಬೇರೆ ಯಾರನ್ನೂ ಕೂಡ ನಾವು ತೆಗೆದು ಹಾಕಿಲ್ಲ. ಭಾಗವಹಿಸಿರುವ ಎಲ್ಲಾ ಕಂಪನಿಗಳನ್ನು empaneled list ಮಾಡುತ್ತೇವೆ. ಭಾಗವಹಿಸದಿರುವ ಕಂಪನಿಗಳು ಕೂಡ ಭಾಗವಹಿಸಲಿ. Tender process ನಲ್ಲಿ ಭಾಗವಹಿಸದೆ, ಬೇರೆ ಬೇರೆ ಕಾರಣಗಳನ್ನು ಹೇಳಿದರೆ ಕಷ್ಟವಾಗುತ್ತದೆ. ನಾವು ಕೂಡ ಕಾನೂನಿನ ಚೌಕಟ್ಟಿನೊಳಗೆ ಕೆಲಸ ಮಾಡಬೇಕಾಗುತ್ತದೆ.

ಅಧ್ಯಕ್ಷರು:- ಸಮಯವಿಲ್ಲ. ಮಾತನಾಡಲಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಸಾರ್, ಒಂದೇ ನಿಮಿಷ. ಇದು ಬಹಳ ಮಹತ್ವದ ವಿಷಯವಾಗಿದೆ. ಇದಕ್ಕೊಂದು clarification ಕೊಟ್ಟು ಬಿಟುತ್ತೇನೆ.

ಅಧ್ಯಕ್ಷರು:- Time ಇಲ್ಲ. ನಿಮ್ಮ ಸಲಹೆಗೆ ಅವರು ಒಪ್ಪಿಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಅವರು ಒಪ್ಪಿಕೊಂಡಿದ್ದಾರೆ. ನಾವು ರೈತರ ಪರವಾಗಿ ಅವರಿಗೆ ಇನ್ನೂ convince ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಾನು ಯಾವುದೇ ಗುತ್ತಿಗೆ ಪರವಾಗಿ ಮಾತನಾಡುವುದಕ್ಕೆ ಇಲ್ಲಿ ಬಂದಿಲ್ಲ ಎನ್ನುವುದನ್ನು ತಾವು ಸ್ಪಷ್ಟವಾಗಿ ತಿಳಿದುಕೊಳ್ಳಿ. ನಮಗೆ ಕಳಕಳಿಯಿರುವುದೇನೆಂದರೆ, ಸರ್ಕಾರ ಕೊಡತಕ್ಕಂತಹ ಹಣದಲ್ಲಿ 300 m.m. ಇರತಕ್ಕಂತಹ ಬದಲಿಗೆ ಅದೇ ಹಣದಲ್ಲಿ 500 m.m. plastic company ಅವರು ಕೊಡುತ್ತಿದ್ದಾರೆ. ಏಜೆನ್ಸಿಗಳೇನಿವೆ, ಅವು ಯಾವುದೂ plastic ತಯಾರು ಮಾಡುವಂತಹ ಕಂಪನಿಗಳಲ್ಲ. ಅದಕ್ಕೆ ದಯಮಾಡಿ ಮಧ್ಯವರ್ತಿಗಳಿಗೆ ಹಣ ಕೊಡುವುದರ ಬದಲಿಗೆ, ನೇರವಾಗಿ ರೈತರಿಗೆ ಕೊಟ್ಟಿದ್ದರೆ ಇನ್ನಷ್ಟು ಅನುಕೂಲವಾಗುತ್ತದೆ. ಐದು ವರ್ಷದ condition ಹಾಕುತ್ತೇವೆಂದು ರೈತರಿಗೆ ಹೇಳಿ, ಮೂರು ವರ್ಷ ಏಕೆ ಹಾಕುತ್ತೀರಿ? 10 ವರ್ಷಗಳ ಕಂಡೀಷನ್ ಹಾಕಿ. ಮೂರು ವರ್ಷದ ನಂತರ ಮತ್ತೊಂದು ಪ್ಲಾಸ್ಟಿಕ್ ಕೊಡುತ್ತೀರಾ?

ಶ್ರೀ ಕೃಷ್ಣ ಬೈರೇಗೌಡ (ಕೃಷಿ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಬಹಳ ಸರಳವಾಗಿದೆ. ಅವರೂ ಸಹ tender process ನಲ್ಲಿ ಭಾಗವಹಿಸಲಿ. ನಾನೂ ಸಹ ಕಾನೂನಿನ ಚೌಕಟ್ಟಿನೊಳಗೆ ಕೆಲಸ ಮಾಡಬೇಕಾಗುತ್ತದೆ. ಇಷ್ಟ ಬಂದವರಿಗೆ ನಾನು work order ಕೊಡುವುದಕ್ಕಾಗುವುದಿಲ್ಲ. ಟೆಂಡರ್ ಮುಖಾಂತರ ಬರಲಿ. ಅವರು ಇನ್ನೂ ಒಳ್ಳೆಯ ಗುಣಮಟ್ಟದ್ದನ್ನು ಕಡಿಮೆ ದರಕ್ಕೆ ಕೊಟ್ಟರೆ ಅವರಿಗೆ ರತ್ನಗಂಬಳಿ ಹಾಸಿ ಸ್ವಾಗತ ಮಾಡಿ ನಾನೇ ಅವರಿಗೆ work order ಕೊಡಿಸಿ ಕೊಡುತ್ತೇನೆ. ಟೆಂಡರ್‌ನಲ್ಲಿ ಭಾಗವಹಿಸದೇ ಕೊಡಿ ಎಂದು ಹೇಳಿದರೆ ಯಾವ ರೀತಿ ಕೊಡುವುದಕ್ಕಾಗುತ್ತದೆ?

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, ಭಾಗವಹಿಸಿದ ಕಂಪನಿಗಳೆಲ್ಲವೂ ಶಾಮೀಲಾಗಿ ದರ ಹೆಚ್ಚಿಗೆ ಮಾಡಿದರೆ...

ಶ್ರೀ ಕೃಷ್ಣಬೈರೇಗೌಡ:- ಎಲ್ಲಾ ಕಂಪನಿಗಳು tender ನಲ್ಲಿ ಭಾಗವಹಿಸಲಿ ಎಂದು ಅದಕ್ಕೆ ಹೇಳುತ್ತಿರುವುದು.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಭಾಗವಹಿಸುವ ಕಂಪನಿಗಳು ಒಟ್ಟಾರೆ ಮೂರ್ನಾಲ್ಕು ಕಂಪನಿಗಳಿದ್ದು, ಒಂದೊಂದು ಭಾಗವನ್ನು ಒಬ್ಬೊಬ್ಬರು ತೆಗೆದುಕೊಳ್ಳೋಣವೆಂದು ಅವರೆಲ್ಲರೂ understanding ಮಾಡಿಕೊಂಡು, ದರ ಹೆಚ್ಚಾಗಿ ಮಾಡಿದಾಗ, ರೈತರ ದುಡ್ಡೇ ಅಥವಾ ಸರ್ಕಾರದ ದುಡ್ಡೇ ನಷ್ಟವಾಗುತ್ತದೆ.

ಶ್ರೀ ಕೃಷ್ಣ ಬೈರೇಗೌಡ:- ಇನ್ನೂ ಯಾರಾದರೂ ಇದ್ದರೆ ಭಾಗವಹಿಸಲಿ ಎಂದು ಹೇಳುತ್ತಿದ್ದೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಆ ರೀತಿ ಅಲ್ಲ. ಎಷ್ಟು ಕಂಪನಿ ಕರೆದರೂ, adjustment ಇರುವ ಕಂಪನಿಗಳವರು ದರ ಹೆಚ್ಚಿಸುವುದನ್ನು ನಿಮ್ಮ ಕೈಯಲ್ಲಿ ತಪ್ಪಿಸುವುದಕ್ಕಾಗುವುದಿಲ್ಲ. ಕಂಪನಿಯವರ ದರ ಮಾರುಕಟ್ಟೆ ದರಕ್ಕಿಂತ ಕಡಿಮೆಯಿರಬೇಕು.

ಶ್ರೀ ಕೃಷ್ಣ ಬೈರೇಗೌಡ:- ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು:- ನನಗೆ ಸಮಯವಿಲ್ಲ. ಚರ್ಚೆ ಪೂರ್ಣಗೊಳ್ಳಬೇಕು. ಉತ್ತರ ಹೇಳುವಾಗ ಮಾತನಾಡಿ.

ಶ್ರೀ ಕೃಷ್ಣ ಬೈರೇಗೌಡ:- ಆ ಕಂಪನಿಗಳೇನಾದರೂ ಭಾಗವಹಿಸುವುದಕ್ಕೆ ತೊಂದರೆಯಾದರೆ ನಮ್ಮನ್ನು ಸಂಪರ್ಕ ಮಾಡಲಿ. ಅವರು tender ನಲ್ಲಿ ಭಾಗವಹಿಸದೇ, ನೆಪಗಳನ್ನು ಹೇಳಿದರೆ ನಾನೇನು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಅವರು ಭಾಗವಹಿಸುತ್ತಾರೆ. Adjustment ಮಾಡಿಕೊಂಡು rate ಹೆಚ್ಚಾಗಿ ಹಾಕುತ್ತಿದ್ದಾರೆ.

ಶ್ರೀ ಕೃಷ್ಣ ಬೈರೇಗೌಡ:- Adjustment ಇಲ್ಲದಿರುವವರು ಸಹ ಬಂದು tender ಪ್ರಕ್ರಿಯೆಯಲ್ಲಿ ಭಾಗವಹಿಸಲಿ. ನಾನೇನು ಬೇಡವೆಂದು ಹೇಳಿದ್ದೇನೆಯೇ?

ಅಧ್ಯಕ್ಷರು:- ಮಾನ್ಯ ಸಚಿವರೆ... ಸಾಕು ಸುಮ್ಮನಿರಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಎಲ್ಲರೂ adjustment ಮಾಡಿಕೊಂಡಿರುತ್ತಾರೆ. ಅವರು ಬರುವುದಕ್ಕೆ ಬಿಡಬೇಕಲ್ಲವೇ?

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಸಚಿವರೇ ಉತ್ತರ ಹೇಳುವಾಗ ಹೇಳಿ.

ಶ್ರೀ ಕೃಷ್ಣ ಬೈರೇಗೌಡ:- ಅರ್ಥ ಮಾಡಿಕೊಂಡು ಮಾತನಾಡಬೇಕು. ಭಾಗವಹಿಸುವುದಕ್ಕೆ ಏನಾದರೂ ತೊಂದರೆಯಿದ್ದರೆ ನಮ್ಮನ್ನು ಸಂಪರ್ಕ ಮಾಡಲಿ. ನಾವು ಅದನ್ನು ಸರಿ ಮಾಡಿಕೊಡುತ್ತೇವೆ. ಭಾಗವಹಿಸದೇ ಹೇಳಿದರೆ ನಾನೇನು ಮಾಡುವುದು?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- Tender ಕರೆಯುವ ಪ್ರಶ್ನೆಯೇ ಇಲ್ಲಿ ಇಲ್ಲ. ನೇರವಾಗಿ ರೈತರಿಗೆ ಹಣ ಕೊಡಿ, ಮಧ್ಯವರ್ತಿಗಳಿಗೆ ಕೊಡಬೇಡಿ.

ಶ್ರೀ ಕೃಷ್ಣ ಬೈರೇಗೌಡ:- ನಾಳೆಯ ದಿವಸ ಹೆಚ್ಚು ಕಡಿಮೆ ಆದರೆ ನೀವು ಜವಾಬ್ದಾರಿ ತೆಗೆದುಕೊಳ್ಳುತ್ತೀರಾ?

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಹೆಚ್ಚು ಕಡಿಮೆ ಏನಾಗುತ್ತದೆ? ಮೂರು ವರ್ಷದ ನಂತರ ನೀವು ಹೊಸ ಪ್ಲಾಸ್ಟಿಕ್ ಕೊಡುತ್ತೀರಾ?

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:- ನಾಳೆ ದಿವಸ ಹೆಚ್ಚು ಕಡಿಮೆ ಆದರೆ ನೀವು ಜವಾಬ್ದಾರಿ ತೆಗೆದುಕೊಳ್ಳುತ್ತೀರಾ?

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ರೈತರಿಗೆ ಬಹಳ ಜವಾಬ್ದಾರಿ ತೆಗೆದುಕೊಂಡು ಹಣವನ್ನೇನು ತುಂಬಿದ್ದೀರಾ?

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:- ಸರ್ಕಾರದಲ್ಲಿ ಕಾನೂನು ಚೌಕಟ್ಟಿದೆ. ಇಷ್ಟ ಬಂದ ಹಾಗೆ ನಡೆಸುವುದಕ್ಕಾಗುವುದಿಲ್ಲ. ಕಾನೂನಿನ ಚೌಕಟ್ಟಿನ ಪ್ರಕಾರ ಕೆಲಸ ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು:- ನೀವು ಪೂರೈಸಿ.

ಶ್ರೀ ಬಸವರಾಜ್ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಕೃಷ್ಣ ಬೈರೇಗೌಡರೆ, ಏಕೆ ಅಷ್ಟು ಸಿಟ್ಟು ಮಾಡಿಕೊಳ್ಳುತ್ತೀರಿ?

ಅಧ್ಯಕ್ಷರು:- ನೀವು ಬೇಗ ಪೂರೈಸಿ. Yield ಆಗಬೇಡಿ.

ಶ್ರೀ ಬಸವರಾಜ್ ಬೊಮ್ಮಾಯಿ:- ಅವರು ಸುಧಾರಣೆಗೆ ಹೇಳಿದರೆ ಏಕೆ ಅಷ್ಟು ಸಿಟ್ಟು ಮಾಡಿಕೊಳ್ಳುತ್ತೀರಿ? ಮಾರುಕಟ್ಟೆಯಲ್ಲಿ ಚೆನ್ನಾಗಿ ಸಿಕ್ಕಿದರೆ, ಆ typed condition ಹಾಕಿ, ಮುಂದಿನ ದಿನಗಳಲ್ಲಿ tender ಕರೆಯಿರಿ, ಸಮಸ್ಯೆ ಸರಿ ಹೋಗುತ್ತದೆ.

ಮಾನ್ಯ ಅಧ್ಯಕ್ಷರೆ, ಎರಡನೆದಾಗಿ ಹೇಳುವುದೇನೆಂದರೆ, Soil Health Center ಗಳನ್ನು ಸ್ಥಾಪನೆ ಮಾಡುವ ಒಂದು ಯೋಜನೆ ಕೃಷಿ ಇಲಾಖೆಯಲ್ಲಿದೆ.

ಅಧ್ಯಕ್ಷರು:– ಬೇಗ, ಬೇಗ ಮಾತನಾಡಿ.

ಶ್ರೀ ಬಸವರಾಜ್ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, 10 ನಿಮಿಷದಲ್ಲಿ ಮುಗಿಸುತ್ತೇನೆ. ಕೃಷಿ ಇಲಾಖೆಯಲ್ಲಿ Soil Health Center ಅನ್ನು ಸ್ಥಾಪನೆ ಮಾಡುವ ಒಂದು ಯೋಜನೆ ಕೃಷಿ ಇಲಾಖೆಯಲ್ಲಿದೆ. ಈ ಯೋಜನೆಗಾಗಿ ಬಜೆಟ್‌ನಲ್ಲಿ ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ ಕೇವಲ ಮೂರು ಕೋಟಿ ರೂ.ಗಳನ್ನು ಒಂದು head ನಲ್ಲಿ ಮತ್ತು ಇನ್ನೊಂದು head ನಲ್ಲಿ ಒಂದು ಕೋಟಿ ರೂ.ಗಳನ್ನು 2014–15 ಮತ್ತು 2015–16ನೇ ಸಾಲಿಗೆ ಮೀಸಲಿಟ್ಟಿದ್ದಾರೆ. ಈ ರೀತಿಯಾದರೆ ಈ ಯೋಜನೆಗಳು ಏಕೆ ಬೇಕು? ಹೆಸರಿಗಾಗಿ ಯೋಜನೆಗಳನ್ನು ಏಕೆ ಮಾಡುತ್ತೀರಿ? ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ ಸುಮಾರು head ಗಳಲ್ಲಿ ನಾಲ್ಕು ಕೋಟಿ ರೂ.ಗಳು, ಮೂರು ಕೋಟಿ ರೂ.ಗಳು, ಒಂದು ಕೋಟಿ ರೂ.ಗಳು, 75 ಲಕ್ಷ ರೂ.ಗಳು State sector ಮತ್ತು Matching Central Sector ಕೊಡುವಂತಹ ಸ್ಥಿತಿ ಇದೆ. State sector ನಲ್ಲಿ ಸಿಕ್ಕಾಪಟ್ಟೆ head ಗಳಿವೆ. ಈ ರೀತಿ ಯೋಜನೆಗಳನ್ನು ಮಾಡಿ, ಬಜೆಟ್ ಹಣವನ್ನು ಹರಿದು ಹಂಚಿರುವುದರಿಂದ ಯಾರಿಗೂ ಕೂಡ ಸಿಗದಂತಹ ವ್ಯವಸ್ಥೆಯಾಗಿದೆ.

ಅಧ್ಯಕ್ಷರು:– Health Center ಗಳು ಒಳ್ಳೆಯದೇ?

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, ಇವು ಕೆಲಸ ಮಾಡಿದರೆ ಒಳ್ಳೆಯದು. ಕೆಲಸ ಮಾಡದಿದ್ದರೆ ಏನು ಮಾಡುತ್ತೀರಿ? ಈ ಯೋಜನೆಯ ಕೆಲಸವನ್ನು ಯೂನಿವರ್ಸಿಟಿ ಹಾಗೂ ಇಲಾಖೆ ಕೂಡಿ ಮಾಡಬೇಕು. ಇದರಲ್ಲಿ ಯೂನಿವರ್ಸಿಟಿ ಪಾತ್ರ ಬಹಳ ದೊಡ್ಡದಿದೆ. ಆದರೆ ದುರ್ದೈವ ಏನೆಂದರೆ ಯೂನಿವರ್ಸಿಟಿಯವರು campus ಬಿಟ್ಟು ಹೊರಗಡೆ ಬರುವುದಿಲ್ಲ. Soil Health Card ಅನ್ನು ರೈತರಿಗೆ ಕೊಡುತ್ತೇವೆಂದು

ಸುಮಾರು ವರ್ಷದಿಂದ ನಮ್ಮ ಘೋಷಣೆಗಳಿವೆ. Soil Health Card ಅನ್ನು ರೈತರಿಗೆ ಕೊಡಬೇಕಾದರೆ, ಪ್ರತಿ ವರ್ಷದಲ್ಲಿ ಕನಿಷ್ಟ ಎರಡು ಸಾರಿಯಾದರೂ ಮಣ್ಣಿನ ಪರೀಕ್ಷೆಯಾಗುವ ವ್ಯವಸ್ಥೆಯಾಗಬೇಕು. ಹೀಗಿದ್ದಾಗ ಅವರಿಗೆ Health Card ಕೊಟ್ಟು ಏನು ಮಾಡುತ್ತೀರಿ? ಯಾರೇ ಆಗಲಿ ಸರಿಯಾದ ವ್ಯವಸ್ಥೆಯಿರಬೇಕು. Mobile Soil Health Inspection Centers ಇವೆ. Agriculture Graduates ಬೇಕಾದಷ್ಟು ಜನರಿದ್ದಾರೆ. ಅವರಿಗೆ ಕೆಲಸ ಕೊಡಿ, ಅವರು ಮಾಡುತ್ತಾರೆ. ನಿಮ್ಮ ಇಲಾಖೆಯಿಂದ ಈ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ನಿಮ್ಮ ಇಲಾಖೆಯ ಕೆಲಸ ಮಾಡುವುದಕ್ಕೆ ನಿಮ್ಮಲ್ಲಿಯೇ ಸಿಬ್ಬಂದಿಗಳ ಕೊರತೆಯಿದೆ. ಯೂನಿವರ್ಸಿಟಿಯವರೂ ಸಹ ಮಾಡುತ್ತಿಲ್ಲ. ಆದ್ದರಿಂದ ಯೂನಿವರ್ಸಿಟಿಯಲ್ಲಿ Soil mechanism ವಿಷಯದಲ್ಲಿ P.G. ಮಾಡಿದಂತಹ ವಿದ್ಯಾರ್ಥಿಗಳಿದ್ದು, ಅವರಿಗೆ ಕೊಡಿ. ಅವರು small mobile unit ಹಾಕಿಕೊಂಡು ಕೆಲಸ ಮಾಡುತ್ತಾರೆ. ಈ ರೀತಿಯ programme ಗಳನ್ನು ಏಕೆ ಹಾಕುತ್ತೀರಿ? ಇವು ಯಾವುದಕ್ಕೂ ಉಪಯೋಗವಿಲ್ಲ. ಇಡೀ ರಾಜ್ಯಕ್ಕೆ ಸೇರಿದಂತೆ ಮೂರು ಕೋಟಿ ರೂ.ಗಳನ್ನು ಮೀಸಲಿಟ್ಟರೆ, ಅದು ಎಲ್ಲಿಯೂ ಖರ್ಚಾಗುವುದಿಲ್ಲ ಮತ್ತು ಉಪಯೋಗವಾಗುವುದಿಲ್ಲ. ಈ ರೀತಿಯ ಕಾರ್ಯಕ್ರಮಗಳು ಹಲವಾರು ಇವೆ. ಸಮಯದ ಅಭಾವದಿಂದ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಮಾನ್ಯ ಸಚಿವರಿಗೆ ಬೇಡಿಕೆಯಿಡುವುದೇನೆಂದರೆ, ಸಣ್ಣ ಸಣ್ಣ head ಗಳನ್ನು ತೆಗೆದು, ಸಮಗ್ರವಾಗಿರುವಂತಹ ನಿಮ್ಮ ಇಲಾಖೆಯ ಹಣವನ್ನು ಸಮರ್ಪಕವಾಗಿ ಖರ್ಚು ಮಾಡುವುದಕ್ಕೆ priority programme ಅನ್ನು ಮಾಡಿ, ಕೇಂದ್ರಿಕರಿಸಿ, ಸರಿಯಾದಂತಹ ಸಿಬ್ಬಂದಿಗಳನ್ನು ನೇಮಕ ಮಾಡಿ ಕೆಲಸವನ್ನು ತಾವು ಮಾಡಬೇಕೆಂಬ ಬೇಡಿಕೆಯನ್ನು ಇಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಇದರ ಜೊತೆಗೆ ನಮ್ಮ ಎಸ್.ಸಿ/ಎಸ್.ಟಿ. ರೈತರ ಸಲುವಾಗಿ ತಾವು ಕಾರ್ಯಕ್ರಮಗಳನ್ನು ಏನು ಹಾಕಿದ್ದೀರಿ, ಅದಕ್ಕೂ ಸಹ ಬಹಳ ಕಡಿಮೆ ಹಣವನ್ನು ಮೀಸಲಿಟ್ಟಿದ್ದೀರಿ ಮತ್ತು ಅದರಲ್ಲಿ ಖರ್ಚಾಗಿರುವುದು ಬಹಳ ಕಡಿಮೆ ಇದೆ. ಆದ್ದರಿಂದ ತಾವು ಎಸ್.ಸಿ/ಎಸ್.ಟಿ. ಬಗ್ಗೆ ಬಹಳ ಕಾಳಜಿಯಿರುವಂತಹವರು ಎಂದು ಸರ್ಕಾರ ಘೋಷಣೆ ಮಾಡಿಕೊಂಡಿದೆ.

ಆದರೆ ಇಲ್ಲಿ ಕೆಲಸ ಮಾಡುವುದನ್ನು ನೋಡಿದರೆ ನಮಗೆ ಬಹಳ ವಿಪರ್ಯಾಸ ಹಾಗೂ ವೈಪರೀತ್ಯ ಕಾಣುತ್ತಿದೆ. ತಾವು ಇದಕ್ಕೆ ಸುಮಾರು 10 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದೀರಿ. ಅದರಲ್ಲಿ ನಿಮ್ಮ target ಎಷ್ಟೆಂದರೆ, 1,45,000 ಹೆಕ್ಟೇರ್ ಭೂ ಪ್ರದೇಶದಲ್ಲಿ ಎಸ್.ಸಿ. ರೈತರಿಗೆ ತಾವು ಈ ಕಾರ್ಯಕ್ರಮವನ್ನು ಮಾಡಬೇಕಾಗಿತ್ತು. ಆದರೆ ಅಷ್ಟೂ ಹೆಕ್ಟೇರ್ ಭೂ ಪ್ರದೇಶದಲ್ಲಿ 850 ಜನರಿಗೆ ಈ ಕಾರ್ಯಕ್ರಮವನ್ನು ಮಾಡಬೇಕಿತ್ತು. ಆದರೆ ಕೇವಲ 22 ಜನ ರೈತರಿಗೆ ಮಾತ್ರ 2014–15 ರಲ್ಲಿ 66,000 ಹೆಕ್ಟೇರ್ ಭೂ ಪ್ರದೇಶದಲ್ಲಿ ಆಗಿದೆ. ಇಡೀ ರಾಜ್ಯದಲ್ಲಿ 850 ಎಸ್.ಸಿ. ರೈತರಿಗೆ ಸೇರಿದಂತೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಉಳಿದ ಎಸ್.ಸಿ. ರೈತರಿಗೆ ಯಾವುದೇ ಕಾರ್ಯಕ್ರಮವಿಲ್ಲ. 850 ರಲ್ಲಿ ಕೇವಲ 22 ಜನ ರೈತರು ಮಾತ್ರ ಉಪಯೋಗ ಪಡೆದುಕೊಂಡಿದ್ದಾರೆ. ಇದು ಕೃಷಿ ಇಲಾಖೆ ಕೆಲಸ ಮಾಡುವಂತಹ ಕಾರ್ಯವೈಖರಿ. Budget Book ನಲ್ಲಿ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ಬರೆಸಿಕೊಂಡು, ಇಷ್ಟು ಸಣ್ಣ ಮೊತ್ತದ ಹಣವನ್ನು ಮೀಸಲಿಟ್ಟು, ಸಣ್ಣ ಸಂಖ್ಯೆಯಲ್ಲಿ ಲಾಭ ಮುಟ್ಟುವುದಾದರೆ, ಈ ಕಾರ್ಯಕ್ರಮ ಏಕೆ ಬೇಕು? ಆ ರೈತರನ್ನು ಏಕೆ ಭ್ರಮೆಯಲ್ಲಿಡುತ್ತೀರಿ? ಮಾನ್ಯ ಅಧ್ಯಕ್ಷರೆ, ಅದೇ ರೀತಿ Tribal ಗಳಿಗೂ ಕೂಡ ಇವತ್ತು 83,000 ಹೆಕ್ಟೇರ್ ಭೂಪ್ರದೇಶವಿದ್ದರೆ ಅದರಲ್ಲಿ 36,000 ಹೆಕ್ಟೇರ್ ಭೂ ಪ್ರದೇಶ ಮಾತ್ರ ಉಪಯೋಗವಾಗಿದೆ. ಈ head ನಲ್ಲಿರುವಂತಹ account ನಲ್ಲಿ ಕೇವಲ 27 tribal ಜನರಿಗೆ ಮಾತ್ರ ಲಾಭವಾಗಿದೆ. ಈ ಕಾರ್ಯಕ್ರಮದ ಅವಶ್ಯಕತೆ ಇದೆಯೇ? ಇದರ ಬಗ್ಗೆ ಪುನರ್ ಪರಿಶೀಲನೆ ಏಕೆ ಮಾಡಬಾರದು? ಎಷ್ಟು ಜನ Scheduled Caste ಮತ್ತು Tribal ರೈತರಿದ್ದಾರೆನ್ನುವುದನ್ನು ತಾವು ಗುರುತಿಸಿದ್ದೀರಾ? ಅವರ ಹತ್ತಿರ ಭೂಮಿ ಎಷ್ಟಿದೆ? ಮತ್ತು ಅವರಿಗೆ ಬೇಕಾಗಿರುವಂತಹದ್ದು ಅವರ ಹತ್ತಿರ ಏನಿದೆ? ಎಂಬುದನ್ನು ನೋಡಿದ್ದೀರಾ? ಸಮಾಜ ಕಲ್ಯಾಣ ಇಲಾಖೆಯಿಂದ ಗಂಗಾ ಕಲ್ಯಾಣ ಯೋಜನೆ, ಸಣ್ಣ ನೀರಾವರಿ ಇಲಾಖೆಯಿಂದ ಎಸ್.ಸಿ/ಎಸ್.ಟಿ. ರೈತರಿಗೆ ಪಂಪಸೆಟ್ ಮತ್ತಿತರ ಉಪಕರಣಗಳನ್ನು ಕೊಡುವ ಯೋಜನೆಗಳಿದ್ದು, ಈ ಯೋಜನೆಗಳನ್ನು ಕೃಷಿ ಇಲಾಖೆಯವರು ಯಾವ ರೀತಿ monitor ಮಾಡುತ್ತಾರೆ. ಈ

ಯೋಜನೆಗಳಿಂದ ಲಾಭ ಏನಾಗಿದೆ? ಈ ಯೋಜನೆಗಳಲ್ಲಿ ಕೃಷಿ ಇಲಾಖೆಯ ಪಾತ್ರವೇನಿದೆ? ನಾನು ಕಳೆದ ಬಾರಿ ಮಾನ್ಯ ಸಚಿವರಿಗೆ Micro Irrigation ಬಗ್ಗೆ ಹೇಳಿದ್ದೇನೆ. ಈಗ Major Irrigation ನವರೂ ಸಹ Micro Irrigation ಮಾಡುತ್ತಿದ್ದಾರೆ.

(ಈ ಹಂತದಲ್ಲಿ ಮಾನ್ಯ ಉಪ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

Minor Irrigation ನವರೂ ಸಹ Micro Irrigation ಮಾಡುತ್ತಿದ್ದಾರೆ. ತಮ್ಮ ಇಲಾಖೆಯೂ ಸಹ Micro Irrigation Sponsor ಮಾಡುತ್ತಿದೆ. ಆದರೆ ಈ ಇಲಾಖೆಗಳ ನಡುವೆ synergy ಆಗಬೇಕಲ್ಲವೇ? Horticulture, Agriculture, Sericulture, Minor and Major irrigation, Animal Husbandry and Fisheries, Co-operative ಎಲ್ಲಾ ಇಲಾಖೆಗಳ ನಡುವೆ ಒಂದಕ್ಕೊಂದು ತಾಳ-ಮೇಳ ಇಲ್ಲ.

ರೈತ ಈ ಎಲ್ಲಾ ಆಫೀಸ್‌ಗಳಿಗೆ ಓಡಾಡಿ, ಓಡಾಡಿ, ಸರ್ಕಾರ ನಮ್ಮ ಪಾಲಿಗೆ ಇಲಾಖೆಗಳು ನಮ್ಮ ಪಾಲಿಗೆ ಇಲ್ಲ ಎಂದು ತೀರ್ಮಾನ ಮಾಡಿ, ಅವನ ಶಕ್ತಿಯನುಸಾರವಾಗಿ ಅವನು ಕೆಲಸ ಮಾಡುತ್ತಿದ್ದಾನೆ. ತಾವು young minister ಇದ್ದೀರಿ, ಇವತ್ತೇನು ಆಹಾರ ಉತ್ಪಾದನೆಯಾಗುತ್ತಿದೆ? ಇದರ ಬಗ್ಗೆ Independent Agency ಯಿಂದ ಸರ್ವೆ ಮಾಡಿಸಿ. ನಮ್ಮ ಆಹಾರ ಉತ್ಪಾದನೆ ಗುರಿ 130 ಲಕ್ಷ ಟನ್ ಇತ್ತು. ಈ ವರ್ಷ 119 ಲಕ್ಷ ಟನ್ ಉತ್ಪಾದನೆಯಾಗಿದೆ. ಇದರಲ್ಲಿ ಇಲಾಖೆಯ ಪಾತ್ರ ಏನಿದೆ? What is the role of department? Department ಇಲ್ಲದೇ ಇದ್ದರೂ ಸಹ ರೈತ ಬೆಳೆಯುತ್ತಾನೆ. ಏಕೆಂದರೆ, ಅವರ ಹೊಟ್ಟೆಪಾಡಿಗಾಗಿ, ಬದುಕಿಗಾಗಿ ಅವನು ಬೆಳೆಯಲೇಬೇಕು. ಇದರಲ್ಲಿ department role ಏನಿದೆ? ಇದನ್ನು enhancement ಮಾಡುವುದಕ್ಕೆ department role ಏನಿದೆ? ಎಂಬ ಬಗ್ಗೆ ಒಂದು, independent agency ಯಿಂದ ಸರ್ವೆ ಮಾಡಿಸಿ. ಆಗ ನಮ್ಮ ಇಲಾಖೆ ಎಷ್ಟು ಸಮರ್ಪಕವಾಗಿ ಕೆಲಸ ಮಾಡಿದೆ ಅಥವಾ ಇಲ್ಲ ಎನ್ನುವುದು ಗೊತ್ತಾಗುತ್ತದೆ. ಅವನು ಹೆಚ್ಚಿಗೆ ಬೆಳೆದಾಗ 4% ರಿಂದ 6% growth ಆಗಿದೆ,

ಆಹಾರ ಉತ್ಪಾದನೆ ಹೆಚ್ಚಾಯಿತು ಎಂದು ನಾವೆಲ್ಲ credit ತೆಗೆದುಕೊಳ್ಳುತ್ತೇವೆ. ಆದರೆ, ಕಡಿಮೆಯಾದಾಗ ಮಳೆಯ ವೈಪರೀತ್ಯ, ಇತರೆ ವೈಪರೀತ್ಯ ಎಂದು ನಾವು ಕಾರಣ ಹೇಳುತ್ತೇವೆ. ಆದರೆ, ಇವೆರಡೂ ಇದ್ದಂಥ ಸಂದರ್ಭದಲ್ಲಿ ಇಲಾಖೆ ಇಲ್ಲದೇ ಇದ್ದರೂ ಸಹ ಈ ಉತ್ಪಾದನೆಯನ್ನು ರೈತ ಮಾಡಿಯೇ ಮಾಡುತ್ತಾನೆ. ಅವನಿಗೆ ಇಲಾಖೆ ಬೇಕಾಗಿಲ್ಲ. ಆದ್ದರಿಂದ ಇಷ್ಟು ದೊಡ್ಡ infrastructure create ಮಾಡಿ ಕೃಷಿ ಅಭಿವೃದ್ಧಿ ಮಾಡುತ್ತೇವೆಂದು ನಾವೇನು ಹೊರಟಿದ್ದೇವೆ, ಇಲ್ಲಿ ನಿಮ್ಮ role ಏನಿದೆ? independent agency ಯಿಂದ ದಯವಿಟ್ಟು ನೀವು ಅದನ್ನು study ಮಾಡಿಸಿ. ಕೃಷಿಯ ಇಷ್ಟು ಉತ್ಪಾದನೆಗಳಲ್ಲಿ ನಮ್ಮ ಇಲಾಖೆ as a catalyst, ಅದನ್ನು ಹೆಚ್ಚಿಗೆ ಮಾಡುವ ಸಲುವಾಗಿ ನಮ್ಮ role ಏನಿದೆ ಎನ್ನುವುದರ ಬಗ್ಗೆ ತಾವು ಒಂದು ಏಜೆನ್ಸಿಯಿಂದ survey ಮಾಡಿಸಬೇಕೆಂದು ನಾನು demand ಮಾಡುತ್ತೇನೆ. ಆಗ ನಮಗೆ ಮುಂದೆ ಕೃಷಿ ಇಲಾಖೆ ಯಾವ ರೀತಿ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕೆನ್ನುವುದು ಗೊತ್ತಾಗುತ್ತದೆ. ಇಲ್ಲದೇ ಇದ್ದರೆ ರೈತನ ಶ್ರಮದ ಮೇಲೆ ನಮ್ಮ ಬೆನ್ನು ತಟ್ಟಿಕೊಳ್ಳುವಂಥದ್ದು ಸರಿಯಲ್ಲ. ಆದ್ದರಿಂದ, ತಮಗೆ ಸದುದ್ದೇಶವಿದೆ. ಆದರೆ ಈ ಸದುದ್ದೇಶ ಎಷ್ಟರಮಟ್ಟಿಗೆ ತಳಮಟ್ಟಕ್ಕೆ ಹೋಗುತ್ತಿದೆಯೆನ್ನುವುದು ತಮ್ಮ ಕ್ಷಮತೆಯ ಮೇಲೆ ಆಧಾರವಾಗಿದೆ. ಕೃಷ್ಣಾರವರೆ, You should lead the change. You should be part of the change. ಆ ಕೆಲಸವನ್ನು ನೀವು ಮಾಡುತ್ತಿಲ್ಲವೆನ್ನುವುದು ನಮ್ಮ ಆಪಾದನೆ. ಆ ಕೆಲಸವನ್ನು ನೀವು ಮಾಡಬೇಕು. ನೀವು ಇಲಾಖೆ. ಇಲಾಖೆಯ ಮುಖ್ಯಸ್ಥರು ಎಲ್ಲರೂ ಈ programme, Central sponsored scheme, matching grant, ಇದೇ ಸುಳಿಯಲ್ಲಿ ಸಿಕ್ಕಿಕೊಂಡರೆ ಪರಿಣಾಮಕಾರಿಯಾದ ಬದಲಾವಣೆಯನ್ನು ಕೃಷಿ ವಲಯದಲ್ಲಿ ನೀವು ತರುವುದಕ್ಕೆ ಸಾಧ್ಯವಿಲ್ಲ ಅದನ್ನು ತರುವಂಥ ಪ್ರಯತ್ನವನ್ನು ನೀವು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಯೂನಿವರ್ಸಿಟಿಗಳ ಬಗ್ಗೆ ನಾನು ಮಾತನಾಡಿದೆ. ಈ demand ನಲ್ಲಿ ಎಲ್ಲಾ ಯೂನಿವರ್ಸಿಟಿಗಳಿಗೂ ಹಣವನ್ನು ಒದಗಿಸುವುದಕ್ಕೆ ತಾವು ಕೇಳಿದ್ದೀರಿ. ರಾಯಚೂರು ಮತ್ತು ಶಿವಮೊಗ್ಗ ಯೂನಿವರ್ಸಿಟಿಗಳನ್ನು ತಾವು ಹೊಸದಾಗಿ ಸ್ಥಾಪನೆ ಮಾಡಿದ್ದೀರಿ. ಯೂನಿವರ್ಸಿಟಿ performance ಬಗ್ಗೆ ಮೌಲ್ಯಮಾಪನ ಆಗಿದೆಯೇ? ಯಾವ ಯಾವ ಹೊಸ ತಳಿಗಳನ್ನು climate change ಗೆ ಅನುಗುಣವಾಗಿ ಹವಾಮಾನದ ಬದಲಾವಣೆಗೆ ಅನುಗುಣವಾಗಿ ಅವರು ತಂದಿದ್ದಾರೆ? ಹಳೆ ಜೋಳದ ಹೈಬ್ರಿಡ್‌ನಲ್ಲಿ ಸ್ವಲ್ಪ ಬದಲಾವಣೆ ಮತ್ತು ಕಾಟನ್‌ನಲ್ಲಿ ಕೆಲವು ಬದಲಾವಣೆಗಳನ್ನು ಖಂಡಿತವಾಗಿ ತಂದಿದ್ದಾರೆ. ಇದಷ್ಟನ್ನು ಬಿಟ್ಟರೆ, ಭತ್ತದ ತಳಿಯಲ್ಲಾಗಲಿ, oil seeds ನಲ್ಲಾಗಲಿ, cereals ನಲ್ಲಾಗಲಿ ಯಾವ ಮೂಲಭೂತ ಬದಲಾವಣೆಯನ್ನು ಅವರು ತಂದಿದ್ದಾರೆ? ಹೇಳಿ. ಯಾವ ರೈತರಲ್ಲಿ ಇವತ್ತು ವ್ಯಾಪಕವಾಗಿ ಬಳಕೆಯಾಗುತ್ತಿದೆ? ನಮ್ಮ ಯೂನಿವರ್ಸಿಟಿಯಲ್ಲಿ ಸಂಶೋಧನೆ ಮುಖಾಂತರ ಬಂದಂಥ ಹೊಸ ತಳಿಗಳು ವ್ಯಾಪಕವಾಗಿ ಯಾವ ರೈತರು ಬೆಳೆಯುತ್ತಿದ್ದಾರೆ? Dry land farmers ಬೆಳೆಯುತ್ತಿದ್ದಾರೆಯೇ? ನಮ್ಮ ರಾಜ್ಯದಲ್ಲಿ 10 ಕೃಷಿ ವಲಯಗಳಿವೆ, agro climatic zones ಇವೆ. ಈ 10 climatic zones ಗನುಗುಣವಾಗಿ ಅವರು ಸಂಶೋಧನೆಗಳನ್ನು ಮಾಡಬೇಕಾಗುತ್ತದೆ. ಈ 10 agro climatic zones ಗಳಲ್ಲಿ ಯಾವ ಅಭಿವೃದ್ಧಿ ತಳಿಗಳನ್ನು ಅವರು ಯಶಸ್ವಿಯಾಗಿ ತಂದಿದ್ದಾರೆ? ಇದನ್ನು ಕೇಳುವವರು ಯಾರು? ಆ ಯೂನಿವರ್ಸಿಟಿ, ಆ ಯೂನಿವರ್ಸಿಟಿಯ ವೈಸ್ ಚಾನ್ಸೆಲರ್, regent board members ಅವರದ್ದೇ ಒಂದು ರಾಜಕೀಯ ಬೇರೆ. ಅವರು ಪ್ರತಿ ವರ್ಷ ನಾವು ಇಷ್ಟು ಜನಕ್ಕೆ ಡಿಗ್ರಿ ಕೊಟ್ಟಿದ್ದೇವೆ, ಇಷ್ಟು ಜನಕ್ಕೆ post Graduation ಕೊಟ್ಟಿದ್ದೇವೆ ಎಂದು ಹೇಳುತ್ತಾರೆ ಹೊರತು ಯಾವ ಸಂಶೋಧನೆಗಳಾಗುತ್ತಿದೆ? ಎಂದು ಹೇಳುವುದಿಲ್ಲ. ಕೇವಲ ಯೂನಿವರ್ಸಿಟಿ ಕ್ಯಾಂಪಸ್ ಒಳಗಡೆ ನೀರು, ಒಳ್ಳೆಯ soil, ಒಳ್ಳೆಯ ಗೊಬ್ಬರ ಎಲ್ಲವೂ ಅತಿ ಹೆಚ್ಚು ಇರುವಂಥ 200–300 ಎಕರೆಯಲ್ಲಿ ಅವರು trial ಮಾಡಿ result ಕೊಡುತ್ತಾರೆ. ನಾವೇನು demand ಮಾಡುತ್ತಿದ್ದೇವೆಂದರೆ, ನಿಮ್ಮ trialನ್ನು ನಿಮ್ಮ ಕ್ಯಾಂಪಸ್‌ನಲ್ಲಿ ಮಾಡಬೇಡಿ.

ರೈತರ ಹೊಲದಲ್ಲಿ ಮಾಡಿ. ಅಂದರೆ, ನಿಸರ್ಗದತ್ತವಾಗಿರುವಂಥ, natural ಆಗಿರುವಂಥ ವಾತಾವರಣದಲ್ಲಿ ನಿಮ್ಮ ತಳಿಗಳು ಪರೀಕ್ಷೆಗೆ ಒಳಪಡಬೇಕು, ಆ ಪರೀಕ್ಷೆಯಲ್ಲಿ ಪಾಸಾಗಬೇಕು. ಆ ಹವಾಮಾನ climatic change ಗೆ ಗಟ್ಟಿಯಾಗಿ ನಿಲ್ಲಬೇಕು. ಆಗ ಮಾತ್ರ ರೈತರು ವ್ಯಾಪಕವಾಗಿ ಆ ಕೆಲಸವನ್ನು ಮಾಡುತ್ತಾರೆ.

ಉಪಾಧ್ಯಕ್ಷರು:- ನಿಮ್ಮ ಮಾತನ್ನು ಮುಕ್ತಯಗೊಳಿಸಿ, ಈಗಾಗಲೇ one hour ಆಗಿದೆ. ಬಹಳ ಜನ ಮಾತನಾಡುವವರು ಇದ್ದಾರೆ. 5 ನಿಮಿಷದಲ್ಲಿ conclude ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ:- ಆಯಿತು ಮಾನ್ಯ ಉಪಾಧ್ಯಕ್ಷರೆ, ಆದರೆ ಈ ಯೂನಿವರ್ಸಿಟಿಗಳನ್ನು ಯಾವುದೇ ರೀತಿಯಿಂದಲೂ ನೀವು ಕಂಟ್ರೋಲ್ ಮಾಡುವುದಕ್ಕೆ ಆಗುತ್ತಿಲ್ಲ. ಅವರ ಮೇಲೆ ಯಾವುದೇ ತರಹದ ನಿಯಂತ್ರಣ ಮಾಡುವುದಕ್ಕೆ ಆಗುತ್ತಿಲ್ಲ. ಅದರ ಜೊತೆಗೆ ಅವರ ಸಂಶೋಧನೆಯ ಮೌಲ್ಯಮಾಪನವನ್ನು ತಾವು ಮಾಡಿಲ್ಲ. ಅವರ ಸಂಶೋಧನೆಗಳನ್ನು ಮೌಲ್ಯಮಾಪನ ಮಾಡುವುದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ನಮ್ಮ ರೈತರಿಗೆ ಯೂನಿವರ್ಸಿಟಿಯಿಂದ ಏನು ಲಾಭವಾಗಿದೆ? ಎನ್ನುವ ಕುರಿತು ನೀವು ಮೌಲ್ಯಮಾಪನ ಮಾಡುವುದಕ್ಕೆ ಸಾಧ್ಯವಿದೆಯೇ? ಮಾಡಿಸುತ್ತೀರಾ? ಎನ್ನುವಂಥ ಪ್ರಶ್ನೆಯನ್ನು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಮಂತ್ರಿಗಳಾದ ನೀವು ಸಹ ಅಲ್ಲಿ. Pro-Chancellor. ಆದ್ದರಿಂದ, ನೀವು ನೇರವಾಗಿ ಅವರ ಕೆಲಸಗಳ ಬಗ್ಗೆ ಯಾವುದು ಮಾಡಿದ್ದೀರಿ? ಯಾವುದು ಇಲ್ಲ? ಎಂದು ಕೇಳಬಹುದು. ಪ್ರತಿಯೊಂದು ಯೂನಿವರ್ಸಿಟಿಯ ಕೆಲಸಗಳ ಮೌಲ್ಯಮಾಪನವನ್ನು ಮಾಡಿ, ಈ ಸದನದ ಮುಂದೆ ತಾವು ದಯವಿಟ್ಟು ಕೊಡಬೇಕು. ಈ ಸದನಕ್ಕೆ ತಾವು ವರದಿ ಮಂಡಿಸಬೇಕು.

ಶ್ರೀ ಕೆ. ಶಿವಮೂರ್ತಿ:- ಮೌಲ್ಯಮಾಪನ ಎಂದರೆ ಏನು?

ಶ್ರೀ ಬಸವರಾಜ ಬೊಮ್ಮಾಯಿ:- ಮೌಲ್ಯಮಾಪನ ಮಾಡಿ ಸದನದ ಮುಂದೆ ಮಂಡಿಸಬೇಕು. ಆಗ ಯೂನಿವರ್ಸಿಟಿ ಮತ್ತು ರೈತರ ನಡುವೆ ನಾವು ಒಂದು bridge ಆಗಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಇಲ್ಲದೇ ಇದ್ದರೆ ನಮಗೆ ಯೂನಿವರ್ಸಿಟಿಯವರು ರೈತರ 'ಕೃಷಿ ಮೇಳ' ಮಾಡುತ್ತಾರಲ್ಲ, ಅದಕ್ಕೆ ಮಾತ್ರ ಕರೆಯುತ್ತಾರೆ. ಕೃಷಿ ಮೇಳದಲ್ಲಿ ಪ್ರೈವೇಟ್‌ನವರದ್ದೇ ಜಾಸ್ತಿ ಇರುತ್ತದೆ. ಕೆಲವು 'ಕೃಷಿ ಪಂಡಿತ' ಎಂದು ಪ್ರಶಸ್ತಿ ಕೊಡುತ್ತೇವೆ, ನಂತರ ಬಂದು ಬಿಡುತ್ತೇವೆ. ಅಷ್ಟೇ connection ಇರುವಂಥದ್ದು, ಅದನ್ನು ಹೊರತುಪಡಿಸಿದರೆ ಯೂನಿವರ್ಸಿಟಿ ಕ್ಯಾಂಪಸ್ ಜೊತೆಗೆ ನಮಗೆ ಬೇರೆ ಯಾವುದೇ ತರಹದ connection ಇಲ್ಲ. ಆದ್ದರಿಂದ ಈ ಯೂನಿವರ್ಸಿಟಿಯನ್ನು land to lab connect ಮಾಡಬೇಕೆನ್ನುವ ಹಳೆ slogan ಏನಿದೆ, make the farmer's field as a campus. ಈ ಪರಿವರ್ತನೆಯನ್ನು ತಾವು ತಂದಾಗ ಮಾತ್ರ ಇಷ್ಟು ದೊಡ್ಡ ಪ್ರಮಾಣದಲ್ಲಿ, ಇಷ್ಟು ದೊಡ್ಡ ಸಂಖ್ಯೆಯಲ್ಲಿ ಯೂನಿವರ್ಸಿಟಿಗಳನ್ನು ಮಾಡಿ, ಅದರ ಸಂಶೋಧನೆಗೆ ದುಡ್ಡನ್ನು ಕೊಟ್ಟಿದ್ದಕ್ಕೆ ಸಾರ್ಥಕವಾಗುತ್ತದೆ. ಇವುಗಳಿಗೆ ಅಂತರಾಷ್ಟ್ರೀಯ ಮಟ್ಟದ ದುಡ್ಡು ಸಹ ಬರುತ್ತದೆ, External aided projects ಸಹ ಅದರಲ್ಲಿದೆ, Central sponsored programmes ಸಹ ಇವೆ, State sponsored programmes ಕೂಡ ಇವೆ. Agriculture Universityಗಳು ಬಿಳಿ ಆನೆಗಳಾಗಿವೆ. They have become white elephants. ಅದನ್ನು ತಡೆಗಟ್ಟುವುದಕ್ಕೆ, ನಿರಂತರವಾಗಿ ಬದಲಾವಣೆಯಾಗುತ್ತಿರುವ ಹವಾಮಾನ, Climatic change ಗೆ ಅನುಗುಣವಾಗಿ ಹೊಸ ತಳಿ ಅಭಿವೃದ್ಧಿಪಡಿಸುವ ಸವಾಲನ್ನು ಯೂನಿವರ್ಸಿಟಿಗಳು ತೆಗೆದುಕೊಳ್ಳಬೇಕು. ಆ ಕೆಲಸ ಇವತ್ತು ಆಗುತ್ತಿಲ್ಲ. ಹವಾಮಾನದ ವೈಪರೀತ್ಯದಿಂದ ಇವತ್ತು ಮುಂಗಾರು ಹೋಗಿ ಹಿಂಗಾರಾಗಿದೆ, ಹಿಂಗಾರು ಹೋಗಿ ಮುಂಗಾರಾಗಿದೆ. ಇದನ್ನು ನಾವು ನೋಡುತ್ತಿದ್ದೇವೆ. ಮೊನ್ನೆ ಎಷ್ಟರಮಟ್ಟಿಗೆ ಎಂದರೆ ಮುಂಗಾರು ಮಳೆ ಬಂದಿದೆಯೋ, depression ಮಳೆ ಬಂದಿದೆಯೋ ಎನ್ನುವ ಚರ್ಚೆ ರೈತರಲ್ಲಿ ನಡೆಯುತ್ತಿದೆ. ಆದ್ದರಿಂದ ಈ ಬದಲಾವಣೆ ಮುಂಚೂಣಿಯಲ್ಲಿ, ಮುನ್ಸೂಚನೆಯಾಗಿ ಯೂನಿವರ್ಸಿಟಿಗಳು ಕೆಲಸ ಮಾಡಬೇಕೆನ್ನುವುದು ನಾನು

ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ನಮ್ಮ ರೈತರಲ್ಲಿ ಅಥವಾ ನಮ್ಮಲ್ಲಿ, ಒಂದು ಕಲ್ಪನೆ ಏನಿದೆಯೆಂದರೆ ಬೀಜ ಬಿತ್ತಿ ಕಷ್ಟಪಟ್ಟು ಬೆಳೆದು ಸುಗ್ಗಿ ಮಾಡಿಬಿಟ್ಟರೆ, ಆ ವರ್ಷದ ನಮ್ಮ ಕೃಷಿ ಚಟುವಟಿಕೆ ಮುಗಿಯಿತು ಎನ್ನುವ ಭಾವನೆ ನಮ್ಮ ರೈತರಲ್ಲೂ ಇದೆ, ನಮ್ಮ ಇಲಾಖೆಯಲ್ಲಿಯೂ ಸಹ ಇದೆ. ಆದರೆ, ಇಲಾಖೆಯ ಮತ್ತು ಸರ್ಕಾರದ ನಿಜವಾದ ಕೆಲಸವೆಂದರೆ, ಆ ಸುಗ್ಗಿಯ ನಂತರದ ದಿನಗಳಲ್ಲಿ ಅವನು ಉತ್ಪಾದನೆ ಮಾಡಿರುವಂಥ ಕಾಳು ಕಡಿ, ಪದಾರ್ಥಗಳ ಸಂರಕ್ಷಣೆ, ಮಾರುಕಟ್ಟೆ, ಯೋಗ್ಯ ಬೆಲೆ ಇವುಗಳಲ್ಲಿ ಸರ್ಕಾರದ ಪಾತ್ರ ಬಹಳ ಮುಖ್ಯವಾಗಿದೆ. Post-harvest activities ಎಂದು ನಾವೇನು ಕರೆಯುತ್ತೇವೆ, ಆ post-harvest activity ಯನ್ನು ಯಾವ ರೀತಿ ಮಾಡಬೇಕು? ಇವತ್ತು ನಾನು ಬಹಳ ದುರ್ದೈವದಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕ ಅತ್ಯಂತ ಪ್ರಗತಿಪರವಾಗಿರುವಂಥ ರಾಜ್ಯ ಎಂದು ನಾವೆಲ್ಲಾ ಹೇಳಿಕೊಳ್ಳುತ್ತೇವೆ. ಇವತ್ತಿಗೂ ಸಹ ರೈತರು ಬೆಳೆದಂಥ ಬೆಳೆಗಳಿಗೆ ಸಮರ್ಪಕವಾದ storage ಆಗಲಿ, transporatation ಆಗಲಿ, ಅದರ processing ಆಗಲಿ, ಅದರ ಮಾರುಕಟ್ಟೆಗೆ value addition ಮಾಡಿ ಹೆಚ್ಚಿನ ಬೆಲೆ ತರುವಂಥ ಕೆಲಸ ಸಹ ಇವತ್ತು ಆಗುತ್ತಿಲ್ಲ, ಇದು ಆಗಬೇಕಾಗಿದೆ. ಇದಕ್ಕೆ ಸಮಗ್ರವಾದಂಥ ಹಣಕಾಸಿನ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ಕೃಷಿ ಇಲಾಖೆಗೆ ಕೊಡಬೇಕು, ಆಗ ಮಾತ್ರ ಅದು ಸಾಧ್ಯವಿದೆ. ದೊಡ್ಡ ಪ್ರಮಾಣದ ಹಣಕಾಸಿನ ನೆರವನ್ನು ಕೃಷಿ ಇಲಾಖೆಗೆ ಕೊಡಬೇಕು. Post- harvest activities ಗೆ ದೊಡ್ಡ ಪ್ರಮಾಣದ ಹಣ Infrastructure ಗಾಗಿ ಕೊಡಬೇಕು. ನಾನು ಆಗಲೇ ಹೇಳಿದಂತೆ ಕೃಷಿಯಲ್ಲಿ Capital investment ಆಗಿಲ್ಲ. ಇಲ್ಲಿ Capital investment ಬೇಕಾಗಿದೆ. ಎಲ್ಲಿಯವರೆಗೆ ನಾವು Capital investment ಮಾಡುವುದಿಲ್ಲ, ರೈತನನ್ನು ಮಧ್ಯ ದಾರಿಯಲ್ಲಿ ನಾವು ಕೈ ಬಿಡುವ ಪರಿಸ್ಥಿತಿ ಬರುತ್ತದೆ. ನಾವು ರೈತನು ಬೆಳೆದ ಬೆಳೆಗೆ ಯಾವಾಗ ಸರಿಯಾದ storage, cleaning, value addition, process, ಮಾರುಕಟ್ಟೆ ಕೊಡುವಂತಹ ಕೆಲಸಕ್ಕೆ ದೊಡ್ಡ ಪ್ರಮಾಣದಲ್ಲಿ, ಸಣ್ಣ ಪ್ರಮಾಣದಲ್ಲಿ ಅಲ್ಲ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಮಾಡುವುದಿಲ್ಲವೋ, ಅಲ್ಲಿಯವರೆಗೆ ಕೃಷಿ ಅಭಿವೃದ್ಧಿ ಆಗುವುದಿಲ್ಲ.

ಕೃಷಿ ಕೇವಲ ಆಹಾರ ಭದ್ರತೆ ಮಾತ್ರವಲ್ಲ, ಅದರ ಜೊತೆಗೆ ವಾಣಿಜ್ಯವೂ ಕೂಡಾ ಆಗಿದೆ. Agriculture is also a commerce, agriculture is science, agriculture is arts, agriculture is culture, agriculture is economy.

ಉಪಾಧ್ಯಕ್ಷರು:- ಆಯಿತು, conclude ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ:- 1% agriculture growth ಆದರೆ it is equal to 4% growth in manufacturing sector, 10% growth in service sector. ಅಷ್ಟು cascading effect ಇದೆ, ramifications ಇದೆ. ಒಳ್ಳೆಯ ಆಹಾರಧಾನ್ಯ ಉತ್ಪಾದನೆ food processing industry ಗೆ ದೊಡ್ಡ ಇಂಬು ಕೊಡುತ್ತದೆ, processing and manufacturing sector ಗೆ ಇಂಬು ಕೊಡುತ್ತದೆ. ಆ manufacturing sector ಚೆನ್ನಾಗಿ ಆದರೆ, ಅದರ ಜೊತೆ ಜೊತೆಗೆ service ಗೂ ಕೂಡಾ ದೊಡ್ಡ ಇಂಬು ಕೊಡುತ್ತದೆ. ಆದುದರಿಂದ It is also economy. ಇದನ್ನು ನಾವು ಯಾರು ಅರ್ಥ ಮಾಡಿಕೊಳ್ಳದೆ ಇದ್ದರೆ ಹೇಗೆ? ರೈತರು crop insurance ಪರಿಸ್ಥಿತಿಯನ್ನು ನಾವು ಎಲ್ಲಿಗೆ ತಂದಿದ್ದೇವೆಂದರೆ 2011-12 ರಲ್ಲಿ ಒಟ್ಟು 164 ಕೋಟಿ ರೂ.ಗಳ premium ಕಟ್ಟಿದ್ದರು. ಸುಮಾರು 55 ಸಾವಿರ ರೈತರಿಗೆ ಅನುಕೂಲವಾಗಿತ್ತು. ಸುಮಾರು 271 ಕೋಟಿ ರೂ.ಗಳು insurance ಬಂದಿತ್ತು. ಮುಂದೆ 2012-13 ರಲ್ಲಿ ಸುಮಾರು 300 ಕೋಟಿ ರೂ.ಗಳು premium ಕಟ್ಟಿದ್ದರು. 51 ಸಾವಿರ ಜನ ರೈತರಿಗೆ 500 ಕೋಟಿ ರೂ.ಗಳಷ್ಟು claims settle ಆಗಿತ್ತು. ಆದರೆ 2013-14 ಕ್ಕೆ ಸುಮಾರು 310 ಕೋಟಿ ರೂ. ಪ್ರೀಮಿಯಮ್ ಕಟ್ಟಿದ್ದಾರೆ. ಸುಮಾರು 24 ಸಾವಿರ ರೂ.ಗಳು ರೈತರು ಮಾತ್ರ claim ತೆಗೆದುಕೊಂಡಿದ್ದಾರೆ. ಕೇವಲ ಸುಮಾರು 95 ಕೋಟಿ ಮಾತ್ರ claim settle ಆಗಿದೆ. ಇದು ಕಡಿಮೆ ಆಗುತ್ತಾ ಬರುತ್ತಿದೆ. ಪ್ರೀಮಿಯಮ್ ಹೆಚ್ಚಾಗುತ್ತಿದೆ, ಆದರೆ claim settlement ಕಡಿಮೆಯಾಗುತ್ತಿದೆ. ಹೋಗಲಿ ಕೃಷಿಯಲ್ಲೇನಾದರೂ ಬಹಳ ದೊಡ್ಡ ಅಭಿವೃದ್ಧಿ ಆಗಿದೆಯೆ? 4.5% growth ಕಡಿಮೆಯಾಗಿದೆ, ಅತಿವೃಷ್ಟಿ-ಅನಾವೃಷ್ಟಿಯಾಗಿದೆ. ಅತಿವೃಷ್ಟಿ-ಅನಾವೃಷ್ಟಿಯಾಗಿ ಬೆಳೆ ನಾಶವಾಗಿ ಬೆಳೆ ಹಾಳಾದ ಸಂದರ್ಭದಲ್ಲಿಯೂ ಕೂಡಾ insurance

claim ಆಗುತ್ತಿಲ್ಲವೆಂದರೆ ಇದರ ಅರ್ಥವೇನು? ರೈತರು premium ಹೆಚ್ಚು ಕಟ್ಟಿದ್ದಾರೆ. claim settle ಆಗುತ್ತಿಲ್ಲ. Agriculture insurance ಕೂಡಾ general insurance ಮಟ್ಟಕ್ಕೆ ಬಂದು ನಿಂತಿದೆ. ರೈತರ ಹಣ insurance company ಯಲ್ಲಿ deposit ಆಗುತ್ತಿದೆ. ಪ್ರತಿ ವರ್ಷ ಹೆಚ್ಚು deposit ಆಗುತ್ತಿದೆ. claim ಮಾತ್ರ ಬರುತ್ತಿದೆ. Insurance company ಗಳು ರೈತರ ಹೆಸರಿನಲ್ಲಿ ಲಾಭ ಮಾಡಿದೆ. ಯಾವ insurance company ರೈತರ ಸಂಕಷ್ಟಕ್ಕೆ ಬರಬೇಕಿತ್ತು, ಅದು ವಿಫಲವಾಗುತ್ತಿದೆ. ಇವತ್ತು ರಾಜ್ಯ ಮಟ್ಟದಲ್ಲಿ High level committee ಇದೆ. ಅಲ್ಲಿ Agriculture Secretary ಗಳಿರುತ್ತಾರೆ. ಬ್ಯಾಂಕಿನವರು ಇರುತ್ತಾರೆ, insurance company ಯವರು ಇರುತ್ತಾರೆ. ಅಲ್ಲಿ ಏನು ಮಾಡುತ್ತಾರೆ? State Level High Level committee ಯಲ್ಲಿ ಏನು ಮಾಡುತ್ತಾರೆ? ಎಲ್ಲಿ ನ್ಯೂನತೆ ಇದೆ? ಎಲ್ಲಿ ಸರಿಪಡಿಸಬೇಕು? crop ನಾಶ ಈಗ 50% ಆದರೆ ಏನಿತ್ತು, ಅದನ್ನು ಕೇಂದ್ರ ಸರ್ಕಾರ ಕಡಿಮೆ ಮಾಡಿದೆ.

ಉಪಾಧ್ಯಕ್ಷರು:- ಬಸವರಾಜು conclude ಮಾಡಿ, ಸಮಯವಾಯಿತು ಮುಗಿಸಿ.

ಶ್ರೀ ಬಸವರಾಜ ಬೊಮ್ಮಾಯಿ:- ಈ ವರ್ಷವಾದರೂ ಕೂಡಾ ಅದನ್ನು ಸರಿಪಡಿಸುವ ಕೆಲಸವನ್ನು ತಾವು ಮಾಡುತ್ತೀರಾ? ಈ corp insurance ಬಗ್ಗೆ ತಮ್ಮ ಲಕ್ಷ್ಯ ವಹಿಸುತ್ತೀರಾ? ರೈತರ ಸಂಕಷ್ಟಕ್ಕೆ ತಾವು ನೆರವಿಗೆ ಬರುತ್ತೀರಾ? ಎನ್ನುವ ಪ್ರಶ್ನೆಯನ್ನು ನಾನು ಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಕೇಳಲಿಚ್ಛಿಸುತ್ತೇನೆ. ಇಲ್ಲದಿದ್ದರೆ ರೈತರು insurance ಮೇಲೆ ತಮ್ಮ ವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ಇವತ್ತು co-operative sector ನಲ್ಲಿ ಯಾರ್ಯಾರು ಸಾಲದಾರರಿದ್ದಾರೆ, compulsory ಯಾಗಿ ಇವತ್ತು ನಾವು insurance ಮಾಡಿಸುತ್ತೇವೆ. ಆದರೆ ಅವರಿಗೆ ಯಾವುದೇ ರೀತಿಯ claim ಬರುತ್ತಿಲ್ಲ. ನಮ್ಮ insurance ಬಂದಿಲ್ಲ ಎಂದು ರೈತರು ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ.

ಶ್ರೀ ಬಿ.ಆರ್. ಯಾವಗಲ್:- Scheduled ಬ್ಯಾಂಕಿನಲ್ಲಿ 3% ಕಟ್ ಮಾಡುತ್ತಾರೆ.

ಶ್ರೀ ಕೆ.ಎಂ. ತಿಮ್ಮರಾಯಪ್ಪ:- Nationalised Bank ನಲ್ಲಿ compulsory ಇದೆ.

ಶ್ರೀ ಬಿ.ಆರ್. ಯಾವಗಲ್:- Scheduled bank ನಲ್ಲಿ ಎಲ್ಲರೂ 3% ಕಟ್ ಮಾಡುತ್ತಾರೆ.

ಶ್ರೀ ಕೆ.ಎಂ. ತಿಮ್ಮರಾಯಪ್ಪ:- Nationalised Bank ನಲ್ಲಿಯೂ ಕೂಡಾ insurance premium compulsory deduction ಮಾಡುತ್ತಾರೆ ಸರ್.

ಶ್ರೀ ಬಸವರಾಜ ಬೊಮ್ಮಯಿ:- ಹೌದು, ಯಾವುದೇ loan ತೆಗೆದುಕೊಂಡರೂ ಕೂಡಾ ಅದು compulsory ಇದೆ. 3% ಪ್ರೀಮಿಯಮ್ ಎಂದು ಅವರು ಹೇಳುತ್ತಾರೆ ಆದರೆ, ಅದು 5% premium. Weather based crop insurance ಕಳೆದ 3-4 ವರ್ಷಗಳಿಂದ ಇದೆ. ಇದೊಂದು ರೀತಿ gambling ಇದ್ದಂತೆ.

ಶ್ರೀ ವಿಶ್ವನಾಥ ಚಂದ್ರಶೇಖರ ಮಾಮನಿ:- ಈಗ ಕೃಷಿ insurance ಬಗ್ಗೆ ಮಾತನಾಡುತ್ತಾರಲ್ಲ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗೂ ಸಾಕಷ್ಟು variation ಇದೆ. ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ border ಹಳ್ಳಿಗಳಲ್ಲಿ ಸವದತ್ತಿ ಬರುತ್ತದೆ. ಧಾರವಾಡ ಜಿಲ್ಲೆ ನರಗುಂದಕ್ಕೂ ಮತ್ತು ಬೆಳಗಾವಿ ಜಿಲ್ಲೆಯಲ್ಲಿರುವ ಗ್ರಾಮಗಳಲ್ಲಿರುವ insurance ನಲ್ಲಿ ವ್ಯತ್ಯಾಸ ಇದೆ. ಇಲ್ಲಿ 10 ಎಕರೆ ಇದ್ದರೆ ನಮಗೆ 2 ರಿಂದ 4 ಸಾವಿರ ರೂ.ಗಳ insurance ಹಣ ಬರುತ್ತದೆ. ಇಲ್ಲಿ ಧಾರವಾಡ ಜಿಲ್ಲೆಯಲ್ಲಿ ನನ್ನದೇ ಜಮೀನು ಇರುತ್ತದೆ, ಅಲ್ಲಿ 10 ಎಕರೆ ಇದ್ದರೆ 50 ಸಾವಿರದಿಂದ 1 ಲಕ್ಷ ರೂ.ಗಳವರೆಗೆ ಹಣ ಬರುತ್ತದೆ. ಈ ರೀತಿ ಸಾಕಷ್ಟು variation ಇದೆ. ನಮ್ಮ ಸರ್ಕಾರ ಇದ್ದಾಗಲೂ ಕೂಡ insurance ತಾರತಮ್ಯದ ಬಗ್ಗೆ ಧ್ವನಿ ಎತ್ತಿದ್ದೆವು. ಕೃಷಿ ಸಚಿವರು ಇದರ ಬಗ್ಗೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು:- ಆಯಿತು, ಈಗ next. More than one hour ಆಯಿತು. ಬೇರೆಯವರು ಮಾತನಾಡಬೇಕಲ್ಲವೇ?

ಶ್ರೀ ಬಸವರಾಜ ಬೊಮ್ಮಯಿ:- conclude ಮಾಡುತ್ತೇನೆ.

ಉಪಾಧ್ಯಕ್ಷರು:- conclude ಮಾಡಿ.

ಶ್ರೀ ಬಸವರಾಜ ಬೊಮ್ಮಯಿ:- Crop based insurance ಬಗ್ಗೆ ನಮ್ಮ ರಾಜ್ಯ ಸರ್ಕಾರದ ನೀತಿ ಏನಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ತಾವು ಒಂದು ಹೊಸ ಯೋಜನೆಯನ್ನು ತಂದಿದ್ದೀರಿ. Farm mechanism ಅನ್ನು lease ಮೇಲೆ ಕೊಡುವ ಒಂದು ಪ್ರಯೋಗವನ್ನು ತಾವು ಮಾಡುತ್ತಿದ್ದೀರಿ. ಬಹುತೇಕವಾಗಿ ಅದು ಎನ್.ಜಿ.ಓ.ಗಳ ಮುಖಾಂತರ ಮಾಡಿಸುವ ಪ್ರಯತ್ನವನ್ನು ಮಾಡುತ್ತೀರಿ. ಆದರೆ ಕೆಲವು ಕಡೆ demand ಇದೆ. ಬಹಳಷ್ಟು ಕಡೆ demand ಬರುತ್ತಿಲ್ಲ. ಏಕೆ ಬರುತ್ತಿಲ್ಲ? ಏನು ಕಾರಣ? ಇಂದು ನಾವು ಅದನ್ನು ಪ್ರಾರಂಭ ಮಾಡಿದರೂ ಕೂಡಾ lease ಮೇಲೆ ತೆಗೆದುಕೊಳ್ಳುವುದಕ್ಕೆ ರೈತರು ಮುಂದೆ ಬರುತ್ತಿಲ್ಲ. ಅದರ ಬಗ್ಗೆ ತಾವು ಏನಾದರೂ ಯೋಚನೆ ಮಾಡಿದ್ದೀರಾ? 100% take off ಆಗಿಲ್ಲ. ಅದು take off ಆಗುವ ರೀತಿಯಲ್ಲಿ ಏನಾದರೂ ಇನ್ನಷ್ಟು ಪ್ರಯತ್ನಗಳನ್ನು ತಾವು ಮಾಡುತ್ತೀರಾ? ಎಂಬ ಪ್ರಶ್ನೆಯನ್ನು ನಾನು ಕೇಳಲಿಚ್ಛಿಸುತ್ತೇನೆ. Technicians, drivers, ರೈತರಿಗೆ, ತಮಗೆ ಬೇಕಾದ ರೀತಿಯಲ್ಲಿ, ತಮಗೆ ಬೇಕಾದ ಸಮಯದಲ್ಲಿ ಮಾಡುವಂತಹ flexibility ಈ ಯೋಜನೆಗಳಲಿಲ್ಲ. ಎಲ್ಲಿಯವರೆಗೆ ಆ flexibility ಕೊಡುವುದಿಲ್ಲ. ಅಲ್ಲಿಯವರೆಗೆ ಆ ಯೋಜನೆಯನ್ನು ರೈತರು ಉಪಯೋಗ ಮಾಡುವುದಿಲ್ಲ. ಕೃಷ್ಣರವರೆ, ಆದುದರಿಂದ ನಿಮ್ಮ ಸದುದ್ದೇಶ ಈಡೇರಬೇಕಲ್ಲವೇ? ಆ ಕೆಲಸವನ್ನು ತಾವು ದಯವಿಟ್ಟು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ನನ್ನ ಮಾತನ್ನು ಮುಗಿಸುತ್ತಿದ್ದೇನೆ. ನಾನು ಇಷ್ಟೇ ಹೇಳಬಯಸುತ್ತೇನೆ. ಕೃಷಿ ಇಲಾಖೆಯ ಮೂಲ ಉದ್ದೇಶ ಆಹಾರದ ಸುಭದ್ರತೆಯ ಜೊತೆಗೆ ನಮ್ಮ natural resource ಅನ್ನು ಉಳಿಸಿ, ಬೆಳೆಸುವಂತಹ ಕೆಲಸ ಏನಿದೆ, ಅದು ಮಾಡಬೇಕಾದರೆ ಅಮೂಲಾಗ್ರವಾದ ಬದಲಾವಣೆ ತರಬೇಕು. ಎಂತಹ disaster ಆದರೂ ಕೂಡಾ, ಅತಿವೃಷ್ಟಿ-ಅನಾವೃಷ್ಟಿ ಆದರೂ ಕೂಡಾ, ಕೂಡಲೇ ಅದಕ್ಕೆ ಸ್ಪಂದಿಸುವ mechanism ಅನ್ನು ನಿಮ್ಮ ಇಲಾಖೆಯಲ್ಲಿ ತರಬೇಕು. ಪ್ರತಿ ಸಾರಿ ಆ ಬೆಳೆ ನಷ್ಟವಾದಾಗ

ಮಂತ್ರಿಗಳು, ಮುಖ್ಯಮಂತ್ರಿಗಳು ಹೋಗುವುದು, ಕೇಂದ್ರದ ನಿಯೋಗ ಭೇಟಿ ನೀಡುವುದು, ಇದರಿಂದ ಏನು ಪ್ರಯೋಜನ? ಎಲ್ಲಾ ಮುಗಿದ ಮೇಲೆ ಯಾವುದಾದರೂ ಒಂದು ಮೂಲೆಯಲ್ಲಿ ಅಲ್ಪ ಪರಿಹಾರ ಕೊಟ್ಟಿದ್ದೇವೆ ಎಂದು claim ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. Disaster management ಗೆ alternative corps ಮತ್ತು ಅದಕ್ಕೆ suppoıt system ರೈತರಿಗೆ ಯಾವ ರೀತಿ ನಿಭಾಯಿಸಬೇಕೆನ್ನುವುದಕ್ಕೆ disaster management ಮಾಡುವುದಕ್ಕೆ ತಾವು ಏನಾದರೂ ಒಂದು contingency plan ಅನ್ನು ತಾವು ಕೃಷಿ ಇಲಾಖೆಯ ಮುಖಾಂತರ crop disaster ಗೆ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಅದರ ಜೊತೆಗೆ university ಗಳಿಗೆ ಕಾಯಕಲ್ಪ ಕೊಡುವ ಕೆಲಸವನ್ನು ತಾವು ಮಾಡಬೇಕು. Soil health ಸಂರಕ್ಷಣೆಯನ್ನು ವ್ಯಾಪಕವಾಗಿ ಮಾಡುವುದಕ್ಕೆ ನಮ್ಮ Young agriculture graduates ಅನ್ನು ಉಪಯೋಗ ಮಾಡಿಕೊಳ್ಳಬೇಕು. ಮೂರನೆಯದಾಗಿ, ಭೂ ಚೇತನಕ್ಕೆ ಅತಿ ಹೆಚ್ಚು ಹಣ ಕೊಡಬೇಕು. ಕೃಷಿ ಭಾಗ್ಯವನ್ನು ಅದಕ್ಕೆ ಬೇಕಾದ ಬದಲಾವಣೆಯನ್ನು ತಂದು, ರೈತರಿಗೆ ಸಹಾಯವಾಗುವ ರೀತಿಯಲ್ಲಿ ಅದನ್ನು take off ಮಾಡಬೇಕು. ಆಮೇಲೆ ಸದನದಲ್ಲಿ ಮುಖ್ಯಮಂತ್ರಿಗಳಿಲ್ಲ. ಇಲ್ಲಿ ಇಲಾಖೆಗೆ ಏನು ದುಡ್ಡು ಕೊಟ್ಟಿದ್ದಾರೆ, ಅದು ಸಾಲದು.

ಈ ಸರ್ಕಾರ ಕೃಷಿಗೆ priority ಕೊಡಬೇಕಾಗಿತ್ತು. ಕೃಷಿಗೆ ಹೆಚ್ಚಿನ ಪ್ರಾಸ್ತ್ಯ ಕೊಡಲು ಸರ್ಕಾರ ವಿಫಲವಾಗಿದೆ. ಕೊಟ್ಟಂಥ ಹಣಕ್ಕೆ ಸರಿಯಾದ ಕಾರ್ಯಕ್ರಮವನ್ನು ರೂಪಿಸುವಲ್ಲಿ ತಾವು ವಿಫಲವಾಗಿದ್ದೀರಿ, ಅವರು ಹಣ ಕೊಡುವಲ್ಲಿ ವಿಫಲವಾಗಿದ್ದಾರೆ. ಆಗಲೇ ಹೇಳಿದಂತೆ ದೊಡ್ಡ ಯೋಜನೆಗಳು, ಅಲ್ಪ ಪ್ರಯತ್ನ ಮತ್ತು ಅತ್ಯಂತ ಕಡಿಮೆ ಪ್ರಮಾಣದ ಪರಿಣಾಮಗಳು ಇವತ್ತು ಇದು ನಮ್ಮ ರೈತನಿಗೆ ಮಾರಕವಾಗಿದೆ. ದಯವಿಟ್ಟು ನನ್ನದೊಂದು ಪ್ರಶ್ನೆ, ಈ Price Commission ಏನಾಯಿತು? ಎಲ್ಲಿದೆ? ಏನು ಮಾಡುತ್ತಿದೆ? ಅಷ್ಟನ್ನು ಹೇಳಿಬಿಡಿ. ಈ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ Price Commission ಅಧ್ಯಕ್ಷರು, ಆ Price Commission ನ ಉದ್ದೇಶ ಬಿಟ್ಟು ಎಲ್ಲಾ ಮಾತನಾಡುತ್ತಾರೆ, ಇಡೀ ಕೃಷಿ ಬಗ್ಗೆ

ಮಾತನಾಡುತ್ತಾರೆ. Agriculture Price Commission ಏನಾಗಿದೆ, ಎಲ್ಲಿದೆ, ಇದೆಯೊ ಇಲ್ಲವೋ?

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಉಪಾಧ್ಯಕ್ಷರೆ, ನಿಜವಾಗಿಯೂ ಕೂಡ 2 ವರ್ಷದಿಂದ ಈ ಕೃಷಿ ಬೆಲೆ ಆಯೋಗದ ಬಗ್ಗೆ ಸರ್ಕಾರ ಹೇಳಿದ್ದನ್ನೇ ಹೇಳಿಕೊಂಡು ಬಂದಿದೆ. ಆ ಆಯೋಗಕ್ಕೆ ಅಧ್ಯಕ್ಷರನ್ನು ಸರ್ಕಾರ ನೇಮಕ ಮಾಡಿದೆ. ಅವರು ನಾನು ಏನು ಮಾಡಬೇಕು? ಹೇಗೆ ಮಾಡಬೇಕು? ನಮಗೆ ಏನಾದರೂ ವ್ಯವಸ್ಥೆ ಮಾಡಿಕೊಡಿ ಎಂದು ಸರ್ಕಾರಕ್ಕೆ ಪತ್ರ ಬರೆಯುತ್ತಾರೆ. ಸರ್ಕಾರ ಅವರಿಗೆ ಕನಿಷ್ಟ ಮೂಲಭೂತ ಸೌಕರ್ಯ ಕೊಡುವುದಕ್ಕೂ ಹೋಗಿಲ್ಲ. ಇವತ್ತು ಈ ಸರ್ಕಾರ ಮತ್ತು ಕೃಷಿ ಬೆಲೆ ಆಯೋಗದ ಕತೆ ರೈತರ ಪಾಲಿಗೆ ಹೇಗಾಗಿದೆ ಎಂದರೆ, ಕುರುಡನ ಮೇಲೆ ಹೆಳವ ಸವಾರಿ ಮಾಡುವಂತಾಗಿದೆ, ಇವರದು ಅವರಿಗಿಲ್ಲ, ಇವರದು ಅವರಿಗಿಲ್ಲ, ಕೃಷಿ ಬೆಲೆ ಆಯೋಗ ಬಗ್ಗೆ, ಪ್ರತಿ ಸಾರಿ ಭಾಷಣದಲ್ಲಿ ಹೇಳಿದ್ದೀರಿ.

ಶ್ರೀ ಬಸವರಾಜ ಬೊಮ್ಮಯಿ:- ಈ ಆಯೋಗದ ಪರಿಸ್ಥಿತಿ ನೋಡಿದ ಮೇಲೆ ನಾನು ಇನ್ನೊಂದು ಆಯೋಗವನ್ನು ಸಜೆಸ್ಟ್ ಮಾಡಬೇಡವೆಂದಿದ್ದೇನೆ. Agriculturist Wage Commission ಮಾಡಬೇಕೆಂದು ಸ್ವಾಮಿನಾಥನ್ ಅವರು ಒಂದು ಸಲಹೆಯನ್ನು ಕೊಟ್ಟಿದ್ದರು, ಆದರೆ ಅದನ್ನು ನಾನು ಸಜೆಸ್ಟ್ ಮಾಡುವುದಕ್ಕೂ ಕೂಡ ಭಯವಿದೆ, ಏಕೆಂದರೆ if you can't commit, commit it ಎಂದು ಹೇಳುತ್ತಾರಲ್ಲಾ ಆ ರೀತಿ ಕಮಿಟಿ ಮಾಡಿ ಕೈ ಬಿಡುತ್ತೀರಿ, ಆದುದರಿಂದ ನಾನು ಅದರ ಸಲಹೆಯನ್ನೂ ಕೂಡ ಮಾಡುವುದಿಲ್ಲ. ಇವತ್ತು ನಿಮ್ಮ Agriculture Price Commission ಸ್ಥಿತಿಗತಿ ಏನಾಗಿದೆ? ಎನ್ನುವುದನ್ನು ತಾವು ಸದನಕ್ಕೆ ತಿಳಿಸಬೇಕು. ಇಲ್ಲದಿದ್ದರೆ ಒಂದು ಕೆಲಸ ಮಾಡಿ, ಅದನ್ನು ರದ್ದು ಮಾಡಿಬಿಡಿ, ಅದು ಬೇಡವೇ ಬೇಡ. All India level ನಲ್ಲಿ ನಿಮಗೆ price fix ಮಾಡುವುದಕ್ಕೆ ಅಧಿಕಾರವಿಲ್ಲ, ಅವರು ಮಾಡುತ್ತಾರೆ. ಆ ಅಧಿಕಾರವನ್ನು ನೀವು ಪಡೆದುಕೊಂಡರೆ, ಅದಕ್ಕೆ support system ಆಗಿ ರೈತರು ಸಂಕಷ್ಟದಲ್ಲಿದ್ದಾಗ ಎಷ್ಟು ದುಡ್ಡು ಕೊಡುತ್ತೀರಿ? Price ಕಡಿಮೆ ಇದ್ದಾಗ

ಕೊಡುವುದಕ್ಕೆ ನಿಮಗೆ ಅಧಿಕಾರ ಇದೆಯಾ? ಅದೇನೂ ಇಲ್ಲ, ಅದಿಲ್ಲದೆ ಕಮಿಷನ್ ಮಾಡಿದ್ದೀರಿ. ಆ ಕಮಿಷನ್ ಒಂದು ಪದಾರ್ಥಕ್ಕೆ, ಆಹಾರ ಧಾನ್ಯಕ್ಕೆ ಎಲ್ಲಿಯಾದರೂ ಒಂದು season ಗೆ, Khariff ಗೆ, rabiಗೆ ಎಲ್ಲಿಯಾದರೂ ಪ್ರೈಸ್ ಫಿಕ್ಸ್ ಮಾಡಿದ್ದಾರಾ?

ಶ್ರೀ ವೈ.ಎಸ್.ವಿ. ದತ್ತಾ:- ಇದರಲ್ಲಿ ರೈತರು ನಿರ್ಣಾಯಕರಲ್ಲ, ಯಾರೋ ಒಂದಿಷ್ಟು ಪಂಡಿತರು, ಒಂದಿಷ್ಟು agriculture university ಯವರನ್ನು ಹಾಕಿಕೊಂಡು ಆಯೋಗ ಮಾಡಿದ್ದೀರಿ. ಆಯೋಗದಲ್ಲಿ ರೈತರು ನಿಜವಾಗಿಯೂ ನಿರ್ಣಯಕವಾಗಬೇಕಾಗಿತ್ತು, ಅದರಲ್ಲಿ ರೈತ ಪ್ರತಿನಿಧಿಗಳಿಗೆ ಅವಕಾಶವಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- ನೋಡಿ, ರೈತರನ್ನು ಒಳಗೊಂಡಂಥ, ರೈತರಿಗೆ ಬೇಕಾಗಿರುವ ಕೃಷಿ ಯೋಜನೆಗಳನ್ನು ಮಾಡಿ, ಇಲ್ಲದಿದ್ದರೆ ರೈತರಿಗೆ ಕೃಷಿ ಇಲಾಖೆಯ ಸಂಬಂಧ ಕಡಿದು ಹೋಗುತ್ತದೆ, ರೈತರ ಪಾಲಿಗೆ ಕೃಷಿ ಇಲಾಖೆ ಇಲ್ಲದಂತಾಗುತ್ತದೆ, ಸತ್ತಂತಾಗುತ್ತದೆ. ದಯಮಾಡಿ, ಅದಕ್ಕೆ ಅವಕಾಶ ಮಾಡಿಕೊಡಬೇಡಿ. ಹಲವಾರು ಹೆಡ್‌ಗಳನ್ನು ಮಾಡಿ, ಆ ಹಣವನ್ನು ಅಲ್ಲಲ್ಲಿ ಸಣ್ಣ ಪ್ರಮಾಣದಲ್ಲಿ ಖರ್ಚು ಮಾಡುವುದಕ್ಕಿಂತ ಒಂದು ದೊಡ್ಡ priority list ಮಾಡಿ, ಸರಿಯಾದ ಕಾರ್ಯಕ್ರಮವನ್ನು ರೂಪಿಸಿ, ರೈತರಿಗೆ ಮುಟ್ಟಿಸುವಂಥ ಕೆಲಸವನ್ನು ತಾವು ಮಾಡಬೇಕು. ಇಲ್ಲದಿದ್ದರೆ ಈ ಬೇಡಿಕೆಯನ್ನು ಪಾಸ್ ಮಾಡುವಂತೆ ಕೇಳುವ ಅರ್ಹತೆ ತಮಗಿರುವುದಿಲ್ಲ. ಇದನ್ನು ಮಂಡನೆ ಮಾಡಿದ್ದೀರಿ, ಆದರೆ ಈ ಸದನ ಸಂಪೂರ್ಣ ಪರಿಶೀಲನೆ ಮಾಡಿದರೆ, ಈ ಬೇಡಿಕೆ ಪಾಸ್ ಮಾಡಲು ಅರ್ಹತೆ ಇರುವುದಿಲ್ಲವೆನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- 10 ನಿಮಿಷಗಳಲ್ಲಿ ಮುಗಿಸಿ.

ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು):- ಮಾನ್ಯ ಉಪಾಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳ ಬೇಡಿಕೆ ಮೇಲೆ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ.

ವಿಶೇಷವಾಗಿ ಗ್ರಾಮೀಣಾಭಿವೃದ್ಧಿ ಇಲಾಖೆಯ ಬಹಳಷ್ಟು ವಿಚಾರಗಳ ಕುರಿತು ಈಗಾಗಲೇ ಹಲವಾರು ಮಾನ್ಯ ಸದಸ್ಯರು ಚರ್ಚೆ ಮಾಡಿದ್ದಾರೆ. ನಾನು ನಮ್ಮ ಜಿಲ್ಲೆಗೆ ಸೀಮಿತವಾಗಿ ಹೇಳುವುದಾದರೆ, ಈ ಒಂದು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಅವಶ್ಯಕತೆ ಬಹಳಷ್ಟು ನಮ್ಮ ಜಿಲ್ಲೆಗಿದೆ. ನಮ್ಮ ಜಿಲ್ಲೆಯಲ್ಲಿ ಅತಿ ಹೆಚ್ಚು ಮಳೆಯಾಗುತ್ತದೆ, ಆದರೆ ಬೇಸಿಗೆಯಲ್ಲಿ ನಮಗೆ ಕುಡಿಯುವುದಕ್ಕೆ ನೀರು ಇಲ್ಲದಿರುವ ಪರಿಸ್ಥಿತಿ ಇವತ್ತು ಉದ್ಭವವಾಗಿದೆ. ನಾವು ಅನೇಕ ಬಾರಿ ಈ ಒಂದು vented dam ಅನ್ನು ಕುಡಿಯುವ ನೀರಿನ ವ್ಯವಸ್ಥೆಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಮನವಿಗಳನ್ನು ಮಾಡಿದರೂ ಸಹ ಇಲ್ಲಿಯವರೆಗೆ ಕುಡಿಯುವ ನೀರಿನ ಬೇಡಿಕೆಯನ್ನು ಈಡೇರಿಸುವುದಕ್ಕೆ ನಮಗೆ ಆಗಿಲ್ಲ. ಬಹುಶ: ಈ ಒಂದು ವ್ಯವಸ್ಥೆಯಡಿಯಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಸಲುವಾಗಿ ನಾವು ಈಗಾಗಲೇ ಇಲಾಖೆಯ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಮಂಜೂರು ಆಗಿ ಟೆಂಡರ್ ಕರೆಯಲಾಗಿದೆ. ಮೂರು ಸಾರಿ ಟೆಂಡರ್ ಹಾಕಿದರೂ ಕೂಡ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಯಾರು ಮುಂದೆ ಬರುತ್ತಿಲ್ಲ. ಇದರಲ್ಲಿ ಅಂದಾಜು ಮಾಡುವ ಸಂದರ್ಭದಲ್ಲಿ ಎಲ್ಲೋ ಒಂದು ಕಡೆ ತಪ್ಪಾಗಿದೆ. ಆದುದರಿಂದ ಗುತ್ತಿಗೆದಾರರು ಇದರಲ್ಲಿ ಭಾಗವಹಿಸುತ್ತಿಲ್ಲ. ಬಹುಶಃ ಈ ಒಂದು ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಬಗ್ಗೆ ಕಾನೂನಿನಲ್ಲಿ ಸ್ವಲ್ಪ ಸಡಿಲೀಕರಣ ಮಾಡಿ, ಮಲೆನಾಡು, ಕರಾವಳಿ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಹೆಚ್ಚು ಒತ್ತನ್ನು ಕೊಡಬೇಕೆನ್ನುವ ದೃಷ್ಟಿಕೋನದಲ್ಲಿ, ಈ ಬಹುಗ್ರಾಮ ಕುಡಿಯುವ ನೀರನ್ನು 5–4 ಪಂಚಾಯತಿಗಳನ್ನು ಒಟ್ಟಿಗೆ ಸೇರಿಸಿ ಒಂದೊಂದು ಯೋಜನೆ ಮಾಡಿ, ನಮಗೆ ಕುಡಿಯುವ ನೀರಿನ ಯೋಜನೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಈಗ ಕೆಲವು ಭಾಗದ ಜಿಲ್ಲೆಗಳಿಗೆ ಮಂಜೂರಾಗಿರುವುದು ತ್ವರಿತಗತಿಯಲ್ಲಿ ಅನುಷ್ಠಾನವಾಗಬೇಕಾಗುತ್ತದೆ. ಆ ಯೋಜನೆಯ ಲಾಭವನ್ನು ನಮ್ಮ ಜಿಲ್ಲೆಗೆ ಕೊಡಿಸಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಗ್ರಾಮಪಂಚಾಯತ್ ತಿದ್ದುಪಡಿಯನ್ನು ತಂದು,

ಚುನಾವಣೆ ಮುಗಿದಿದೆ, ನಿನ್ನೆ ಹಿರಿಯ ಸದಸ್ಯರಾದ ರಮೇಶ್ ಕುಮಾರ್ ಅವರು ಕೆಲವೊಂದು ವಿಚಾರಗಳ ಬಗ್ಗೆ ಈ ಸದನದ ಗಮನವನ್ನು ಸೆಳೆದಿದ್ದಾರೆ. ಇವತ್ತು ಬಹುಶಃ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕೇರಳದ ಪಂಚಾಯತ್ ರಾಜ್ ವ್ಯವಸ್ಥೆ ಏನಿದೆ, ಇದು ಇಡೀ ರಾಷ್ಟ್ರಕ್ಕೆ ಮಾದರಿಯಾಗಿದೆ. ಏಕೆಂದರೆ, ಅಲ್ಲಿ ಒಂದು ವಾರ್ಡಿಗೆ ಒಬ್ಬರೇ ಸದಸ್ಯರನ್ನು ಆಯ್ಕೆ ಮಾಡುತ್ತಾರೆ. ಪ್ರತಿ ಯೋಜನೆಯನ್ನು ರೂಪಿಸುವ ವ್ಯವಸ್ಥೆ ಅಲ್ಲಿನ ಗ್ರಾಮ ಪಂಚಾಯತಿಗೆ ಕೊಟ್ಟಿದ್ದಾರೆ. ಅದು ಕೃಷಿ ಇಲಾಖೆ, ತೋಟಗಾರಿಕೆ ಅಥವಾ ಜಲಾನಯನ ಮತ್ತು ಪಶುಸಂಗೋಪನಾ ಇಲಾಖೆ ಇರಬಹುದು, ಈ ಎಲ್ಲಾ ಯೋಜನೆಗಳನ್ನು ರೂಪಿಸುವ ವ್ಯವಸ್ಥೆ ಪಂಚಾಯತಿಗೆ ಕೊಟ್ಟಿದ್ದಾರೆ. ಪಂಚಾಯತಿ ಯಾವ ರೀತಿ ಅನುಷ್ಠಾನ ಮಾಡುತ್ತದೆ ಎಂದರೆ, ಒಂದೊಂದು ಪಂಚಾಯತಿಗೆ ಸುಮಾರು ಒಂದು ಕೋಟಿ ರೂಪಾಯಿ ಕೇರಳದಲ್ಲಿ ಬರುತ್ತದೆ. ಅವರು ಗ್ರಾಮ ಸಭೆ, ವಾರ್ಡ್ ಸಭೆಯನ್ನು ಅತ್ಯಂತ ಯಶಸ್ವಿಯಾಗಿ ಅನುಷ್ಠಾನ ಮಾಡುತ್ತಿದ್ದಾರೆ, ಜನರೂ ಭಾಗವಹಿಸುತ್ತಿದ್ದಾರೆ. ನಮ್ಮಲ್ಲಿ ಗ್ರಾಮಸಭೆ, ವಾರ್ಡ್ ಸಭೆಗೆ ಅಧಿಕಾರಿಗಳೇ ಬರದಿರುವ ಪರಿಸ್ಥಿತಿ ಇವತ್ತು ಉದ್ಭವವಾಗಿದೆ. ನಿನ್ನೆ ಮಾನ್ಯ ರಮೇಶ್ ಕುಮಾರ್ ಅವರು ಏನು ಹೇಳಿದ್ದಾರೆ, ಅದು ನಿಜವಾಗಿಯೂ ಅನುಷ್ಠಾನವಾಗಬೇಕು. ಏಕೆಂದರೆ, ಆ ಗ್ರಾಮ ಮತ್ತು ವಾರ್ಡ್ ಸಭೆ ಕೇರಳದಲ್ಲಿ ಇವತ್ತು ಆಗುತ್ತಿದೆ, ಅಲ್ಲಿ ಅದು ಯಶಸ್ವಿಯಾಗಿದೆ, ಗ್ರಾಮೀಣ ಭಾಗದ ಪಂಚಾಯತಿ ವ್ಯವಸ್ಥೆಗೆ ಶಕ್ತಿ ಕೊಡುವ ಕೆಲಸ ಕೇರಳದಲ್ಲಾಗಿದೆ. ನಮ್ಮ ಭಾಗದಲ್ಲೂ ಕೂಡ ಪಂಚಯತಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅದಕ್ಕೆ ಹೆಚ್ಚು ಅಧಿಕಾರವನ್ನು ಕೊಡಬೇಕು ಮತ್ತು ಆ ಮೂಲಕ ಗ್ರಾಮದ ಅಭಿವೃದ್ಧಿಯ ಬಗ್ಗೆ ಚಿಂತನೆ ಮಾಡುವ ಕೆಲಸ ಆಗಬೇಕಾಗಿದೆ. ಸಂವಿಧಾನದ ಹಕ್ಕನ್ನು ಗ್ರಾಮ ಪಂಚಾಯತಿಗೇನು ಕೊಟ್ಟಿದೆ, ಅದನ್ನು ನಿಜವಾಗಿ ಅವರಿಗೆ ಕೊಡಬೇಕು ಮತ್ತು ಅದನ್ನು ಗಟ್ಟಿ ಮಾಡುವ ಕೆಲಸವಾದರೆ ಮಾತ್ರ ಪಂಚಾಯತಿ ವ್ಯವಸ್ಥೆ ಉಳಿಯುತ್ತದೆ, ಜನರಿಗೆ ವಿಶ್ವಾಸ ಮೂಡುವ ಕೆಲಸವಾಗುತ್ತದೆ. ಬಹುಶಃ ಕಮಿಟಿಯವರು ಕೇರಳದ ಪಂಚಾಯತಿಯ ವ್ಯವಸ್ಥೆಯನ್ನು ನೋಡಲು ಹೋಗಬೇಕು, ಕೇರಳದಲ್ಲಿ ಅಧ್ಯಯನ ಮಾಡಬೇಕು. ಕೇರಳ ಸರ್ಕಾರದಲ್ಲಿ ಆ ಪಂಚಾಯತಿ

ವ್ಯವಸ್ಥೆಯನ್ನು ಅತ್ಯಂತ ಬಲಿಷ್ಠವಾಗಿ ಮಾಡಿದ್ದಾರೆಂದು ತಿಳಿದುಕೊಂಡಿದ್ದೇವೆ, ಅಲ್ಲಿ ಅದು ಇವತ್ತು ಯಶಸ್ವಿಯಾಗಿದೆ. ಅವರು ರಾಷ್ಟ್ರಕ್ಕೆ ಮಾದರಿಯಾಗುವ ರೀತಿಯಲ್ಲಿ ಕಾರ್ಯಕ್ರಮವನ್ನು ರೂಪಿಸಿದ್ದಾರೆ, ಅದನ್ನು ನಮ್ಮ ರಾಜ್ಯದಲ್ಲಿ ತರಬೇಕೆಂಬ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಬಹುಶಃ ನಮ್ಮ ಭಾಗದಲ್ಲಿ ಗ್ರಾಮ ಪಂಚಾಯತಿಗೆ ಕೊಡುವ ಅನುದಾನದಲ್ಲಿ ಕರೆಂಟ್ ಬಿಲ್ ಮೊತ್ತವನ್ನು ಕಟ್ ಮಾಡಿ ಕೊಡುತ್ತಿದ್ದಾರೆ. ಬಿಡುಗಡೆಯಾಗುವ ಅನುದಾನದಲ್ಲಿ ಪಂಚಾಯತಿಯ ಸಂಬಳ ಕೊಟ್ಟು, ಬೇರೆ ಬೇರೆ ವ್ಯವಸ್ಥೆಯನ್ನು ಮಾಡಬೇಕಾದರೆ ಪಂಚಾಯತಿಗೆ ಕಷ್ಟವಿದೆ. ಇವತ್ತು ಪಂಚಾಯತಿಗೆ ಹೆಚ್ಚು ಅನುದಾನ ಕೊಡುವುದರ ಮೂಲಕ, ಅವರಿಗೆ ಹೆಚ್ಚು ಕೆಲಸ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಡಬೇಕು. ಅವರಿಗೆ ಕೊಡುವ ಅನುದಾನ ಕ್ಲುಪ್ತ ಸಮಯಕ್ಕೆ ಕೊಡಬೇಕು, ಯಾವತ್ತೋ ಕೊಟ್ಟರೆ ಪಂಚಾಯತಿಯನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವ್ಯಾವ ಸಮಯಕ್ಕೆ ಅನುದಾನ ಬಿಡುಗಡೆಯಾಗಬೇಕಾಗುತ್ತದೆ, ಆ ಹಣವನ್ನು ಆಯಾ ಸಮಯಕ್ಕೆ ಪಂಚಾಯತಿಗೆ ಬಿಡುಗಡೆ ಮಾಡಬೇಕೆನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದಲ್ಲದೆ ಇವತ್ತು ನಮ್ಮ ಗ್ರಾಮೀಣ ಭಾಗದಲ್ಲಿ ವಿಶೇಷವಾಗಿ ಪಂಚಾಯತಿಯ ಭಾಗದಲ್ಲಿ ನೂರಕ್ಕೆ ನೂರು ತೆರಗೆ ವಸೂಲ್ಮಾಡಿದ ಪಂಚಾಯತಿಗೆ ಸರ್ಕಾರ ಹೆಚ್ಚು ಬೆಂಬಲ ಕೊಡಬೇಕಾಗುತ್ತದೆ. ಎಲ್ಲಿ ಹೆಚ್ಚು ತೆರಿಗೆಯನ್ನು ವಸೂಲ್ಮಾಡಿ, ಆ ಪಂಚಾಯತಿಯನ್ನು ಮಾದರಿ ಪಂಚಾಯತಿಯನ್ನಾಗಿ ಮಾಡುವ ಕೆಲಸವನ್ನು ಎಲ್ಲೆಲ್ಲಿ ಮಾಡುತ್ತಾರೆ, ಅವುಗಳಿಗೆ ಹೆಚ್ಚೆಚ್ಚು ಬೆಂಬಲವನ್ನು ಕೊಟ್ಟಾಗ, ಬಹುಶ: ಪಂಚಾಯತಿ ವ್ಯವಸ್ಥೆಯಲ್ಲಿ ಕೆಲಸ ಮಾಡುವುದಕ್ಕಾಗುತ್ತದೆ.

ಇವತ್ತು ಹೊಸ ಪಂಚಾಯತಿ ಸದಸ್ಯರು ಆಯ್ಕೆಯಾಗಿ ಬಂದಿದ್ದಾರೆ. ಸರ್ಕಾರ ಇವತ್ತು ಆ ಪಂಚಾಯತಿ ಸದಸ್ಯರಿಗೆ ತರಬೇತಿ ಕೊಡಬೇಕು. ಪಂಚಾಯತಿಯನ್ನು ಯಾವ ರೀತಿ ನಡೆಸಬೇಕು? ಪಂಚಾಯತಿ ವಾರ್ಡ್ ಸಭೆಗಳಲ್ಲಿ ಯಾವ ರೀತಿ ಭಾಗವಹಿಸಬೇಕು? ಗ್ರಾಮ ಸಭೆಯ ವ್ಯವಸ್ಥೆ ಏನಿದೆ? ಏಕೆ ಗ್ರಾಮ ಸಭೆಗಳನ್ನು ಮಾಡುತ್ತೇವೆ ಎನ್ನುವುದನ್ನು ಗ್ರಾಮ

ಪಂಚಾಯತಿ ಸದಸ್ಯರಿಗೆ ಮೊದಲು ತಿಳಿ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಗ್ರಾಮದ ಕ್ರಿಯಾ ಯೋಜನೆ ಮಾಡತಕ್ಕಂತಹ ಸಂದರ್ಭದಲ್ಲಿ ಹಂಚಿಕೊಳ್ಳುತ್ತಾರೆ. ಸರ್ಕಾರದ ಯೋಜನೆಗಳನ್ನು ಹಂಚಿಕೊಳ್ಳುವುದರಿಂದ, ನಿಗದಿಯಾದ ಕಾಮಗಾರಿ ಪೂರ್ಣಗೊಳ್ಳುವುದಿಲ್ಲ. ಯಾವುದಾದರೂ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾದರೆ, ಆ ವಾರ್ಡ್‌ನಲ್ಲಿ ಅತ್ಯಂತ ಗುರುತು ಆಗುವಂತಹ ಕೆಲಸವನ್ನು ಆ ಪಂಚಾಯತಿ ಮಾಡಿದಾಗ ಮಾತ್ರ, ಆ ಗ್ರಾಮ ಪಂಚಾಯತಿಯ ಮೂಲ ಉದ್ದೇಶ ಈಡೇರುತ್ತದೆ. ಅದಕ್ಕೆ ಹೆಚ್ಚು ಒತ್ತು ಕೊಡುವಂತಹ ಕೆಲಸವನ್ನು ಪಂಚಾಯತಿಗಳು ಮಾಡಬೇಕು. ಪಂಚಾಯತಿಗಳಿಗೆ ಹೆಚ್ಚಿನ ಅನುದಾನವನ್ನು ಕೊಡುವುದರ ಜೊತೆಗೆ ಈ ಗ್ರಾಮ ಪಂಚಾಯತಿಯ ಸದಸ್ಯರಿಗೆ ವಿಶೇಷವಾದ ತರಬೇತಿಯನ್ನು ಸರ್ಕಾರದ ಮೂಲಕ ಕೊಡಬೇಕು ಅವರನ್ನು ಮುಂದಿನ ಪಂಚಾಯತಿ ನಡೆಸುವ ರೀತಿಯಲ್ಲಿ ತರಬೇತಿಗೊಳಿಸಬೇಕಾಗುತ್ತದೆ. ಕುಡಿಯುವ ನೀರಿನ ಯೋಜನೆಗಳನ್ನು ಯಾವ ರೀತಿ ಅನುಷ್ಠಾನಗೊಳಿಸಬೇಕಾಗುತ್ತದೆ, ಜನರಿಗೆ ಯಾವ ರೀತಿ ಸ್ಪಂದಿಸಬೇಕಾಗುತ್ತದೆ ಎನ್ನುವ ಬಗ್ಗೆ ಮಾಹಿತಿ ಹಾಗೂ ಗ್ರಾಮ ಸಭೆಗಳನ್ನು ಯಾವ ರೀತಿ ನಡೆಸಬೇಕೆಂಬ ಮಾಹಿತಿಯನ್ನು ಪಂಚಾಯತಿ ಸದಸ್ಯರಿಗೆ ಸರ್ಕಾರ ಕೊಡಬೇಕು. ಬಹಳ ವಿಶೇಷವಾಗಿ ಕುಡಿಯುವ ನೀರಿನ ಶುದ್ಧೀಕರಣ ಮಾಡುವುದಕ್ಕೆ ಹೆಚ್ಚಿನ ಒತ್ತು ಕೊಡಬೇಕು ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಅದೇ ರೀತಿ ಶೌಚಾಲಯಗಳಿಗೂ ಹೆಚ್ಚಿನ ಒತ್ತನ್ನು ಕೊಡಬೇಕೆನ್ನುವ ವಿಚಾರವನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಬಹಳ ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ ಅತಿವೃಷ್ಟಿ ಹೆಚ್ಚು, ಮಳೆಗಾಲದಲ್ಲಿ ಎಲ್ಲಿಯೂ ಬಾರದಷ್ಟು ಮಳೆ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಬರುತ್ತದೆ. ನಮ್ಮಲ್ಲಿ ತುಂಡು ಭೂಮಿ ಇದೆ, ಎಕರೆಗಟ್ಟಲೆ ಭೂಮಿ ಇಲ್ಲ. ನಮ್ಮಲ್ಲಿ 50 cents, ಒಂದು ಎಕರೆ, ಎರಡು ಎಕರೆ ಬಿಟ್ಟರೆ ಜಾಸ್ತಿ ಜಮೀನು ಹೊಂದಿರುವುದಿಲ್ಲ. ಈ ತುಂಡು ಭೂಮಿ ಪ್ರದೇಶದಲ್ಲಿ ಯಾವ ರೀತಿ ಕೃಷಿ ಮಾಡಬೇಕೆಂಬ ಬಗ್ಗೆ ರೈತರಿಗೆ ಕೃಷಿ ಇಲಾಖೆ ಮಾಹಿತಿ ನೀಡಬೇಕು. ಮಾನ್ಯ ಬಸವರಾಜ ಬೊಮ್ಮಾಯಿಯವರು ಹೇಳಿದ ಹಾಗೆ, ಇವತ್ತು ಯೂನಿವರ್ಸಿಟಿಯಲ್ಲಿ ಏನು

ಕಂಡುಹಿಡಿಯುತ್ತಾರೆ, ಅದು ನೇರವಾಗಿ ರೈತರಿಗೆ ಹೋಗಿ ತಲುಪುವ ಕೆಲಸ ಆಗಬೇಕು. ಯೂನಿವರ್ಸಿಟಿಯಲ್ಲಿ ಕಂಡು ಹಿಡಿದಿರುವುದನ್ನು ಪ್ರಚಾರ ಮಾಡುವುದು ಬಿಟ್ಟು, ಅದು ನೇರವಾಗಿ ರೈತರಿಗೆ ತಲುಪುವಂತಾಗಬೇಕು. ಹಳ್ಳಿಯ ರೈತರು ಯಾವ ರೀತಿ ಕೃಷಿಯನ್ನು ಅಭಿವೃದ್ಧಿಪಡಿಸಬೇಕು ಎಂದು ತಿಳಿಸಬೇಕು. ಕೃಷಿ ಒಂದು ಲಾಭದಾಯಕ ಉದ್ಯಮ ಎನ್ನುವಷ್ಟರ ಮಟ್ಟಿಗೆ ರೈತರ ವಿಶ್ವಾಸಗಳಿಸುವ ಕೆಲಸ ಆಗಬೇಕಾದರೆ, ಯೂನಿವರ್ಸಿಟಿಯ ಪಾತ್ರ ಬಹಳ ದೊಡ್ಡದಿದೆ. ವಿಜ್ಞಾನಿಗಳ ಪಾತ್ರ ಬಹಳ ದೊಡ್ಡದು. ವಿಜ್ಞಾನಿಗಳು ಕಂಡುಹಿಡಿದಿದ್ದು ರೈತರಿಗೆ ತಲುಪದೇ ಇದ್ದರೆ, ರೈತರಿಗೆ ಆ ಬಗ್ಗೆ ಮಾಹಿತಿ ಇಲ್ಲದೆ ಇದ್ದರೆ, ಅವರು ಕಂಡುಹಿಡಿದ ಕೃಷಿಯ ಲಾಭ ರೈತರಿಗೆ ಹೋಗುವುದಿಲ್ಲ. ಎಲ್ಲೋ ಒಂದು ಕಡೆ ನಾಲ್ಕು ಗೋಡೆಗಳ ಮಧ್ಯೆ ವಿಜ್ಞಾನಿಗಳು ಕಂಡುಹಿಡಿದವರ ಮಟ್ಟಿಗೆ ಬುಕ್‌ನಲ್ಲಿ ಇರುತ್ತದೆ ಹೊರತು ರೈತರಿಗೆ ಮುಟ್ಟುವುದಿಲ್ಲ. ಮೊನ್ನೆ ದಿನ ನಾನು ನೋಡಿದೆ. ಹೋಬಳಿ ಮಟ್ಟದಲ್ಲಿ ಕೃಷಿ ಇಲಾಖೆ ಇತ್ತೀಚಿನ ದಿನಗಳಲ್ಲಿ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ನನಗೆ ತಿಳಿದ ಮಟ್ಟಿಗೆ, ಕೃಷಿ ಮತ್ತು ತೋಟಗಾರಿಕೆ ಇಲಾಖೆ ಹೋಬಳಿ ಮಟ್ಟದಲ್ಲಿ ಜಂಟಿ ಕಾರ್ಯಕ್ರಮವನ್ನು ಹಾಕಿಕೊಂಡಿದೆ. 'ಇಲಾಖೆಯ ನಡಿಗೆ ರೈತರ ಮನೆ ಬಾಗಿಲಿಗೆ' ಎಂಬ ಬಹಳ ಒಳ್ಳೆಯ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಅದನ್ನು ಪಂಚಾಯತಿಯವರು ಒಂದು ವ್ರತದಂತೆ ಮಾಡಿ, ಪ್ರತಿ ಪಂಚಾಯತಿ ರೈತರ ಜೊತೆ ಸಂವಾದ ಮಾಡಿದರೆ, ರೈತರಿಗೆ ಅದರ ಅನುಭವವಾಗುತ್ತದೆ, ಇಲಾಖೆಯ ಎಲ್ಲಾ ಯೋಜನೆಗಳು ಬಗ್ಗೆ, ಅದು ಪಶುಸಂಗೋಪನಾ ಇಲಾಖೆ ಇರಬಹುದು, ಕೃಷಿ ಭಾಗ್ಯ ಇರಬಹುದು, ಸಾವಯವ ಕೃಷಿ ಇರಬಹುದು, ಇದೆಲ್ಲದರ ಬಗ್ಗೆ ರೈತರಿಗೆ ಮಾಹಿತಿ ಕೊಟ್ಟಾಗ ಮಾತ್ರ ರೈತರು ತಮ್ಮ ಕೃಷಿ ವ್ಯವಸ್ಥೆಯಲ್ಲಿ ಬದಲಾವಣೆ ಮಾಡತಕ್ಕಂಥದ್ದಕ್ಕೆ ಹೆಚ್ಚಿನ ಒತ್ತನ್ನು ಕೊಡುತ್ತಾರೆ. ಮೊನ್ನೆ ಹೋಬಳಿ ಮಟ್ಟದಲ್ಲಿ ಸಂಪೂರ್ಣ ಮಾಹಿತಿ ಕೊಡುವ ಕಾರ್ಯಕ್ರಮ ಏನು ಮಾಡಿದ್ದಾರೆ, ಇದೊಂದು ಯಶಸ್ವಿ ಕಾರ್ಯಕ್ರಮವಾಗಿದೆ. ಇನ್ನು ಹೆಚ್ಚು ಆಂದೋಲನದ ರೀತಿಯಲ್ಲಿ ರೈತರಿಗೆ ಮಾಹಿತಿ ಕೊಡುವ ಕೆಲಸ ಆದರೆ ಮಾತ್ರ ಆ ಕೆಲಸ ಮಾಡಿದಂತಾಗುತ್ತದೆ. ಅತಿವೃಷ್ಟಿ ಬಂದಂತಹ

ಸಂದರ್ಭದಲ್ಲಿ ರೈತರು ಮಾಡಿದ ಬಿತ್ತನೆ ಹಾಳಾಗುತ್ತದೆ. ನಮ್ಮಲ್ಲಿ ಮಳೆಗಾಲದಲ್ಲಿ ಕೃತಕ ನೆರೆ ಬರುತ್ತದೆ. ರೈತರು ಕಷ್ಟಪಟ್ಟು ಬಿತ್ತನೆ ಮಾಡಿರುತ್ತಾರೆ, ಆದರೆ ಅತಿವೃಷ್ಟಿಯಿಂದ ಬಿತ್ತನೆ ಮಾಡಿದ ಬೆಳೆ ಸಂಪೂರ್ಣವಾಗಿ ಕೊಚ್ಚಿ ಹೋಗುತ್ತದೆ. ಆದರೆ ಇವರು ರೈತರಿಗೆ ಏನು ಪರಿಹಾರ ಕೊಡುತ್ತಿದ್ದಾರೆ, ಅದರಿಂದ ಅವರು ಬಿತ್ತನೆ ಮಾಡಿದ ಬೀಜದ ಬೆಲೆ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಯಾವುದೋ ಜಮಾನದಲ್ಲಿ ಕೃಷಿ ಹಾನಿಗೆ ಕೊಟ್ಟಿರತಕ್ಕಂತಹ ದರ ಇದೆ, ಅದನ್ನು ತೆಗೆದು ಹಾಕಬೇಕು. ರೈತರಿಗೆ ಕೃಷಿಯಿಂದ ಆದ ನಷ್ಟದ 50% ಆದರೂ ರೈತರಿಗೆ ಸಿಗುವ ಕೆಲಸ ಆಗಬೇಕು. ಯಾವುದೋ ಜಮಾನದಲ್ಲಿ ಮಾಡಿದ ಕಾನೂನು, ಇವತ್ತೂ ಅದೇ ಕಾನೂನು ಇದೆ. ಅದನ್ನು ಬದಲಾವಣೆ ಮಾಡಿ ರೈತರಿಗೆ ವಿಶ್ವಾಸ ಮೂಡಿಸುವಂತಹ ಕೆಲಸ ಮಾಡಬೇಕು. ರೈತರಲ್ಲಿ ನಂಬಿಕೆ ಹುಟ್ಟಿಸುವಂತಹ ಕೆಲಸ ಮಾಡಬೇಕು. ಇಲ್ಲದಿದ್ದರೆ ಜನ ಇವತ್ತು ಜನ ಕೃಷಿ ಬಿಟ್ಟು ಬೇರೆ ವ್ಯವಸ್ಥೆಗೆ ಹೋಗುತ್ತಾರೆ. ಮುಂದಿನ ದಿನಗಳಲ್ಲಿ ಇದೇ ರೀತಿ ಆದರೆ ಆಹಾರದ ಕೊರತೆ ಉದ್ಭವವಾಗುತ್ತದೆ. ಆಹಾರದ ಕೊರತೆ ಉದ್ಭವವಾಗಬಾರದು ಎಂದರೆ ರೈತರಿಗೆ ವಿಶೇಷವಾದ ಪ್ಯಾಕೇಜ್ ಅನ್ನು ತಾವು ಕೊಡಬೇಕು. ಆ ರೈತನಿಗೆ ವಿಶ್ವಾಸ ಮೂಡಿಸುವಂತಹ ಕೆಲಸವನ್ನು ಕೃಷಿ ಇಲಾಖೆ ಮೂಲಕ ಮಾಡಿದರೆ ಮಾತ್ರ ರೈತರಿಗೆ ಉತ್ತೇಜನ ಕೊಟ್ಟ ಹಾಗಾಗುತ್ತದೆ. ಮಲೆನಾಡಿನಲ್ಲಿ ಬಂದಂತಹ ಗಾಳಿ ಮಳೆಯಿಂದ ಸಂಪೂರ್ಣವಾದ ಬಾಳೆ ತೋಟ ನಾಶವಾಗಿ ಹೋಯಿತು. ಆ ಬಾಳೆ ತೋಟಕ್ಕೆ ಕೊಡುವಂತಹ ಪರಿಹಾರ ನೋಡಿದರೆ ಬಹುಶಃ ಅವರಿಗೆ ಅಪ್ಲಿಕೇಷನ್ ಹಾಕಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ ಅಪ್ಲಿಕೇಷನ್‌ಗೆ ಬರುವಂತಹ ಹಣ ಎಷ್ಟು ಇದೆ? ಅದನ್ನೆಲ್ಲಾ ಬದಲಾವಣೆ ಮಾಡಿ ರೈತರಿಗೆ ಹೆಚ್ಚಿನ ನೆರವನ್ನು ಕೊಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕು. ಬಹಳ ವಿಶೇಷವಾಗಿ ತೋಟಗಾರಿಕೆ ಇಲಾಖೆ ಕೆಲಸ ಮಾಡಬೇಕು. ನಮ್ಮ ಭಾಗದಲ್ಲಿ ತೆಂಗಿನ ತೋಟ ಇವೆ. ಸಂಪೂರ್ಣ ಗಾಳಿ ಮಳೆಯಿಂದ ತೋಟದಲ್ಲಿ ತೆಂಗಿನ ಮರಗಳು ಬಿದ್ದು ಹೋಗಿವೆ. ಅವರಿಗೂ ಹೆಚ್ಚಿನ ಪರಿಹಾರವನ್ನು ಕೊಡಬೇಕು. ತೆಂಗು ಹಾಗೂ ಅಡಿಕೆ ಬೆಳೆ ಬೆಳೆಯುವ ರೈತರಿಗೆ ಹೆಚ್ಚಿನ ಸಹಾಯವನ್ನು ಮಾಡಬೇಕೆಂದು

ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ಬಿ.ಆರ್. ಪಾಟೀಲರೇ, ಹತ್ತು ನಿಮಿಷದಲ್ಲಿ ಮುಗಿಸಿ.

ಶ್ರೀ ಪಿ. ರಾಜೀವ್:- ಮಾನ್ಯ ಉಪಾಧ್ಯಕ್ಷರೆ, ನಮ್ಮ ಪಕ್ಷದಲ್ಲಿ ಮೂರು ಜನ ಸದಸ್ಯರಿದ್ದಾರೆ. opposition parties ನಲ್ಲಿ ನಮ್ಮದು ಮೂರನೇ ಅತಿ ದೊಡ್ಡ ಪಕ್ಷವಾಗಿದೆ. ದಯವಿಟ್ಟು ಮಾನ್ಯ ಬಿ.ಆರ್. ಪಾಟೀಲ್‌ರವರು ಮಾತನಾಡಿದ ನಂತರ ನಮಗೂ ಮಾತನಾಡಲು ಅವಕಾಶ ಕೊಡಬೇಕು.

ಉಪಾಧ್ಯಕ್ಷರು:- ಆಯಿತು, ನಿಮಗೂ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ಜೆ.ಟಿ. ಪಾಟೀಲ್:- ಬಿಜೆಪಿಯವರು ಮಾತನಾಡಿ ಮುಗಿಸಿದ ಮೇಲೆ ನನಗೆ ಮಾತನಾಡಲು ಅವಕಾಶ ಕೊಡುತ್ತೀರಿ ಎಂದು ನಾವು ತಿಳಿದುಕೊಂಡಿದ್ದೇವು.

ಉಪಾಧ್ಯಕ್ಷರು:- ಎಲ್ಲರಿಗೂ ಒಬ್ಬೊಬ್ಬರಾಗಿ ಅವಕಾಶ ಕೊಡುತ್ತೇನೆ. ಮಾನ್ಯ ಪಾಟೀಲರೆ, ದಯವಿಟ್ಟು 10 ನಿಮಿಷಗಳಲ್ಲಿ ಮಾತನಾಡಿ ಮುಗಿಸಿ.

ಶ್ರೀ ಬಿ.ಆರ್. ಪಾಟೀಲ್ (ಆಳಂದ):- ಮಾನ್ಯ ಉಪಾಧ್ಯಕ್ಷರೆ, ಇವತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಹಾಗೂ ಕೃಷಿ ಸಚಿವರು ತಮ್ಮ ಬೇಡಿಕೆಗಳ ಅಂಗೀಕಾರಕ್ಕೆ ಸದನದ ಒಪ್ಪಿಗೆಯನ್ನು ಕೇಳಿದ್ದಾರೆ, ಇದರ ಬಗ್ಗೆ ಕೆಲವು ವಿಚಾರಗಳನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರಾದ ಹೆಚ್.ಕೆ. ಪಾಟೀಲ ಅವರ ಕಾಳಜಿ, ಅವರ ಕಳಕಳಿ ಮತ್ತು ಅವರ ಪ್ರಾಮಾಣಿಕ ಪ್ರಯತ್ನವನ್ನು ನಾವೆಲ್ಲರೂ ಮೆಚ್ಚಿಕೊಳ್ಳಬೇಕಾಗುತ್ತದೆ. ಏಕೆಂದರೆ, ಇವತ್ತು ಏನು ಈ ವ್ಯವಸ್ಥೆಯಲ್ಲಿ ಜನರ ಲಕ್ಷಾಂತರ ಸಮಸ್ಯೆಗಳು ಬಗೆಹರಿಯಬೇಕಾದರೆ, ಇವತ್ತು ಈ ಪಂಚಾಯತ್ ರಾಜ್ ವ್ಯವಸ್ಥೆ ಗಟ್ಟಿಗೊಳಿಸಲೇಬೇಕು, ಅದನ್ನು ನಾವು ಮುಂದುವರೆಸಿಕೊಂಡು

ಹೋಗಬೇಕಾಗುತ್ತದೆ. ಈ ವ್ಯವಸ್ಥೆಯಲ್ಲಿ ನಾವು ಒಬ್ಬೊಬ್ಬರಿಗೆ ಒಂದೊಂದು ಜವಾಬ್ದಾರಿಯನ್ನು ಹಂಚಿಕೊಂಡಿದ್ದೇವೆ. ಪಾರ್ಲಿಮೆಂಟಿಗೆ ಒಂದು ಜವಾಬ್ದಾರಿ, ವಿಧಾನಸಭೆ, ವಿಧಾನಪರಿಷತ್ತಿಗೆ ಒಂದು ಜವಾಬ್ದಾರಿ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಿಗೆ ಸಹಾ ಪ್ರತ್ಯೇಕ ಜವಾಬ್ದಾರಿ ಇದೆ. ಇವತ್ತು ಈ ಒಂದು ಸ್ಥಳೀಯ ಸಂಸ್ಥೆಗಳಿಗೆ ನಾವು local self Government ಎಂದು ಹೇಳುತ್ತೇವೆ. Government ಸ್ವಯಂ ಆಡಳಿತ ಸಂಸ್ಥೆಗಳ ಬಗ್ಗೆ ಬಹಳ ದೊಡ್ಡ ಕನಸು ಕಲ್ಪನೆ ನಾವು ಇಟ್ಟುಕೊಂಡಿದ್ದೇವೆ. ಅದಕ್ಕೆ ಗಾಂಧೀಜಿಯವರು ಕೂಡ ಗ್ರಾಮ ಸ್ವರಾಜ್ಯ ಎಂದು ಹೇಳಿದ್ದಾರೆ. ಯಾರೂ ಇದಕ್ಕೆ subordinate ಆಗಬಾರದು, ಅದು ಗ್ರಾಮ ಸ್ವರಾಜ್ಯ ಆಗಬೇಕು. ಈ ಪಂಚಾಯತಿ ಎನ್ನುವ ಪದ ಇವತ್ತಿಗೆ ಬಂದಿಲ್ಲ. ಪಂಚಾಯತಿ ಎನ್ನುವ ಪದ ಆದಿ ಕಾಲದಿಂದಲೂ ಕೂಡ ನಮ್ಮ ಸಮಾಜದ ವ್ಯವಸ್ಥೆಯಲ್ಲಿ ಬಂದಿತ್ತು. ಆದರೆ ಅವತ್ತಿನ ಸಂದರ್ಭದಲ್ಲಿ ಆಯಾ ಸಮಸ್ಯೆಗಳನ್ನು ಮಾತ್ರ ಪಂಚಾಯತಿಗಳು ನೋಡಿಕೊಳ್ಳುತ್ತಿದ್ದವು. ಸಾಮಾಜಿಕ ನ್ಯಾಯದ ಪರಿಕಲ್ಪನೆ ಬಂದಿರಲಿಲ್ಲ. ಕೆಲವು ಪ್ರಮುಖರು ಸೇರಿ ಊರಿನ ಸಮಸ್ಯೆಗಳ ಬಗ್ಗೆ ವ್ಯವಸ್ಥೆಗಳ ಬಗ್ಗೆ ಚಿಂತನೆ ಮಾಡಿ, ಚರ್ಚೆ ಮಾಡಿ, ಬಗೆಹರಿಸುವಂತಹ ಕೆಲಸವನ್ನು ಮಾಡುತ್ತಿದ್ದರು. ಯಾವತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಬಂದಿತು, ಮಹಾತ್ಮ ಗಾಂಧೀಜಿಯವರು ಏನು ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು ಕೊಟ್ಟರು, ಅದಾದ ಮೇಲೆ ಸಂವಿಧಾನ ರಚನೆ ಆದ ಮೇಲೆ ನಾವು ಈ ವ್ಯವಸ್ಥೆಯನ್ನು ಅನುಷ್ಠಾನ ಮಾಡುವುದಕ್ಕೆ ಕೆಲವು ರಾಜ್ಯಗಳಲ್ಲಿ ಪ್ರಯತ್ನ ನಡೆಯಿತು, ಇನ್ನು ಕೆಲವು ರಾಜ್ಯಗಳಲ್ಲಿ ಈ ಪ್ರಯತ್ನ ಆಗಲಿಲ್ಲ. ಆದರೂ 73ನೇ ಸಂವಿಧಾನ ತಿದ್ದುಪಡಿ ತರುವುದರ ಮುಖಾಂತರ ಇಡೀ ದೇಶದಲ್ಲಿ ಈ ವ್ಯವಸ್ಥೆಯನ್ನು ಕಾನೂನು ಬದ್ಧವಾಗಿ ಮಾಡಲೇಬೇಕು ಎನ್ನುವಂತಹ ಒಂದು ಕಾನೂನನ್ನು ಮಾಡಿದ ಮೇಲೆ ಇವತ್ತು ಪಂಚಾಯತ್ ರಾಜ್ ವ್ಯವಸ್ಥೆ ಇಡೀ ನಮ್ಮ ದೇಶದಲ್ಲಿ ಕಾರ್ಯಗತವಾಗುತ್ತಿದೆ. ಮಾನ್ಯ ಉಪಾಧ್ಯಕ್ಷರೆ, ಈ ಒಂದು ವಿಕೇಂದ್ರೀಕರಣ ವ್ಯವಸ್ಥೆ ಇದು ಬರೀ ಒಂದು ವ್ಯವಸ್ಥೆ ಎಂದು ಹೇಳುವುದಕ್ಕಾಗುವುದಿಲ್ಲ. ಇದಕ್ಕೆ ಒಂದು ಸಿದ್ಧಾಂತ ಇದೆ. ಏಕೆಂದರೆ, ಅಶೋಕ್ ಮೆಹ್ತಾರವರು ಇದು ಬರೀ democracy ಅಲ್ಲ,

decentralized democracy ಎಂದು ಹೇಳಿದರು. ಹಾಗಾಗಿ ಇದಕ್ಕೆ ವಿಶೇಷವಾದ ಅರ್ಥ ಇದೆ. ಈ decentralized democracy ಯಲ್ಲಿ ಇವತ್ತು ನಾವು ಈ ಸಾಮಾನ್ಯ ಜನರಿಗೆ, ನಮ್ಮ ದೇಶದ ಕಟ್ಟಕಡೆಯ ಮನುಷ್ಯನಿಗೆ, ಎಲ್ಲಾ ತರಹದ ಸರ್ಕಾರದ ಸವಲತ್ತುಗಳನ್ನು ಕೊಡುತ್ತಾ ಇವತ್ತು ಅವರಿಗೆ ತಮ್ಮದೇ ಆದಂಥ ವ್ಯವಸ್ಥೆಯನ್ನು ನಿರ್ಮಾಣ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕಾಗಿದೆ. ಇದರಲ್ಲಿ ಬರೇ ಪಂಚಾಯತ್ ರಾಜ್ ವ್ಯವಸ್ಥೆಯೆಂದರೆ ಬಹಳ ಜನರಿಗೆ ತಕ್ಷಣ ಏನು ಕಲ್ಪನೆ ಬರುತ್ತದೆಂದರೆ, ಗ್ರಾಮದಲ್ಲಿ ನೀರು, ಸ್ವಚ್ಛತೆ, ರಸ್ತೆ, ಇತ್ಯಾದಿ ಈ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಮಾತ್ರ ಪಂಚಾಯತ್ ರಾಜ್ ವ್ಯವಸ್ಥೆಯ ಅರ್ಥವೆಂದು ಬಹಳಷ್ಟು ಜನರು ತಿಳಿದುಕೊಂಡಿದ್ದೇವೆ ಮತ್ತು ಆ ರೀತಿಯೆಂದೇ ಬಹಳಷ್ಟು ಜನರು ಕೂಡ ನಂಬಿಕೊಂಡಿದ್ದಾರೆ. ಆದರೆ ಇವತ್ತು ಈ ಒಂದು ಪಂಚಾಯತ್ ರಾಜ್ ಕಾನೂನು ಮತ್ತು ನಿಮ್ಮ ವಾರ್ಷಿಕ ವರದಿ ಹಾಗೂ ಈ ಮುಂಗಡ ಪತ್ರ, ಇದನ್ನೆಲ್ಲಾ ಅವಲೋಕನ ಮಾಡಿದಾಗ, ನಿಜವಾಗಿ ನಾವೇನು ಇಲ್ಲಿ ಕಾನೂನಿನಲ್ಲಿ ಬರೆದುಕೊಂಡಿದ್ದೇವೆಯೋ, ಇದನ್ನು ನಿಜವಾಗಿಯೂ ಅನುಷ್ಠಾನ ಮಾಡುವುದಕ್ಕೆ ಹೊರಟು ಅದು ಯಶಸ್ವಿಯಾಗಿದ್ದರೆ ಖಂಡಿತವಾಗಿಯೂ ಕೂಡ, ಇವತ್ತೇನು ಶಾಸಕರುಗಳಿಗೆ ದಿನನಿತ್ಯ ನೀರಿಲ್ಲ, ಲೈಟಿಲ್ಲ, ರಸ್ತೆ ಶುಚಿ ಮಾಡಿಲ್ಲವೆನ್ನುವಂಥ ಸಮಸ್ಯೆಗಳ ಬಗ್ಗೆ ಜನರು ನಮಗೆ ಏನು ಫೋನ್ ಮಾಡುತ್ತಾರಲ್ಲ, ಅದು ಖಂಡಿತವಾಗಿ ತಪ್ಪುವುದಕ್ಕೆ ಸಾಧ್ಯತೆಯಿದೆ. ಇವತ್ತು ಜಿಲ್ಲಾ ಪಂಚಾಯತಿಯೇನಿದೆ, ಇದು ಸಾಮಾನ್ಯ ಸಂಸ್ಥೆಯಲ್ಲ. ಸುಮಾರು 29 ಇಲಾಖೆಗಳನ್ನು ನಿರ್ವಹಣೆ ಮಾಡುವಂಥ ಜವಾಬ್ದಾರಿ ಜಿಲ್ಲಾ ಪಂಚಾಯತಿ ಮೇಲಿದೆ. ಕೇವಲ ರಸ್ತೆ, ನೀರು, ಲೈಟು, ಚರಂಡಿ, ಕುಡಿಯುವ ನೀರನ್ನು ಒದಗಿಸುವುದಷ್ಟೇ ಅಲ್ಲ, 29 ಇಲಾಖೆಗಳ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡುವುದು ಈ ಜಿಲ್ಲಾ ಪಂಚಾಯತಿ ವ್ಯವಸ್ಥೆಯ ಜವಾಬ್ದಾರಿಯಾಗಿದೆ. ಆದರೆ ನನ್ನ ಅನುಭವದಿಂದ ಹೇಳುವುದೇನೆಂದರೆ, ಹಿಂದೆ ರಾಮಕೃಷ್ಣ ಹೆಗಡೆಯವರು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿ ವ್ಯವಸ್ಥೆಯನ್ನು ತಂದಿದ್ದರು. ಅವತ್ತು ನಿಜವಾಗಿ ಕೂಡ ಈ ವ್ಯವಸ್ಥೆ ಬಗ್ಗೆ ನಂಬಿಕೆ ಬಂದಿತ್ತು. ಆ ಒಂದು ವ್ಯವಸ್ಥೆ

ಬೇರು ಬಿಡುತ್ತಿತ್ತು ಮತ್ತು ಜನರು ಬಹಳ ಸಂತುಷ್ಟರಾಗಿದ್ದರು. ಅಲ್ಲಿ ಕೆಲಸ ಕಾರ್ಯಗಳು ಕೂಡ ಆಗುತ್ತಿತ್ತು. ಏಕೋ ಏನೋ ಗೊತ್ತಿಲ್ಲ, ಆ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡುವಂಥ ಕೆಲಸ ಈ ರಾಜ್ಯದಲ್ಲಿ ಆಯಿತು. ಅದು ಆಗಬಾರದಾಗಿತ್ತು, ಏಕೆಂದರೆ ಒಂದು ಸಲ ಒಂದು ಹೊಸ ವ್ಯವಸ್ಥೆಯನ್ನು ಜಾರಿಗೆ ತಂದಾಗ, ಅದನ್ನು ಅನುಷ್ಠಾನ ಮಾಡಬೇಕಾದರೆ, ಅದಕ್ಕೆ ಸಮಯ ಬೇಕಾಗುತ್ತದೆ. ಆದರೆ ಅವತ್ತು ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ನಜೀರ್‌ಸಾಬ್‌ರವರ ಪ್ರಯತ್ನದಿಂದ ಒಂದು ಹೊಸ ಯುಗ ಪ್ರಾರಂಭವಾಗಿತ್ತು, ಆ ಪ್ರಯತ್ನಕ್ಕೆ ಸ್ವಲ್ಪ ಅಡ್ಡಿ ಬಂತು. ಇವತ್ತು ಒಂದು ಹೊಸ ವ್ಯವಸ್ಥೆಯನ್ನು ತರುವಂಥದ್ದನ್ನು ನಾವು ಮಾಡುತ್ತಿದ್ದೇವೆ. ಒಟ್ಟಾರೆ ಉದ್ದೇಶ ನಮ್ಮ ಗ್ರಾಮೀಣ ಭಾಗದ ಜನತೆಯ ಬದುಕನ್ನು ಹಸನು ಮಾಡಬೇಕು, ಸಮಗ್ರವಾಗಿ ಅವರು ಅಭಿವೃದ್ಧಿಯಾಗಬೇಕು, ಅವರು ಸ್ವಾವಲಂಬನೆಯ ಜೀವನ ನಡೆಸಬೇಕು ಮತ್ತು ಘನತೆ ಗೌರವದ ಬದುಕನ್ನು ಅವರು ನಡೆಸಬೇಕು ಎಂಬುದಾಗಿದೆ. ಮಾನ್ಯ ಹೆಚ್.ಕೆ. ಪಾಟೀಲರು ಇದನ್ನು ಒಪ್ಪುತ್ತಾರೆಂದು ನಾನು ತಿಳಿದುಕೊಳ್ಳುತ್ತೇನೆ. ನನ್ನ ಪ್ರಕಾರ ಉದ್ದೇಶ ಬಹಳ ಇವೆ. ಕೇವಲ ಗ್ರಾಮೀಣಾಭಿವೃದ್ಧಿ ಎಂದ ಕೂಡಲೇ ನೀರು ಕೊಡುವುದು, ಸ್ವಚ್ಛತೆ ಮಾಡುವುದು, ರಸ್ತೆ ಮಾಡುವುದು, ಚರಂಡಿ ಮಾಡುವುದು, ಶೌಚಾಲಯ ಮಾಡುವುದೆಂದು ಕೆಲವೇ ಸೀಮಿತವಾದ ಕಲ್ಪನೆಯಲ್ಲಿ ನಾವು ಅದನ್ನು ನೋಡುತ್ತೇವೆ. ಅದನ್ನು ಮಾಡಲೇಬೇಕು. ಆದರೆ ನಮ್ಮ ಕಾನೂನಿನ ಉದ್ದೇಶ ಮತ್ತು ಆಶಯವಿದೆಯಲ್ಲಾ, ಅದರ ವ್ಯಾಪ್ತಿ ಬಹಳ ದೊಡ್ಡದಿದೆ. ಅಲ್ಲಿ ಸಮಗ್ರವಾದ ಅಭಿವೃದ್ಧಿಯಾಗಬೇಕು, ಸ್ವಾವಲಂಬನೆಯ ಜೀವನವಾಗಬೇಕು ಮತ್ತು ಘನತೆ ಗೌರವದ ಬದುಕನ್ನು ಅವರು ನಡೆಸಬೇಕು. ಇದು ಈ ಇಲಾಖೆಯ ಉದ್ದೇಶ ಮತ್ತು ಕಾನೂನಿನ ಗುರಿ. ಇದನ್ನು ಮಾಡುವುದಕ್ಕೆ ನಾವೆಲ್ಲಾ ಇವತ್ತು ಹೊರಟಿದ್ದೇವೆ. ಇದರಲ್ಲಿ ಅನೇಕ ಸಮಸ್ಯೆಗಳು ಬರುತ್ತಿವೆ. ಇದರ ಮಧ್ಯೆ ಜಗತ್ತಿನಲ್ಲಿ ಬದಲಾಗುವಂಥ ಪರಿಸ್ಥಿತಿಯಲ್ಲಿ ಇವತ್ತು ನಗರೀಕರಣ ಬಹಳ ವ್ಯಾಪಕವಾಗಿ ನಡೆಯುತ್ತಿದೆ. World Bank ನಿಂದ ಹಿಡಿದು ಜಾಗತೀಕರಣದ ಹಿನ್ನೆಲೆಯಲಿ ಇವತ್ತು ನಗರೀಕರಣಕ್ಕೆ ಬಹಳ ಭರದ ಸಿದ್ಧತೆಯನ್ನು ಕೂಡ ಮಾಡುತ್ತಿದ್ದೇವೆ ಮತ್ತು

ಅಷ್ಟೇ ಪ್ರಮಾಣದಲ್ಲಿ ಸರ್ಕಾರಗಳು ಜನರು ಕೂಡ ಅದರ ಕಡೆ ಗಮನ ಕೊಡುತ್ತಿದ್ದಾರೆ. ಇದು ಒಂದು ದುರ್ದೈವ. ಗಾಂಧೀಜಿಯವರು ಈ ಹಳ್ಳಿ ಮತ್ತು ಪಟ್ಟಣಗಳ ನಡುವೆ ಬಹು ದೊಡ್ಡ ಕಂದರ ಬೀಳಬಾರದೆಂಬ ಒಂದು ಮಾತನ್ನು ಹೇಳಿದರು. ಆದರೆ ಇವತ್ತು ಕಂದರ ಬೀಳುತ್ತಿದೆ. ಇದು ಬಹಳ ಅನಾಹುತ. ಇವತ್ತು ಪರಿಸ್ಥಿತಿ ಎಲ್ಲಿಗೆ ಬಂದಿದೆಯೆಂದರೆ, ಇವತ್ತು ಯಾರೂ ಕೂಡ ಹಳ್ಳಿಗಳಲ್ಲಿ ವಾಸ ಮಾಡುವುದಕ್ಕೆ ಇಷ್ಟಪಡುತ್ತಿಲ್ಲ. ಹಳ್ಳಿಗಳು ದಿನದಿನಕ್ಕೆ ಸೊರಗುತ್ತಿವೆ. ಹಳ್ಳಿಗಳಿಂದ ಪಟ್ಟಣಕ್ಕೆ ಜನರು ವಲಸೆ ಹೋಗುತ್ತಿದ್ದಾರೆ. ಹೊಟ್ಟೆಪಾಡಿಗೆ ಜನರು ಹೋಗುತ್ತಿರುವುದು ಅನಿವಾರ್ಯ. ಇವತ್ತು ಮೂಲಭೂತ ಸೌಕರ್ಯಗಳಿಲ್ಲವೆನ್ನುವ ಕಾರಣಕ್ಕಾಗಿ ಬಹಳಷ್ಟು ಜನರು ಹಳ್ಳಿಗಳಲ್ಲಿ ವಾಸ ಮಾಡುವುದಕ್ಕೆ ಇಷ್ಟಪಡುತ್ತಿಲ್ಲ. ಅಲ್ಲಿ ಆಸ್ಪತ್ರೆಯಿರುವುದಿಲ್ಲ, ಉತ್ತಮವಾದಂಥ ಶಾಲೆಯಿರುವುದಿಲ್ಲ. ಕುಡಿಯುವುದಕ್ಕೆ ಸ್ವಚ್ಛವಾದ ನೀರು ಸಿಗುವುದಿಲ್ಲ. ಒಳ್ಳೆಯ ಶೌಚಾಲಯವಿರುವುದಿಲ್ಲ, ಇಂಥ ಕಾರಣಗಳಿಗಾಗಿ ಇವತ್ತು ಹಳ್ಳಿಗಳು ಸೊರಗುತ್ತಿವೆ, ಪಟ್ಟಣಗಳು ಬಲಿಷ್ಟವಾಗುತ್ತಿವೆ. ಇದನ್ನು ತಪ್ಪಿಸಲೇಬೇಕು. ಮೊನ್ನೆ ಪ್ರಧಾನ ಮಂತ್ರಿಗಳು ಹೇಳಿರುವುದನ್ನು ನೋಡಿದರೆ ಬಹಳ ಭಯ ಬರುತ್ತದೆ. ಏನು ಸ್ಮಾರ್ಟ್ ಸಿಟಿ ಸಂಕಲ್ಪವೆಂದಿದ್ದಾರೆ, ಖಂಡಿತ ಸ್ವಾರ್ಟ್ ಸಿಟಿಗಳಾಗಲಿ. ಅದೇ ರೀತಿ ಸ್ಮಾರ್ಟ್ ಹಳ್ಳಿಗಳು ಕೂಡ ಆಗಬೇಕು. ಇವತ್ತು ಕೇವಲ ಸ್ಮಾರ್ಟ್ ಸಿಟಿ ಮಾಡಿದರೆ ನಮ್ಮ ದೇಶದ ಸಮಸ್ಯೆ ಬಗೆಹರಿಯುವುದಿಲ್ಲ. ಮೊದಲು ನಮ್ಮ ಹಳ್ಳಿಗಳು ಸುಧಾರಣೆಯಾಗಬೇಕು. ನಮ್ಮ ಹಳ್ಳಿಗಳಿಗೆ ಸಿಗಬೇಕಾದ ಸವಲತ್ತುಗಳು ಸಿಗಬೇಕು. ಅಲ್ಲಿ ಕುಡಿಯುವುದಕ್ಕೆ ನೀರು ಸಿಗಬೇಕು. ಅಲ್ಲಿ ಸ್ವಚ್ಛತೆಯಿರಬೇಕು, ವಿದ್ಯುತ್ ಕೊಡಬೇಕು, ಶಾಲೆಯಿರಬೇಕು, ಆಸ್ಪತ್ರೆಯಿರಬೇಕು, ಇದರ ಬಗ್ಗೆ ಮೊದಲು ಚಿಂತನೆ ಮಾಡಬೇಕು. ಆದರೆ ಕೇವಲ ಸಿಟಿಗಳ ಬಗ್ಗೆ ಇವತ್ತು ಚಿಂತನೆ ಮಾಡುವುದು ನಡೆದಿದೆಯಲ್ಲ, ಇದು ಬಹಳ ದೊಡ್ಡ ಅಪಾಯಕಾರಿ. ಇದರ ಬಗ್ಗೆ ಹೆಚ್ಚಿನ ಚರ್ಚೆ, ವ್ಯಾಖ್ಯಾನ ಮಾಡಬೇಕಾದಂಥ ಅವಶ್ಯಕತೆಯಿದೆ. ಇವತ್ತು ಈ decentralization ಉದ್ದೇಶವೇನೆಂದರೆ, ಜನರ ಅಧಿಕಾರವನ್ನು ಜನರ ಕೈಗೇ ಕೊಡಬೇಕು. ಇದೇ ನಮ್ಮ ಉದ್ದೇಶ. ಅವರ ಅಧಿಕಾರವನ್ನು ಅವರ ಕೈಗೇ ಕೊಡಬೇಕು. ಪ್ರತಿಯೊಂದು ಅಧಿಕಾರ ದೆಹಲಿಯಲ್ಲಿ,

ಬೆಂಗಳೂರಿನಲ್ಲಿ ಹೆಪ್ಪುಗಟ್ಟಿ ಕೂಡಬಾರದು. ಆ ಅಧಿಕಾರ ಹಳ್ಳಿಯವರೆಗೂ ಕೂಡ ಹರಿಯಬೇಕು. ಎಲ್ಲದಕ್ಕೂ ಕೂಡ ಜನರು ಇಲ್ಲಿಗೇ ಬರಬಾರದು. ಅವರ ಸಮಸ್ಯೆಗಳನ್ನು ಅವರೇ ಬಗೆಹರಿಸಿಕೊಳ್ಳಬೇಕು. ಇದು ವಿಕೇಂದ್ರೀಕರಣದ ಮೂಲ ಸಿದ್ಧಾಂತ ಮತ್ತು ಮೂಲ ತತ್ವ. ಆದರೆ ಇವತ್ತು ಮಾನ್ಯ ಹೆಚ್.ಕೆ. ಪಾಟೀಲರಿಗೆ ನಾನು ಹೇಳಬಯಸುವುದೇನೆಂದರೆ, ಇವತ್ತಿಗೂ ಕೂಡ ನಾವು ಪಂಚಾಯತ್‌ರಾಜ್ ವ್ಯವಸ್ಥೆಯನ್ನು ತಂದಿದ್ದೇವೆ, ಪಂಚಾಯತಿಗಳು ರಚನೆಯಾಗಿವೆ, ತಾಲ್ಲೂಕು ಪಂಚಾಯಿತಿಗಳಿವೆ, ಜಿಲ್ಲಾ ಪಂಚಾಯಿತಿಗಳಿವೆ, ಆದರೆ ಅಧಿಕಾರ ಮಾತ್ರ ಅಧಿಕಾರಿಗಳ ಕೈಯಲ್ಲಿದೆ. ಜನಪ್ರತಿನಿಧಿಗಳ ಕೈಯಲ್ಲಿಲ್ಲ. ಇವತ್ತು ವಾಸ್ತವಿಕವಾಗಿ ಅಧಿಕಾರದ ಲಗಾಮು, ಸೂತ್ರ ಹಿಡಿದವರು ಯಾರೆಂದರೆ ಅವರು ಜನಪ್ರತಿನಿಧಿಗಳಲ್ಲ, ಅಧಿಕಾರಿಗಳು ಹಿಡಿದಿದ್ದಾರೆ. ಪಾಪ! ನಮಗೆ ಅವರನ್ನು ನೋಡಿದರೆ ಬೇಜಾರೆನಿಸುತ್ತದೆ. ಇದು ವಿಧಾನಸೌಧಕ್ಕೂ ಕೂಡ ಹೊರತಾಗಿಲ್ಲ. ಇಲ್ಲಿಯೂ ಕೂಡ ಅಧಿಕಾರ ಬಹಳಷ್ಟು ಗಟ್ಟಿಯಾಗಿ ಅಧಿಕಾರಿಗಳ ಕೈಯಲ್ಲಿದೆ. ನಾನು ಎಷ್ಟೋ ಸಲ ಮಂತ್ರಿಗಳ ಹತ್ತಿರ ಹೋಗಿ ನೋಡಿದ್ದೇನೆ. ಅವರು ದುಂಬಾಲು ಬಿದ್ದು ಸೆಕ್ರೆಟರಿಗಳಿಗೆ ಮನವೊಲಿಸಿ ಆದೇಶವನ್ನು ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ರವಿಯವರು ಮಂತ್ರಿಗಳಾಗಿದ್ದವರು ಬಹುಶಃ ಅವರಿಗೆ ಅನುಭವವಿರಬಹುದು, ಇಂದು ನಮ್ಮ ಹಳ್ಳಿಗಾಡಿನಲ್ಲಿ ಇವತ್ತಿಗೂ ಕೂಡ ನಿಜವಾದ ರೀತಿಯಲ್ಲಿ ನಮ್ಮ ಚುನಾಯಿತ ಪ್ರತಿನಿಧಿಗಳ ಕೈಗೆ ಅಧಿಕಾರವನ್ನು ಕೊಟ್ಟಿಲ್ಲ. ಅವರಿಗೆ ಅಧಿಕಾರ ಇನ್ನೂ ಸಿಕ್ಕಿಲ್ಲ. ಇವತ್ತಿಗೂ ಕೂಡ ಅಧಿಕಾರಿಗಳ ಕೈಯಲ್ಲಿಯೇ ಅಧಿಕಾರವಿದೆ. ಮಾನ್ಯ ಹೆಚ್.ಕೆ. ಪಾಟೀಲರು ಇದೊಂದನ್ನು ತಪ್ಪಿಸಿದರೆ ನಮ್ಮ ಪಂಚಾಯತ್ ರಾಜ್ ವ್ಯವಸ್ಥೆಗೆ ಬಹಳ ದೊಡ್ಡ ಶಕ್ತಿ ಬರುತ್ತದೆ. ಅಧಿಕಾರಿಗಳ ಕೈಯಲ್ಲಿ ಅಧಿಕಾರವಿರಬಾರದು. ನಮ್ಮ ಚುನಾಯಿತ ಪ್ರತಿನಿಧಿಗಳ ಕೈಯಲ್ಲಿ ಅಧಿಕಾರವಿರಬೇಕು. ಆದರೆ ಇವತ್ತು ನಾವು ನೋಡುತ್ತೇವೆ, ಆ ಪಂಚಾಯಿತಿ ಛೇರ್ಮನ್ ಆದವನೇ ನಮ್ಮ ಹಳ್ಳಿಯಿಂದ ಸೆಕ್ರೆಟರಿ ಹುಡುಕಿಕೊಂಡು ಆಳಂದಕ್ಕೆ ಬರುತ್ತಾನೆ, ಗುಲ್ಬರ್ಗಾಕ್ಕೆ ಬರುತ್ತಾನೆ. ಇವರು ಅವರನ್ನು ಹುಡುಕಿಕೊಂಡು ಹೋಗಬೇಕು, ಆದರೆ ಅವರೇ ಕೈಚೀಲ ಹಿಡಿದುಕೊಂಡು ಇವರನ್ನು ಹುಡುಕಿಕೊಂಡು ಬರುತ್ತಾರೆ. ಈ ಪರಿಸ್ಥಿತಿಯನ್ನು

ಕಣ್ಣಾರೆ ನೋಡುತ್ತಿದ್ದೇವೆ. ಇದು ಬಹಳ ದೊಡ್ಡ ಅಪಾಯಕಾರಿ ಬೆಳವಣಿಗೆ. ಇದನ್ನು ಖಂಡಿತವಾಗಿ ನಿಲ್ಲಿಸಬೇಕು. ಅಧಿಕಾರಿಗಳು ನಿಜವಾಗಿಯೂ ಜನರಿಂದ ನೇರವಾಗಿ ಆಯ್ಕೆಯಾದಂಥವರಲ್ಲ. ಅವರಿಗೆ ಅಭಿವೃದ್ಧಿ ಬಗ್ಗೆ ಅಷ್ಟೊಂದು ಉತ್ತರದಾಯಿತ್ವವಿರುವುದಿಲ್ಲ. ಅವರು ಸಾಮಾನ್ಯವಾಗಿ ತಮ್ಮ ಹಿಡಿತವನ್ನು ಇಟ್ಟುಕೊಂಡು ಈ ಅಧಿಕಾರವನ್ನು ಚಲಾವಣೆ ಮಾಡುತ್ತಿರುತ್ತಾರೆ. ಇವತ್ತು ಈ ಅಧಿಕಾರವನ್ನು ನಮ್ಮ ಚುನಾಯಿತ ಪ್ರತಿನಿಧಿಗಳ ಕೈಗೆ ಕೊಡದೇ ಹೋದರೆ, ವಿಕೇಂದ್ರೀಕರಣದ ವ್ಯವಸ್ಥೆಗೆ, ಪಂಚಾಯತ್ ರಾಜ್ ವ್ಯವಸ್ಥೆಗೆ ಯಾವುದೇ ಅರ್ಥವಿಲ್ಲವೆನ್ನುವಂಥ ಮಾತನ್ನು ನಾನು ನೇರವಾಗಿ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ಈ ಒಂದು ವ್ಯವಸ್ಥೆಯಲ್ಲಿ ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಬಹಳ ದೂರ ದೃಷ್ಟಿಯನ್ನಿಟ್ಟುಕೊಂಡಿದ್ದಾರೆ.

ಉಪಾಧ್ಯಕ್ಷರು:- ಮಾನ್ಯ ಪಾಟೀಲರೆ, ಇವತ್ತು discussion close ಆಗಬೇಕು, demands pass ಆಗಬೇಕು ಮತ್ತು business ಇನ್ನೂ ಬಹಳವಿದ್ದೆ.

ಶ್ರೀ ಬಿ.ಆರ್. ಪಾಟೀಲ್:- ಉಪಾಧ್ಯಕ್ಷರೆ, ನಾನು ಮತ್ತು ಪುಟ್ಟಣ್ಣಯ್ಯನವರು ಮೂರು ದಿವಸದಿಂದ ಮಾತನಾಡಲು ಕಾಯುತ್ತಿದ್ದೇನೆ. ನಮ್ಮಿಬ್ಬರಿಗೂ ಯಾವುದೇ ಪಕ್ಷವಿಲ್ಲ.

ಉಪಾಧ್ಯಕ್ಷರು:- ಅದು ಸರಿ, ನೀವು ಚೆನ್ನಾಗಿ ಮಾತನಾಡುತ್ತಿದ್ದೀರಿ, ಆದರೆ ಹೆಚ್ಚು ಸಮಯವಿಲ್ಲ.

ಶ್ರೀ ಬಿ.ಆರ್. ಪಾಟೀಲ್:- ಸಮಯವಿಲ್ಲ, ಆದರೂ ಕೂಡ ನಾನು ಹೇಳಬೇಕಾಗಿರುವುದನ್ನು ಹೇಳಲೇಬೇಕಲ್ಲ.

ಉಪಾಧ್ಯಕ್ಷರು:- ಆಯಿತು, ಸ್ವಲ್ಪ brief ಆಗಿ ಏನು ಆಗಬೇಕು ಎಂಬುದನ್ನು ಹೇಳಿ.

ಶ್ರೀ ಬಿ.ಆರ್. ಪಾಟೀಲ್:- ಏನು ಆಗಬೇಕು ಎಂಬುದನ್ನೇ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು:- ಇನ್ನು ಐದ್ದತ್ತು ನಿಮಿಷದೊಳಗೆ ಮುಕ್ತಾಯ ಮಾಡಿ.

ಶ್ರೀ ಬಿ.ಆರ್. ಪಾಟೀಲ್:- ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಸುಮಾರು ಒಂಭತ್ತು ಇಲಾಖೆಗಳೀಗೆ ಅನುಷ್ಟಾನದ ಅಧಿಕಾರವಿದೆ. ಕೇವಲ ಪಂಚಾಯತ್ ರಾಜ್ ವ್ಯವಸ್ಥೆ ಮಾತ್ರವಲ್ಲ. ಅರಣ್ಯ, ತೋಟಗಾರಿಕೆ, ಕೃಷಿ, ಜಲಾನಯನ, ರೇಷ್ಮೆ, ಪಶುಸಂಗೋಪನೆ, ಮೀನುಗಾರಿಕೆ, ಸಣ್ಣ ನೀರಾವರಿ, ಪಂಚಾಯತ್ ರಾಜ್ ಮತ್ತು ಇಂಜಿನಿಯರಿಂಗ್ ಇಲಾಖೆಗಳು ಅನುಷ್ಟಾನ ಮಾಡುವ ಕೆಲಸವನ್ನು ಈ ಪಂಚಾಯತ್ ರಾಜ್ ಸಂಸ್ಥೆಗಳು ಮಾಡುತ್ತದೆ. ಆದರೆ ಇವತ್ತು ನಾನು ನನ್ನ ಅನುಭವದ ದೃಷ್ಟಿಯಿಂದ ಹೇಳುತ್ತೇನೆ. ಬಹುಶ: ಇಲ್ಲಿ ಅನೇಕ ಅನುಭವಸ್ಥ ಶಾಸಕರು ಕುಳಿತಿದ್ದಾರೆ. ಈ ಎಲ್ಲಾ ಇಲಾಖೆಗಳ ಬಗ್ಗೆ, ನಮ್ಮ ಹಳ್ಳಿಗಾಡಿನಲ್ಲಿ, ಈ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಏನಾದರೂ ಕೆಲಸ ಕಾರ್ಯಗಳು ನಡೆಯುತ್ತಿವೆಯೇ? ಇಲಾಖೆಯವರು ನೇರವಾಗಿ ಬಂದು ಮಾಡುತ್ತಿದ್ದಾರೆ, ನಿಜ. ಆದರೆ ಈ ಪಂಚಾಯತ್ ರಾಜ್ ವ್ಯವಸ್ಥೆಗೆ ಒಳಪಟ್ಟಿರುವಂತಹ ಇಲಾಖೆಗಳಲ್ಲಿ ಅಧಿಕಾರಿಗಳು ತಾವು ಮಾಡಬೇಕಾಗಿರುವಂತಹ ಕರ್ತವ್ಯವನ್ನು ಬೇಕಾದವರು ಮಾಡುತ್ತಾರೆ, ಬೇಡವಾದವರು ಬಿಡುತ್ತಾರೆ. ಆದರೆ ಈ ದೃಷ್ಟಿಯಿಂದ 9 ಇಲಾಖೆಗಳ ಅನುಷ್ಠಾನ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ಬಹಳ ದೊಡ್ಡ ಜವಾಬ್ದಾರಿ ಇದೆ. ಇಷ್ಟೊತ್ತು ಮಾನ್ಯ ಬೊಮ್ಮಾಯಿಯವರು ಕೃಷಿ ಬಗ್ಗೆ ಮಾತನಾಡಿದರು. ಕೃಷಿ, ಅರಣ್ಯ, ಅದೇ ರೀತಿ ಜಲಾನಯನ ಇಲಾಖೆ ಕೂಡ ಜಿಲ್ಲಾ ಪಂಚಾಯತ್‌ಗೆ ಸಂಬಂಧಪಟ್ಟಿದೆ ಈ ರೀತಿ ಜಿಲ್ಲಾ ಪಂಚಾಯತ್‌ಗೆ ಬಹಳ ಪ್ರಮುಖವಾದ ಜವಾಬ್ದಾರಿ ಇದೆ. ಅಲ್ಲಿ ಸಿಬ್ಬಂದಿ ಕೊರತೆ ಬಹಳಷ್ಟು ಇದೆಯೆಂಬ ಮಾತನ್ನು ನಾನು ನಿನ್ನೆಯಿಂದ ಕೇಳುತ್ತಿದ್ದೇನೆ. ನನ್ನ ತಾಲ್ಲೂಕಿನಲ್ಲಿ 39 ಪಂಚಾಯತಿಗಳಿವೆ, ಅಲ್ಲಿ ಕೇವಲ 9 ಜನ PDO ಗಳು ಮಾತ್ರ ಇದ್ದಾರೆ. ಒಬ್ಬೊಬ್ಬರಿಗೆ ನಾಲ್ಕಾನ್ನಲ್ಕು ಪಂಚಾಯತಿಗಳ in-charge ಕೊಟ್ಟಿದ್ದೇವೆ. ಅವರು ಯಾವ ಕಡೆಗೂ ಹೋಗಿ ನಿರ್ವಹಣೆ ಮಾಡುವುದಕ್ಕೆ ಆಗುತ್ತಿಲ್ಲ. ಜೂನಿಯರ್ ಇಂಜಿನಿಯರ್‌ಗಳು ಇಲ್ಲ. ಈಗ ತಾವು ಹೊಸದಾಗಿ

ಪಂಚಾಯತ್‌ಗಳನ್ನು ಮಾಡಿದ್ದೀರಿ. ಪತ್ರಿಕೆಯಲ್ಲಿ ಒಂದು ವಿಚಾರ ಬಂದಿತ್ತು. ತಾವು ಈಗ ಹೊಸ ಪಂಚಾಯತಿಗಳನ್ನು ಮಾಡಿದ್ದೀರಿ ಪಂಚಾಯತ್ ಚುನಾವಣೆಯಾಗಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳು ಆಯ್ಕೆಯಾದರು, ಅವರುಗಳನ್ನು ಎಲ್ಲಿ ಕರೆದುಕೊಂಡು ಹೋಗಿ ಕೂರಿಸುತ್ತೀರಿ? ಎಲ್ಲಿ ಸಭೆ ನಡೆಸುತ್ತೀರಿ? ಜಾಗ ಎಲ್ಲಿದೆ? ಅವರನ್ನು ಶಾಲೆಯಲ್ಲಿ ಕೂರಿಸುತ್ತೀರೋ, ಸಮುದಾಯ ಭವನದಲ್ಲಿ ಕೂರಿಸುತ್ತೀರೋ, ಅದಕ್ಕೆ ತಾವು ತಕ್ಷಣ ವ್ಯವಸ್ಥೆಯನ್ನು ಮಾಡಬೇಕು. ಇವತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಆಯ್ಕೆಯಾಗಿರುವ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗದ ಅನೇಕ ಜನ ಪ್ರತಿನಿಧಿಗಳು ಗೌರವದಿಂದ ಅಧಿಕಾರವನ್ನು ಚಲಾವಣೆ ಮಾಡಬೇಕಾಗಿದೆ. ಅವರಿಗೆ ನೀಡಬೇಕಾಗಿರುವಂತಹ ಸ್ಥಾನಮಾನ ಹಾಗೂ ಸ್ಥಳದ ವ್ಯವಸ್ಥೆಯನ್ನು ನೀವು ಮಾಡಿಕೊಡಬೇಕಾಗುತ್ತದೆ.

ಶ್ರೀ ಕೆ. ಶಿವಮೂರ್ತಿ:- ಹಳ್ಳಿಗಳಲ್ಲಿ ಚಾವಡಿ ಇದೆಯಲ್ಲ, ಅಲ್ಲಿ ಕೂರಿಸುತ್ತಾರೆ.

ಶ್ರೀ ಬಿ.ಆರ್. ಪಾಟೀಲ್:- ಜನಪ್ರತಿನಿಧಿಗಳಿಗೆ ಚಾವಡಿಯಲ್ಲಿ ಕುಳಿತುಕೊಳ್ಳುವಂತಹ ದುರ್ದೈವ ಬರಬಾರದು. ಅವರಿಗೆ ತಮ್ಮದೇ ಆದಂತಹ ಕಛೇರಿಯ ವ್ಯವಸ್ಥೆಯನ್ನು ಮಾಡಬೇಕು. ಅದರ ವ್ಯವಸ್ಥೆಯನ್ನು ನೀವು ಹೀಗೆಯೇ ಮಾಡಿ, ತಕ್ಷಣವೇ ಮಾಡಿ ಎಂದು ನಾನು ಹೇಳುವುದಿಲ್ಲ. ತಾವು 392 ಅಥವಾ 397 ಹೊಸ ಪಂಚಾಯಿತಿಗಳನ್ನು ಮಾಡಿದ್ದೀರಿ. ಆದಷ್ಟು ಬೇಗನೆ ಇವುಗಳಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಡಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹೆಚ್.ಕೆ. ಪಾಟೀಲರಿಗೆ ಧನ್ಯವಾದಗಳನ್ನು ಅರ್ಪಿಸಬೇಕು. ಇವರು ಅನೇಕ ಭಾಗ್ಯಗಳನ್ನು ಏನು ಒದಗಿಸಿದ್ದಾರೆ, ಈ ಪಂಚಾಯತ್ ರಾಜ್ ಚುನಾವಣೆಯಾದ ಮೇಲೆ ಎಲ್ಲಾ ಸದಸ್ಯರಿಗೂ ಪ್ರವಾಸ/ತೀರ್ಥಯಾತ್ರೆ ಭಾಗ್ಯ ಕೂಡ ಒದಗಿ ಬಂತು. ನಾನು ಹಳ್ಳಿಗಳಿಗೆ ಹೋಗಿ ಪಂಚಾಯತ್ ಚುನಾವಣೆಯಲ್ಲಿ ಗೆದ್ದವರನ್ನು ಕರೆದು ಮಾತನಾಡಿಸಬೇಕೆಂದು ಕೇಳಿದರೆ, ಇಲ್ಲ ಸಾರ್, ಅವರು ಊರಿಗೆ ಹೋಗಿದ್ದಾರೆಂದು ಹೇಳಿದರು. ಅದಕ್ಕೆ ನಾನು

ಯಾವ ಊರಿಗೆ ಹೋಗಿದ್ದಾರೆಂದು ಕೇಳಿದರೆ, ಇಲ್ಲ ಅವರನ್ನೆಲ್ಲ ಕರೆದುಕೊಂಡು ಹೋಗಿದ್ದಾರೆಂದು ಹೇಳಿದರು. ಎಲ್ಲೆಲ್ಲಿಗೆ ಎಂದರೆ ತಿರುಪತಿ, ಮಂತ್ರಾಲಯ, ಶ್ರೀಶೈಲಕ್ಕೆ ಕರೆದುಕೊಂಡು ಹೋಗಿದ್ದಾರೆ. ಇವರು ಚುನಾವಣೆ ಮಾತ್ರ ನಡೆಸಿಲ್ಲ. ನಮ್ಮ ಎಲ್ಲಾ ಸದಸ್ಯರುಗಳಿಗೆ ತೀರ್ಥಯಾತ್ರೆ ದರ್ಶನ ಮಾಡಿಸಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಒಂದು ನಿಮಿಷ, ಯಾವ್ಯಾವ ತೀರ್ಥ ಎಂದೂ ಹೇಳಬೇಕು.

ಶ್ರೀ ಬಿ.ಆರ್. ಪಾಟೀಲ್:- ನನಗೆ ದೇವಸ್ಥಾನದ ತೀರ್ಥದ ಬಗ್ಗೆ ಗೊತ್ತು. ಮಾನ್ಯ ಹೆಚ್.ಕೆ. ಪಾಟೀಲ್‌ರವರೆಗೂ ಆ ತೀರ್ಥದ ಬಗ್ಗೆ ಗೊತ್ತಿಲ್ಲ. ಏಕೆಂದರೆ ಅವರನ್ನು ನಾನು ದೆಹಲಿಯಲ್ಲಿ ಬಹಳ ಹತ್ತಿರದಿಂದ ನೋಡಿದ್ದೇನೆ. ಆ ತೀರ್ಥ ಎಂದು ಅದನ್ನು ಬಿಚ್ಚಿ ಹೇಳಬೇಕಾಗಿಲ್ಲ. ಆ ತೀರ್ಥದ ಪ್ರಸಾದ ಆಗಿಯೇ ಆಗುತ್ತದೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ಉಪಾಧ್ಯಕ್ಷರೆ, ತೀರ್ಥಯಾತ್ರೆ ಏಕೆ ಫಿಕ್ಸ್ ಆಯಿತು ಎಂದರೆ, ಒಂದು ಸಲ ಐದು ವರ್ಷಕ್ಕೆ ಫಿಕ್ಸ್ ಆಗುತ್ತದೆ, ಏನೂ ಬೇಕಾದ್ದೂ ಆಗಲಿ ಎಂದು ಎಲ್ಲರೂ ತೀರ್ಥಯಾತ್ರೆ ಹೊರಟುಬಿಟ್ಟರು.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಇದನ್ನು ನಾನು ಬಹಳ ಹಗುರವಾಗಿ ಹೇಳುತ್ತಿಲ್ಲ. ಇವತ್ತು ಚುನಾಯಿತ ಪ್ರತಿನಿಧಿಗಳನ್ನು 15 ದಿವಸ, ತಿಂಗಳುಗಟ್ಟಲೆ ಹೊತ್ತುಕೊಂಡು ಹೋಗಿ ತಂದು ಅಧ್ಯಕ್ಷರನ್ನು ಮಾಡಿಕೊಳ್ಳುವುದಾದರೆ ಇದು ಯಾವ ಪ್ರಜಾಪ್ರಭುತ್ವ?

ಒಬ್ಬ ಮಾನ್ಯ ಸದಸ್ಯರು:- ಎಂಎಲ್‌ಎಗಳನ್ನು ಹೊತ್ತುಕೊಂಡು ಹೋಗಿದ್ದರಲ್ಲ ಆಗ...

ಶ್ರೀ ಬಿ.ಆರ್. ಪಾಟೀಲ್:- ಹಿಂದೆ ಎಂಎಲ್‌ಎಗಳನ್ನು ಹೊತ್ತುಕೊಂಡು ಹೋಗಿರುವುದನ್ನು ಕಣ್ಣಾರೆ ನೋಡಿದ್ದೇವೆ, ಎನ್.ಟಿ. ರಾಮರಾವ್‌ರವರ ಎಂಎಲ್‌ಎಗಳು ಬೆಂಗಳೂರಿಗೆ ಬಂದಿರುವುದನ್ನು

ನೋಡಿದ್ದೇವೆ. ಇಲ್ಲಿನ ಎಂಎಲ್ಎಗಳು ಗೋವಾಗೆ ಹೋಗಿರುವುದನ್ನು ನೋಡಿದ್ದೇವೆ. ಎಂಎಲ್ಎಗಳು ಯಾವ್ಯಾವ ಆಸೆಗೋ, ತಮ್ಮ ತಮ್ಮ ಅನುಕೂಲಕ್ಕೋ ಕರೆದರೆ ಹೋಗುತ್ತಾರೆ. ಎಂಎಲ್ಎಗಳು ಎಪಿಎಲ್ ಆದರೆ, ನಮ್ಮ ಪಂಚಾಯತ್ ಸದಸ್ಯರು ಬಿಪಿಎಲ್. ಇವರನ್ನು ಹೊತ್ತುಕೊಂಡು ಹೋಗಿ ಚುನಾವಣೆ ದಿವಸವೇ ಓಟು ಹಾಕಿಸಿಕೊಂಡು ಅಧ್ಯಕ್ಷನಾಗುವುದು. ಅದು ಹೇಗೆ ಎಂದರೆ ಮಾನ್ಯ ಉಪಾಧ್ಯಕ್ಷರೆ, ತಾವು ಪತ್ರಿಕೆಯಲ್ಲಿ ನೋಡಿರಬೇಕು. ಹರಾಜು ವ್ಯವಸ್ಥೆ ಇದೆ. ಈ ದೇವಸ್ಥಾನಕ್ಕೆ ಇಷ್ಟು ದುಡ್ಡು ಕೊಟ್ಟರೆ ಈ ಪಂಚಾಯಿತಿಗೆ ಸ್ಪರ್ಧೆ ಇಲ್ಲ, ಅವನೇ ಪಂಚಾಯತ್ ಸದಸ್ಯ. ಇದು ಗಾಬರಿಯಾಗುವಂತಹ ವಿಚಾರ. ಒಂದೊಂದು ಸದಸ್ಯರ ಸ್ಥಾನಕ್ಕೆ ಹರಾಜು ಮಾಡುವುದನ್ನು ಕಣ್ಣಾರೆ ನೋಡುವಂತಹ ಕರ್ಮ ನಮಗೆ ಬಂತಲ್ಲ. ನನಗೆ ಅನಿಸಿದ್ದು, ಸೋಮೊಟೊ ನಮ್ಮ ಪಂಚಾಯತ್ ರಾಜ್ ಎಲೆಕ್ಷನ್ ಕಮಿಷನ್ ಇದ್ದಾರಲ್ಲ, ಅವರು ಇದರ ಬಗ್ಗೆ ದೂರು ದಾಖಲೆ ಮಾಡಿಕೊಂಡು, ಇದು offence ಎಂದು case register ಮಾಡಬೇಕಾಗಿತ್ತು. ಈ ರೀತಿ ಪಂಚಾಯತ್ ರಾಜ್ ಸದಸ್ಯರನ್ನು ಹರಾಜು ಮಾಡುವಂತಹ ಈ ವ್ಯವಸ್ಥೆ ಇವತ್ತು ಬಂದಿದೆಯಲ್ಲ, ಇದು ನಿಜವಾಗಿ ಕೂಡ ಬಹಳ ಅಪಾಯಕಾರಿ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಅದು ಸಂಪತ್ತಿನ ವಿಕೇಂದ್ರಿಕರಣ.

ಶ್ರೀ ಬಿ.ಆರ್. ಪಾಟೀಲ್:- ಸಂಪತ್ತಿನ ವಿಕೇಂದ್ರಿಕರಣದ ಮೂಲಕ ಖಂಡಿತವಾಗಿ ಕೂಡ ಈ ದೇಶದಲ್ಲಿ ಸಮಾನತೆ ಬರಬೇಕು. ಸಂಪದ್ಭರಿತ ಜೀವನ ಆಗಬೇಕು, ಸಂಪತ್ತಿನ ವಿಕೇಂದ್ರೀಕರಣ ಆಗಬೇಕು. ಅದಕ್ಕೆ ನಾವೆಲ್ಲ ಬದ್ಧರಾಗಿದೇವೆ, ನಾವು ಆ ದಿಕ್ಕಿನಲ್ಲಿ ಹೋಗಬೇಕು. ಆಗಲೇ democracy success ಆಗುವುದು.

ಅಧ್ಯಕ್ಷರು:- ಇದು ಬೇಡಿಕೆ ಮೇಲೆ ಚರ್ಚೆ ನಡೆಯುತ್ತಿರುವುದು.

ಶ್ರೀ ಬಿ.ಆರ್. ಪಾಟೀಲ್:- ಪಂಚಾಯತ್ ಸದಸ್ಯರನ್ನು ಹೊತ್ತುಕೊಂಡು ಹೋಗಿ ಮತ್ತೇ ಅವರನ್ನು ಕರೆದುಕೊಂಡು ಬಂದು ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಆಗುವುದನ್ನು ನೋಡಿದರೆ ಆಶ್ಚರ್ಯ ಆಗುತ್ತದೆ. ಆಮೇಲೆ ಅಡ್ವಾನ್ಸ್ ರೆಸಿಗ್ನೇಷನ್ ಹಾಗೂ ನಮ್ಮ ನಮ್ಮ ಹೊಂದಾಣಿಕೆ ಮಾಡಿಕೊಳ್ಳುವುದು. ಎರಡೂವರೆ ವರ್ಷ ಅಧ್ಯಕ್ಷನಾಗಿ ಮಾಡುವುದು, ಅವನು ಎರಡೂವರೆ ವರ್ಷ ಅಧ್ಯಕ್ಷನಾಗಿ ಅಧಿಕಾರ ನಡೆಸುವುದು. ಅದಕ್ಕೆ stamp agreement ಗಳು ಆಗುತ್ತಿವೆ. ಇದು ಕಾನೂನು ಪ್ರಕಾರ valid ಆಗುವುದಿಲ್ಲ. ಆದರೆ ಒತ್ತಡಕ್ಕೆ valid ಆಗೇ ಆಗುತ್ತವೆ. ಎರಡೂವರೆ ವರ್ಷವಾದ ಮೇಲೆ ರಾಜೀನಾಮೆ ಕೊಡಿಸಿಯೇ ಕೊಡಿಸುತ್ತಾರೆ, ನಂತರ ಇನ್ನೊಬ್ಬ ಅಧ್ಯಕ್ಷನಾಗುತ್ತಾನೆ. ಈ ರೀತಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನಡೆದರೆ, ಮಾನ್ಯ ಹೆಚ್.ಕೆ. ಪಾಟೀಲರು ಏನು ಗುರಿಯನ್ನು ಇಟ್ಟುಕೊಂಡಿದ್ದಾರೆ, ಖಂಡಿತವಾಗಿ ಅದನ್ನು ಮುಟ್ಟುವುದಕ್ಕೆ ಸಾಧ್ಯವಿಲ್ಲವೆಂದು ನನಗೆ ಅನಿಸುತ್ತದೆ. ಇವತ್ತು ಈ ವ್ಯವಸ್ಥೆ ಸುಧಾರಣೆ ಆಗಲೇಬೇಕು. ಇವತ್ತು ತಾವು ವ್ಯವಸ್ಥೆ ಸುಧಾರಣೆಯಾಗಬೇಕು ಎಂದು ತಿಳಿದುಕೊಂಡು ಅಧಿಕಾರಿಗಳಿಗೆ, ಜಿಲ್ಲಾ ಪಂಚಾಯತ್ ಸದಸ್ಯರುಗಳಿಗೆ ಎಷ್ಟು ತರಹದ ಟ್ರೇನಿಂಗ್ ತಾವು ಕೊಡುತ್ತಿದ್ದೀರಿ. ಅದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಆದರೆ ಟ್ರೇನಿಂಗ್ ಪಡೆದವರಿಂದ ಎಲ್ಲಿಯಾದರೂ ಉಪಯುಕ್ತತೆ ಆಗುತ್ತಿದೆಯೇ? ನಾನು ನೋಡಿದೆ, ಅದಕ್ಕೆ ವಿಪರೀತ ದುಡ್ಡು ಖರ್ಚು ಮಾಡುತ್ತಿದ್ದಾರೆ. ಪಂಚಾಯತ್ ಚುನಾಯಿತ ಪ್ರತಿನಿಧಿಗಳಿಗೆ ಮತ್ತು ಅಧಿಕಾರಿಗಳಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕೊಡುತ್ತಿದ್ದಾರೆ. ಅದೇ ರೀತಿ ಒಂದೆರಡಲ್ಲ, ಸುಮಾರು 10-15 ರೀತಿಯ ತರಬೇತಿಗಳನ್ನು ಕೊಡುತ್ತಿದ್ದಾರೆ. ಈ ರೀತಿ ತರಬೇತಿಯನ್ನು ಕೊಟ್ಟಮೇಲೆ ಅವರಲ್ಲಿ ಸಾಕಷ್ಟು ಗುಣಾತ್ಮಕವಾದ ಬದಲಾವಣೆ ಮತ್ತು ಅಭಿವೃದ್ಧಿ ಆಗಬೇಕಲ್ಲವೇ? ಆದರೆ ಈ ತರಬೇತಿಗೆ ಎಷ್ಟು ದುಡ್ಡು ಖರ್ಚಾಗುತ್ತಿದೆಯೋ, ಅಷ್ಟು ಉಪಯೋಗ ನಮಗೆ ಆಗುತ್ತಿಲ್ಲ.

ಅಧ್ಯಕ್ಷರು:- ದಯವಿಟ್ಟು ಮುಗಿಸಿ, ಇನ್ನೂ ಜಾಸ್ತಿ ಸಮಯ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಾನು ನಿನ್ನೆಯಿಂದ ನಿಮಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ತಾವು ದೊಡ್ಡ ಮನಸ್ಸು ಮಾಡಬೇಕು.

ಅಧ್ಯಕ್ಷರು:- ನಾನು ಒಂದು ವಿಚಾರ ಹೇಳುತ್ತೇನೆ, ಕೇಳಿ. ಈಗ ಸಚಿವರು ಉತ್ತರವನ್ನು ಕೊಡಬೇಕು. ಎಲ್ಲಾ ಸದಸ್ಯರುಗಳು ಎರಡು ಗಂಟೆಗೆ ಊರಿಗೆ ಹೋಗುವವರಿದ್ದಾರೆ. ನೀವು ಸಂಜೆ 7 ಗಂಟೆಯವರೆಗೆ ಕುಳಿತುಕೊಳ್ಳುವುದಾದರೆ ನಾನು ತಯಾರಿದ್ದೇನೆ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಸದಸ್ಯರು ಕುಳಿತುಕೊಳ್ಳುತ್ತಾರೋ, ಬಿಡುತ್ತಾರೋ ಎನ್ನುವುದನ್ನು ನಾನು ಹೇಗೆ ಹೇಳಲಿ?

ಅಧ್ಯಕ್ಷರು:- ನಾವು ಸದಸ್ಯರು ಇರುತ್ತಾರೋ ಎಂದು ನೋಡಿಕೊಂಡು ಮಾತನಾಡೋಣ. ಎಲ್ಲರೂ ಎರಡು ಗಂಟೆಗೆ ಊರಿಗೆ ಹೊರಟಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಾನು ಬೇಗ ಮುಗಿಸುತ್ತೇನೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನಾವು ಅಷ್ಟಕ್ಕೇ ಸೀಮಿತವಾಗಿ ಯೋಚನೆ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಪಂಚಾಯತ್ ರಾಜ್ ಸಚಿವರು, nutrition ಬಗ್ಗೆ ಕೂಡ ಕಲ್ಪನೆ ಇಟ್ಟುಕೊಂಡಿದ್ದಾರೆ. ಮಕ್ಕಳಿಗೆ ಪರಿಪೂರ್ಣವಾದಂತಹ ಆಹಾರವನ್ನು ಕೊಡಬೇಕೆನ್ನುವ ಮಾತನ್ನು ಕೂಡ ಇದರಲ್ಲಿ ಹೇಳಿದ್ದಾರೆ. ಇದು ಬಹಳ ಒಳ್ಳೆಯ ವಿಚಾರ, ಇದು ಆಗಲೇಬೇಕು. ಆದರೆ ಈ ಕೆಲಸ ಎಲ್ಲಿ ಆಗುತ್ತಿದೆ? ಈಗ ಇರುವಂತಹ ಕೆಲಸವನ್ನು ಮಾಡುವುದಕ್ಕೆ ಸಿಬ್ಬಂದಿ ಇಲ್ಲ ಹಾಗೂ ಹಣ ಇಲ್ಲ. ನೀವು ವಿಪರೀತ ಹಣವನ್ನು ಟ್ರೇನಿಂಗ್‌ಗೆ ಮತ್ತಿತರ ಪ್ರೋಗ್ರಾಂಗಳಿಗೆ ಖರ್ಚು ಮಾಡಿದರೆ, ಇವತ್ತು ಇದಕ್ಕೆಲ್ಲ ಹೇಗೆ ಅರ್ಥ ಸಿಗುತ್ತದೆ? ನಮ್ಮ ಪಂಚಾಯತ್ ರಾಜ್ ವ್ಯವಸ್ಥೆ ಇನ್ನೂ ಗಟ್ಟಿಯಾಗಿ ಬೆಳೆಯಬೇಕಾದರೆ, ಇನ್ನೂ ಬಹಳ ದೀರ್ಘವಾಗಿ ಇದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ನಿನ್ನೆ ಮಾನ್ಯ ರಮೇಶ್‌ಕುಮಾರ್ ರವರು ಮಾತನಾಡಿದರು. ಮಾನ್ಯ ರಮೇಶ್ ಕುಮಾರ್ ರವರು ಬಹಳ ಸಮಗ್ರವಾಗಿ ಅಧ್ಯಯನ ಮಾಡಿ ಒಂದು

ವರದಿಯನ್ನು ಸಿದ್ದ ಮಾಡಿದ್ದಾರೆ. ಮಾನ್ಯ ರಮೇಶ್ ಕುಮಾರ್‌ರವರ ವರದಿಯ ಕೆಲವು ಆಯ್ದು ಭಾಗಗಳನ್ನು ತಂದು ಕಾನೂನಿಗೆ ಕಳೆದ ಸದನದಲ್ಲಿ ತಿದ್ದುಪಡಿ ಮಾಡಿಕೊಂಡರು. ಈಗ ನಮಗೆ ಏನು ಗೊತ್ತಾಗಬೇಕು ಎಂದರೆ ರಮೇಶ್‌ಕುಮಾರ್ ವರದಿಯನ್ನು ಸಂಪೂರ್ಣವಾಗಿ ಕೈಬಿಟ್ಟರೋ ಅಥವಾ ಸರ್ಕಾರ ಅದನ್ನು ಅನುಷ್ಠಾನ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರೋ ಅಥವಾ ಅವರ ವರದಿಯನ್ನು ಅನುಷ್ಠಾಬನ ಮಾಡುವುದಕ್ಕೆ ಆಗುವುದಿಲ್ಲವೋ ಎನ್ನುವದರ ಬಗ್ಗೆ ನಮಗೆ ಸ್ಪಷ್ಟತೆ ಬರಬೇಕು. ಮಾನ್ಯ ರಮೇಶ್‌ಕುಮಾರ್ ರವರು ಒಂದು ಮಾತನ್ನು ಹೇಳಿದರು. ಮಾನ್ಯ ರಮೇಶ್‌ಕುಮಾರ್ ರವರ ವರದಿ ಸರ್ಕಾರಕ್ಕೆ ಒಪ್ಪಿಸದಿದ್ದರೂ ಕೂಡ ಸದನಕ್ಕೆ ಅಂತೂ ಒಪ್ಪಿಗೆ ಆಯಿತು. ಅವರು ವರದಿಯಲ್ಲಿ ಏನು ಹೇಳಿದ್ದಾರೆ. ಅದನ್ನೆಲ್ಲ ಸದನದಲ್ಲಿ ಬಿಚ್ಚಿ ಹೇಳಿದರು. ಅವರು ಕೆಲವು ಒಳ್ಳೆಯ ಅಂಶಗಳನ್ನು ಹೇಳಿದ್ದಾರೆ, ಚುನಾವಣೆ ವಿಚಾರದಲ್ಲಿ ಸದಸ್ಯರನ್ನು ಹೊತ್ತುಕೊಂಡು ಹೋಗುವ ವಿಚಾರ ಹೇಳಿದೆನಲ್ಲ, ಮಾನ್ಯ ರಮೇಶ್ ಕುಮಾರ್ ವರದಿಯಂತೆ ಏನಾದರೂ ಚುನಾವಣೆ ನಡೆಸಿದರೆ ನಾಲ್ಕೈದು ದಿವಸಗಳಲ್ಲಿ ಚುನಾವಣೆ ಮುಗಿದುಬಿಡುತ್ತದೆ, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಖರ್ಚಾಗುತ್ತಿರಲಿಲ್ಲ, ಅವ್ಯವಹಾರ ನಡೆಯುತ್ತಿರಲಿಲ್ಲ, ಆಮೇಲೆ ಇಷ್ಟೊಂದು ದ್ವೇಷ, ಅಸೂಯೆ ನಮ್ಮ ಹಳ್ಳಿಗಳಲ್ಲಿ ಬೆಳೆಯುತ್ತಿರಲಿಲ್ಲ.

ಇವತ್ತು ನಾನು ಲೆಕ್ಕ ಹಾಕಿದೆ, ಒಂದೊಂದು ಪಂಚಾಯತಿಗಳಲ್ಲಿ ಆಗಿರುವಂಥ ಚುನಾವಣೆಯ ಖರ್ಚು ಅನ್ನು ನೋಡಿದರೆ ಬಹಳ ಭಯವಾಗುತ್ತದೆ. ಈ ಚುನಾವಣೆಯಲ್ಲಿ ಭಯಾನಕವಾಗಿ ಹಣ ಖರ್ಚಾಗಿದೆ, ಇದನ್ನು ತಪ್ಪಿಸಬೇಕಾದರೆ ಇವತ್ತು ಮಾನ್ಯ ರಮೇಶ್‌ಕುಮಾರ್‌ರವರ ವರದಿಯ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ತಾವು ಅದನ್ನು ಅನುಷ್ಠಾನ ಮಾಡುತ್ತಿರೋ ಅಥವಾ ಕೈ ಬಿಟ್ಟರೋ, ಅಥವಾ ಅದನ್ನು ಅಲ್ಲಿಯೇ ಬಿಡುತ್ತಿರೋ ಎನ್ನುವ ಮಾತನ್ನು ತಾವು ಹೇಳಬೇಕಾಗುತ್ತದೆ. ಯಾವುದೇ ಒಂದು ಬದಲಾವಣೆ, ಅಭಿವೃದ್ಧಿಯನ್ನು ಮಾಡಬೇಕಾದರೆ ಒಂದು ಯೋಜನೆ ಆಗಬೇಕು. ಈಗ ನಮ್ಮ ಶಾಸಕ ಮಿತ್ರರು ಕೇರಳ ರಾಜ್ಯದ

ಉದಾಹರಣೆಯನ್ನು ಕೊಟ್ಟು ಹೇಳುತ್ತಿದ್ದರು. ಕೇರಳ ರಾಜ್ಯದಲ್ಲಿ ನೂರಕ್ಕೆ ನೂರರಷ್ಟು literacy percentage ಇದೆ. ಅಲ್ಲಿ ಸುಶಿಕ್ಷಿತ ಜನರಿದ್ದಾರೆ ಮತ್ತು ಕೇರಳ ರಾಜ್ಯದ ಚಿತ್ರಣವೇ ಬೇರೆ ಇದೆ. ನಮ್ಮ ಕರ್ನಾಟಕದಲ್ಲಿ ಅದು ಬರುವ ಸಾಧ್ಯತೆಗಳಿವೆ, ಇಲ್ಲವೆಂದು ಹೇಳುವುದಿಲ್ಲ. ಆದರೆ ಇವತ್ತು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಎಲ್ಲಾ ವಿಷಯಗಳ ಬಗ್ಗೆ ಗಮನ ಕೊಡುತ್ತಿದ್ದಾರೆ. ತಾವು ಯೋಜನೆಯ ಬಗ್ಗೆ ಏಕೆ ಗಮನಹರಿಸುತ್ತಿಲ್ಲ? ಈಗ micro planning & macro planning ನಮ್ಮಲ್ಲಿ ಆಗಬೇಕು. ಇವತ್ತು ಪಂಚಾಯತ್ ಸಂಸ್ಥೆಗಳು ಅಧಿಕಾರಕ್ಕೆ ಬಂದಿದೆ, ಇದರಲ್ಲಿ ಅನೇಕ ಜನ ಅನಕ್ಷರಸ್ಥರಿದ್ದಾರೆ, ಅನೇಕ ಜನರಿಗೆ ಈ ಸಮಾಜದ ಚಿತ್ರಣ ಗೊತ್ತಿಲ್ಲ, ವ್ಯವಸ್ಥೆಯ ಬಗ್ಗೆ ಅವರಿಗೆ ಪರಿಚಯವಿಲ್ಲ. ಅವರು ಏನು ಮಾಡಬೇಕೆಂಬುದನ್ನು planning ನಲ್ಲಿ ನಾವು ನಮೂದಿಸಬೇಕು. ಆ ಭಾಗದ ಪರಿಸ್ಥಿತಿ ಏನು? ಅರಣ್ಯಕ್ಕೆ ಏನು ಮಾಡಬೇಕು? ನೀರಾವರಿಗೆ ಏನು ಮಾಡಬೇಕು? ಕೃಷಿಗೆ ಏನು ಮಾಡಬೇಕು? ಇದು planning ನಲ್ಲಿ ಆಗಬೇಕು ಅಲ್ಲವೇ? ಅಲ್ಲಿ ಆ planning ಆಗುತ್ತಿಲ್ಲ. ಅವರಿಗೆ ಆ capacity ಇಲ್ಲ, ಇಲ್ಲಿ ನಮ್ಮಲ್ಲೂ ಅನೇಕರಿಗೆ capacity ಇಲ್ಲ. ಆದರೆ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವು ಏಕೆ ಒಂದು reputed NGO ಗಳು, ಅದು Tata Institute ಆಗಿರಬಹುದು ಅಥವಾ MYRADA ಆಗಿರಬಹುದು, ಅಥವಾ BAIF ಆಗಿರಬಹುದು, ಅದರ ಸಹಾಯ ಪಡೆಯಬಾರದು? ನಮ್ಮ ಕರ್ನಾಟಕ ರಾಜ್ಯದ ಭೌಗೋಳಿಕ, ಆರ್ಥಿಕ, ಸಾಮಾಜಿಕ ವ್ಯವಸ್ಥೆಯನ್ನು ನೋಡಿಕೊಂಡು, ಆಯಾ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ, ಆಯಾ ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ, ಒಂದು ಪರಿಪೂರ್ಣವಾದಂಥ ಯೋಜನೆಯನ್ನು, ತಾವು ತಯಾರು ಮಾಡಿ ಕೊಟ್ಟರೆ, ಅದನ್ನು ಅನುಷ್ಠಾನ ಮಾಡುವುದಕ್ಕೆ ಚುನಾಯಿತ ಪ್ರತಿನಿಧಿಗಳಿಗೆ ಅನುಕೂಲವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಈಗ ನಮ್ಮ Upper Krishna Project ಬಂದ ಮೇಲೆ ಶಹಾಪುರ, ಜೇವರ್ಗಿ, ಇಂಡಿ, ಸಿಂಧಗಿ, ಆ ಕಡೆ ಎಲ್ಲಾ ನೀರಾವರಿ ಆಗಿದೆ. ಅಲ್ಲಿಗೆ ತಾವು ಜಲಾನಯನಕ್ಕೆ ಹಣವನ್ನು ಕೊಟ್ಟರೆ ಏನು ಅರ್ಥ? ಅಲ್ಲಿ ಜಲಾನಯನಕ್ಕೆ ನೀರು

ಕೊಡಬೇಕಾದಂಥ ಅವಶ್ಯಕರೆ ಇಲ್ಲ, ಅದು ನೀರಾವರಿ ಪ್ರದೇಶವಾಗಿದೆ. ಆದರೆ ಖಂಡಿತವಾಗಿ ಜಲಾನಯನಕ್ಕೆ ಆಯಾ ಕ್ಷೇತ್ರಗಳಿಗೆ ಹಣ ಹೋಗುತ್ತದೆ, ಆದ್ಯತೆಯ ಮೇಲೆ ಕೊಡಬೇಕಾಗುತ್ತದೆ. ಈಗ ಕೆಲವು ಬಯಲು ಪ್ರದೇಶಗಳಿರುತ್ತದೆ. ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಚಿಂಚೋಳಿಯಲ್ಲಿ ಬಹಳ ದೊಡ್ಡ ಅರಣ್ಯವಿದೆ, ಇನ್ನುಳಿದ ಭಾಗದಲ್ಲಿ ಅರಣ್ಯವಿಲ್ಲ. ತಾವು ಅಲ್ಲಿ ಅರಣ್ಯಕ್ಕೆ ಒತ್ತು ಕೊಡಿ, ಆದರೆ ಬೇರೆ ಭಾಗಕ್ಕೆ ಎಷ್ಟು ಹೆಚ್ಚಿಗೆ ಒತ್ತು ಕೊಡಬೇಕೋ ಅಷ್ಟು ಒತ್ತನ್ನು ಈ ಬಯಲು ಪ್ರದೇಶಕ್ಕೆ ಕೊಡುವುದಕ್ಕೆ ಆಗುತ್ತಿಲ್ಲ. ಅದಕ್ಕೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದಕ್ಕೆ ಸಮಗ್ರವಾದಂಥ ಒಂದು ಪ್ಲಾನಿಂಗ್ ಮಾಡಿಸಿ. ಆ ರೀತಿ ಆದರೆ ಇದು ಪಂಚಾಯಿತಿಗಳಿಗೆ ಒಂದು guideline ಆಗುತ್ತದೆ. ತಾವು ಕೊಟ್ಟಂಥ ಹಣಕಾಸಿನಲ್ಲಿ ಅವರು ಏನು ಮಾಡುವುದಕ್ಕೆ ಸಾಧ್ಯತೆ ಇದೆ, ಅದನ್ನು ಮಾಡುವ ಸಾಧ್ಯತೆಗಳಿವೆ. ಇನ್ನು ಗ್ರಾಮ ಸಭೆಗಳ ಬಗ್ಗೆ ಹೇಳಿ ಬಿಡುತ್ತೇನೆ.

ಅಧ್ಯಕ್ಷರು:- ಬೇಡ, ಆಗುವುದಿಲ್ಲ, please ...

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಾನು ಗ್ರಾಮಸಭೆಯ ಬಗ್ಗೆ ಒಂದೆರಡು ಮಾತುಗಳಲ್ಲಿ ಹೇಳುತ್ತೇನೆ. ನಾವು ಖಂಡಿತವಾಗಿಯೂ ಅವುಗಳನ್ನು people's parliament ಎಂದು ಒಪ್ಪಲೇಬೇಕು. ಆದರೆ ಹಳ್ಳಿಗಾಡಿನಲ್ಲಿ ಇವತ್ತಿನ ಸಾಮಾಜಿಕ ವಾತಾವರಣ ಏನಿದೆ. ನಮ್ಮ ಸಮಾಜ, ಜಾತಿ ಆಧಾರದ ಮೇಲೆ, ವರ್ಗದ ಆಧಾರದ ಮೇಲೆ, ಜಂಡರ್ ಆಧಾರದ ಮೇಲೆ, ಮತ್ತೆ ಕೆಲವರ ಕಪಿಮುಷ್ಠಿಯಲ್ಲಿ, ಇವತ್ತು ಈ ಸಮಾಜದ ವ್ಯವಸ್ಥೆ ಇದೆ. ತಾವು ಇಂಥ ಒಂದು ಸಂದರ್ಭದಲ್ಲಿ ಗ್ರಾಮಸಭೆಗಳನ್ನು ಮಾಡಬೇಕು, ಅದನ್ನು ಒಪ್ಪುತ್ತೇವೆ. ಆದರೆ ವಾತಾವರಣ ಪೂರಕವಾಗಿಲ್ಲವೆಂಬುದನ್ನು ನಾನು ಬಹಳ ಸ್ಪಷ್ಟವಾಗಿ ಬಿಚ್ಚು ಮಾತಿನಿಂದ ಹೇಳುತ್ತೇನೆ. ನಮ್ಮ ಅಧಿಕಾರಿಗಳು ಗ್ರಾಮ ಸಭೆಗಳನ್ನು ಮಾಡುವುದಕ್ಕೆ ಯಾವಾಗ ಹೋಗುತ್ತಾರೆ? ಬೆಳಿಗ್ಗೆ 10 ಗಂಟೆಯಿಂದ ಪ್ರಾರಂಭ ಮಾಡುತ್ತಾರೆ, ಆ ಸಮಯದಲ್ಲಿ ಜನ ಕೂಲಿ ಮಾಡುವುದಕ್ಕೆ ಹೋಗಿರುತ್ತಾರೆ, ಜಮೀನಿಗೆ ಹೋಗಿರುತ್ತಾರೆ, ಹೊಲಕ್ಕೆ ಹೋಗಿರುತ್ತಾರೆ, ಬೇರೆ ಬೇರೆ ಕಡೆಗಳಿಗೆ ಹೋಗಿರುತ್ತಾರೆ. ಅಲ್ಲಿ ಗ್ರಾಮ

ಸಭೆಗಳಲ್ಲಿ ಯಾರು ಇರುತ್ತಾರೆಂದರೆ, ಕೆಲಸಕ್ಕೆ ಬಾರದೇ ಇರುವವರು, ಪಂಚಾಯಿತಿ ಕಟ್ಟೆಯ ಮೇಲೆ ಕುಳಿತು ಉದ್ರಿ ಮಾತನ್ನು ಹೇಳುವ ಜನರು ಅಲ್ಲಿರುತ್ತಾರೆ. ಅವರನ್ನೆಲ್ಲಾ ಕೂರಿಸಿಕೊಂಡು ಒಂದು ಫೋಟೋವನ್ನು ಹೊಡೆದು, ಗ್ರಾಮ ಸಭೆಯ ನಡುವಳಿಕೆಯನ್ನು ಬರೆದುಕೊಂಡು, ಇಂತಿಂಥ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದೇವೆಂದು ಹೇಳಿ, ಅವರು ಆ ಫಲಾನುಭವಿಗಳ ಹೆಸರುಗಳನ್ನು declare ಮಾಡುತ್ತಾರೆ. ಇದು practical ಆಗಿ ಇಲ್ಲ, ನಾನು ಇದಕ್ಕೆ ವಿರೋಧವಿಲ್ಲ. ಇವತ್ತು ಕೂಡ ಈ ಸಮಾಜದಲ್ಲಿ ಯಾರಿಗೆ ಧ್ವನಿ ಇದೆ, ಯಾರಿಗೆ ತೋಳು ಬಲವಿದೆ, ಯಾರಿಗೆ ಹಣಬಲ ಇದೆ, ಅವನು ಮಾತ್ರ ಈ ಸಮಾಜದಲ್ಲಿ ಬಹಳ ಗಟ್ಟಿಯಾಗಿ ಉಳಿಯುತ್ತಾನೆ. ಯಾರಿಗೆ ಶಕ್ತಿ ಇಲ್ಲ, ಯಾರಿಗೆ ಧ್ವನಿ ಇಲ್ಲ, ಯಾರಿಗೆ ಅಂತಸ್ತು ಇಲ್ಲ, ಅವರು ಪಾಪ! ಇವತ್ತೂ ಕೂಡ ನಿರ್ಗತಿಕರಾಗಿದ್ದಾರೆ. ನಾನು ಇವತ್ತು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾವು ಫಲಾನುಭವಿಗಳನ್ನು ಆಯ್ಕೆ ಮಾಡುವ ಪದ್ಧತಿಯನ್ನು ಏನು ಅನುಸರಿಸುತ್ತಿದ್ದೇವೆ. ಅದು ಖಂಡಿತವಾಗಿಯೂ ಮುಕ್ತವಾದಂಥ ವಾತಾವರಣದಲ್ಲಿ ಇಲ್ಲ. ಹೆಣ್ಣು ಮಕ್ಕಳು, ಗಂಡಸರು, ದಲಿತರು, ಹಿಂದುಳಿದವರು, ರೈತರು, ಕೂಲಿಕಾರರು ಕುಳಿತು ಚರ್ಚೆ ಮಾಡಿ, ಆಯ್ಕೆ ಮಾಡಿದರೆ ಸಂತೋಷ. ನಾವು ವಿಧಾನಸಭೆಯಲ್ಲೆ ಒಮ್ಮತಕ್ಕೆ ಬರುವುದಕ್ಕೆ ಆಗುವುದಿಲ್ಲ. ನಾವು ಇಷ್ಟು ಎಲ್ಲಾ ಮಾತನಾಡಿದರೂ ಕೂಡ, ನಮ್ಮ ಪಕ್ಷದ್ದು ನಾವೇ ಮಾತನಾಡುತ್ತೇವೆ, ಅವರ ಪಕ್ಷದ್ದು ಅವರೇ ಮಾತನಾಡುತ್ತಾರೆ, ಇಲ್ಲೆ ಹಗ್ಗಜಗ್ಗಾಟ ಶುರುವಾಗುತ್ತದೆ. ಇಂಥ ಸಂದರ್ಭದಲ್ಲಿ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ, ತಾವು ಅದನ್ನು ಮಾಡಬಹುದೇ? ಎಂಬುದನ್ನು ನೋಡಿ. ಈಗ ನಾವು ಪಕ್ಷಪಾತವಾಗಬಾರದೆಂದು, KPSC Selection ನಲ್ಲಿ merit cum reservation ಎಂದು ಮಾಡಿದ್ದೇವೆ. ನಿಮ್ಮಲ್ಲಿ ಒಂದು ಸಮಗ್ರವಾದಂಥ ಮಾಹಿತಿಯನ್ನು ಇಟ್ಟುಕೊಂಡು, ಮನೆ ಇಲ್ಲದೇ ಇರುವವರ ಲಿಸ್ಟ್, ವಸತಿ ಇಲ್ಲದೇ ಇರುವವರ ಸಮಗ್ರವಾದಂಥ ಒಂದು ಲಿಸ್ಟ್ ಮಾಡಿ. ಆ ಮಾಹಿತಿ ಸಿಕ್ಕೇ ಸಿಗುತ್ತದೆ, ನಿಜವಾಗಿ ಯಾರು ಬಡವರು, ಯಾರು ನಿರ್ಗತಿಕರು, ಯಾರಿಗೆ ಮನೆ ಇದೆ, ಯಾರಿಗೆ ಮನೆ ಇಲ್ಲ, ಯಾರಿಗೆ ನಿವೇಶನವಿದೆ, ಯಾರಿಗೆ

ನಿವೇಶನವಿಲ್ಲ, ಅಂಥ ಜನರ ಒಂದು ಲಿಸ್ಟ್ ಮಾಡಿ. ಆ ರೀತಿ ಲಿಸ್ಟ್ ಮಾಡಿ, ಎಲ್ಲರ ಎದುರು ಲಾಟರಿ ಎತ್ತಿ, ಈ ಸಾರಿ ಇಂತಿಂಥ ವರ್ಗಕ್ಕೆ ಇಷ್ಟಿಷ್ಟು ಮನೆಗಳು ಲಾಟರಿಯಲ್ಲಿ ಆಯಿತೆಂದು ಘೋಷಿಸಿ. ಅದು ಅವರ ಹಣೆಬರಹ, ಯಾರಿಗೂ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಈ ರೀತಿ ಆಗದೇ ಇದ್ದರೆ, ಆಗ ಏನಾಗುತ್ತದೆಂದರೆ ಸೆಕ್ರಟರಿ ಮತ್ತು ಅಧ್ಯಕ್ಷರು, ಮತ್ತೆ ಕೆಲವು ಶಕ್ತಿಗಳು ಆ ಮನೆಗಳಿಗೆ ಹೋಗಿ ಬಂದು ಏನು proceeding ಬರೆಯುತ್ತಾರೋ ಅದೇ ನಿಜವಾದಂಥ proceeding ಆಗುತ್ತದೆ. ಹಾಗಾಗಿ ಮನೆ ಇದ್ದವರಿಗೆ ಮನೆಯನ್ನು ಕೊಟ್ಟಿದ್ದೇವೆ, ಅನುಕೂಲವಿದ್ದವರಿಗೆ ಅನುಕೂಲಗಳನ್ನು ಕೊಟ್ಟಿದ್ದೇವೆ. ನಿಜವಾದ ನಿರ್ಗತಿಕರಿಗೆ, ಬಡವರಿಗೆ, ವಸತಿಹೀನರಿಗೆ ಮನೆಗಳನ್ನು ಕೊಡುವುದಕ್ಕೆ ಆಗುತ್ತಿಲ್ಲ. ನಾನು ರೆಕಾರ್ಡ್ ನೋಡಿದ್ದೇನೆ, ಅಪ್ಪನಿಗೆ ಒಂದು ಮನೆ, ಮಗನಿಗೆ ಒಂದು ಮನೆ, ಹೆಂಡತಿಗೊಂದು ಮನೆ, ಇದು ಕಣ್ಣಾರೆ ನೋಡಿರುವಂಥದ್ದು. ಮತ್ತೆ ಮನೆ ಇದ್ದವರಿಗೆ ಮನೆಯ ಮೇಲೆ ಮನೆ ಕೊಟ್ಟಿದ್ದಾರೆ. ಇಂಜಿನಿಯರ್‌ಗಳು ರೆಕಾರ್ಡ್ ಹೇಗೆ ಮಾಡಿದ್ದಾರೆಂದರೆ, ಕೆಳಗಿನ ಮನೆಯ ಫೋಟೊವನ್ನು ತೆಗೆದಿಲ್ಲ, ಮೇಲಿನ ಒಂದಸ್ತಿನ ಮನೆಯ ಫೋಟೊವನ್ನು ತೆಗೆದು ದಾಖಲೆ ಮಾಡಿ, ಇವರು ಫಲಾನುಭವಿಗಳು ಮನೆ ಕಟ್ಟಿದ್ದಾರೆಂದು ದಾಖಲೆಯಲ್ಲಿ ತೋರಿಸುತ್ತಾರೆ. ಈ ರೀತಿ ಬಹಳ ದೊಡ್ಡ ಪ್ರಮಾಣದಲ್ಲಿ ಅವ್ಯವಹಾರ ನಡೆಯುತ್ತಿದೆ. ನಾನು ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಏನಾದರೂ ಒಂದು mechanism ಮಾಡಿ, ಅದನ್ನು ಅನುಷ್ಠಾನಕ್ಕೆ ತೆಗೆದುಕೊಂಡು ಬನ್ನಿ. ಅದರಿಂದ ಯಾರು ತಪ್ಪಾಗಿ ತಿಳಿದುಕೊಳ್ಳುವುದಿಲ್ಲ, ಗ್ರಾಮಸಭೆಗಳು ಯಶಸ್ವಿಯಾಗುವುದಿಲ್ಲ, ಗ್ರಾಮ ಸಭೆಗಳಲ್ಲಿ ಅಷ್ಟೊಂದು ನಿಷ್ಪಕ್ಷಪಾತವಾಗಿ ಚರ್ಚೆಯಾಗುವುದಿಲ್ಲ. ಬಡವರಿಗೆ ಧ್ವನಿ ಇರುವುದಿಲ್ಲ, ಅವರಿಗೆ ಕೇಳುವುದಕ್ಕೆ ಹಕ್ಕು ಇರುವುದಿಲ್ಲ, ಅವರಿಗೆ ಯಾರೂ ಕೂಡ ಮರ್ಯಾದೆ ಕೊಡುವುದಿಲ್ಲ, ಸರಿ ಬರುವುದಿಲ್ಲ. ಇವತ್ತಿನ ಗ್ರಾಮ ಸಭೆಗಳಲ್ಲಿ ಹೆಣ್ಣು ಮಕ್ಕಳು ಬಹುತೇಕ ಯಾರೂ ಭಾಗಿಯಾಗುವುದಿಲ್ಲ, ಏಕೆಂದರೆ, ವಾತಾವರಣ ತಿಳಿ ಇಲ್ಲ. ಹಾಗಾಗಿ ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಏನಾದರೂ mechanism ಅನ್ನು ತೆಗೆದುಕೊಂಡು ಬನ್ನಿ. ಅದು ನಿಷ್ಪಕ್ಷಪಾತವಾಗಿ

ಫಲಾನುಭವಿಗಳಿಗೆ ಬಡವರಿಗೆ ಈ ಸೌಲಭ್ಯ ಸಿಗಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು:- ಮಾನ್ಯ ಪಾಟೀಲ್‌ರವರೆ ಸಾಕು, ಈಗ ಚರ್ಚೆ ಮುಕ್ತಾಯವಾಯಿತು. ಮಾನ್ಯ ಸಚಿವರೆ ಉತ್ತರ ಹೇಳಿ.

ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:- ಮಾನ್ಯ ಅಧ್ಯಕ್ಷರೆ, ತಾವು ಮಹಿಳೆಯರಿಗೆ ಮಾತನಾಡುವುದಕ್ಕೆ ಅವಕಾಶವೇ ಕೊಡುವುದಿಲ್ಲ. ಮಹಿಳೆಯರ ಪರವಾಗಿ ಒಬ್ಬರಾದರೂ ಮಾತನಾಡಿದ್ದಾರಾ ಅಧ್ಯಕ್ಷರೆ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಿಲ್ಲ.

(ಗೊಂದಲ)

ಅಧ್ಯಕ್ಷರು:- ಒಂದು ನಿಮಿಷ ತಾಳಿ, ನಾನು ಸದನದ ಅಭಿಪ್ರಾಯವನ್ನು ಕೇಳುತ್ತೇನೆ. ಏಕೆಂದರೆ, ಇವತ್ತು ಎಲ್ಲಾ ಸದಸ್ಯರು ಊರಿಗೆ ಹೋಗಬೇಕಾಗಿರುವ ಕಾರಣಕ್ಕೆ 2 ಗಂಟೆಗೆ ಮುಕ್ತಾಯವಾಗಬೇಕೆಂದು ಇರುವಂಥದ್ದು. ಈಗ ಒಂದೂವರೆ ಗಂಟೆಯಾಗಿದೆ, ಇನ್ನೂ question hour ಇದೆ.

ಶ್ರೀಮತಿ ಶಾರದಾ ಪೂರ್ಯ ನಾಯ್ಕ್:- ಮಾನ್ಯ ಅಧ್ಯಕ್ಷರೆ, ಮಹಿಳೆಯರಿಗೆ ಒಂದು ಅವಕಾಶ ಕೊಡಿ, ಮಾತನಾಡುತ್ತಾರೆ.

ಅಧ್ಯಕ್ಷರು:- ಮಾತನಾಡುವುದಕ್ಕೆ ಸಮಯವಿಲ್ಲ.

ಶ್ರೀಮತಿ ಶಾರದಾ ಪೂರ್ಯ ನಾಯ್ಕ್:- ಮಾನ್ಯ ಅಧ್ಯಕ್ಷರೆ, ಐದು ನಿಮಿಷ ಟೈಮ್ ಕೊಡಿ, ಮಾತನಾಡುತ್ತಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ಈಗ 12.30 ಗಂಟೆಯಾಗಿದೆ, ಸೋಮವಾರ ಬೇಕಾದರೆ reply ಕೊಡಲಿ, ನಾವು ಸಾಯಂಕಾಲದವರೆಗೂ ಕುಳಿತುಕೊಳ್ಳುವುದಕ್ಕೆ ತಯಾರಿದ್ದೇವೆ.

ಅಧ್ಯಕ್ಷರು:- ಸಾಯಂಕಾಲ 6 ಗಂಟೆಯವರೆಗೂ ಕುಳಿತುಕೊಳ್ಳುವುದಕ್ಕೆ ತಯಾರು ಇದ್ದಿರಾ?

ಶ್ರೀ ಸಿದ್ದು ಬಿ. ನ್ಯಾಮಗೌಡ:- ನಾವು ರೆಡಿ ಇದ್ದೇವೆ.

ಶ್ರೀಮತಿ ಶಾರದಾ ಪೂರ್ಯ ನಾಯ್ಕ್:- ಮಾನ್ಯ ಅಧ್ಯಕ್ಷರೆ, ಮಹಿಳೆಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ಸೋಮವಾರದಂದು reply ಕೊಡಲಿ ಬಿಡಿ.

ಅಧ್ಯಕ್ಷರು:- ಆಗಲ್ಲ, ಪುಟ್ಟಣ್ಣಯ್ಯನವರೆ...

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ನಾವು ಒಬ್ಬೊಬ್ಬರೇ ಗೆದ್ದಿರುವವರು, ಮಾತನಾಡುವುದು ಬೇಡವೆ?

ಅಧ್ಯಕ್ಷರು:- ಅದು ಬೇರೆ ಮಾತು, ನಾನು ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂಬ ಅಪೇಕ್ಷೆ ನನಗಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ನಾವು ಕೃಷಿ ಮೂಲದಿಂದಲೇ ಗೆದ್ದು ಬಂದಿರುವವರು.

ಅಧ್ಯಕ್ಷರು:- ಇವತ್ತು 5ನೇ ದಿವಸ ಅಧಿವೇಶನ ನಡೆಯುತ್ತಿರುವುದು. ಇನ್ನೂ ನಾವು ಒಂದು ಬೇಡಿಕೆಯನ್ನೂ ಮಂಜೂರು ಮಾಡುವುದಕ್ಕೆ ಆಗಿಲ್ಲ, ಇನ್ನು ಎಷ್ಟು ದಿವಸಗಳು ಮಾಡುವುದಕ್ಕೆ ಆಗುತ್ತದೆ?

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ಅಧ್ಯಕ್ಷರೆ, ನಾವು ರೈತರ ಪರವಾಗಿ ಹೋರಾಟ ಮಾಡಿರುವವರು, ನಮಗೆ ದಯವಿಟ್ಟು 5 ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು:- ಸಮಯವಿದ್ದರೆ ಕೊಡುತ್ತೇನೆ, ನಾನು ಬೇಡವೆಂದು ಹೇಳುತ್ತೇನೆಯೇ? ಅವಕಾಶ ಕೊಟ್ಟರೆ ಒಬ್ಬೊಬ್ಬರು ಒಂದೊಂದು ಗಂಟೆ ಮಾತನಾಡಿದರೆ ನಾನು ಏನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ನಾವು ಯಾರೂ ಗಂಟೆಗಟ್ಟಲೆ ಮಾತನಾಡಿಲ್ಲ.

ಶ್ರೀಮತಿ ಶಾರದಾ ಪೂರ್ಯ ನಾಯ್ಕ್:- ಮಾನ್ಯ ಅಧ್ಯಕ್ಷರೆ, ಮಹಿಳೆಯರು 5 ನಿಮಿಷ ಮಾತನಾಡಲು ಅವಕಾಶ ಕೊಡಿ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಇಲ್ಲಿ ಕೆಲವರಿಗೆ ಗಂಟೆಗಟ್ಟಲೆ ಮಾತನಾಡುವವರಿಗೆ ಅವಕಾಶವಿದೆ. ನಮ್ಮಂಥವರು ಇತಿ-ಮಿತಿ ಇಟ್ಟುಕೊಂಡು ಮಾತನಾಡುವವರಿಗೆ ಅವಕಾಶವಿಲ್ಲ.

ಅಧ್ಯಕ್ಷರು:- ಇದೆ.

ಶ್ರೀ ಬಿ.ಆರ್. ಪಾಟೀಲ್:- ಇಲ್ಲಿ ಮಾತನಾಡುವುದಕ್ಕೆ ನನ್ನ ವಿರೋಧವಿಲ್ಲ. ದಯಮಾಡಿ ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು:- ಮಾನ್ಯ ಪಾಟೀಲ್‌ರವರೆ, ವಾಸ್ತವಿಕವಾಗಿ ಪಾರ್ಲಿಮೆಂಟ್‌ನಲ್ಲಿರುವ ರೀತಿಯಲ್ಲಿ ಶಾಸಕರ ಸಂಖ್ಯೆಗೆ ಅನುಗುಣವಾಗಿ ನಾನು ಹಂಚಿಕೆ ಮಾಡಿದರೆ, ಯಾರ್ಯಾರಿಗೆ ಎಷ್ಟು ಟೈಮ್ ಬರುತ್ತದೆಂಬುದನ್ನು ನೋಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ಹಾಗೆ ಮಾಡಿ, ನಮಗೆ 10 ನಿಮಿಷವೇ ಅವಕಾಶ ಕೊಡಿ.

ಅಧ್ಯಕ್ಷರು:- ನಾನು ಏನೋ ಹೀಗೆ ಮಧ್ಯದಲ್ಲಿ ಬಂದಿದೆ, ನಡೆದುಕೊಂಡು ಹೋಗಲಿ ಎಂದರೆ...

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ತಮ್ಮ ದೊಡ್ಡ ಮನಸ್ಸನ್ನು ನಾವು ಒಪ್ಪುತ್ತೇವೆ. ನಾನು ಪಾರ್ಲಿಮೆಂಟ್‌ನಲ್ಲಿ ಆ ಪರಿಸ್ಥಿತಿಯನ್ನು ನೋಡಿದ್ದೇನೆ. ಮಾನ್ಯ ದೇವೆಗೌಡರಂಥವರಿಗೆ ಬರೀ

ಮೂರು ನಿಮಿಷಗಳು ಮಾತ್ರ ಮಾತನಾಡುವುದಕ್ಕೆ ಸಮಯ ಸಿಗುತ್ತದೆ. ನಮಗೂ ನಮ್ಮ ಇತಿ-ಮಿತಿ ಗೊತ್ತಿದೆ, ಆದರೆ ತಾವು ಸ್ವಲ್ಪ ಮನಸ್ಸು ಮಾಡಿದರೆ ಆಗುತ್ತದೆ.

ಅಧ್ಯಕ್ಷರು:- ಹಾಗಾದರೆ ಒಂದು ಕೆಲಸ ಮಾಡೋಣ, ಎಷ್ಟು ಚರ್ಚೆಯಾಗುತ್ತದೋ ಆಗಲಿ, ಉಳಿದಂಥದ್ದನ್ನು ಓಟಿಗೆ ಹಾಕಿ ಪಾಸ್ ಮಾಡಿ ಬಿಡೋಣ ಅಷ್ಟೆ.

ಶ್ರೀ ಬಿ.ಆರ್. ಪಾಟೀಲ್:- ನಾನು ಗಂಭೀರವಾಗಿರುವ ಒಂದೇ ಒಂದು ಸಮಸ್ಯೆಯ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಕುಡಿಯುವ ನೀರಿನ ಸಮಸ್ಯೆ ಬಹಳವಾಗಿದೆ. ಜೂನ್ ಎರಡನೇ ತಾರೀಖಿಗೆ ಮಳೆಗಾಲ ಪ್ರಾರಂಭವಾಗಬೇಕಾಗಿತ್ತು. ಮಳೆಗಾಲ ಬಂದ ಮೇಲೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ ಎಂದು ನಾವೆಲ್ಲ ನಿರೀಕ್ಷೆ ಮಾಡಿದ್ದೆವು.

ಶ್ರೀಮತಿ ಶಾರದಾ ಪೂರ್ಯ ನಾಯ್ಕ:- ಮಾನ್ಯ ಅಧ್ಯಕ್ಷರೆ, ಮಹಿಳೆಯರಿಗೆ ಅವಕಾಶ ಕೊಡಿ.

ಅಧ್ಯಕ್ಷರು:- ಕಾನೂನು ಸಚಿವರು ಈಗ ಇಲ್ಲಿ ಇಲ್ಲ.

ಶ್ರೀ ಸಿದ್ದು ಬಿ. ನ್ಯಾಮಗೌಡ:- ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಮಾತನಾಡುವುದಿಲ್ಲ, ದಯವಿಟ್ಟು ಐದು ನಿಮಿಷ ಅವಕಾಶ ಕೊಡಿ. ನಮ್ಮಲ್ಲೂ ಕುಡಿಯುವ ನೀರಿನ ಸಮಸ್ಯೆಯಾಗಿದೆ, ಅದಕ್ಕಾಗಿ ದಯವಿಟ್ಟು ಅವಕಾಶ ಕೊಡಿ.

ಶ್ರೀಮತಿ ಶಾರದಾ ಪೂರ್ಯ ನಾಯ್ಕ:- ಮಾನ್ಯ ಅಧ್ಯಕ್ಷರೆ, ಮಹಿಳೆಯರಿಗೆ ಅವಕಾಶ ಕೊಡದಿದ್ದರೆ ಸದನದ ಬಾವಿಗೆ ಬಂದು ಬಿಡುತ್ತೇವೆ. ಮಹಿಳೆಯರಿಗೆ ಒಂದು ಅವಕಾಶ ಕೊಡಿ.

ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:- ನಾವು ಅಪರೂಪಕ್ಕೆ ಮಾತನಾಡುತ್ತೇವೆ, ಐದು ನಿಮಿಷ ಕೊಡಿ.

ಅಧ್ಯಕ್ಷರು:– ನೋಡಿ ಮೇಡಂ, ನಿಮ್ಮ ಪಕ್ಷದಿಂದ ನಿಮ್ಮ ಹೆಸರು ಮುಂಚೆ ಕೊಟ್ಟಿದ್ದರೆ ನಾನು ನಿಮ್ಮ ಹೆಸರನ್ನೇ ಕರೆಯುತ್ತಿದ್ದೆ.

ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:– ನನ್ನ ಹೆಸರನ್ನು ಕೊಟ್ಟಿದ್ದಾರೆ ಅಧ್ಯಕ್ಷರೆ.

ಅಧ್ಯಕ್ಷರು:– ಕೊಟ್ಟಿದ್ದಾರೆ ಎಂದರೆ ಅದಕ್ಕಿಂತ ಮುಂಚೆ ಬೇರೆಯವರ ಹೆಸರೂ ಇವೆ, ಗೊತ್ತಾಯಿತೇ? ವಿಶ್ವೇಶ್ವರ ಹೆಗಡೆ, ಬಸವರಾಜ ಬೊಮ್ಮಾಯಿ ಆದಮೇಲೆ ಮೂರನೆಯವರಾಗಿ ಶಶಿಕಲಾ ಜೊಲ್ಲೆ ಎಂದು ಕೊಟ್ಟಿದ್ದಾರೆ.

ಶ್ರೀಮತಿ ಶಾರದಾ ಪೂರ್ಯಾ ನಾಯ್ಕ:– ಹಾಗಿದ್ದರೆ ಕೊಡಿ ಅಧ್ಯಕ್ಷರೆ, ಮಹಿಳೆಯರು ಎಂದು ಕೊಡಿ. ಹಾಗಾದರೆ ಈ ಸದನದಲ್ಲಿ ಮಹಿಳೆಯರಿಗೆ ಅವಕಾಶವೇ ಇಲ್ಲವೇ? ನಾವು ಬೆರಳೆಣಿಕೆಯಷ್ಟು ಜನ ಇದ್ದೇವೆ.

ಅಧ್ಯಕ್ಷರು:– ಆಯಿತು. ಹಾಗಾದರೆ ಸೋಮವಾರ ಉತ್ತರ ಕೊಡಿ.

ಶ್ರೀ ಹೆಚ್.ಕೆ. ಪಾಟೀಲ್:– ಆಯಿತು.

ಅಧ್ಯಕ್ಷರು:– ಹಾಗಾದರೆ ನಾನು ಎಲ್ಲರಿಗೂ ಅವಕಾಶವನ್ನು ಕೊಡಬೇಕಾಗುತ್ತದೆ, ಪಾಟೀಲರೇ ನೀವು ಬೇಗ ಪೂರೈಸಿ.

ಶ್ರೀ ಬಿ.ಆರ್. ಪಾಟೀಲ್:– ಆಯಿತು, ಬೇಗ ಮುಗಿಸುತ್ತೇನೆ. ಬಹಳ ಮುಖ್ಯವಾಗಿ ನಾವು ಎಲ್ಲ ಕಡೆ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ತಮಗೆ ಗೊತ್ತಿರುವ ಹಾಗೆ ಇವತ್ತು ಈ ಭಾಗದಲ್ಲಿ ಸ್ವಲ್ಪ ಮಳೆ ಬಂದಿದೆ. ನಮ್ಮ ಭಾಗದಲ್ಲಿ ಮಳೆ ಸುಮಾರು ಒಂದು ತಿಂಗಳ ಕಾಲ ವಿಳಂಬವಾಯಿತು. ಮಳೆ ಬಂದ ಮೇಲೆ ಬೋರ್‌ವೆಲ್‌ಗಳಲ್ಲಿ ನೀರು ಬರುತ್ತದೆ, ಸಮಸ್ಯೆ ಬಗೆಹರಿಯುತ್ತದೆ ಎಂದು ನಾವು ಅಂದುಕೊಂಡಿದ್ದೆವು. ಆದರೆ ಮಳೆ ಬರಲೇ ಇಲ್ಲ. ಇವತ್ತಿಗೂ ಕೂಡ ನಾವು ಟ್ಯಾಂಕರ್‌ಗಳ ಮೂಲಕ ನೀರು ಕೊಡುತ್ತಿದ್ದೇವೆ. ಟ್ಯಾಂಕರ್‌ಗಳ ಮೂಲಕ ಇನ್ನೂ ಎಷ್ಟು ದಿವಸ ನೀರು ಕೊಡಬೇಕೆನ್ನುವುದು ನಮಗೆ ಗೊತ್ತಿಲ್ಲ. ಅದಕ್ಕೆ ಸರ್ಕಾರ ದುಡ್ಡು ಕೊಡುತ್ತದೆ, ಅದಕ್ಕೇನು ಸಮಸ್ಯೆಯಿಲ್ಲ. ಟ್ಯಾಂಕರ್‌ಗಳಿಂದ ನೀರು

ಕೊಡುವುದು ಶಾಶ್ವತವಾದಂಥ ಪರಿಹಾರವಲ್ಲ. ನಾನು ಅನೇಕ ಸಲ ಈ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ಎಲ್ಲಿಯವರೆಗೆ ನಾವು ಅಂತರ್ಜಲವನ್ನು ಹೆಚ್ಚಿಗೆ ಮಾಡುವುದಿಲ್ಲವೋ ಅಲ್ಲಿಯವರೆಗೆ ನಾವು ಕುಡಿಯಲಿಕ್ಕೆ ನೀರು ಕೊಡಲು ಸಾಧ್ಯವೇ ಇಲ್ಲ. ಇದನ್ನು ಸರ್ಕಾರ ಪೂರ್ತಿಯಾಗಿ ಅರ್ಥಮಾಡಿಕೊಳ್ಳಬೇಕು. ಅಂತರ್ಜಲ ಹೆಚ್ಚು ಮಾಡುವ ಬಗ್ಗೆ ಸರ್ಕಾರಕ್ಕೆ ಎಳ್ಳಷ್ಟೂ ಕೂಡ ಕಾಳಜಿಯೇ ಇಲ್ಲ. ಇದರ ಬಗ್ಗೆ ಯಾರೂ ಕೂಡ ತಲೆಕೆಡಿಸಿಕೊಳ್ಳುತ್ತಿಲ್ಲ. ಅಂತರ್ಜಲವನ್ನು ಏಕೆ ಹೆಚ್ಚು ಮಾಡಲು ಸಾಧ್ಯವಿಲ್ಲ? ಇದೊಂದು ಸಾಮಾನ್ಯವಾದಂಥ ಪ್ರಯೋಗ. ರಾಳೇಗಣಸಿದ್ಧಿಯಲ್ಲಿ ಅಣ್ಣಾ ಹಜಾರೆಯಂಥ ಒಬ್ಬ ಸಾಮಾಜಿಕ ಕಾರ್ಯಕರ್ತ ಒಂದು ಪ್ರಯೋಗವನ್ನು ಮಾಡಿ ಯಶಸ್ವಿಯಾಗಿದ್ದಾರೆ. ಒಂದು ಸರ್ಕಾರವಾಗಿ ಅಂತರ್ಜಲವನ್ನು ಹೆಚ್ಚು ಮಾಡಲು ಏಕೆ ನಿಮಗೆ ಸಾಧ್ಯವಿಲ್ಲ? ಜಲಾನಯದ ಪ್ರದೇಶಕ್ಕೆ, ಸಣ್ಣ ನೀರಾವರಿ ಅಭಿವೃದ್ಧಿಗೆ ಮತ್ತು ಕೆರೆಗಳಿಗೆ ನೀವು ಸಾಕಷ್ಟು ದುಡ್ಡು ಖರ್ಚು ಮಾಡುತ್ತಿದ್ದೀರಿ. ಆದರೆ ಎಲ್ಲಿ ಕೆಲಸವಾಗುತ್ತಿದೆ? ಇವತ್ತು ಕುಡಿಯಲಿಕ್ಕೇ ನೀರಿಲ್ಲ. ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಬರೀ ಕುಡಿಯುವ ನೀರಿನ ವಿಷಯ ಒಂದಕ್ಕೆ ಮಾತ್ರ ಸೀಮಿತವಾಗಿ ನೀವು ವಿಚಾರ ಮಾಡಿದರೆ ಈ ಸಮಸ್ಯೆ ಪರಿಹಾರವಾಗುವುದಿಲ್ಲ. ಕುಡಿಯುವ ನೀರು ನಿಮಗೆ ಸಮಗ್ರವಾಗಿ ಸಿಗಬೇಕಾದರೆ ಅರಣ್ಯ ಇಲಾಖೆಯವರು, ಕೃಷಿ ಇಲಾಖೆಯವರು, ಜಲಾನಯನ ಇಲಾಖೆಯವರು ಹಾಗೂ ಪಂಚಯತ್‌ರಾಜ್ ಇಲಾಖೆಯವರೆಲ್ಲರೂ ಸೇರಿ ಒಟ್ಟಿಗೆ ಕೆಲಸ ಮಾಡಿ, ಎಲ್ಲಿಯವರೆಗೆ ಅಂತರ್ಜಲವನ್ನು ಹೆಚ್ಚಿಗೆ ಮಾಡುವುದಿಲ್ಲವೋ, ಅಲ್ಲಿಯವರೆಗೆ ಕುಡಿಯುವ ನೀರಿನ ಸಮಸ್ಯೆ ನಿರಂತರವಾಗಿ ಇರುತ್ತದೆ. ಇವತ್ತು ಹಳ್ಳಿಗಳಲ್ಲಿ ಕೂಡ ನೀರಿನ ವ್ಯಾಪಾರ ಶುರುವಾಗಿದೆ. ಇವತ್ತು ನೀರು ಮಾರಾಟವಾಗುತ್ತಿದೆ. ಇದು ದೇಶಕ್ಕೆ ಬಹಳ ದುರ್ದೈವ. ಈ ದೇಶದಲ್ಲಿ ನೀರು ಮಾರಾಟವಾಗ ಕೂಡದು. ನೀರು ನಿಸರ್ಗದತ್ತವಾಗಿ ಬಂದಂಥ ಒಂದು ವಸ್ತು. ಅದು ಎಲ್ಲರಿಗೂ ಕೂಡ ಮುಕ್ತವಾಗಿ ಸಿಗಬೇಕು. ಆದರೆ ಇವತ್ತು ನಮಗೆ ಕುಡಿಯಲಿಕ್ಕೆ ನೀರು ಸಿಗುತ್ತಿಲ್ಲ. ಇಂಥ ಒಂದು ಸಂದರ್ಭದಲ್ಲಿ ನಾನು ಮಾನ್ಯ ಸರ್ಕಾರಕ್ಕೆ ವಿನಂತಿ

ಮಾಡಿಕೊಳ್ಳುತ್ತೇನೆ, ಅಂತರ್ಜಲವನ್ನು ಹೆಚ್ಚು ಮಾಡುವುದಕ್ಕೆ ಎಲ್ಲಿಯವರೆಗೆ ನೀವು ಪ್ರಾಮಾಣಿಕವಾಗಿ ಪ್ರಯತ್ನ ಮಾಡುವುದಿಲ್ಲವೋ, ಅಲ್ಲಿಯವರೆಗೆ ನೀವು ಕೋಟಿಗಟ್ಟಲೆ ದುಡ್ಡು ಖರ್ಚು ಮಾಡಿದರೂ ಕೂಡ ಈ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ಹಾಗಾಗಿ, ಇವತ್ತು ನಾನು ಒಂದು ಸಲಹೆಯನ್ನು ಕೊಡುತ್ತೇನೆ, ಪಂಚಾಯತ್‌ರಾಜ್ ಇಲಾಖೆಯಲ್ಲಿ ತಾವು ಬಹಳಷ್ಟು ಪ್ರಮುಖವಾದಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ಇದು ಅನುಷ್ಠಾನವಾಗಬೇಕು. ಆದರೆ ನಾವು ಬರೀ ರಸ್ತೆಗಳಿಗೆ, ಚರಂಡಿಗಳಿಗೆ, ಕುಡಿಯುವ ನೀರಿಗೆ ಖರ್ಚು ಮಾಡುತ್ತಾ, ಇವುಗಳಿಗೆ ಹೆಚ್ಚಿನ ಒತ್ತನ್ನು ಕೊಡುತ್ತಿದ್ದೇವೆ. ಆದರೆ ಸಮಗ್ರವಾಗಿ ಹಾಕಿಕೊಂಡಿರುವ ಯೋಜನೆಗಳ ಬಗ್ಗೆ ಗಮನ ಕೊಡಬೇಕಾಗಿದ್ದರೆ ಏನು ಮಾಡಬೇಕೆಂದರೆ, ಪಾರ್ಲಿಮೆಂಟಿನಲ್ಲಿ, ಹೇಗೆ ಪ್ರತಿಯೊಂದು ಮಂತ್ರಾಲಯಕ್ಕೆ Parliamentary Committee ಗಳಿರುತ್ತವೋ ಹಾಗೆ ಇಲ್ಲೂ ಕೂಡ ಆ ವ್ಯವಸ್ಥೆಯನ್ನು ಜಾರಿಗೆ ತಂದರೆ, ಎಲ್ಲ ಪಕ್ಷಗಳ ಶಾಸಕರು ಕುಳಿತು ಸಮಗ್ರವಾಗಿ ವಿಚಾರ ಮಾಡಿ, ಚರ್ಚೆ ಮಾಡಿ, ಈ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದಕ್ಕೆ ಗಮನ ಹರಿಸಬಹುದು. ಅದು ನಡೆದಿದೆಯೋ, ಇಲ್ಲವೋ? ದುಡ್ಡು ಖರ್ಚಾಗುತ್ತಿದೆಯೋ, ಇಲ್ಲವೋ? ಏಕೆ ಖರ್ಚಾಗಿಲ್ಲ? ಏನು ಸಮಸ್ಯೆಯಿದೆ? ಎಲ್ಲವನ್ನೂ ಚರ್ಚೆ ಮಾಡಬಹುದು. ಆ ರೀತಿಯ ಒಂದು ವ್ಯವಸ್ಥೆಯನ್ನು ನೀವು ರಾಜ್ಯ ಸರ್ಕಾರದಲ್ಲಿ ತಂದರೆ ಬಹಳ ಉತ್ತಮವಾಗುತ್ತದೆ. ಇಲ್ಲಿ ಮಾತನಾಡಲು ಅವಕಾಶ ಸಿಗದಂಥ ಅನೇಕರಿಗೆ ಆಯಾಯ ಇಲಾಖೆಗಳ ಮಂತ್ರಿಗಳ ಹತ್ತಿರ ಚರ್ಚೆ ಮಾಡಿ, ಸಮಸ್ಯೆಗಳನ್ನು ಅವರ ಎದುರಿಗೆ ಇಡಲು ಸಾಧ್ಯವಾಗುತ್ತದೆ. ಅಂಥ ಒಂದು ಕಾರ್ಯಕ್ರಮವನ್ನು ತಾವು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಗ್ರಾಮ ಪಂಚಾಯತಿ ಚುನಾವಣೆ ವ್ಯವಸ್ಥೆ ಹದಗೆಟ್ಟು ಹೋಗಿದ್ದು, ಅದನ್ನು ತಪ್ಪಿಸಬೇಕಾದರೆ ಏನು ಮಾಡಬೇಕೆಂದರೆ, ಹಿಂದೆ ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ ಪಕ್ಷದ ಆಧಾರದಲ್ಲಿ ಚುನಾವಣೆಗಳಾಗುತ್ತಿದ್ದವು. ಅವರಿಗೆ ಹಿಡಿತವಿರುತ್ತಿತ್ತು, ಒಂದು ಬದ್ಧತೆ ಇರುತ್ತಿತ್ತು, ಒಂದು ಶಿಸ್ತು ಇರುತ್ತಿತ್ತು. ಹಾಗಾಗಿ, ಗ್ರಾಮ ಪಂಚಾಯತ್ ಚುನಾವಣೆಗಳನ್ನೂ ಪಕ್ಷದ ಆಧಾರದ

ಮೇಲೆಯೇ ಮಾಡಬೇಕು. ಇವತ್ತು ಪಕ್ಷಾತೀತ ಎನ್ನುವ ಮಾತನ್ನು ಹೇಳುತ್ತೇವೆ. ಆದರೆ, ಎಲ್ಲ ಪಕ್ಷದವರು ಕೂಡ ಸಂಭ್ರಮದಿಂದ ಆಯಾ ಸದಸ್ಯರನ್ನು ಕರೆದು ಸಮ್ಮೇಳನ ಮಾಡಿದ್ದಾರೆ, ಪ್ರಚಾರ ಮಾಡಿದ್ದಾರೆ, ಸನ್ಮಾನ ಮಾಡಿದ್ದಾರೆ. ಇದು ವಾಸ್ತವಿಕ ಪರಿಸ್ಥಿತಿ. ಹಾಗಾಗಿ, ಈ ಚುನಾವಣೆಗಳನ್ನು ಪಕ್ಷದ ಆಧಾರದ ಮೇಲೆ ಮಾಡಬೇಕು. ಆಗ ಮಾತ್ರ ಈ ಪಂಚಾಯಿತಿಗಳಲ್ಲಿ ಒಂದು ಶಿಸ್ತು, ಬದ್ಧತೆ ಬರಲು ಸಾಧ್ಯವಿದೆ. ಅಂಥ ಒಂದು ವ್ಯವಸ್ಥೆಯನ್ನು ಈ ಸರ್ಕಾರ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಿ, ಇವತ್ತು ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ):- ಸನ್ಮಾನ್ಯ ಸಭಾಧ್ಯಕ್ಷರೆ, ಇತ್ತೀಚೆಗೆ ಗ್ರಾಮ ಪಂಚಾಯಿತಿ ಚುನಾವಣೆಗಳು ನಡೆದಿವೆ. ಅದರಲ್ಲಿ ಏಕೆ ನಾವು 94 ಸಾವಿರ ಜನರನ್ನು ಗೆಲ್ಲಿಸಿದ್ದೇವೆ? ಯಾರಿಗಾಗಿ ಗೆಲ್ಲಿಸಿದ್ದೇವೆ? ಗೆದ್ದವರಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರನ್ನು ಮಾಡುತ್ತಿದ್ದೇವೆ. ಆ ಅಧ್ಯಕ್ಷರಿಗೆ ಒಂದು ಸಣ್ಣ ಸ್ಕೂಲನ್ನು ರಿಪೇರಿ ಮಾಡುವುದಕ್ಕೆ ಅಧಿಕಾರವಿದೆಯೇ? ಅಂಗನವಾಡಿಯ ಗೋಡೆಯ ಚಕ್ಕೆ ಬಿದ್ದುಹೋದರೆ ಅದನ್ನು ರಿಪೇರಿ ಮಾಡುವುದಕ್ಕೆ ಅಧಿಕಾರವಿದೆಯೇ? ಯಾವುದಾದರೂ ಒಬ್ಬ ಬಡವನ ಮನೆ ಬಿದ್ದು ಹೋದರೆ, ಅದನ್ನು ರಿಪೇರಿ ಮಾಡುವುದಕ್ಕೆ ಅಧಿಕಾರವಿದೆಯೇ? ಹಾಗಿದ್ದರೆ, ಏತಕ್ಕೋಸ್ಕರ ಈ ಪಂಚಾಯತಿ ಚುನಾವಣೆಯನ್ನು ನಡೆಸಿ 94 ಸಾವಿರ ಜನರನ್ನು ಗೆಲ್ಲಿಸಿದ್ದೇವೆ? ಆರ್ಥಿಕ ವಿಕೇಂದ್ರೀಕರಣವೂ ಇಲ್ಲ, ಏನೂ ಇಲ್ಲ. ಸರ್ಕಾರದವರು ಏನೂ ಮಾಡುವುದು ಬೇಡ. ಕರ್ನಾಟಕದ ಐದು ವರ್ಷಗಳ ಒಟ್ಟು ತೆರಿಗೆಯಲ್ಲಿ ಶೇಕಡಾ ಹತ್ತರಷ್ಟನ್ನು ನಮ್ಮ ಹಳ್ಳಿಗಳ ಅಭಿವೃದ್ಧಿಗೆ ಕೊಟ್ಟರೆ ಸಾಕು. ಶೇಕಡಾ 90ರಷ್ಟನ್ನು ಸಂಬಳಕ್ಕೆ, ಉಳಿದ ಇನ್ನಿತರ ಯಾವುದಕ್ಕಾದರೂ ಉಪಯೋಗಿಸಿಕೊಳ್ಳಿ. 5 ವರ್ಷದ ಒಟ್ಟು ತೆರಿಗೆಯಲ್ಲಿ ಶೇಕಡಾ 10 ರಷ್ಟು ಹಣವನ್ನು ಗ್ರಾಮೀಣಾಭಿವೃದ್ಧಿಗೆ ಕೊಟ್ಟರೆ ಸಾಕು. ನಮಗೆ ದುಡ್ಡು ಕೊಡುವುದು ಬೇಡ, ಅಷ್ಟು ಅಭಿವೃದ್ಧಿ ಕೊಟ್ಟರೆ ಸಾಕು. ಅಭಿವೃದ್ಧಿಯನ್ನು ನಾವು ಯಾರ ಬಳಿ ಕೇಳಬೇಕು? ಎಷ್ಟೊಂದು

ರಸ್ತೆಗಳಿವೆ. ಆದರೆ ಕೃಷಿ ಉತ್ಪನ್ನಗಳ ಸಾಗಾಣಿಕೆಗೆ ಒಂದು ರಸ್ತೆಯನ್ನು ರಿಪೇರಿ ಮಾಡುವುದಕ್ಕೆ ಪಂಚಾಯಿತಿಗೆ ಅಧಿಕಾರವಿಲ್ಲ. ಹನ್ನೊಂದು ರೀತಿಯ ರಸ್ತೆಗಳಿವೆ. ಈ ಹನ್ನೊಂದು ರೀತಿಯ ರಸ್ತೆಗಳನ್ನು ರಿಪೇರಿ ಮಾಡಲು ನಾವು ಯಾರ ಬಳಿ ಹೋಗಬೇಕು? ಅದನ್ನು ಯಾರು ಮಾಡಿಕೊಡುತ್ತಾರೆ? ಹಾಗಿದ್ದರೆ ಯಾರಿಗಾಗಿ ಪಂಚಾಯಿತಿ ಇರಬೇಕು? ಪಂಚಾಯಿತಿ ಎನ್ನುವುದು ಮೂಲಭೂತ ಸೌಕರ್ಯಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಇರುವಂಥ ವ್ಯವಸ್ಥೆ. ವಿಧಾನಸೌಧದಲ್ಲಿ ಎಲ್ಲವನ್ನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಂಚಾಯಿತಿಗಳನ್ನು ರಚನೆ ಮಾಡಿದ್ದೇವೆ. ಅದರೆ ಅವರು ಮೂಲಭೂತ ಸೌಕರ್ಯಗಳನ್ನು ಹೇಗೆ ಕೊಡುತ್ತಾರೆ? ಬೇಕಾದರೆ ಒಂದು ಹತ್ತು ಹಳ್ಳಿಗಳಿಗೆ ಹೋಗಿ ನೋಡೋಣ. 300 ಮೀಟರ್ ಮೋರಿ ಇದ್ದರೆ, 100 ಮೀಟರ್‌ಅನ್ನು ಒಬ್ಬ ಮಾಡಿದ್ದಾನೆ, ಮುಂದಿನ ಸಾರಿ ಇನ್ನೊಬ್ಬ 100 ಮೀಟರ್ ಮಾಡಿದ್ದಾನೆ, ಅದರ ಮುಂದಿನ ಸಾರಿ ಇನ್ನೊಬ್ಬ ಉಳಿದ 100 ಮೀಟರ್ ಮಾಡಿದ್ದಾನೆ. ಮೊದಲ 100 ಮೀಟರ್ ಮೋರಿಯ ನೀರು ಇನ್ನೊಂದು 100 ಮೀಟರ್ ಮೋರಿಯ ಹತ್ತಿರ ಹೋಗುವುದಿಲ್ಲ, ಇನ್ನೊಂದು 100 ಮೀಟರ್ ಮೋರಿಯ ನೀರು ಮತ್ತೊಂದು 100 ಮೀಟರ್ ಮೋರಿಯ ಹತ್ತಿರ ಹೋಗುವುದಿಲ್ಲ. ನೀರು ಮುಂದಕ್ಕೆ ಹೋಗದ ಹಾಗೆ ಸೆಕ್ಷನ್ 144 ಜಾರಿಗೆ ಬಂದ ಹಾಗೆ ಆಯಿತು. ಅಂದರೆ ನಾನು ಕೇಳುವುದೇನೆಂದರೆ, 300 ಮೀಟರ್ ಮೋರಿಯನ್ನು ವಾಟ ಕೊಟ್ಟು ಏಕಕಾಲದಲ್ಲಿ ಮಾಡಲು ಸಾಮರ್ಥ್ಯವಿಲ್ಲದಿದ್ದ ಮೇಲೆ ನಮ್ಮನ್ನು ರಕ್ಷಣೆ ಮಾಡುವವರು ಯಾರು? ಒಂದು Peoples' Court ಅನ್ನಾದರೂ constitute ಮಾಡಿಸಿ. ಆರು ಸಾವಿರ ಪಂಚಾಯಿತಿಗಳಲ್ಲಿ ಒಂದು ತಿಂಗಳಿಗೆ ಹತ್ತು ಪ್ರಕರಣಗಳು ಹಳ್ಳಿ ಬಿಟ್ಟು ಆಚೆಗೆ ಹೋಗಲಿಲ್ಲವೆಂದರೆ, ಅದು 60 ಸಾವಿರ ಪ್ರಕರಣಗಳಾಗುತ್ತವೆ. ಎಲ್ಲ ಪಕ್ಷಗಳು, ಎಲ್ಲ ಜಾತಿಯವರನ್ನು ಸೇರಿಸಿ ಒಂದು Peoples' Court ಅನ್ನಾದರೂ constitute ಮಾಡಿದ್ದೇವೆಯೇ? ವಾರ್ಡ್ ಸಭೆ ಮಾಡಬೇಕು ಎನ್ನುತ್ತೇವೆ. ನಾವು ಏನು ಮಾಡಬೇಕು? ಪಂಚಾಯಿತಿಗೆ ಅಂತರ್ಜಲ ರಕ್ಷಣೆ ಮಾಡುವಂಥ ಸಾಮರ್ಥ್ಯದ ನೀತಿ ಸೃಷ್ಟಿಯಾಗಬೇಕು. ಒಂದು ವರ್ಷಕ್ಕೆ ಎರಡು ಸಾವಿರ ಗಿಡಗಳನ್ನು ನಡೆಸುವಂಥ ಅಧಿಕಾರ

ಪಂಚಾಯಿತಿಗೆ ಇದೆ. ಸನ್ಮಾನ್ಯ ಕೃಷಿ ಮಂತ್ರಿಗಳು ನಾನಾ ಆಲೋಚನೆಗಳನ್ನು ಮಾಡಿದ್ದೀರಿ, ಅದನ್ನು ನಾನು ಓದಿದ್ದೇನೆ. 1,500 ಜಿಲ್ಲಾ ಪಂಚಾಯಿತಿಗಳಲ್ಲಿ Seed Bank ಮಾಡಿ. Natural Seed Corporaiton, State Seed Corporation ಇದೆ. ರೈತರಿಗೆ ಎಷ್ಟು ಪರ್ಸೆಂಟ್ ಬೀಜವನ್ನು ಕೊಡಲು ಸಾಮರ್ಥ್ಯವಿದೆ? ರೈತರು ತಮಗೆ ಬೇಕಾದಂಥ ಬೀಜವನ್ನು ತಾವೇ ಬೆಳೆದುಕೊಳ್ಳುವಂಥ ಕನಿಷ್ಟ ಆಲೋಚನೆಯನ್ನಾದರೂ ಮಾಡಬೇಕಲ್ಲವೇ? ದೇಶೀಯ ತಳಿಗಳನ್ನು ರಕ್ಷಣೆ ಮಾಡತಕ್ಕಂಥ ಅಧಿಕಾರ ಪಂಚಾಯಿತಿಗಿಲ್ಲ. ನಮ್ಮ ಪಂಚಾಯಿತಿಗಳಲ್ಲಿ ಏನಿದೆ, ಎಲ್ಲಿದೆ? ಒಬ್ಬ PDO ರನ್ನು transfer ಮಾಡಿಸುವ ಅಧಿಕಾರ ನಮಗೆ ಎಲ್ಲಿದೆ? ಒಬ್ಬ Revenue Inspector ಅನ್ನು transfer ಮಾಡಿಸುವ ಅಧಿಕಾರ ಎಲ್ಲಿದೆ? MLA ಗೆ ಏನೂ ಅಧಿಕಾರವಿಲ್ಲ. ಪಂಚಾಯತಿಯಲ್ಲಿ ಖಾತೆ ಮತ್ತು ವಿಧವಾ ವೇತನ, ಅಂಗವಿಕಲರ ವೇತನ ಮನ್ನಾವನ್ನು ಸಂಪೂರ್ಣವಾಗಿ ಕಂದಾಯ ಇಲಾಖೆಯವರು ಅಲ್ಲಿ ಕ್ರಾಂತಿಕಾರಿಯಾಗಿ ಎರಡು ತಿಂಗಳಿಗೋ, ಮೂರು ತಿಂಗಳಿಗೋ ಒಂದು ಸಭೆ ಮಾಡಿ ಅನುಕೂಲ ಮಾಡತಕ್ಕಂಥ ಒಂದು ಆರ್ಥಿಕ ನೀತಿ ಆಗಬೇಕು. ಪಂಚಾಯತಿ ಎಲ್ಲಿಯವರೆಗೆ ಬರಬೇಕೆಂದರೆ, bank ಗೆ tie-up ಆಗತಕ್ಕಂಥ ಆರ್ಥಿಕ ನೀತಿಗೆ ಬರಬೇಕು. ಈಗ ಆತ್ಮಹತ್ಯೆ ಆಗುತ್ತಿರುವುದು ಸಂಪೂರ್ಣವಾಗಿ ಖಾಸಗಿ ಸಾಲದಿಂದ. ಬಡವರಿಗೆ ಸಂಪೂರ್ಣವಾಗಿ ಸಾಲದ ಸ್ವಾಯತ್ತತೆ ಇಲ್ಲದಿರುವುದು ಗುಳೆ ಹೋಗುವುದು, ಆತ್ಮಹತ್ಯೆ ಮಾಡಿಕೊಳ್ಳುವುದು, ಬಡತನ ಇವೆಲ್ಲದಕ್ಕೂ ಕಾರಣವಾಗಿದೆ. ಯಾವ ಆರ್ಥಿಕ ವಿಕೇಂದ್ರೀಕರಣವೂ ಇಲ್ಲ, ಯಾವ ಗುಣಾತ್ಮಕವಾದ ಸಾಲದ ನೀತಿಯೂ ಇಲ್ಲ. ಯಾವ ಬದುಕನ್ನು ರಕ್ಷಣೆ ಮಾಡತಕ್ಕಂತಹ ಪಂಚಾಯತಿಗೆ ಅಧಿಕಾರ ಏನಿದೆ? ಈಗ School repair ಮಾಡುವುದಕ್ಕೆ 40 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ 6 ತಿಂಗಳಾಗಿದೆ, ಇನ್ನೂ repair ಮಾಡಲಿಕ್ಕೆ ಬಂದಿಲ್ಲ, ಆಗಿಲ್ಲ. ಇಡೀ ಹಳ್ಳಿ ಶಾಲೆಗಳನ್ನು repair ಮಾಡುವುದಕ್ಕೆ 4 ಸಾವಿರ ಕೋಟಿ ರೂಪಾಯಿಗಳು ಬೇಕೆಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಹೇಳುತ್ತಾರೆ. School building ಬಿದ್ದುಹೋಗುತ್ತಿದೆ, repair ಮಾಡುವವರಿಲ್ಲ. ಇದರ ಬಗ್ಗೆ ಏನೂ ಮಾತನಾಡುವ ಹಾಗಿಲ್ಲ.

ಏಕೆಂದರೆ, ಸದನದಲ್ಲಿ ಪ್ರಾಮಾಣಿಕತೆ, ಸತ್ಯ, ನಿಷ್ಠೆ, ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ ಅದು ಒಂದು ತರಹ contempt ಇದ್ದ ಹಾಗೆ. ಅದನ್ನು ಮಾತನಾಡಬಾರದು. ಅದು ಸವಕಲು ನಾಣ್ಯ ಆಗಿಹೋಗಿದೆ. ಯಾರಿಗೋಸ್ಕರ ನಾವು ಇಲ್ಲಿ ವಿಧಾನಸೌಧದಲ್ಲಿ ಹಳ್ಳಿ ಪರವಾಗಿ ಚರ್ಚೆ ಮಾಡುವುದಕ್ಕೆ ಬಂದಿದ್ದೇವೆ? 29,600 ಹಳ್ಳಿ, ಇನ್ನೂ ಅರ್ಜಿ ಕೊಡುವಂಥ ಗುಲಾಮಗಿರಿ ಪರಿಸ್ಥಿತಿಯಲ್ಲಿ ನಾವು ಉಳಿದುಕೊಂಡಿದ್ದೇವೆ. ಹಾಗಾದರೆ, ಯಾರಿಗಾಗಿ ಈ ಪಂಚಾಯತಿ? ಮಾನ್ಯ ಅಧ್ಯಕ್ಷರೆ, ತಾವು ಹಿರಿಯರು, ಬಹಳ ದೊಡ್ಡ ಹೋರಾಟದ ಹಿನ್ನೆಲೆಯಿಂದ ಬಂದಿರತಕ್ಕಂಥವರು. ಮತ್ತೆ ಯಾರಿಗಾಗಿ ಈ ಪಂಚಾಯತಿ? ಕುಡಿಯುವ ನೀರಿಲ್ಲ. ಜಿಲ್ಲಾ ಪಂಚಾಯತ್ road, ತಾಲ್ಲೂಕು ಪಂಚಾಯತ್ road, CADA road, ಗ್ರಾಮಪಂಚಾಯತಿ road, MLA road, Irrigation track road, CMGSY, PMGSY ಈ ರೀತಿ ಸುಮಾರು 10–12 road ಗಳಿವೆ. ಯಾರಿಗೆ, ಯಾವ ಇಲಾಖೆಗೆ ಎಷ್ಟು ಹಣ ಬರುತ್ತದೆ, ಯಾರು ಯಾವ ಕೆಲಸ ಮಾಡುತ್ತಾರೆ, ಯಾಕೆ ಹೀಗೆ ಆಗಿದೆ? ಇಷ್ಟೊಂದು ಹಣ ಖರ್ಚು ಮಾಡುತ್ತೇವೆ, ಏಕೆ? ಉದಾಹರಣೆಗೆ, 9 ಸಾವಿರ ಚಿಲ್ಲರೆ ಕೋಟಿ ರೂ.ಗಳ ಹಣ ಇದೆ. ಇನ್ನು ಮೂರು ವರ್ಷ ಈ ಸರ್ಕಾರ ಇರುತ್ತದೆ. 27 ಸಾವಿರ ಕೋಟಿ ರೂ. ಆಗುತ್ತದೆ. ಮಹಾತ್ಮಾಗಾಂಧಿ ಉದ್ಯೋಗ ಭರವಸ ಯೋಜನೆ ಏನಿದೆ, ಅದು ಮತ್ತು ಇದು ಸೇರಿ 4.5 ಕೋಟಿ ರೂ.ಗಳಿಗೆ 3 ವರ್ಷಕ್ಕೆ plan ಮಾಡಿ ಮಾಡಲಿ. ಇನ್ನೂ ಕೆಲವು ಹಳ್ಳಿಗಳನ್ನು ನೋಡಿ, ಒಂದು ರಸ್ತೆ ಸಹ ಡಾಂಬರೀಕರಣ ಆಗಿಲ್ಲ. ಸದಾಶಿವನಗರ, ಡಾಲರ್ಸ್ ಕಾಲೋನಿಗೆ ಯಾವ ಪಂಚಾಯತಿ ಇಲ್ಲದೆ ಎಲ್ಲ ಕೆಲಸ ಆಗುತ್ತದೆ. ಆದರೆ, ನಮ್ಮ ಹಳ್ಳಿಗಳಲ್ಲಿ ಮೋರಿಗಳು ಹಾಗೆಯೇ ಇವೆಯಲ್ಲ, ಅದು ಏಕೆ? ನಾವೆಲ್ಲ ಬೇರೆ ವಂಶದ ಜನರೇ? ಅವರೆಲ್ಲ ಬಹಳ ದೊಡ್ಡ ವಂಶದ ಜನರೇ? ಮತ್ತೆ ಯಾರಿಗೋಸ್ಕರ ಇದೆಲ್ಲ? ಪ್ರಜಾಪ್ರಭುತ್ವದಲ್ಲಿ 65 ವರ್ಷಗಳಾಗಿದೆ, ನಾವು ಇನ್ನೂ ಗುಲಾಮಗಿರಿಯಲ್ಲಿದ್ದೇವೆ. ಒಂದು ರಿಪೇರಿ ಮಾಡುವವರು ಯಾರೂ ಇಲ್ಲ. ಕೇವಲ ಭಾಷಣ ಮಾಡುವುದಕ್ಕೆ ನಾವು ಬಂದಿದ್ದೇವೆ. ನಾವು ಹೀಗೇ ನಡೆಸುವುದು ಎಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಇನ್ನು ವಿರೋಧ ಪಕ್ಷಗಳು, ನಾವು ಆಲೋಚನೆ ಮಾಡುತ್ತೇವೆ. ಗ್ರಾಮ ಸ್ವರಾಜ್ಯದ

ಯಾವುದೆ ಕಲ್ಪನೆ ಕೇಂದ್ರ ಸರ್ಕಾರದಿಂದ ಇಲ್ಲ. ಯಾವ ಆಲೋಚನೆ ಇದೆ? ಆದರ್ಶ ಗ್ರಾಮ ಎಂದು ಹೇಳುತ್ತಾರೆ. ವಿಕಾಸವೂ ಇಲ್ಲ, ಕಾಸೂ ಇಲ್ಲ. ವಿಚಾರ ವಿಕಾಸ ಆಗುತ್ತಿದೆಯೇ ಹೊರತು ವಿಕಾಸ ಗ್ರಾಮ ಯೋಜನೆ ಅನುಷ್ಠಾನಕ್ಕೆ ಏಕೆ ಬರಲಿಲ್ಲ? ಕನಿಷ್ಠ ಒಂದು ವರ್ಷಕ್ಕೆ 25 ಗ್ರಾಮಗಳನ್ನು ತೆಗೆದುಕೊಂಡು ಅನುಷ್ಠಾನಕ್ಕೆ ತರಬೇಕಾಗಿತ್ತು. ಕೊನೆಯ ಪಕ್ಷ ಸರ್ಕಾರ ಪ್ರಯೋಗವನ್ನಾದರೂ ಮಾಡಲಿ. ಒಂದು ಪಂಚಾಯತಿಯನ್ನು ದತ್ತು ತೆಗೆದುಕೊಂಡರೆ ಈ ಪಂಚಾಯತಿಯ ಸಮಗ್ರ ಅಭಿವೃದ್ದಿಗೆ ಎಷ್ಟು ಕೆಲಸವಾಗುತ್ತದೆ ಎನ್ನುವ ಒಂದು plan ಅನ್ನು 5 ವರ್ಷಕ್ಕೆ ಮಾಡಲಿ. ಯಾವುದೂ ಇಲ್ಲದೆಯೇ ಅದು ಹೇಗೆ ಪಂಚಾಯತಿ ಅಭಿವೃದ್ಧಿಯಾಗುತ್ತದೆ? ಪಂಚಾಯತಿ ಛೇರ್ಮನ್‌ರು, ವೈಸ್ ಛೇರ್ಮನ್‌ರು ಎಲ್ಲರೂ ತಿರುಗುತ್ತಾ ಬಿದ್ದಿದ್ದಾರೆ. ತಿರುಪತಿಯಲ್ಲಿ ಅಷ್ಟು ಜನ ಇದ್ದಾರೆ, ವಾರಣಾಸಿಯಲ್ಲಿ ಇನ್ನಷ್ಟು ಜನ ಇದ್ದಾರೆ, ಮೇಲುಕೋಟೆಯಲ್ಲಿ ಸ್ವಲ್ಪ ಜನ ಇದ್ದಾರೆ, ಎಲ್ಲ ಕಟ್ಟಿಕೊಂಡು ತಿರುಗುತ್ತಿದ್ದಾರೆ. ಚಿಹ್ನೆ ಮೇಲೆಯಾದರೂ ಚುನಾವಣೆ ಮಾಡಿದ್ದರೆ ಮರ್ಯಾದೆಯಿಂದ ಮನೆಯಲ್ಲಾದರೂ ಇರುತ್ತಿದ್ದರು. ತೀರ್ಥಯಾತ್ರೆ, ಯಾವ್ಯಾವುದೋ ಯಾತ್ರೆಗಳು, ಎಲ್ಲ ಯಾತ್ರೆಗಳು ನಡೆಯುತ್ತಿವೆ. ಆಮೇಲೆ, ಲಕ್ಷ, ಒಂದೂವರೆ ಲಕ್ಷ ಒಬ್ಬೊಬ್ಬ member ಗೆ. ಈ ಕಡೆಗೆ ಬಂದರೆ ಒಂದೊಂದು ಲಕ್ಷ, ಆ ಕಡೆಗೆ ಹೋದರೆ ಎರಡೂವರೆ ಲಕ್ಷ, ದೇವನಹಳ್ಳಿಯಲ್ಲೆಲ್ಲ 35 ಲಕ್ಷ, ಈ ತರಹದ ಚುನಾವಣೆಯನ್ನು ನಾವು ಮಾಡಿ ಏನು ಪ್ರಯೋಜನ? ಪ್ರಜಾಪ್ರಭುತ್ವದ ಮೌಲ್ಯಗಳು ಹೇಗಾಗುತ್ತದೆ ಎಂದರೆ AIDS ರೋಗಿಗಳೆಲ್ಲ ಸೇರಿ ಆರೋಗ್ಯದ ಬಗ್ಗೆ ಭಾಷಣ ಮಾಡಿದ ಹಾಗೆ ಕಾಣುತ್ತದೆ. ತಾವು ದಯವಿಟ್ಟು ಆಲೋಚನೆ ಮಾಡಬೇಕು. ಇದು ಪ್ರಜಾಪ್ರಭುತ್ವವನ್ನು ಉಳಿಸುವ ನೀತಿಯೇ? ಹಾಗಾಗಿ ಆರ್ಥಿಕ ವಿಕೇಂದ್ರೀಕರಣವೂ ಇಲ್ಲ, ಅಧಿಕಾರ ವಿಕೇಂದ್ರೀಕರಣವೂ ಇಲ್ಲ. ಒಳ್ಳೆಯ ಆಲೋಚನೆಗಳು ಇರಬಹುದು. ಸರ್ಕಾರ ಏನೂ ಮಾಡಿಲ್ಲ, ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುವುದಿಲ್ಲ. ಆದರೆ, ಯಾವಾಗ ನಮ್ಮ ಹಳ್ಳಿಗಳು ಮೂಲಭೂತ ಸೌಕರ್ಯಗಳನ್ನು ಪಡೆಯುವುದರ ಮೂಲಕ ಮುಕ್ತಿಯಾಗುತ್ತದೆ ಎನ್ನುವುದೇ ಬಹಳ ಮುಖ್ಯ. ಎರಡನೆಯದಾಗಿ, ಸನ್ಮಾನ್ಯ

ಕೃಷಿ ಸಚಿವರು ನಾನಾ ಆಲೋಚನೆಗಳನ್ನು ಮಾಡಿರಬಹುದು. ಆದರೆ, ಇಷ್ಟೆಲ್ಲ ದೊಡ್ಡ ಆಲೋಚನೆ ಮಾಡತಕ್ಕಂಥ ನಿಮ್ಮ sector ಆತ್ಮಹತ್ಯೆ ದಿಕ್ಕಿಗೆ ಏಕೆ ಹೋಗುತ್ತಿದೆ? ಒಂದು ಸಮೀಕ್ಷೆ ಮಾಡಿಸಿ. ಯಾವ್ಯಾವ ಕಾರಣಕ್ಕೆ ಆತ್ಮಹತ್ಯೆ ಆಗಿದೆ? ಖಾಸಗಿ ಸಾಲದಿಂದ ಆತ್ಮಹತ್ಯೆ ಆಗಿರುವುದು ಎಷ್ಟು? ಸರ್ಕಾರಿ ಸಾಲದಿಂದ ಆತ್ಮಹತ್ಯೆ ಆಗಿರುವುದು ಎಷ್ಟು? ಬರಗಾಲದ ಬವಣೆ ತಾಳಲಾರದೆ ಬೆಳೆ ನಷ್ಟದಿಂದ ಆಗತಕ್ಕಂಥ ಪರಿಣಾಮ ಎಷ್ಟು? ಮೊನ್ನೆ 5 ಜನ partner ಆಗಿ 25 ಎಕರೆ ಭೂಮಿಯಲ್ಲಿ ಸುಮಾರು 30 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಬಾಳೆಗಿಡ ಬೆಳೆದಿದ್ದರು. ಆ ಬಾಳೆ ಗಿಡ ಹಾಕಿದ್ದಾಗ ಪಚ್ಚೆ ಬಾಳೆಹಣ್ಣು ಕೆ.ಜಿ. ಒಂದಕ್ಕೆ 16 ರೂ. ಇತ್ತು. ಈಗ 3 ರೂ. ಆಗಿದೆ. ಒಟ್ಟು 30 ಲಕ್ಷ ರೂಪಾಯಿಗಳ ನಷ್ಟವಾಯಿತು. ಒಂದು ಸಾವಿರ ಲೋಡ್ ಮಣ್ಣು ಹಾಕಿದ್ದಾರೆ. 70 ಕೆ.ಜಿ ದಿಂದ 80 ಕೆ.ಜಿ. ಯಷ್ಟು ಬೆಳೆಯಬೇಕೆಂದು ಕನಸು ಕಂಡಿದ್ದರು. ಬೆಳೆದಿದ್ದರು, ಅದಕ್ಕೆ 30 ಲಕ್ಷ ರೂಪಾಯಿಗಳನ್ನು ಸಾಲ ಮಾಡಿದ್ದರು. But ಯಾರ ಹತ್ತಿರ ಇದನ್ನು ಹೇಳುವುದು? ನಮ್ಮ ನೆರವಿಗೆ ಬರುವವರು ಯಾರು? ಸಾಮೂಹಿಕವಾಗಿ ಅವರು 5 ಜನ ಆತ್ಮಹತ್ಯೆ ಮಾಡಿಕೊಳ್ಳಬೇಕಷ್ಟೆ. ಇದರ ಬಗ್ಗೆ ನೀವು ಆಲೋಚನೆ ಮಾಡಬೇಕು. ಹೌದು, ನೀವು ಏನೆಲ್ಲ ಅನುಷ್ಠಾನಕ್ಕೆ ತನ್ನಿ, ಹೆಚ್ಚು ಬೆಳೆ ಬೆಳೆಯುವುದರ ಮೂಲಕ ನೀವು ಆಲೋಚನೆ ಮಾಡಿ ಏನಾದರೂ ಅನುಷ್ಠಾನಕ್ಕೆ ತನ್ನಿ. ಆದರೆ, ಆತ್ಮಹತ್ಯೆ ಏಕೆ ಆಗುತ್ತಿದೆ? ಯಾವ sector ನಲ್ಲೂ ಆತ್ಮಹತ್ಯೆ ಆಗುತ್ತಿಲ್ಲ. ನಮ್ಮ ರೈತರದು ದುಡಿಯುವ ಕ್ಷೇತ್ರ. ಖುಷ್ಕಿ ಪ್ರದೇಶದ ರೈತರು ಹೆಚ್ಚು ಆತ್ಮಹತ್ಯೆ ಮಾಡಿಕೊಂಡಿದ್ದಾರೋ, ವಾಣಿಜ್ಯ ಬೆಳೆಗಳನ್ನು ಬೆಳೆಯತಕ್ಕಂಥ ರೈತರು ಹೆಚ್ಚು ಆತ್ಮಹತ್ಯೆ ಮಾಡಿಕೊಂಡಿದ್ದಾರೋ, ಇವುಗಳ ಬಗ್ಗೆ ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕು. ಯಾವಾಗ, ಎಲ್ಲಿದೆ ನಮ್ಮ ಮಾರುಕಟ್ಟೆ? ನಮ್ಮನ್ನು ಕಾಪಾಡತಕ್ಕಂಥ ಕನಿಷ್ಠ ಬೆಲೆ ನಿಗದಿ ಮೂಲಕ ನಮ್ಮ ಪದಾರ್ಥವನ್ನು ಕೊಳ್ಳುವಂಥ ಯಾವುದೇ ಮಾರ್ಕೆಟ್ ಇಲ್ಲ. ನಮ್ಮದು ಎಲ್ಲಿದೆ ಮಾರ್ಕೆಟ್? ರೈತರದೇ market ಎಲ್ಲಿದೆ? ಆಲೋಚನೆ ಮಾಡಬೇಕು. ಹಾಗಾದರೆ APMC ಯಾರದು? ಈಗ mall ಗಳು ಎಂದು ಬಂದಿವೆಯಲ್ಲ. ಬೆಂಗಳೂರು,

ಮೈಸೂರಿನಲ್ಲಿ, ಸಾವಯವ ಕೃಷಿ ಬೆಲ್ಲ ನಮ್ಮಲ್ಲಿ 80 ರೂಪಾಯಿ, ನಿಮ್ಮ ಮಾರ್ಕೆಟ್‌ನಲ್ಲಿ 470 ರೂಪಾಯಿ. ಅಲ್ಲಿ ಯಾರೋ ಮಾರ್ಕೆಟ್‌ಗೆ ಹೋಗುವವರಿಗೆ ತಳ್ಳೋಗಾಡಿಗೆ ಕೊಡುತ್ತಾನೆ, ಹೀಗೊಂದು ಹಾಕಿಕೊಳ್ಳುತ್ತಾರೆ, ಹಾಗೊಂದು ಹಾಕಿಕೊಳ್ಳುತ್ತಾರೆ, ಅವನು ಗುದ್ದುತ್ತಾನೆ, ರೇಟ್ ಕೊಡುತ್ತಾನೆ, ಬಿಸಾಕಿಬಿಡುತ್ತಾನೆ. ಆದರೆ, ಅಲ್ಲಿ 470 ರೂಪಾಯಿ ಸಾವಯವ ಬೆಲ್ಲಕ್ಕೆ ಇದೆ. ನಮ್ಮ ಹಳ್ಳಿಯಲ್ಲಿ 80 ರೂಪಾಯಿ ಇದೆ. ಇದು ನಮ್ಮ ಮಾರ್ಕೆಟ್. 140 ಮಾರ್ಕೆಟ್‌ನಲ್ಲಿ ತನ್ನ ಬದುಕನ್ನು ರಕ್ಷಣೆ ಮಾಡತಕ್ಕಂಥ, ತಾನು ಬೆಳೆದಂಥ ಬೆಳೆಯನ್ನು ಮಾರತಕ್ಕಂಥ ಅಧಿಕಾರ ಇಲ್ಲವೇ? ನಮ್ಮ ಕೃಷಿ ನೀತಿ ಎಲ್ಲಿದೆ? ಎಲ್ಲಿದೆ ಬೀಜ ಸ್ವಾತಂತ್ರ್ಯ? ಖುಷ್ಕಿ ಪ್ರದೇಶದ ಕೃಷಿ ನೀತಿ ಎಲ್ಲಿದೆ? ತಾವು ದೊಡ್ಡ ಹೋರಾಟ ಮಾಡಿಕೊಂಡು, ಭೂಮಿ ವಿಷಯದಲ್ಲಿ ಸತ್ಯಾಗ್ರಹ ಮಾಡಿ, ಭೂಮಿ ಬಹಳ ದೊಡ್ಡದು ಎನ್ನತಕ್ಕಂಥ ಭಾವನೆಯಿಂದ ಬಂದಿರಿ. ಆ ಭೂಮಿಯನ್ನು ರಕ್ಷಣೆ ಮಾಡತಕ್ಕಂಥ ಯಾವ ಬೆಲೆ ನೀತಿ ಇದೆ? ಇವರು ಯಾರಿಗೆ ಮಾಡುತ್ತಾರೆ? ನೀವೇನೂ ಮಾಡಬೇಡಿ. ನಾವು ಬೆಳೆದಂಥ ಬೆಳೆಗೆ ನಿಗದಿ ಮಾಡಿ. ನಮಗೆ ನಿಮ್ಮ ವಿಜ್ಞಾನಿಗಳೂ ಬೇಕು. ವಿಜ್ಞಾನಿಗಳು ಬೇಡ, ವಿಜ್ಞಾನಿಗಳಿಂದೇನೂ ಆಗುವುದಿಲ್ಲ ಎಂದು ನಾವು ಮಾತನಾಡುವುದಿಲ್ಲ. ವಿಜ್ಞಾನಿಗಳಿಗೆ ಎಷ್ಟು support ಕೊಡುತ್ತಾರೋ ಕೊಡಲಿ. ನಾವು ಬೆಳೆ ಬೆಳೆದು ಈ ದೇಶಕ್ಕೆ ಅನ್ನ ಕೊಡುತ್ತಿದ್ದೇವೆ. ಭೂಮಿ ಎಷ್ಟಿದೆ? ಕೃಷಿಗೆ ಯೋಗ್ಯವಾದಂಥ ಭೂಮಿಯನ್ನು 15 ರಿಂದ 18 ಕುಂಟೆ ಭೂಮಿಯಲ್ಲಿ 131 ಲಕ್ಷ ಟನ್ ಆಹಾರವನ್ನು ಉತ್ಪಾದನೆ ಮಾಡಿ ಆರೂಕಾಲು ಕೋಟಿ ಜನರಿಗೆ ಅನ್ನ ಹಾಕಿ ಹೆಚ್ಚು ಬೆಳೆದಂಥದ್ದನ್ನು ಹೊರಗಡೆ ಕಳುಹಿಸುತ್ತಿದ್ದೇವೆಂದರೆ, ಇದು ಯಾವ ದೊಡ್ಡ contribution ಎಂದು ಯೋಚನೆ ಮಾಡಬೇಕಲ್ಲವೇ? ಈ contribution ಬಗ್ಗೆ ಇವರು ಆಲೋಚನೆ ಮಾಡಿದ್ದಾರೆಯೇ? ಇಷ್ಟೆಲ್ಲ ಕೊಡತಕ್ಕಂಥ ಒಬ್ಬ ರೈತನ ಸಾವನ್ನು ಅತ್ಯಂತ ಲಘುವಾಗಿ ನಾವು ಸ್ವೀಕಾರ ಮಾಡಿದರೆ ಹೇಗೆ? ವೀರೇಶ್ ವರದಿಯನ್ನು ಎಸ್.ಎಂ. ಕೃಷ್ಣರವರು ಇದ್ದಾಗ ತರಿಸಿಕೊಂಡರು. ಅದು ಯಾವ ವರದಿ? ರೈತರು ಯಾವ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ? ಯಾವುದೇ ವ್ಯಕ್ತಿಯ ಸಾವು ಹುಡುಗಾಟವೇ? ಅದು

ಎಂಥದ್ದೇ ವ್ಯಕ್ತಿಯ ಸಾವಾಗಲಿ, ಹುಡುಗಾಟವೇ? ಅತ್ಯಂತ ಗಂಭೀರವಾಗಿ ಆಲೋಚನೆ ಮಾಡಬೇಕು. ಯಾವ ಕೃಷಿ ನೀತಿ ಇದೆ? Cost of cultivation, cost of living, ಯಾವುದಾದರೂ ನೀತಿ, ಈ ದೇಶದಲ್ಲಿ ಈ ದೇಶದ ಪ್ರಧಾನಿಯಾಗಿರಬಹುದು, ಮುಖ್ಯಮಂತ್ರಿಯಾಗಿರಬಹುದು, ಈ ದೇಶದ 29 ರಾಜ್ಯಗಳಲ್ಲಿ ರೈತರ ರಕ್ಷಣೆ ಮಾಡತಕ್ಕಂಥ ಯಾವುದೇ ಕೃಷಿ ನೀತಿ ಇದೆಯೇ? ಕೈಗಾರಿಕೆಗಳವರು ಯಾರಾದರೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆಯೇ? ಬ್ಯಾಂಕ್‌ನವರು ಯಾರಾದರೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆಯೇ? ಮತ್ತೆ ಇದು ಯಾರಿಗಾಗಿ? ನೂರಕ್ಕೆ 66ರಷ್ಟು ಉದ್ಯೋಗವನ್ನು ಸೃಷ್ಟಿ ಮಾಡುತ್ತದೆ. ಕೃಷಿ ಎಂದರೆ, ಬೆಳೆ ಬೆಳೆಯುವುದೇ? ಕೇವಲ ಈ ದೇಶದ ಆಹಾರ ಭದ್ರತೆ, ವ್ಯಾಪಾರ ಭದ್ರತೆ, ಆರ್ಥಿಕ ಭದ್ರತೆ, ಬೊಕ್ಕಸಕ್ಕೆ ತೆರಿಗೆ. ಬಹಳ ಜನ ಏನು ಹೇಳುತ್ತಾರೆ? ರೈತರಿಂದ ಏನು ಬರುತ್ತದೆ ಎನ್ನುತ್ತಾರೆ. ಎಲ್ಲಾ ಉದ್ಯೋಗಗಳು ಯಾರ ಮೇಲೆ ನಿಂತಿರುವುದು? ಹೋಟೆಲ್ ಉದ್ಯಮ ಯಾವುದರ ಮೇಲೆ ನಿಂತಿದೆ? ಬಟ್ಟೆಗಳ ಉದ್ಯಮ ಯಾವುದರ ಮೇಲೆ ನಿಂತಿದೆ? ರೇಷ್ಮೆಗೆ ಸಂಬಂಧಪಟ್ಟ ಉದ್ಯಮ ಯಾರ ಮೇಲೆ ನಿಂತಿದೆ? ಕಬ್ಬಿನಿಂದ ತಯಾರಿಸುವ 46 by products ಯಾರ ಮೇಲೆ ನಿಂತಿದೆ? 30 ಕೋಟಿ ಸೃಷ್ಟಿ ಮಾಡತಕ್ಕಂಥ garments ಉದ್ಯಮದ ಹತ್ತಿ ಯಾರ ಮೇಲೆ ನಿಂತಿದೆ? ಹಾಗಾದರೆ, ನಾವೆಲ್ಲ ಯಾರಿಗಾಗಿ? ನಮ್ಮನ್ನು ಯಾರು ರಕ್ಷಣೆ ಮಾಡಬೇಕು? ಇಡೀ ಕರ್ನಾಟಕದ ಡಾಬಾಗಳನ್ನು ಲೆಕ್ಕಹಾಕಿಕೊಳ್ಳಿ, ಎಷ್ಟೊಂದು ಉದ್ಯೋಗ ಸೃಷ್ಟಿಯಾಯಿತು ನೋಡಿ. ಎಷ್ಟೊಂದು ಜ್ಯೂಸ್ ಅಂಗಡಿಗಳಿವೆ. ಎಷ್ಟೊಂದು medical lobby ನಮ್ಮ ಮೇಲೆ ನಿಂತಿದೆ. ಎಷ್ಟೊಂದು excise lobby ನಮ್ಮ ಮೇಲೆ ನಿಂತಿದೆ. ಇಷ್ಟೊಂದು ಉದ್ಯೋಗ, ಇಷ್ಟೊಂದು ತೆರಿಗೆಯನ್ನು ಕೊಡತಕ್ಕಂಥ ಸಮಗ್ರ ರೈತರಿಗೆ ಕನಿಷ್ಠ ನೀತಿಯನ್ನು ಮಾಡುವುದಕ್ಕಾಗದೇ ಇರುವ ಸರ್ಕಾರಗಳು, ಮತ್ತೆ ಈ ಸರ್ಕಾರಗಳು ಯಾರಿಗಾಗಿ? ಕೃಷಿ ಮಂತ್ರಿ, ತೋಟಗಾರಿಕೆ ಮಂತ್ರಿ, ಪಶುಸಂಗೋಪನೆ, ನೀರಾವರಿಗಳು, ಎಲ್ಲಾ ಯಾರಿಗಾಗಿ? ಯಾವತ್ತು meeting ಮಾಡಿದ್ದಾರೆ? ಯಾವಾಗ ಸಮಗ್ರ ರೈತರ ರಕ್ಷಣೆ ಮಾಡತಕ್ಕಂಥ ಎಲ್ಲಾ joint, ಕೃಷಿ, ತೋಟಗಾರಿಕೆ, ಪಶು ಸಂಗೋಪನೆ, agriculture

planning ಎಲ್ಲಿದೆ? ಒಂದು ಎಕರೆ ನೀರಾವರಿ ಇರುವವನು ಯಾವ ತರಹ ವ್ಯವಸಾಯ ಪದ್ಧತಿ ಮಾಡಬೇಕು? ಬೆಲೆ ನೀತಿ, ಬೆಳೆ ನೀತಿಯನ್ನು ಇವರು ಮಾಡಿದ್ದಾರೆಯೇ? ಇದೆಯೇ? ಇವರೇನಾದರೂ ಮಾಡಿದ್ದಾರೆಯೇ? ಒಂದು ಎಕರೆಗೆ 15 ಗುಂಟೆ ಕಬ್ಬು, 5 ಗುಂಟೆ ಆಹಾರಭದ್ರತೆ, 10 ಗುಂಟೆ ರೇಷ್ಮೆ, 10 ಗುಂಟೆ ಹುಲ್ಲು, 2 ಹಸು, ಹಸುವಿನಿಂದ ಪ್ರತಿ ದಿವಸ ಆದಾಯವಿದೆ. ರೇಷ್ಮೆಯಿಂದ ಒಂದೂವರೆ ತಿಂಗಳಿಗೆ ಆದಾಯವಿದೆ. ಕಬ್ಬಿನಿಂದ ವರ್ಷಕ್ಕೆ ಆದಾಯವಿದೆ. 50% ರಾಸಾಯನಿಕ ಗೊಬ್ಬರ ಉಳಿತಾಯವಾಗುತ್ತದೆ. 50% ನೀರಿನ ಉಳಿತಾಯವಾಗುತ್ತದೆ. ಎಲ್ಲಿದೆ ನಮ್ಮ ಕೃಷಿ planning? 4 ಎಕರೆ ಇದ್ದರೆ 4 ಎಕರೆಗೂ ಕಬ್ಬು ಹಾಕುವುದು. 6 ಎಕರೆ ಇದ್ದರೆ 6 ಎಕರೆಗೂ ಭತ್ತ ಹಾಕುವುದು. 3 ಎಕರೆ ಇದ್ದರೆ 3 ಎಕರೆಗೂ ರೇಷ್ಮೆ ಹಾಕುವುದು. ಎಲ್ಲಿದೆ ನಮ್ಮ agriculture planning? ಇಷ್ಟೊಂದು Universities ಇವೆ. ಇಷ್ಟೆಲ್ಲಾ ಚರ್ಚೆ ನಡೆಯುತ್ತಿದೆ. ಇಷ್ಟು ಕಡಿಮೆ ಭೂಮಿಯಲ್ಲಿ 263 ಮೆ.ಟನ್ ಆಹಾರ ಉತ್ಪಾದನೆ ಮಾಡಿ ಈ ದೇಶಕ್ಕೆ ಕೊಡತಕ್ಕಂಥ ರೈತರನ್ನು ರಕ್ಷಣೆ ಮಾಡುವ ಕನಿಷ್ಠ ಸಮಗ್ರ ನೀತಿಯನ್ನು, ಒಂದು ಕೃಷಿ ನೀತಿಯನ್ನು ಸೃಷ್ಟಿ ಮಾಡದೇ ಇರುವುದಕ್ಕೆ ಕಾರಣವೇನು? ಸ್ವಾಮಿನಾಥನ್ ವರದಿ ನೀಡಿದ್ದಾರೆ. ಕೃಷಿ scientists ಈ ದೇಶದಲ್ಲಿ ಬಹಳ ಜನರಿದ್ದಾರೆ. ಕೃಷಿಕರ ಜೀವನಕ್ಕಾಗಿ ಯಾವುದಾದರೊಂದು ನೀತಿಯನ್ನು ಅವರು ಮಾಡಿದ್ದಾರೆಯೇ? ಸನ್ಮಾನ್ಯ ರಮೇಶ್‌ಕುಮಾರ್‌ರವರೆ, ಸಾಲದ ನೀತಿ ಬಗ್ಗೆ ಮಾತನಾಡುತ್ತೀರಿ. ಎಲ್ಲಿದೆ ನಮಗೆ ಸಾಲ? ನಾನು ಪ್ರಮಾಣ ಮಾಡಿ ಹೇಳುತ್ತೇನೆ. ನಮಗೆ ಯಾರೂ ಸಾಲ ಕೊಟ್ಟಿಲ್ಲ. ಕೊಟ್ಟಿದ್ದರೆ ಕರೆದುಕೊಂಡು ಬನ್ನಿ. ಒಬ್ಬರೂ ಸಾಲ ಕೊಟ್ಟಿಲ್ಲ. ಬೆಳೆ ಬೆಳೆಯುವುದಕ್ಕೆ ಪ್ರೋತ್ಸಾಹಧನ ಕೊಟ್ಟಿರುವುದು. ಬಹಳ ಜನರು ಸಾಲ ಕೊಟ್ಟಿದ್ದೇವೆಂದು ಬ್ಯಾಂಕಿನವರು ಹೇಳುತ್ತಾರೆ. ಸಾಲ ಕೊಟ್ಟಿಲ್ಲ. ಈ ದೇಶದಲ್ಲಿ ಅನ್ನ ಬೆಳೆಯದಿದ್ದರೆ ಎಲ್ಲರೂ ಸತ್ತುಹೋಗುತ್ತೇವೆ ಎಂದು ನಮ್ಮನ್ನು ಹುಡುಕಿ ಹುಡುಕಿ ಸಾಲ ಕೊಡುತ್ತಾರೆ. ಅದಕ್ಕೆ ಸಾಲದ ನೀತಿ ಬೇಕು. ಸಾಲದ ನೀತಿ ಕೊಡಬೇಕಾದರೆ ಬೆಲೆ ನೀತಿ fix ಮಾಡಿ ಸಾಲದ ನೀತಿ ಕೊಡಬೇಕು. ಇಲ್ಲದೇ ಇದ್ದರೆ ನಿಮ್ಮ loan ಅಲ್ಲಿ cheating loan ಎಂದು ಆಗುತ್ತದೆ. ಮೊನ್ನೆ ದಿವಸ ಸಾಲದ ಬಗ್ಗೆ, NPA ಬಗ್ಗೆ ಬಹಳ ಮಾತನಾಡಿದಿರಿ. NPA ಎಂದರೆ

ಯಾರವರು? ಶ್ರವಣಬೆಳಗೊಳದಲ್ಲಿದ್ದಾರಲ್ಲ ಅವರು NPA ಎಂದರೆ, NPA ಎಂದರೆ ಆ ತರಹ ಆಗಿಬಿಟ್ಟಿರುವುದು. ಆದ್ದರಿಂದ ಯೋಚನೆ ಮಾಡಿ. ಇಡೀ ಭಾರತದ ರೈತರಿಗೆ 8.5 ಲಕ್ಷ ಕೋಟಿ ರೂಪಾಯಿ ಸಾಲ ಕೊಡುತ್ತಾರೆ. ಸುಮಾರು 20 ಲಕ್ಷ ಕೋಟಿ ಕುಟುಂಬಗಳಿಗೆ ಒಂದು ಲಕ್ಷ ರೂಪಾಯಿ ಕೊಟ್ಟರೆ 20 ಲಕ್ಷ ಕೋಟಿ ರೂಪಾಯಿ ಆಯಿತು. ಕೇವಲ 1 ಲಕ್ಷ ಒಂದು ಕುಟುಂಬ ಕೊಟ್ಟರೆ ಅಷ್ಟಾಗುತ್ತದೆ. ನಮಗೆ ಒಂದು ಲೋನ್ ಆದರೂ ಎಲ್ಲಿದೆ? ನಮಗೆ package loan ಕೊಡಬೇಕು. ಸಮಗ್ರ ರೈತರನ್ನು ಖಾಸಗಿ ಸಾಲದಿಂದ ಮುಕ್ತಿಯಾಗತಕ್ಕಂಥ ಆರ್ಥಿಕ ನೀತಿಯ ಮೇಲೆ ಈ ದೇಶದಲ್ಲಿ ಒಂದು package loan ಬೇಕು. ಕುರಿ ಸಾಲವನ್ನು ಕೊಡಲಿ. ಕುರಿ breed ಹೆಚ್ಚು ತಯಾರಿಸಲಿ. ಮಾಂಸದ rate ಕಡಿಮೆ ಇಲ್ಲ. ಮನೆ ಮನೆಗೆ 100–100 ಕುರಿ ಕೊಡಲಿ. ಕುರಿಗಿಂತ ಒಳ್ಳೆಯ ಲಾಭ ಯಾವುದೂ ಇಲ್ಲ. 3 ಸಾವಿರ ರೂಪಾಯಿಗಳ ಒಂದು ಕುರಿಯನ್ನು ತೆಗೆದುಕೊಂಡರೆ ಮುಂದಿನ ವರ್ಷಕ್ಕೆ 6 ಸಾವಿರ ರೂಪಾಯಿಗಳು ಆಗುತ್ತದೆ. 1 ರೂಪಾಯಿ ಇಟ್ಟು 2 ರೂಪಾಯಿ ಆಗುವ ಕೆಲಸ ಯಾವುದಾದರೂ ಇದೆ ಎಂದರೆ ಅದು ಕುರಿ ಸಾಲ. 50–50 ಕುರಿ ಸಾಲ ಕೊಡಲಿ. ಆಮೇಲೆ, ಬ್ಯಾಂಕ್‌ನವರು ಒಂದು ಹಸುವಿನ ಸಾಲವನ್ನು ಏಕೆ ಕೊಡುತ್ತಾರೆ? ಮೂರು ಹಸುಗಳ ಸಾಲವನ್ನೇಕೆ ಕೊಡುವುದಕ್ಕಗುವುದಿಲ್ಲ? ಒಂದು ಹಸುವಿನ ಸಾಲವನ್ನು ಕೊಟ್ಟು, ಅವನು, ಅವನ ಹೆಂಡತಿ, ಮಕ್ಕಳೆಲ್ಲ ಹಗಲು, ರಾತ್ರಿ ದುಡಿದು, 9 ತಿಂಗಳು ನಿರಂತರವಾಗಿ ಹಾಲು ಬಿಟ್ಟರೆ, ಇವರು guarantee ಯಾಗಿ ನಮಗೆಲ್ಲ ಹಾಲು ಕೊಡುತ್ತಾನೆಂದು ತೀರ್ಮಾನ ಮಾಡಿ, 2ನೇ ಹಸುವನ್ನು ನಿನಗೆ ಕೊಡಲಾಗುತ್ತದೆ ಎನ್ನುತ್ತಾರೆ. ಹೇಗಿದೆ? ಕಾರ್ ಮೇಳ ಮಾಡುತ್ತಾರೆ. ಬನ್ನಿ, ನಿಮಗಾಗಿ ಮಹಾಜನರೇ ಎನ್ನುತ್ತಾರೆ. ಅಲ್ಲಿಯೇ ಕುರಿ ಮೇಳ, ಹಸುವಿನ ಮೇಳ, ಹಂದಿ ಮೇಳವನ್ನು ಮಾಡಲಿ. ಆಳಿಗಾಗಿ 6–6 ಹಂದಿ, 100–100 ಕುರಿ ಹಿಡಿದುಕೊಂಡು ಹೋಗುತ್ತೇವೆ. ಇವರು ಆ ಯಾವ ಮೇಳಗಳನ್ನೂ ಮಾಡುವುದಿಲ್ಲ. ಕಾರ್ ಮೇಳ ಮಾಡುತ್ತಾರೆ. ಕಾರ್ ತೆಗೆದುಕೊಂಡು ನಮ್ಮ ಊರಿನಲ್ಲಿ ಏನು ಮಾಡಲಿ? ಅಲ್ಲಿ ಕುರಿ ಹೇರಿಕೊಂಡು ಹೋಗುವುದಕ್ಕಾಗುತ್ತದೆಯೇ? ಇಲ್ಲವೆಂದರೆ ಹೆಂಡತಿಯನ್ನು ಕರೆದುಕೊಂಡು

ಹಳ್ಳಿಯಲ್ಲಿ honeymoon ಗೆ ಹೋಗುತ್ತಾರೆಯೇ? Honey ಯೂ ಇಲ್ಲ, moon ಇಲ್ಲ. ಎರಡೂ ಇಲ್ಲ. ಹಳ್ಳಿಯಲ್ಲಿ ಎಲ್ಲ ತೀರಿ ಹೋಗಿ ನಿಂತಿದೆ. ಏನೋ ಒಣಗಿಕೊಂಡು ಜೀವ ಹಿಡಿದುಕೊಂಡು ನಿಂತಿದ್ದಾರೆ. ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಗಡಿಯಾರದ ಕಡೆ ನೋಡುತ್ತಿದ್ದೀರಿ. ತಾವು ಹಿರಿಯರು ಯೋಚನೆ ಮಾಡಬೇಕು. ಕೃಷಿಯನ್ನು ಹೇಗೆ ರಕ್ಷಣೆ ಮಾಡುತ್ತಾರೆ? ಸನ್ಮಾನ್ಯ ರಮೇಶ್‌ಕುಮಾರ್‌ರವರೆ, ಏನೂ ಮಾಡುವುದಕ್ಕಾಗದಿದ್ದರೂ ಪರವಾಗಿಲ್ಲ ಇವರು. ಕನಿಷ್ಠ ಒಂದು ವರದಿಯನ್ನಾದರೂ ತರಿಸಿಕೊಳ್ಳಿ. ಈ ದೇಶದಲ್ಲಿ ಒಂದು ವರದಿ ತರಿಸಿಕೊಳ್ಳುವ ಸಾಮರ್ಥ್ಯ ಇಲ್ಲದೇ ಇದ್ದರೆ ಹೇಗೆ? ಮೊನ್ನೆ ದಿವಸ ತಾವೇ ಹೇಳಿದ್ದೀರಿ. ಯಾವ್ಯಾವ ರೈತರು ಇತ್ತೀಚೆಗೆ ಸತ್ತಿದ್ದಾರೆ? ಅವರ ಬಗ್ಗೆ ಸದನದಲ್ಲಿ ಒಂದು condolence ಮಾಡಬೇಕು ಎಂದು ಹೇಳಿದ್ದಾರೆ. ಯಾರಿಗೂ ಇಚ್ಛೆ ಇಲ್ಲ. ಇವತ್ತು ಒಬ್ಬ ಸತ್ತಿದ್ದಾನೆ. ದಿವಸ ಸಾಯುವವರಿಗೆ ಯಾರು ಅಳುವವರು? ಎಂದು ಯಾರಿಂದಲೂ condolence ಇಲ್ಲ. ಏಕೆಂದರೆ, ಇವನು ಖಾಯಂ ಅಲ್ಲವೇ? ಶಾಂತಿ ಕೋರುವವರಾರು? ಇವನು ಹುಟ್ಟಿರುವುದೇ ಸಾಯುವುದಕ್ಕೆ. ಅದರಿಂದ ಇವನೊಂದು waste body. ಇವನು ಸತ್ತರೆ ನಮಗೇನು ಆಗಬೇಕೆನ್ನತಕ್ಕಂಥ ಆಲೋಚನೆಯಲ್ಲಿದೆ. ಸರ್ಕಾರಗಳು ರೈತರಿಗೆ ಹೇಳಬೇಕು. ರೈತರೇ ಆತ್ಮಹತ್ಯೆ ಮಾಡಿಕೊಳ್ಳಬೇಡಿ. ನಿಮ್ಮ ರಕ್ಷಿಸಲು ಸರ್ಕಾರಗಳು ನಾವು ಸಿದ್ಧವಿದ್ದೇವೆ ಎಂದು ಹೇಳಬೇಕು. ವಿರೋಧ ಪಕ್ಷ, ಆಡಳಿತ ಪಕ್ಷ ಎಲ್ಲ ಸೇರಿ ನಾವು ಒಂದು resolution ಮಾಡಬೇಕು. ಸಾವಿನ ಜೊತೆಯಲ್ಲಿ ನಮ್ಮ ಯಾವ ರಾಜಕಾರಣವೂ ಬೇಡ. ರೈತರ ಸಮಾಧಿಯ ರಾಜಕಾರಣವನ್ನು ನಾವು ಬಿಡೋಣ. ಈ ಸದನದಿಂದ ಒಂದು ಸಂದೇಶ, ತಮ್ಮ ಅಧ್ಯಕ್ಷತೆಯಲ್ಲಿ ಹೋಗಲಿ. ದಯವಿಟ್ಟು, ಒಂದು ಸಂದೇಶ ಹೋಗಲಿ. ನಿಮ್ಮ ಕಾಲಿಗೆ ಬೀಳುತ್ತೇವೆ, ಆತ್ಮಹತ್ಯೆ ಮಾಡಿಕೊಳ್ಳಬೇಡಿ ಎಂದು ನಾವು ಹೇಳಬೇಕು. ದುಡಿಯುವವನ ಕಾಲು ನೋಡು, ಪಾದವನ್ನು ನೋಡು ಎಂದು ಬಸವಣ್ಣನವರು ಹೇಳುತ್ತಾರೆ. ಈ ದೇಶಕ್ಕೆ ಅನ್ನ ಕೊಡುವವನ ಸಾವು ಇದೆಯಲ್ಲ ಇದು ಸರಿಯಲ್ಲ. ನಾನು ಉತ್ತರ ಕರ್ನಾಟಕದ ಒಂದು ಹಳ್ಳಿಗೆ ಹೋಗಿದ್ದೆ. 40 ಅಡಿ ಖಾಲಿ ಬಾವಿ. ಬೇಜಾರಾಗಿ jump ಮಾಡಿದರೆ ತಾಟು

ಹೊಡೆದು ಸತ್ತು ಹೋದ. ಅದು ಖಾಲಿ ಬಾವಿ. ಒಬ್ಬ ಮುಗ್ಧ ರೈತ ಯಾವ ಕಾರಣಕ್ಕೆ ಸತ್ತ? ಇದನ್ನು ಮಾತನಾಡುತ್ತಿರುವುದು ಆವೇಶಕ್ಕೋಸ್ಕರವಲ್ಲ. ದುಡಿಮೆ ಮತ್ತು ಶ್ರಮದ ಬದುಕಿನ ಬೆವರನ್ನು ಸುರಿಸುತ್ತಾನಲ್ಲ, ಅವನ ಸಾವು ಈ ದೇಶಕ್ಕೆ ನಷ್ಟ. ಇದರರ್ಥ ಏನು ಗೊತ್ತೆ? ನೀವೆಲ್ಲ ಸಾಯುವುದಕ್ಕೆ ತಯಾರಾಗಿರಿ ಎನ್ನುವ ಸಂದೇಶವಿದು. ನಾವು ಕೃಷಿಯಿಂದ ವಿಮುಕ್ತರಾಗುತ್ತಿದ್ದೇವೆ, ನಮ್ಮ ಸಾವು ಒಂದಲ್ಲ, ನಿಮ್ಮೆಲ್ಲರ ಸಾವಿಗೆ ಇದು ಸಂದೇಶವೆಂಬ ಎಚ್ಚರಿಕೆಯ ಮಾತು. ಸನ್ಮಾನ್ಯ ಸಭಾಧ್ಯಕ್ಷರೆ, ರೈತನ ಸಾವು ಹುಡುಗಾಟವಲ್ಲ. Bread ಗೋಸ್ಕರ ರಷ್ಯಾದವರು ಬೀದಿ ಭಿಕಾರಿಯಾದರು. 120 ಕೋಟಿ ಬಾಯಿ ಇದೆ. ಬಹಳ ಜನ ಇಲ್ಲಿರುವವರೆಲ್ಲ ಅನ್ನ ಉಣ್ಣುವವರು, ರೈತರು ಸಾಯುತ್ತಿರುವುದು ನಮಗೇನು ಎಂದು ಭಾವಿಸಿದ್ದಾರೆ. ಅಕ್ಕಿ, ರಾಗಿ, ಜೋಳವೆಲ್ಲ computer ನಲ್ಲಿ ಬರುತ್ತದೆಯೇ? ಕುಟುಕಿದೇಟಿಗೆ ಈಚೆಗೆ ಬರುತ್ತದೆಯೆ? ಆಲೋಚನೆ ಮಾಡಬೇಕು. ಉಣ್ಣುವ ಬಾಯಿಗೆಲ್ಲ ಜ್ಞಾನವಿರಬೇಕು. ಹಸಿದು ಯಾರ್‍ಯಾರು ಉಣ್ಣುತ್ತಾರೆ, ಅವರಿಗೂ ರೈತರಿಗೂ ಸಂಬಂಧ ಎಂದು ತಿಳಿದುಕೊಳ್ಳಬೇಕು. ಅನ್ನವನ್ನು ಯಾರು ಉಣ್ಣುವುದಿಲ್ಲ, ಅವರಿಗೂ ರೈತರಿಗೂ ಸಂಬಂಧವಿಲ್ಲ. ಬಹಳ ಜನ ತಿಳಿದುಕೊಂಡಿರುವುದು ಹೇಗೆ ಗೊತ್ತು? ರೈತ ಸಾಯುತ್ತಾನೆ, ಭೂಮಿ ಉಳುವವನು ಸಾಯುತ್ತಾನೆ, ನಮಗೇನು ಎಂದು ಭಾವಿಸಿದ್ದಾರೆ. ಮೊನ್ನೆ ಬೆಂಗಳೂರಿನಲ್ಲಿ ಒಬ್ಬರು press ನವರು ಸಿಕ್ಕಿ, ಕೊತ್ತಂಬರಿ ಸೊಪ್ಪು 35 ರೂಪಾಯಿ ಆಗಿದೆ. ಮೆಂತ್ಯ ಸೊಪ್ಪು 25 ರೂಪಾಯಿ ಆಗಿದೆ, ನಾನು ತೆಗೆದುಕೊಂಡು ಹೋಗಿ ಮನೆಯಲ್ಲಿ ಅಡುಗೆ ಮಾಡಿಕೊಂಡು ಊಟ ಮಾಡುವಷ್ಟರಲ್ಲಿ 180 ರೂಪಾಯಿ ಆಗುತ್ತದೆ, ಹೇಗೆ ಬದುಕಬೇಕು ಎಂದು ಕೇಳಿದರು. ಕ್ಯಾತನಹಳ್ಳಿಯಲ್ಲಿ ಕೊತ್ತಂಬರಿ ಸೊಪ್ಪು 1 ರೂಪಾಯಿ. ಬೆಂಗಳೂರಿಗೆ ಬಂದರೆ 35 ರೂಪಾಯಿ ಆಗುತ್ತದೆ. Mall ಗಳು ಬಂದಿವೆ. Mall ಗೆ ಹೋಗಿ ಸ್ವಲ್ಪ ಕಲ್ಲಂಗಡಿ ಚೂರು ತಿನ್ನುವ ಹಾಗಿಲ್ಲ, ಒಂದು ಹಣ್ಣನ್ನೇ ತಿನ್ನಬೇಕು. ಅಲ್ಲಿಯೇ ನಾವು ಒಂದು ಒಂದು ಹಣ್ಣನ್ನೇ ತಿನ್ನಬೇಕು. ಸಣ್ಣ ಸಣ್ಣ ರೈತರು ಇಲ್ಲಿ ಬೀದಿಯಲ್ಲಿ ಮಾರುತ್ತೇವಲ್ಲ, ಆ ತರಹ ಇಲ್ಲ. ದಯವಿಟ್ಟು, ತಾವು ಆಲೋಚನೆ ಮಾಡಬೇಕು. ಕೃಷಿ ನೀತಿ ಬಗ್ಗೆ, ಕೃಷಿ

ಆಯೋಗ ರಚನೆ ಮಾಡಿ ಎರಡು ವರ್ಷಗಳಾಯಿತು. ಸಂಪನ್ಮೂಲವೆಲ್ಲಿದೇ? ಮಾನ್ಯ ಸಭಾಧ್ಯಕ್ಷರೆ, ತಾವೊಂದು ಸಲಹೆ ಕೊಡಿ. ಒಂದು ವಿಶೇಷ ತೆರಿಗೆ ಹಾಕಿ 15 ಸಾವಿರ ಕೋಟಿ ರೂ.ಗಳ ಹಣ ಸಂಗ್ರಹ ಮಾಡಿ. ಮಳೆಯಾಧಾರಿತ ಪ್ರದೇಶದ ಸಮಗ್ರ ಬದುಕಿನ ನೀತಿ ಸೃಷ್ಟಿ ಮಾಡಿ. ಅವರು ಗುಳೆ ಹೋಗದೇ ಇದ್ದಹಾಗೆ ನೋಡಿಕೊಳ್ಳತಕ್ಕಂಥ ಆರ್ಥಿಕ ನೀತಿ, ಆಲೋಚನೆಯ ಕೃಷಿ ನೀತಿ ಅನುಷ್ಠಾನಕ್ಕೆ ಬರದೇ ಇದ್ದರೆ ಸಾವಿರ ಕೋಟಿ ರೂಪಾಯಿ ಇಟ್ಟುಕೊಂಡು ಏನು ಮಾಡುವುದಕ್ಕೆ ಸಾಧ್ಯ? ಈ ಸಾರಿ ಭತ್ತದ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. 1600 ರೂ. ಇದ್ದ ಬೆಲೆ ಈಗ 1300 ರೂಪಾಯಿಗಳಿಗೆ ಇಳಿದಿದೆ. 5 ಸಾವಿರ ಕೋಟಿ ರೂಪಾಯಿಗಳು ನಷ್ಟವಾಯಿತು. ಒಂದು ವರ್ಷದಿಂದ ಇನ್ನೊಂದು ವರ್ಷಕ್ಕೆ ರೈತರ ನಷ್ಟವನ್ನು ಬರೆದಿಡತಕ್ಕಂಥ ಈ ದೇಶದ ಒಬ್ಬ ಆರ್ಥಿಕ ತಜ್ಞನ address ಕೊಡಿ. ಈ ದೇಶದಲ್ಲಿ ಯಾವ investment ಬರೆದಿದ್ದಾರೆ? ದುಡಿಯುವವನಿಗೆ ಸಂಬಂಧಪಟ್ಟಂಥ ಯಾವುದೇ ಒಂದು investment ಅನ್ನು ಯಾರು ಬರೆದಿಲ್ಲ. Investment ಇಲ್ಲ, loss ಇಲ್ಲ. ಮತ್ತೆ ನಾವು ಯಾರು? ನಾವು ಯಾರ ಹತ್ತಿರ ಹೋಗೋಣ? ಯಾರ ಹತ್ತಿರಕ್ಕೂ ಹೋಗುವ ಹಾಗಿಲ್ಲ. ಹಗ್ಗದ ಹತ್ತಿರವೇ ಹೋಗಬೇಕು. ಹಗ್ಗ ಬಿಟ್ಟರೆ ನಮಗೆ ಇನ್ನು ಯಾರೂ ಗತಿ ಇಲ್ಲ. ಆದುದರಿಂದ ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡರು. ಮೊನ್ನೆ ದಿವಸ ಒಬ್ಬ ಕೂಲಿ ಮಾಡುವವನು, ಚಿನಕುರಳಿಯಲ್ಲಿ ಅವನು, ಅವನ ಹೆಂಡತಿ, ಅವನ ಎರಡು ಮಕ್ಕಳ ಜೊತೆ ಆತ್ಮಹತ್ಯೆಗೆ ಬಲಿಯಾದ. ಇಲ್ಲಿ ವಿಧಾನಸೌಧದಲ್ಲಿ ಚರ್ಚೆಯಾಗುತ್ತದೆ. ಮದುವೆಗೊಂದು ನೀತಿ ತರುತ್ತೇವೆಂದರು. ಅದೂ ಪತ್ತೆ ಇಲ್ಲ. ಮದುವೆಗೆ ಏಕೆ ನೀತಿ ತರುವುದಕ್ಕಾಗುವುದಿಲ್ಲವೆಂದರೆ ಒಳಗಿರುವವರೇ ನಮ್ಮ ಕೈಯಲ್ಲಿ ಮಾಡುವುದಕ್ಕಾಗುವುದಿಲ್ಲವಲ್ಲ. ಮೌಢ್ಯತೆಗೊಂದು ನೀತಿ ತರುತ್ತೇವೆಂದರೆ ಅದೂ ಆಗಲಿಲ್ಲ. ಇನ್ನೇನಿದು? ಸಾಂಸ್ಕೃತಿಕ ಆಂದೋಲನವಿಲ್ಲ. ಆರ್ಥಿಕ ಪರಿಸ್ಥಿತಿ ಇಲ್ಲ. ಸಮಗ್ರ ರೈತರ ರಕ್ಷಣೆ ಮಾಡುವುದಕ್ಕೊಂದು ನೀತಿ ಇಲ್ಲ. ಭ್ರಷ್ಟಾಚಾರ ಮಾಡದವರಿಗೆ ರಕ್ಷಣೆಯೇ ಇಲ್ಲ. ಮಾತೆತ್ತಿದರೆ, ಪಂಚಾಯಿತಿಯಲ್ಲಿ ಛೇರ್ಮನ್ ಹಣ ಹೊಡೆದಿದ್ದಾನೆ ಎನ್ನುತ್ತಾರೆ. ಮೊನ್ನೆ

ಛೇರ್ಮನ್ ದುಡ್ಡು ಹೊಡೆದಿದ್ದರ ಬಗ್ಗೆ ಚರ್ಚೆಯಾಯಿತೇ? ಲೋಕಾಯುಕ್ತರ ಕುಟುಂಬದ ಬಗ್ಗೆ ಚರ್ಚೆಯಾಯಿತು. ಯಾರವನು ನಮ್ಮ ಊರಿನ ಚಿಕ್ಕಪ್ಪನ ಮಗನೆ? ಯಾರವನು? ಮಾತನಾಡಿದ್ದೆ ಮಾತನಾಡಿದೆವು, ಬೀದಿಯಲ್ಲಿ ಜಗಳ ಕಾಯುತ್ತಿದ್ದೇವೆ ಯಾರಿಗಾಗಿ? ನಮ್ಮ ಊರಿನಲ್ಲಿ ಎರಡು ಕಾಯಿ ಕದ್ದರೆ ಕಂಬಕ್ಕೆ ಕಟ್ಟಿ ಹಾಕುತ್ತೇವೆ. ಇಷ್ಟು ದೊಡ್ಡ ಮಟ್ಟದಲ್ಲಿ ಹೊಡೆದಿರುವವರನ್ನು ಹೂವಿನ ಹಾರ ಹಾಕಿ ತಿರುಗುತ್ತಿದ್ದೇವೆಯಲ್ಲ ಇದು ಹೇಗೆ? ಅದು ಕಾನೂನಿನಲ್ಲಿ ಅವಕಾಶವಿಲ್ಲದಿರುವುದರಿಂದ ಅವರ ಬಗ್ಗೆ ಮಾತನಾಡಬಾರದು, ಅದು contempt. ನಮ್ಮ ಊರಿನಲ್ಲ ನ್ಯಾಯಾಧೀಶರಿಗೆ ಕೋಳಿ ಸಾರು ಉಂಡು ಬಿಟ್ಟು ಅವನ ಕಡೆಗೆ ನ್ಯಾಯ ಹೇಳಿಬಿಟ್ಟ ಕಣ್ಲಾ ಎಂದು ಎಷ್ಟೋ ಸರಿ ಹೇಳುತ್ತೇವೆ. ಯಾವ contempt ಆಗಿಲ್ಲ. ಕೋಳಿ ಎಲ್ಲಾ ಕಂಟು ಬಂದು ನಿಂತಿದೆ, ನಮ್ಮಲ್ಲಿ contempt ಇಲ್ಲ. ತಪ್ಪು ಮಾಡಿದವರನ್ನು ಯಾರು ಬೇಕಾದರೂ ಹೇಳಬಹುದು, ಏಕೆ ಹೇಳಬಾರದು? ಇಂತಿಂಥವರು ಮಾತ್ರ ತಪ್ಪು ಎಂದು ಹೇಳುವುದಕ್ಕೆ ಇದೆಯೇ? ಸತ್ಯ ಯಾವಾಗಲೂ ಯಾರಿಗೆ ಬೇಕಾದರೂ ಹೇಳಬಹುದು. ನಾವು ಜನನೂ ತಯಾರಾಗಬೇಕು. Contempt ಆದರೆ jail ಗೆ ಹೋಗುವುದಕ್ಕೂ ready ಆಗಬೇಕು. ಇಲ್ಲದಿದ್ದರೆ ನಾವು ಯಾರನ್ನು ಸರಿ ಮಾಡುವುದಕ್ಕಾಗಕ್ಕಿಲ್ಲ. ಇತ್ತೀಚೆಗೆ ನಮಗೆ ಭಯ ಆಗುತ್ತಿದೆ. ನ್ಯಾಯಾಲಯದ ಪರಿಸ್ಥಿತಿಯನ್ನು ಆಲೋಚನೆ ಮಾಡತಕ್ಕಂಥ ಪರಿಸ್ಥಿತಿ ನಮ್ಮೆಲ್ಲರಿಗೂ ಬಂದಿದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಇಲ್ಲ, ಮಾನ್ಯ ಕೃಷಿ ಮಂತ್ರಿಗಳು ಇಲ್ಲ. ಕೃಷಿ ಮಂತ್ರಿ ಇನ್ನು ಚಿಕ್ಕ ಹುಡುಗರು. ಅವರು ಬಹಳ ದೊಡ್ಡ ಕಲ್ಪನೆಯಲ್ಲಿರಬಹುದು. ಅದರಿಂದ, ಸಂಬಂಧಪಟ್ಟ ಅಧಿಕಾರಿಗಳು ಇರಬಹುದೇನು ಅಷ್ಟೆ. ಬೇಜಾರು ಕಳೆಯುವುದಕ್ಕೆ ಭಾಷಣ ಮಾಡುವುದಕ್ಕೆ ಬಂದಿದ್ದೇವೆ. ತಾವು ಬೇಜಾರು ಕಳೆಯುವುದಕ್ಕೆ ರೈತರ ಸುದ್ಧಿ, ರೈತರಿಗೆ 3,800 ಚಿಲ್ಲರೆ ಕೊಟ್ಟಿದ್ದೇವೆ. ಸಮಗ್ರ ರೈತರ ರಕ್ಷಣೆ ಮಾಡುತ್ತೇವೆಂದು ಬಹಳ ಜೈ ಜವಾನ್ ಜೈ ಕಿಸಾನ್ ಜಿಯೆತೋ ದೇಶ್ ಜೀತಾ ಹೈ ವೈಸಿ ಭಾಷಣ್ ಕರ್ತೆ ಕರ್ತೆ ಚಲ್ ರಹೆ ಹೈ ಓ ಆಸ್ ಭಾಷಣ್ ಕರ್ತೆ ಸಾಮ್ನೆ ಚಲ್ ರಹೆ ಹೈ ಪೀಚೆ ಕಿಸಾನ್ ಆತ್ಮಹತ್ಯೆ ಕರಕರ್ ಚಲ್ ರಹೆ ಹೈ ಇಸ್ಲಿಯೇ ಐಸಿ

ಹೋಗಯ ಹ್ಯೆ. ಅದರಿಂದ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟಂಥ ನಿಮಗೆ ವಂದಿಸಿ, ನೀವು watch ಕಡೆಗೆ ನೋಡುತ್ತಿರುವುದರಿಂದ, ನಿಮ್ಮಿಂದ bell ಹೊಡೆಸದೇ ನಾನೇ ನನ್ನ will ಮೇಲೆ ಕುಳಿತುಕೊಳ್ಳುತ್ತಿದ್ದೇನೆ, ನಮಸ್ಕಾರ.

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್ (ನಿಪ್ಪಾಣಿ):- ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಮಹಿಳೆಯರ ಪರವಾಗಿ ಮಾತನಾಡುವುದಕ್ಕೆ, ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಅಧ್ಯಕ್ಷರು:- ಹತ್ತು ಹತ್ತು ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್ (ನಿಪ್ಪಾಣಿ):- ಐದು ನಿಮಿಷದಲ್ಲಿ ಮುಗಿಸುತ್ತೇನೆ. ಅನುಭವಿ ರಾಜಕಾರಣಿಗಳು, ಸಹಕಾರಿ ಕ್ಷೇತ್ರದಲ್ಲಿ ತನ್ನದೇ ಆದಂಥ ಛಾಪು ಮೂಡಿಸಿರುವ ನಮ್ಮ ಘನ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಒಂದು ಕಲ್ಪನೆಯನ್ನಿಟ್ಟುಕೊಂಡು ಅನೇಕ ಯೋಜನೆಗಳನ್ನು ತಂದಿದ್ದಾರೆ. ಅದರಲ್ಲಿ ಕೆಲವು ಯೋಜನೆಗಳ ಬಗ್ಗೆ ಸ್ವಾಗತ ಮಾಡುತ್ತೇನೆ. ಮೊನ್ನೆಯ ದಿನದಿಂದ ಇಲ್ಲಿಯವರೆಗೆ ಎಲ್ಲಾ ಪಕ್ಷದ ಅನೇಕ ಹಿರಿಯ ಶಾಸಕ ಸಹೋದರರು ಈ ಬಗ್ಗೆ ಬಹಳಷ್ಟು ಒಳ್ಳೆಯ ಬೆಳಕನ್ನು ಚೆಲ್ಲಿದ್ದಾರೆ. ಇದನ್ನು ನೋಡಿದಾಗ ನನಗೆ ನಾಲ್ಕು ಸಾಲುಗಳು ನೆನಪಾಗುತ್ತವೆ. "ದೂರವಾಣಿ ಬಂತು, ಓಲೆ ಎಲ್ಲಿ ಹೋಯಿತು? ದೂರದರ್ಶನ ಬಂತು, ಆಕಾಶವಾಣಿ ಎಲ್ಲಿ ಹೋಯಿತು? ಕಾರು ಗಾಡಿ ಬಂತು, ಎತ್ತಿನ ಗಾಡಿ ಎಲ್ಲಿ ಹೋಯಿತು? Pop ಸಂಗೀತ ಬಂತು, ಜಾನಪದ ಎಲ್ಲಿ ಹೋಯಿತು? Disco dance ಬಂತು, ಭರತನಾಟ್ಯ ಎಲ್ಲಿ ಹೋಯಿತು? Computer ಬಂತು, ಬೆರಳಚ್ಚು ಯಂತ್ರ ಎಲ್ಲಿ ಹೋಯಿತು? ಯಂತ್ರ ಮಾನವ ಬಂದ, ಸ್ವತಂತ್ರ ಮನ ಎಲ್ಲಿ ಹೋಯಿತು? ನಮ್ಮ ದೇಶ ಸ್ವತಂತ್ರ ಬಂದು 60 ವರ್ಷಗಳು ಕಳೆದರೂ ಕೂಡ ಇವತ್ತಿಗೂ ನಮ್ಮ ಹಳ್ಳಿಯ ಮೂಲಭೂತ ಸೌಕರ್ಯಗಳಿಗಾಗಿ ಹಳ್ಳಿಯ ಜನರ ಬವಣೆಗಾಗಿ ನಾವು ಬೇಡಿಕೆಗಳನ್ನು ಮಂಡಿಸುವಂಥ ಒಂದು ಪರಿಸ್ಥಿತಿ

ಬಂತು". ಅದಕ್ಕಾಗಿ ಇಂದು ಗ್ರಾಮೀಣಾಭಿವೃದ್ಧಿಯಲ್ಲಿ ನಾವು ನಿಜವಾಗಿಯೂ ಹಳ್ಳಿಗಳ ಉದ್ಧಾರವೇ ನಮ್ಮ ದೇಶದ ಉದ್ಧಾರ ಎಂಬ ಗಾಂಧೀಜಿಯವರ ಪರಿಕಲ್ಪನೆಯಂತೆ ಇಂದು ಸಚಿವರಾದವರು ದೂರದೃಷ್ಟಿಯನ್ನಿಟ್ಟುಕೊಂಡು ಅನೇಕ ಯೋಜನೆಗಳನ್ನು ತರುತ್ತಿದ್ದಾರೆ. ಅದರಲ್ಲಿ ಬಹಳಷ್ಟು ಸಮಸ್ಯೆಗೊಳಗಾದಂಥ ಪರಿಸ್ಥಿತಿ ಏನೆಂದರೆ, P.D.O. ಗಳ ಸಮಸ್ಯೆ. ಪ್ರತಿಯೊಂದು ಪಂಚಾಯತಿಯಲ್ಲಿ P.D.O. ಗಳ ಪಾತ್ರ ಯಾವ ಮಟ್ಟದ್ದು ಎನ್ನುವುದನ್ನು ಸಹೋದರ ಶಾಸಕರಾದಂಥ ಮಾನ್ಯ ಶಿವಲಿಂಗೇಗೌಡರವರು ಬಹಳ ಸವಿಸ್ತಾರವಾಗಿ ವಿವರಣೆ ಕೊಟ್ಟಿದ್ದಾರೆ. ಒಂದೊಂದು P.D.O. ಗಳಿಗೆ 3–4 ಪಂಚಾಯತಿಗಳ ಜವಾಬ್ದಾರಿ ಕೊಡುವುದರಿಂದ, ಯಾವ ಪಂಚಾಯತಿಯವರ ಕೈಗೂ P.D.O. ಗಳು ಸಿಗದಿರುವಂಥ ಪರಿಸ್ಥಿತಿಯನ್ನು ನಾವಿಂದು ನೋಡುತ್ತಿದ್ದೇವೆ. ದಯವಿಟ್ಟು ಇನ್ನೂ ಅನೇಕ P.D.O. ಗಳನ್ನು ಭರ್ತಿ ಮಾಡಿಕೊಂಡು ಪ್ರತಿಯೊಂದು ಪಂಚಾಯತಿಗೆ P.D.O. ಗಳು ಇರುವಂಥ ದೃಷ್ಟಿಕೋನದಿಂದ ಸಚಿವರು ಯೋಜನೆ ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ. ಅದೇ ರೀತಿಯಾಗಿ ಗ್ರಾಮಕ್ಕೆ ಬಹು ಮುಖ್ಯವಾಗಿ ಬೇಕಾಗಿರುವುದು ನೀರಿನ ವ್ಯವಸ್ಥೆ. ಈಗಾಗಲೇ over head tank ಗಳ ಮೂಲಕ ನೀರಿನ ವ್ಯವಸ್ಥೆಯನ್ನು ಕಲ್ಪಿಸಿ ಕೊಟ್ಟಿದ್ದೆವು. ಆದರೆ, ಇವತ್ತು ಅವರ ದೂರದೃಷ್ಟಿ ಕೋನದಿಂದ ಪ್ರತಿಯೊಂದು ಹಳ್ಳಿಗೂ ಕೂಡ, city ಯಲ್ಲಿರತಕ್ಕಂಥವರು Bisleri water ಕುಡಿಯುವ ತರಹ ಹಳ್ಳಿಗರು ಕೂಡ R.O. Plant ನಿಂದ ಶುದ್ಧವಾದಂಥ ನೀರನ್ನು ಕುಡಿಯಬೇಕೆನ್ನುವಂಥ ಕಲ್ಪನೆಯನ್ನಿಟ್ಟುಕೊಂಡು ಎಲ್ಲಾ ಕಡೆ ಮಾಡುತ್ತಿದ್ದಾರೆ. ಅದು ಸ್ವಾಗತಾರ್ಹವಾದ ವಿಚಾರ. ಆದರೆ, ನಾನು ಬೇಡಿಕೊಳ್ಳುವುದು ಏನೆಂದರೆ, chloride, arsenic ಇರುವ ಕಡೆಗಳಲ್ಲಿ ಮಾತ್ರ ಇದನ್ನು ಮಾಡದೇ, ಪ್ರತಿಯೊಂದು ಕಡೆ, ನದಿಗಳ ಮೂಲಕ ಬರುವಂಥ ನೀರು ಸಿಗುವಂಥ ಕ್ಷೇತ್ರಗಳ ಗ್ರಾಮಗಳಲ್ಲೂ ಕೂಡ ಈ ಒಂದು R.O. Plant ಗಳು ಸ್ಥಾಪನೆ ಆಗಬೇಕು. ಏಕೆಂದರೆ, ಎಲ್ಲೆಲ್ಲಿ R.O. Plant ನ ಶುದ್ಧ ನೀರಿನ ಘಟಕಗಳಿವೆ, ಅಲ್ಲಿ ಆರೋಗ್ಯದ ಸಮಸ್ಯೆಗಳು ಸುಮಾರು 50% ಗಿಂತಲೂ ಹೆಚ್ಚು ಕಡಿಮೆಯಾಗಿವೆ. ಅದಕ್ಕೆ ಇದು ಶುದ್ಧ ನೀರು ಪೂರೈಕೆ indirect ಆಗಿ ನಮ್ಮ

ಹಳ್ಳಿಗರ ಜನರ ಆರೋಗ್ಯ ದೃಷ್ಟಿಕೋನದಿಂದಲೂ ಕೂಡ ಬಹಳ ಅವಶ್ಯಕತೆ ಇರುವುದರಿಂದ, ಇದನ್ನು ಪ್ರತಿ ಊರಿಗೂ ಕೂಡ ಅದನ್ನು ಹೆಚ್ಚಿಗೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿಯಾಗಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆ. ಈ ಬಗ್ಗೆ ಅನೇಕ ಸಹೋದರರು ಅನೇಕ ರೀತಿಯಲ್ಲಿ ಹೇಳಿದ್ದಾರೆ. ಈ ಸಮಸ್ಯೆ ನನ್ನ ಕ್ಷೇತ್ರದಲ್ಲಿ ಇದ್ದು, ಕಳೆದ ಎರಡು ವರ್ಷಗಳಿಂದ ನಾನು ಬಹು ಗ್ರಾಮ ಯೋಜನೆಯನ್ನು ತೆಗೆದುಕೊಂಡು, water supply ನಲ್ಲಿ ಎಲ್ಲಾ ಅಧಿಕಾರಿಗಳಿಗೂ ಎಷ್ಟು ಸಾರಿ ಭೇಟ್ಟಿಯಾದರೂ ಸಚಿವರ ಮುಂದೆ ಚರ್ಚೆಯಾದಾಗಲೂ ಕೂಡ, ಇದು ಅಧಿಕಾರಿಗಳ ತಪ್ಪು ಹೇಳಿಕೆಯ ಮೂಲಕ ಆ ಯೋಜನೆ ಇನ್ನೂವರೆಗೆ ಕೂಡ ಮಂಜೂರಾತಿಯಾಗಿಲ್ಲ. ಏಕೆಂದರೆ, 2003–04ರಲ್ಲಿ ಗಳತಗಾ ಗ್ರಾಮದಲ್ಲಿ ಆದಂತಹ ಬಹು ಗ್ರಾಮ ಯೋಜನೆ success ಆಗದೇ ಅಲ್ಲಿ ನೀರಿನ ಕೊರತೆ ಬಹಳ ಇದೆ. ಅದಕ್ಕೆ ನಾನು 2013 ರಲ್ಲಿಯೇ ಅದರ ಪ್ರಸ್ತಾವನೆಯನ್ನು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಕೊಟ್ಟಾಗ, ಅಲ್ಲಿ Water Supply Department change ಆಗದೆ ಎಂದರು ಹೊಸದಾಗಿ ಇಲಾಖೆ ಆಗದೇ ಇದ್ದಾಗ, ಅಲ್ಲಿ ಒಳ್ಳೆಯ ಕೆಲಸ ಆಗುತ್ತಿತ್ತು. But ಈಗ ಅದು separate ಆಗಿ water supply ಇಲಾಖೆ ಮಾಡಿದ್ದರಿಂದ ಆಮೆ ಗತಿಗಿಂತಲೂ ನಿಧಾನವಾಗಿ ಆ ಒಂದು ಬಹು ಗ್ರಾಮ ಯೋಜನೆ ಕೆಲಸವಾಗುತ್ತಿದೆ. ದಿನ ಬೆಳಗಾದರೆ strike ಗಳಾಗುತ್ತಿವೆ. ನಾವು ಸಾವಿರ ಕೆಲಸ ಮಾಡಿದರೂ ಕೂಡ, ಒಂದೂ ಕೆಲಸ ಆಗದಿರುವಂಥ ಪರಿಸ್ಥಿತಿ ಇದೆ. ಅದೂ ಮುಖ್ಯವಾಗಿ ನೀರಿನ ವ್ಯವಸ್ಥೆಯಾಗದೇ ಇರುವುದರಿಂದ ಮುಖ್ಯವಾಗಿ ಶಾಸಕರಿಗೆ ಕೆಟ್ಟ ಹೆಸರು ಬರುತ್ತಿದೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ನನ್ನ ಗಳತಗಾ ಮತ್ತು ಮಾನಕಾಪುರ ಗ್ರಾಮದ ಬಹು ಗ್ರಾಮ ಯೋಜನೆ ಕೆಲಸ ಆದಷ್ಟು ಬೇಗ ಆಗಬೇಕು, ಆ ದಾರಿ ತಪ್ಪಿಸತಕ್ಕಂಥ water supply ಅಧಿಕಾರಿಗಳು filed ಗೆ ಬಂದು survey ಮಾಡದೇ, ಇಲ್ಲಿಯೇ A.C. room ನಲ್ಲಿ ಕುಳಿತು, ಅವರು ಬರೆದಂಥ report ಗಳನ್ನು ನೋಡಿ ಸಚಿವರು ಅದರ ಕಡೆಗೆ ಗಮನ ಹರಿಸಬೇಕು ಮತ್ತು ಅದನ್ನು ಆದಷ್ಟು ಬೇಗನೆ ಮಾಡಿ ಕೊಡಬೇಕು. ಅದೇ

ರೀತಿಯಾಗಿ ಬಹು ಗ್ರಾಮ ಯೋಜನೆಗಳನ್ನು ಮಾಡಿ 10–15 ವರ್ಷಗಳು ಕಳೆದಿವೆ. ಈಗ ಜನಸಂಖ್ಯೆ ಕೂಡ ಹೆಚ್ಚಾಗಿದೆ, ನೀರಿನ ಬೇಡಿಕೆ ಕೂಡ ಹೆಚ್ಚಾಗಿದೆ. 10 ವರ್ಷಗಳ ಹಿಂದೆ ಹಾಕಿರತಕ್ಕಂಥ pipe ಗಳಿರಬಹುದು, ಎಷ್ಟು inch pipe ಇದೆ, ಅದನ್ನು ಬದಲಾಯಿಸಿ ಈಗ ದೊಡ್ಡ pipe ಗಳನ್ನು ಹಾಕತಕ್ಕಂಥ ಅವಶ್ಯಕತೆಯಿದೆ. ಜನಸಂಖ್ಯೆ ಜಾಸ್ತಿಯಾಗಿರುವುದರಿಂದ ಬೆಳೆದಂಥ ಜನಸಂಖ್ಯೆಯ area ದಲ್ಲಿಯೂ ಕೂಡ ಆ pipe line ಗಳನ್ನು ಹಾಕಿ, ಮತ್ತೆ ಅದನ್ನು ಪುನಃಶ್ಚೇತನ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿಯಾಗಿ ಶೌಚಾಲಯಗಳ ಬಗ್ಗೆ ಹೇಳುವುದಾದರೆ, ಎಲ್ಲಾ ಶಾಸಕರು ಶೌಚಾಲಯಗಳ ಸಮಸ್ಯೆಗಳ ಬಗ್ಗೆ ಹೇಳಿದರು. ನಾನು ಮೊನ್ನೆ ಪುತ್ತೂರಿನಲ್ಲಿ ಒಂದು readymade ಶೌಚಾಲಯ ಮಾಡತಕ್ಕಂಥ factory ಗೆ ಭೇಟಿ ಕೊಟ್ಟಿದ್ದೆ. ಈಗ urgent ಆಗಿ ಶೌಚಾಲಯ ನಿರ್ಮಿಸಿಕೊಳ್ಳಲು ಫಲಾನುಭವಿಗಳು ready ಆಗಿದ್ದಾರೆ. ಆದರೆ, ಅದನ್ನು ನಾವು factory ಯಿಂದ ತರುವ ವ್ಯವಸ್ಥೆ ಮಾಡಬೇಕಾದರೆ 12 ರಿಂದ 14% tax ತುಂಬಬೇಕಾಗುತ್ತದೆ, ಸರ್ಕಾರದವರು ಈ ಯೋಜನೆಗನುಗುಣವಾಗಿ tax ಅನ್ನು ನಮಗೆ free ಮಾಡಿಕೊಟ್ಟರೆ ಇದರಿಂದಾಗಿ ಫಲಾನುಭವಿಗಳಿಗೆ ಒಳ್ಳೆಯ ದರದಲ್ಲಿ readymade ಶೌಚಾಲಯಗಳನ್ನು supply ಮಾಡಬಹುದು ಎಂದು ಆ factory ಮಾಲೀಕರು ನನ್ನನ್ನು ಕೇಳಿಕೊಂಡರು. ಇದಕ್ಕೆ ನಾನು ನಿಮ್ಮ ಮೂಲಕ ಬೇಡಿಕೊಳ್ಳುವುದೇನೆಂದರೆ, ತಮ್ಮ ಮೂಲಕ ಸಚಿವರಿಗೆ ಹೇಳುವುದೇನೆಂದರೆ,...

ಅಧ್ಯಕ್ಷರು:– Cost ಎಷ್ಟು ಆಗುತ್ತದೆಯಂತೆ? ಅವರು ಎಷ್ಟು ಹೇಳಿದರು?

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್:– ಅವರು 18 ರಿಂದ 20 ಸಾವಿರ ರೂ.ಗಳು ಎಂದು ಹೇಳಿದರು. ಅವರಿಗೆ tax free ಮಾಡಿ ಕೊಟ್ಟಾಗ, ಅದು ಇನ್ನೂ ಒಳ್ಳೆಯ ರೀತಿಯಲ್ಲಿ urgent ಆಗಿ, ಶೌಚಾಲಯಗಳು ನಮ್ಮ ಜನರಿಗೆ ಮುಟ್ಟುವ ವ್ಯವಸ್ಥೆ ಮಾಡಬಹುದು. ಅದೇ ರೀತಿಯಾಗಿ ಬಹಳ ಮುಖ್ಯವಾದುದು ಎಂದರೆ, ಪಂಚಾಯಿತಿಗಳಿಗೆ

ವಿದ್ಯುತ್ತಿನ bill ತುಂಬಲು ಕಷ್ಟದ ಪರಿಸ್ಥಿತಿ ಇದೆ. ಇದು ಪಂಚಾಯಿತಿಗೆ ಬಹಳಷ್ಟು ಹೊರೆಯಾಗುತ್ತಿರುವುದರಿಂದ, ಆ ಪಂಚಾಯಿತಿ bill ಗಳನ್ನು ಸರ್ಕಾರದಿಂದಲೇ ತುಂಬಬೇಕು. ಈಗ ತಾನೇ ಪಂಚಾಯಿತಿ election ಆಗಿ ಈಗ ಹೊಸ ಅಧ್ಯಕ್ಷರು, ಉಪಾಧ್ಯಕ್ಷರು ಬಂದಿದ್ದಾರೆ. ಇಲ್ಲಿಯವರೆಗೆ ಬಳಸಿದ ವಿದ್ಯುತ್ bill ಗಳನ್ನು ಸರ್ಕಾರದಿಂದ ತುಂಬುವಂಥ ವ್ಯವಸ್ಥೆಯಾಗಬೇಕು. ಮುಂದೆ ಬರತಕ್ಕಂಥ ಐದು ವರ್ಷದ period ನಲ್ಲಿ ಪಂಚಾಯಿತಿಯ light bill ಗಳನ್ನು ತುಂಬಲು ಸರ್ಕಾರದಿಂದ ಒಂದು ಯೋಜನೆ ರೂಪಿಸಬೇಕು. ಯಾರು ವ್ಯವಸ್ಥಿತವಾಗಿ ಆ bill ಗಳನ್ನು ತುಂಬುತ್ತಾರೋ ಅಥವಾ ಯಾರು ಕಡಿಮೆ ವಿದ್ಯುತ್ ಬಳಸಿ bill ನ್ನು ಕಡಿಮೆಗೊಳಿಸಿ ವ್ಯವಸ್ಥಿತವಾಗಿ ಅದನ್ನು ತುಂಬುತ್ತಾರೋ, ಅಂಥವರಿಗೆ ಬಹುಮಾನ ಕೊಡುವಂಥದ್ದಾಗಬೇಕು. ಇದು ನನಗೆ ಅನ್ನಿಸಿದ ಮಟ್ಟಿಗೆ ಮಾನ್ಯ ಎಸ್.ಎಂ. ಕೃಷ್ಣಾರವರ ಕಾಲದಲ್ಲಿ ಈ ರೀತಿಯ ಯೋಜನೆ ಇತ್ತು. ಈ ಪಂಚಾಯಿತಿ ವಿದ್ಯುತ್ bill ನ್ನು ಕಡಿಮೆ ಮಾಡಿಸಬೇಕೆಂದರೆ, ಎಲ್ಲಾ ಕಡೆಗಳಲ್ಲಿಯೂ ಕೂಡ ಈಗ ಹೊಸದಾಗಿ ಬಂದಂಥ LED light ಗಳನ್ನು ನಾವು ಅಳವಡಿಸಬೇಕು. ಹೀಗೆ ಮಾಡಿದಲ್ಲಿ ಮುಂದೆ ಕಡಿಮೆ ಮೊತ್ತದ ಬಿಲ್‌ಗಳು ಬರುತ್ತದೆ. ಪಂಚಾಯಿತಿಯ ಹೊರೆಯನ್ನು ಕಡಿಮೆ ಮಾಡುವಂಥ ದೃಷ್ಟಿಕೋನದಿಂದ ಈ ರೀತಿಯ ಪ್ರಯತ್ನವನ್ನು ಮಾಡಬಹುದು. ಅದೇ ರೀತಿಯಾಗಿ 5 ಸಾವಿರ ಜನಸಂಖ್ಯೆ ಆಧಾರದ ಮೇಲೆ 'ಗ್ರಾಮ ವಿಕಾಸ' ಎಂಬ ಯೋಜನೆ ಮಾಡಿದ್ದಾರೆ. ಇದನ್ನು ಇನ್ನೂ ಕೂಡ ಜಾಸ್ತಿ ಮಾಡಬೇಕೆಂದು ಹಾಗೂ ಮೂರು ವರ್ಷಗಳ ಅವಧಿ ಇರುವುದನ್ನು ಒಂದು ವರ್ಷಕ್ಕೆ ಅದರ ಅವಧಿಯನ್ನು ಕಡಿಮೆಗೊಳಿಸಿದರೆ, ಆ ಗ್ರಾಮಗಳ ವಿಕಾಸ ಇನ್ನೂ ಚೆನ್ನಾಗಿ ಆಗಬಹುದೆಂಬ ದೃಷ್ಟಿಕೋನದಿಂದ ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ಎಲ್ಲಾ ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ. ನಮ್ಮ ಕ್ಷೇತ್ರದಲ್ಲಿಯೂ ಕೂಡ ಅದೇ ಸಮಸ್ಯೆ ಆಗಿದೆ. ಆದ್ದರಿಂದ, ಅದರಲ್ಲಿರುವ ನಿಯಮಗಳನ್ನು ಸ್ವಲ್ಪ ಸರಳೀಕರಣಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಬಹಳಷ್ಟು ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡು

ಗ್ರಾಮದ ವಿಕಾಸಕ್ಕಾಗಿ ನಾವೆಲ್ಲರೂ ಪ್ರಯತ್ನ ಮಾಡತಕ್ಕಂಥ ಕೆಲಸ ಆಗಬೇಕು. ನಾನು ಕೇವಲ 5 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸಿದ್ದೇನೆ. ಇನ್ನೂ ಮುಂದೆಯಾದರೂ ಮಹಿಳೆಯರು ಮಾತನಾಡುವುದಕ್ಕೆ ಅವಕಾಶವನ್ನು ತಾವು ಕಲ್ಪಿಸಿಕೊಡಬೇಕು. ನಾವು ಹೊಸದಾಗಿ ಆಯ್ಕೆ ಆಗಿ ಬಂದಿದ್ದರೂ ಸಹ ಮಾತನಾಡುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಮತ್ತೊಮ್ಮೆ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತಿಗೆ ವಿರಾಮವನ್ನು ಕೊಡುತ್ತಿದ್ದೇನೆ.

ಶ್ರೀ ಜೆ.ಟಿ. ಪಾಟೀಲ್ (ಬೀಳಗಿ):- ಸನ್ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕೃಷಿ ಇಲಾಖೆ ಬಗ್ಗೆ ಅನೇಕ ಸ್ನೇಹಿತರು ಮಾತನಾಡಿ, ಸಾಕಷ್ಟು ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ನಾನು ಈ ಸಂದರ್ಭದಲ್ಲಿ ಮಾನ್ಯ ಕೃಷಿ ಸಚಿವರನ್ನು ಅಭಿನಂದಿಸುತ್ತೇನೆ. ಕಳೆದ ವರ್ಷ 'ಕೃಷಿ ಭಾಗ್ಯ' ಎಂಬ ಯೋಜನೆಯನ್ನು ತಂದು ಅನೇಕ ಬಡ ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಜೊತೆಗೆ ಕಳೆದ ಅಧಿವೇಶನದ ಸಂದರ್ಭದಲ್ಲಿ ನಾನು ಮತ್ತು ನನ್ನ ಸ್ನೇಹಿತರಾದ ಮಾನ್ಯ ಬೊಮ್ಮಯಿಯವರು ಮಣ್ಣಿನ ಪರೀಕ್ಷೆ ಬಗ್ಗೆ ಚರ್ಚೆ ಮಾಡಿದ್ದೇವೆ. ಅದನ್ನು ಈಗ ಅನುಷ್ಠಾನ ತರುವುದಕ್ಕೆ ಸರ್ಕಾರ ಕಾರ್ಯಗತವಾಗಿದೆ. ಅದಕ್ಕಾಗಿ ಅವರಿಗೆ ಮತ್ತೊಮ್ಮೆ ಅಭಿನಂದನೆ ಹೇಳುವುದಕ್ಕೆ ಬಯಸುತ್ತೇನೆ. ನನ್ನ ಬೀಳಗಿ ಕ್ಷೇತ್ರದಲ್ಲಿ ಕಳೆದ ಒಂದು ವರ್ಷದಲ್ಲಿ ರೋಹಿಣಿ ಬೈಠಕ್ ಸಹಯೋಗದೊಂದಿಗೆ 1 ಸಾವಿರ ರೈತ ಕುಟುಂಬಗಳಿಗೆ ಮಣ್ಣು ಪರೀಕ್ಷೆ ಮಾಡಿಸಿ ಕಳೆದ 15 ದಿವಸಗಳ ಹಿಂದೆ ಅವರಿಗೆ ಕಾರ್ಡ್‌ಗಳನ್ನು ವಿತರಣೆ ಮಾಡಿದ್ದೇನೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಎಲ್ಲಿಯವರೆಗೆ ಮಣ್ಣಿನ ಆರೋಗ್ಯದ ಸ್ಥಿತಿ ಚೆನ್ನಾಗಿರುವುದಿಲ್ಲವೋ, ನೀರಿನ ಸದ್ಬಳಕೆ ಬಗ್ಗೆ ರೈತರಿಗೆ ಮಾಹಿತಿಯನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೋ, ಅಲ್ಲಿಯವರೆಗೆ ಭೂಮಿಯ ಗುಣಮಟ್ಟವನ್ನು ಕಾಪಾಡಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ, ಹಾಗೆಯೇ ಉತ್ತಮವಾದಂಥ ಹೆಚ್ಚಿನ ಬೆಳೆಯನ್ನು ತೆಗೆಯುವುದಕ್ಕೆ

ಸಾಧ್ಯವಿಲ್ಲ. ಈ ಬಗ್ಗೆ ಇವತ್ತಿನದಿವಸ ಅನೇಕ ಜನ ರೈತರು ತಮ್ಮ ಭೂಮಿಯಲ್ಲಿ ಪ್ರಯೋಗ ಮಾಡಿ ಯಶಸ್ವಿಯಾಗಿದ್ದಾರೆ. ಆದ್ದರಿಂದ, ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗ ಮಣ್ಣು ಪರೀಕ್ಷೆ ಮಾಡತಕ್ಕಂಥ ಕೆಲಸವನ್ನು ತಾವು ಏನು ಕೈಗೊಂಡಿದ್ದೀರಿ, ಅದನ್ನು ಮೂರು ತಿಂಗಳಲ್ಲಿ ಮಾಡಿ ಮುಗಿಸಬೇಕು. ಈಗ ಮಳೆಗಾಲದ ಬಿತ್ತನೆ ಪ್ರಾರಂಭವಾಗಿದೆ. ಹಿಂಗಾರಿನ ಬೆಳೆ ಬೆಳೆಯುವುದಕ್ಕಿಂಥ ಮುಂಚಿತವಾಗಿ ಮಣ್ಣು ಪರೀಕ್ಷೆ ಮಾಡಿ, ರೈತರಿಗೆ ಸಹಾಯ ಮಾಡಿದರೆ, ನಿಶ್ಚಿತವಾಗಿ ಒಂದು ಉತ್ತಮ ಬೆಳವಣಿಗೆ ನಮ್ಮ ರಾಜ್ಯದಲ್ಲಿ ಆಗುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. Drip Irrigation ಕಾರ್ಯಕ್ರಮವನ್ನು ತಾವು ಹಾಕಿಕೊಂಡಿದ್ದೀರಿ. ಈ ಒಂದು ಕಾರ್ಯಕ್ರಮದಲ್ಲಿ 5 ಎಕರೆಗಳು ಇರತಕ್ಕಂಥದ್ದನ್ನು 10 ಎಕರೆಗಳಿಗೆ ವಿಸ್ತರಿಸಬೇಕೆಂದು ಕಳೆದ ಸಲ ನಾನು ನಿಮಗೆ ಒತ್ತಾಯ ಮಾಡಿದ್ದೆ. ಇದಕ್ಕೆ ಆರ್ಥಿಕ ಹೊರೆ ಆಗುವುದರಿಂದ ತಾವು ಹಿಂದೇಟು ಹಾಕುತ್ತಿದ್ದೀರಿ. ತಾವು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಇದನ್ನು ತಾವು ಮಾಡಬೇಕೆಂಬ ಒತ್ತಾಯವನ್ನು ಮಾಡುತ್ತೇನೆ. ಕಾರಣ ಏನೆಂದರೆ, ಇವತ್ತಿನ ದಿವಸ ನಮಗೆ ನೀರು ಮತ್ತು ವಿದ್ಯುತ್ ಉಳಿತಾಯ ಆಗಬೇಕಾಗಿದೆ, ಹಾಗೆಯೇ ಇಳುವರಿ ಹೆಚ್ಚು ಆಗಬೇಕಾಗಿದೆ. ಆದ್ದರಿಂದ ಇದನ್ನು 5 ರಿಂದ 10 ಎಕರೆಗಳಿಗೆ ವಿಸ್ತರಣೆ ಮಾಡಿದರೆ ಹೆಚ್ಚಿನ ಪ್ರಮಾಣದ ರೈತರಿಗೆ ಲಾಭ ಆಗುತ್ತದೆ ಎನ್ನತಕ್ಕಂಥದನ್ನು ಸಹಿತ ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮಾನ್ಯ ಬೊಮ್ಮಾಯಿಯವರು ಹೇಳಿದ ಹಾಗೆ ಕೃಷಿ ವಿಶ್ವವಿದ್ಯಾಲಯಗಳು ಕೇವಲ University campus ಗೆ ಸೀಮಿತವಾಗಿದೆ, ಈ ರೀತಿ ಆಗಬಾರದು. Lab to land ಎನ್ನತಕ್ಕಂಥದ್ದು ಇದೆ. ಆದ್ದರಿಂದ, ರೈತರ ಭೂಮಿಗೆ University ಬರಬೇಕಾಗಿದೆ. ಹೊಸ ಹೊಸ ಯೋಜನೆ, ಹೊಸ ಆವಿಷ್ಕಾರ ಮತ್ತು ಹೊಸ ಬೀಜಗಳನ್ನು ಮಾಡುವುದರಿಂದ ರೈತರಿಗೆ ಲಾಭ ಆಗುತ್ತದೆ. ಆದರೆ, ನಿಜವಾಗಿಯೂ ಕೂಡ Universityಗಳು ರೈತನ ಜಮೀನಿಗೆ ಬರಬೇಕಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಬಯಸುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರ ಮತ್ತು ಇಲಾಖೆ

ಗಮನಕ್ಕೆ ಹಾಗೂ ರೈತರ ಗಮನಕ್ಕೆ ತರುವುದಕ್ಕೆ ಇಷ್ಟಪಡುವುದೇನೆಂದರೆ, ಇವತ್ತು ನಾವು ಬೇಕಾಬಿಟ್ಟಿಯಾಗಿ ಔಷಧಿಯನ್ನು ಮತ್ತು ಗೊಬ್ಬರವನ್ನು ಬಳಕೆ ಮಾಡಿ ಬೆಳೆಯನ್ನು ಬೆಳೆಯುತ್ತಿದ್ದೇವೆ. ಇವತ್ತು ತೋಟಗಾರಿಕೆ ಅಥವಾ ಕೃಷಿ ಇಲಾಖೆ ಬೆಳೆ ಇರಬಹುದು. ಈ ಬೆಳೆಗಳು ಜನರ ಆರೋಗ್ಯದ ಮೇಲೆ ಯಾವ ರೀತಿಯಾಗಿ ದುಷ್ಪರಿಣಾಮ ಬೀರುತ್ತಿದೆ ಎಂಬುದನ್ನು ನಾವೆಲ್ಲರೂ ಮರೆತಿದ್ದೇವೆ. ಅಂದರೆ, ಎಲ್ಲಾ ಸರ್ಕಾರಗಳು, ಇಲಾಖೆಗಳು, ವಿಜ್ಞಾನಿಗಳು, ಕೃಷಿ ವಿಶ್ವವಿದ್ಯಾಲಯಗಳು ಮತ್ತು ರೈತರು ಇರಬಹುದು. ಯಾವುದೇ ಒಂದು ಹಣ್ಣನ್ನು ತಿನ್ನುವುದಕ್ಕೆ ಆಗದೆ ಇರತಕ್ಕಂಥ ಪರಿಸ್ಥಿತಿ ಇವತ್ತಿನದಿವಸ ನಿರ್ಮಾಣವಾಗಿದೆ. ಜನರ ಬಾಯಿಗೆ ನೇರವಾಗಿ ವಿಷವನ್ನು ನಾವು ಕೊಡುತ್ತಿದ್ದೇವೆ. ಇದನ್ನು ತಪ್ಪಿಸುವುದಕ್ಕೆ ಆರೋಗ್ಯ, ಕೃಷಿ, ತೋಟಗಾರಿಕೆ ಇಲಾಖೆಗಳು ಇದರ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗಿದೆ. 15 ದಿನಗಳ ಹಿಂದೆ ಪತ್ರಿಕೆಯಲ್ಲಿ ಒಂದು ವಿಷಯವನ್ನು ಓದಿದ್ದೇನೆ. ಅದೇನೆಂದರೆ, ಅಮೇರಿಕಾ ದೇಶದಲ್ಲಿ banned food items ಏನಿವೆ, ಅದರಲ್ಲಿ ಜಗತ್ತಿನಲ್ಲಿ ಭಾರತ ದೇಶವನ್ನು ಒಂದನೇ ಸ್ಥಾನದಲ್ಲಿ ನಿಲ್ಲಿಸಿದ್ದಾರೆ. ಇದು ನಿಜಕ್ಕೂ ದುರ್ದೈವದ ವಿಚಾರವಾಗಿದೆ. ಕಾರಣ ಏನೆಂದೆರ, ನಮ್ಮಲ್ಲಿ ಕಳಪೆ ದರ್ಜೆಯ ಔಷಧಿಗಳು ಮತ್ತು ಗೊಬ್ಬರಗಳ ಜೊತೆಗೆ ಯಾವುದೇ ವೈಜ್ಞಾನಿಕವಾದ ಪದ್ಧತಿಯನ್ನು ಉಪಯೋಗ ಮಾಡದೆ ಇರತಕ್ಕಂಥ ಸ್ಥಿತಿ ಆಗಿದೆ. ಇವತ್ತಿನದಿವಸ ರೈತರಲ್ಲಿ ಏನಾಗಿದೆ ಎಂದರೆ, ನಮ್ಮ ಬೆಳೆ ಹೆಚ್ಚು ಬರಬೇಕು, ಇದರಿಂದ ಮನುಷ್ಯನ ಆರೋಗ್ಯ ಹಾಳಾದರೂ ಚಿಂತೆ ಇಲ್ಲ, ನಾವು ಹೆಚ್ಚು ಲಾಭ ಮಾಡಿಕೊಳ್ಳಬೇಕೆಂಬ ಮಾನಸಿಕ ಸ್ಥಿತಿಗೆ ನಾವು ಬಂದಿದ್ದೇವೆ. ಇವತ್ತಿನ ದಿವಸ ರೈತರಿಗೆ ಮಾರುಕಟ್ಟೆಯ ವ್ಯವಸ್ಥೆ ಸರಿಯಾಗಿ ಇಲ್ಲದೆ ಇರುವ ಕಾರಣ...

ಅಧ್ಯಕ್ಷರು:- ಬಾಳೆ ಗಿಡಕ್ಕೆ ಯಾವುದೋ ಒಂದು ಬಗೆಯ ಔಷಧಿಯನ್ನು ಸಿಂಪಡಿಸುತ್ತಾರೆ.

ಶ್ರೀ ಜೆ.ಟಿ. ಪಾಟೀಲ್ (ಬೀಳಗಿ):- ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಏನಾಗಿದೆ ಎಂದರೆ, ಸೌತೆಕಾಯಿ ಅರ್ಧ ಸೆಂಟಿಮೀಟರ್ ಬೆಳೆದಿದ್ದರೆ ಅದಕ್ಕೆ

ಯಾವುದೋ ಒಂದು ಬಗೆಯ ಔಷಧಿ ಹೊಡೆದರೆ ಮರುದಿವಸ 5 ರಿಂದ 6 ಇಂಚು ಉದ್ದ ಬೆಳೆದು, ಅದನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಬಹುದಾಗಿದೆ. ಕಲ್ಲಂಗಡಿ ಹಣ್ಣಿಗೆ injection ಮಾಡುತ್ತಾರೆ. ಅದು mature ಆಗದೆ ಇದ್ದರೂ ಸಹ, ಒಳ್ಳೆಯ colour ಬರುತ್ತದೆ. ಮಾವಿನ ಹಣ್ಣು, ಬಾಳೆಯ ಹಣ್ಣು, ಚಿಕ್ಕು ಹಣ್ಣು, ದ್ರಾಕ್ಷಿ, apple ಇವತ್ತಿನದಿವಸ ಯಾವುದೇ ಹಣ್ಣನ್ನು ತೆಗೆದುಕೊಂಡರು ಸಹ ನಾವು ನೇರವಾಗಿ ಮಕ್ಕಳ ಹೊಟ್ಟೆಗೆ ವಿಷವನ್ನು ಕೊಡುತ್ತಿದ್ದೇವೆ. ಇದರ ಬಗ್ಗೆ ಸರ್ಕಾರ ಜವಾಬ್ದಾರಿ ತೆಗೆದುಕೊಳ್ಳಬೇಕು. ಬೇರೆ ದೇಶಗಳ ಮಾರುಕಟ್ಟೆಯಲ್ಲಿ ಯಾವ ರೀತಿ ಇದೆ ಎಂದರೆ, organic ಮೇಲೆ ಬೆಳೆದಂಥ ಬೆಳೆಗಳು, ಹಣ್ಣುಗಳನ್ನು ವಿತರಣೆ ಮಾಡುವಾಗ, ಅವುಗಳನ್ನು ಬೇರೆ ಬೇರೆ ಮಾಡಿ, ಪ್ರತ್ಯೇಕವಾಗಿ ಮಾರಾಟ ಮಾಡುವುದಕ್ಕೆ ಇಟ್ಟಿರುತ್ತಾರೆ. ಆದರೆ, ನಮ್ಮಲ್ಲಿ ನೇರವಾಗಿ ವಿಷವನ್ನು ಕೊಡುತ್ತಿದ್ದೇವೆ. ಮುಂದಿನ ಜನಾಂಗಕ್ಕೆ ನಾವು ಏನು ಹೇಳುವುದು? ಇದೇ ರೀತಿಯಾಗಿ ಮುಂದುವರಿದರೆ, ಮುಂದಿನ ಜನಾಂಗದ ಮಕ್ಕಳು paralysis, cancer ಅಥವಾ ಮತ್ತೊಂದು ರೋಗಗಳು ಬರುವುದು ಯಾವುದೇ ಒಂದು ವೈಜ್ಞಾನಿಕವಾದ ಮಾಹಿತಿ ಇಲ್ಲದ ಕಾರಣಕ್ಕಾಗಿ ಎಂದು ಹೇಳುತ್ತೇನೆ. ರೈತರು ಯಾವುದೇ ಒಂದು ಮಾಹಿತಿ ಇಲ್ಲದೆ ಬೆಳೆಯನ್ನು ಬೆಳೆಯುತ್ತಿದ್ದೇವೆ. ಇದರ ನೇರ ದುಷ್ಪರಿಣಾಮ ನಮ್ಮ ಆರೋಗ್ಯದ ಮೇಲೆ ಆಗುತ್ತಿದೆ. ಇವತ್ತಿನದಿವಸ ರೋಗಗಳಿಗೆ doctor ಗಳು ಎಷ್ಟೇ ವೈಜ್ಞಾನಿಕವಾಗಿ ಅವುಗಳಿಗೆ ಔಷಧಿಗಳನ್ನು ಹುಡುಕಿದರೂ ಸಹ ಮತ್ತೊಂದು ರೋಗ ಹೊಸದಾಗಿ ಬರುತ್ತಿದೆ. ನಾವು ಬೆಳೆಯತಕ್ಕಂಥ ಬೆಳೆಗಳು ಇದಕ್ಕೆ ಮುಖ್ಯವಾದ ಕಾರಣವಾಗಿದೆ. ಇವತ್ತಿನದಿವಸ ಹಾಲು ಮತ್ತು ತುಪ್ಪ ವಿಷವಾಗಿದೆ. ಹಣ್ಣುಗಳನ್ನು ತಿನ್ನುವುದಕ್ಕೆ ಆಗದೇ ಇರತಕ್ಕಂಥ ಸ್ಥಿತಿ ಇದೆ. ಮಕ್ಕಳಿಗೆ ಎಂಥದ್ದನ್ನು ತಿನ್ನಿಸುತ್ತಿದ್ದೇವೆಂಬುದನ್ನು ನೋಡಿದಾಗ ನಾವು ಎಂಥ ಪಾಪಿಷ್ಟರು ಎಂದು ನಾವೆಲ್ಲರೂ ಚಿಂತನೆ ಮಾಡಬೇಕಾಗಿದೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಆದ್ದರಿಂದ, ಈ ಕಡೆಗೆ ದಯಮಾಡಿ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಇದರ ಮೇಲೆ ಕಡಿವಾಣ ಹಾಕಬೇಕಾಗಿದೆ. ಇವತ್ತಿನದಿವಸ medical shop ಗೆ

ಹೋದಾಗ ಅಲ್ಲಿ 50% bogus ಔಷಧಿ ಇರುತ್ತದೆ. ಇಲ್ಲಿ ಸಂಬಂಧ ಇಲ್ಲದೆ ಇದ್ದರೂ ಸಹ ಈ ಸಂದರ್ಭದಲ್ಲಿ ಆ ವಿಷಯವನ್ನು ಇಲ್ಲಿ quote ಮಾಡುತ್ತಿದ್ದೇನೆ. ಒಬ್ಬ ರೈತ ಔಷಧಿ ಅಥವಾ ಗೊಬ್ಬರದ ಅಂಗಡಿಗೆ ಹೋಗುತ್ತಾನೆ. ಅಂಗಡಿಯಲ್ಲಿ salesman A, B, C,D ಅಥವಾ ಅ,ಬ,ಕ,ಡ. ಅಕ್ಷರಗಳು ಬಾರದೆ ಇರತಕ್ಕಂಥ ಮನುಷ್ಯ ಇರುತ್ತಾನೆ.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು)

ಈ ರೀತಿ ಇದ್ದಾಗ ನಾವು ಮಾಹಿತಿ ಇಲ್ಲದೆ, ನಮ್ಮ ಹೊಲಕ್ಕೆ ಔಷಧಿ, ಗೊಬ್ಬರ ಹಾಕಿ ಬೆಳೆ ಬೆಳೆಯತಕ್ಕಂಥ ಸ್ಥಿತಿ ಆದರೆ ನಮ್ಮ ಇಲಾಖೆ, ನಮ್ಮ ಕೃಷಿಕರು ಮತ್ತು ನಮ್ಮ ಬೆಳೆ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬ ಬಗ್ಗೆ ತಾವು ಬಹಳ serious ಆಗಿ ಗಮನಹರಿಸಬೇಕು. ಏಕೆಂದರೆ, ಮಾನ್ಯ ಕೃಷ್ಣಬೈರೇಗೌಡರ ಮೇಲೆ ನಾವು ಬಹಳ ವಿಶ್ವಾಸ ಇಟ್ಟಿದ್ದೇವೆ. ತಾವು ಚೆನ್ನಾಗಿ ಕೆಲಸ ಮಾಡುತ್ತಿದ್ದೀರಿ. ನಿಮ್ಮ ಕೆಲಸದ ಬಗ್ಗೆ ನಮಗೆ ಯಾವುದೇ ಆತಂಕ ಇಲ್ಲ. ನಮ್ಮ ಕರ್ನಾಟಕ ರಾಜ್ಯದ ಕೃಷಿ ಮತ್ತು ಬೆಳೆಯುವಂಥ ವಿಷಮುಕ್ತವಾದಂಥ ಹಣ್ಣುಗಳು, ತರಕಾರಿಗಳು ಇಡೀ ದೇಶಕ್ಕೆ ಮಾದರಿಯಾಗಬೇಕಾಗಿದೆ. ತರಕಾರಿಗಳು ಇವತ್ತಿನದಿವಸ ಯಾವ ರೀತಿಯಾಗಿ ಬೆಳೆಯುತ್ತಾರೆಂದು ವಿಚಾರ ಮಾಡಿದರೆ ಖಂಡಿತ ಬೇಸರವಾಗುತ್ತದೆ. ಇವತ್ತಿನದಿವಸ ಬೆಂಗಳೂರು ನಗರದಲ್ಲಿರುವ ಜನರು ಪೂರ್ಣವಾಗಿ ವಿಷವನ್ನು ತಿನ್ನುತ್ತಿದ್ದಾರೆ. ಹಳ್ಳಿ ಹಳ್ಳಿಯಲ್ಲಿ ಕೆಲವರು ತಮ್ಮ ಜಾಗದಲ್ಲಿ ತಮಗೆ ಬೇಕಾದ ಕಾಯಿಪಲ್ಯಗಳನ್ನು, ಹಣ್ಣುಗಳನ್ನು ತಮ್ಮ ಮಕ್ಕಳಿಗೆ ಮತ್ತು ಅವರ ಮನೆಗೆ ಬೇಕಾಗುವಷ್ಟು ಬೆಳೆದುಕೊಳ್ಳುತ್ತಾರೆ. ಇದನ್ನು ಕೆಲವು ಜನರು ಮಾತ್ರ ಅಂದರೆ, 100ಕ್ಕೆ 2 ರಿಂದ 3% ರೈತರು ಮಾತ್ರ ಮಾಡುತ್ತಿದ್ದಾರೆ. ನಮ್ಮಂಥವರು ಅಂದರೆ ದೊಡ್ಡ ದೊಡ್ಡ ರೈತರು ಸಹ ಇವತ್ತು ವಿಷಯುಕ್ತವಾದಂಥ ಆಹಾರ ಮತ್ತು ಹಣ್ಣುಗಳನ್ನು ಬೆಳೆಯುವುದರ ಮುಖಾಂತರ ಜನರ ಆರೋಗ್ಯದ ಮೇಲೆ ನೇರವಾಗಿ ದುಷ್ಪರಿಣಾಮ ಮಾಡತಕ್ಕಂಥದ್ದು ಸಹ ಒಂದು criminal offence ಆಗಿದೆ. ಈ ರೀತಿಯಲ್ಲಿ ಯಾರು ಬೆಳೆಯುತ್ತಾರೋ ಮತ್ತು ಬೆಳೆಯುವುದಕ್ಕೆ ಯಾರು ಅವಕಾಶ

ಮಾಡಿಕೊಡುತ್ತಾರೆಯೋ ಅವರಿಗೆ ಮತ್ತು ಅದನ್ನು market ಗೆ ತರುವಂಥವರ ಮೇಲೆ ನೀವು ಕಠಿಣ ಕ್ರಮ ಕೈಗೊಳ್ಳುವಂಥದ್ದು ಆಗಬೇಕು. ಎಲ್ಲಾ ಇಲಾಖೆಗಳ co-ordination ಮೇಲೆ ನಿರ್ಣಯ ತೆಗೆದುಕೊಳ್ಳದೆ ಹೋದೆ ಮುಂದಿನ ಜನಾಂಗ ಏನಿದೆ, ಯುವ ಭಾರತ, ಯುವ ಕರ್ನಾಟಕ ಎನ್ನತಕ್ಕಂಥದ್ದನ್ನು ಹಾಳು ಮಾಡಿ ಜನರನ್ನು ಒಳ್ಳೆಯ ಆರೋಗ್ಯದಿಂದ ಬಹಳ ದೂರ ಇಡತಕ್ಕಂಥ ಸ್ಥಿತಿಯನ್ನು ನಾವೇ ತರುವಂಥ ಸ್ಥಿತಿಗೆ ಹೋಗಬಾರದು ಎಂದು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ನಾವು ಮಣ್ಣು ಪರೀಕ್ಷೆ ಮಾಡಿಸಿ 1000 ಕುಟುಂಬಗಳಿಗೆ ಬೀಳಗಿಯಲ್ಲಿ ಕಾರ್ಡು ವಿತರಣೆ ಮಾಡಿಸಿದ್ದೇನೆಂದರೆ, ನಿಮಗೆ ಏಕೆ ಸಾಧ್ಯವಿಲ್ಲ? ಒಂದು ವರ್ಷದಿಂದ ತಾವು ಪ್ರಯತ್ನ ಮಾಡುತ್ತಿದ್ದೀರಿ ಇನ್ನೂ ಅದು ನಿರ್ಣಯದ ಹಂತಕ್ಕೆ ಬಂದಿಲ್ಲ. ಬೇಗನೆ, ಇನ್ನು ಮೂರು ತಿಂಗಳೊಳಗೆ, ಪ್ರತಿಯೊಬ್ಬ ರೈತನ ಜಮೀನಿನ ಮಣ್ಣಿನ ಪರೀಕ್ಷೆ, ನೀರಿನ ಪರೀಕ್ಷೆ ಮತ್ತು ಯಾವ ಬೆಳೆ ಬೆಳೆಯುತ್ತಾನೆ? ಅದಕ್ಕೆ ಏನೇನು ಮಾಡಬೇಕು? ಎನ್ನುವಂಥ ಸಲಹೆಯನ್ನು ಕೊಟ್ಟರೆ ಸಾಕು. ಔಷಧಿಗಳ ಮೇಲೆ ಕಡಿವಾಣ ಇರಬೇಕು ಸರ್. ಇದನ್ನು ಮಾಡದೆ ಹೋದರೆ ಇಲಾಖೆಯಿಂದ, ಸರ್ಕಾರದಿಂದ, ಸಾರ್ವಜನಿಕರಿಂದ ಒಂದು ದೊಡ್ಡ ಪ್ರಮಾದವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಈ ಸಂದರ್ಭದಲ್ಲಿ ಇದಕ್ಕಿಂತ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಎಲ್ಲಾ ವಿಚಾರಗಳ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದೇನೆ. ಮಣ್ಣಿನ ಪರೀಕ್ಷೆಯ ಬಗ್ಗೆ ನಮ್ಮ ಬೇಡಿಕೆ ಇತ್ತು, ಅದನ್ನು ಅನುಷ್ಠಾನ ಮಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿರುವುದಕ್ಕೆ ನಿಮಗೆ ನನ್ನ ವೈಯಕ್ತಿಕ ಧನ್ಯವಾದಗಳನ್ನು ಹೇಳಿ, ಸರ್ಕಾರ ಈ ಬಗ್ಗೆ ಬೇಗ ಮುಂದಾಲೋಚನೆ ಮಾಡಲಿ ಎಂದು ಹೇಳಿ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ತಮಗೆ ಮತ್ತೊಮ್ಮೆ ಅಭಿನಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್.ಹೆಚ್. ಕೋನರೆಡ್ಡಿ (ನವಲಗುಂದ):- ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ನನಗೆ ಮಾತನಾಡಲು ಅನುಮತಿಯನ್ನು ಕೊಟ್ಟಿರುವುದಕ್ಕೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕೃಷಿ ಬಹಳ ಮಹತ್ವದ ಇಲಾಖೆ, ರೈತ

ಒಕ್ಕದಿದ್ದರೆ ಬಿಕ್ಕುವುದು ಜಗವೆಲ್ಲಾ ಎಂದು ಎಲ್ಲಾ ಪಕ್ಷದವರು ಹೇಳಿಕೊಳ್ಳುತ್ತೇವೆ. ರೈತನ ಪರಿಸ್ಥಿತಿಯನ್ನು ನೋಡಿದಾಗ, ರೈತರಿಗೆ ಎಷ್ಟು ತೊಂದರೆ ಇದೆ? ಎನ್ನುವಂಥ ಮಾತನ್ನು ತಮ್ಮ ಮೂಲಕ ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ರೈತರ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, ಇವತ್ತಿನ ಕಾಲದಲ್ಲಿ ರೈತನ ಮಗನಿಗೆ ಕನ್ಯೆ ಕೊಡುತ್ತಿಲ್ಲ. ಏಕೆಂದರೆ, ಒಕ್ಕಲುತನ ಮಾಡುವುದೆಂದರೆ ಒಂದು ಕೆಟ್ಟ ಪರಿಸ್ಥಿತಿ ಎನ್ನುವುದಕ್ಕೆ ಬಂದು ಬಿಟ್ಟಿದೆ. ರೈತ ಬೆಳೆಯದಿದ್ದರೆ ಏನು ಮಾಡುವುದಕ್ಕಾಗುವುದಿಲ್ಲ, ಅಂತಹ ವ್ಯವಸ್ಥೆಯೊಳಗೆ ಇವತ್ತು ಸರಣಿ ಆತ್ಮಹತ್ಯೆಗಳು ನಡೆಯುತ್ತಿವೆ. ಸನ್ಮಾನ್ಯ ಕುಮಾರಸ್ವಾಮಿಯವರು ಪಾದಯಾತ್ರೆಯನ್ನು ನಡೆಸಿ ಈ ಬಗ್ಗೆ ಸರ್ಕಾರದ ಗಮನವನ್ನು ಕೂಡ ಸೆಳೆದರು. ಇದಕ್ಕೆ ಅರ್ಥಕೊಡತಕ್ಕಂಥದ್ದು. ರೈತನ ಹತ್ತು ಹಲವು ಪರಿಸ್ಥಿತಿಗಳು ಇವತ್ತು ಹುಟ್ಟಿಕೊಂಡಿವೆ. ಆ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯತಕ್ಕಂಥದ್ದಕ್ಕೆ, ಇಡೀ ಸದನ ಇವತ್ತು ಪಕ್ಷಾತೀತವಾಗಿ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ. ದಿನಾಲೂ ರೈತ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕಾರಣವೇನೆಂದರೆ, ಪುಟ್ಟಣ್ಣಯ್ಯನವರು ಬಹಳ ಸವಿಸ್ತಾರವಾಗಿ ಹೇಳಿದರು. ಆದರೆ ರೈತನ ಪರಿಸ್ಥಿತಿ ಆತ್ಮಹತ್ಯೆ ಮಾಡಿಕೊಳ್ಳಲಿಕ್ಕೆ ಕಾರಣವೇನು? ಒಬ್ಬ industry ಇದ್ದವನು 100 ಕೋಟಿ ರೂ.ಗಳ ಸಾಲ ಮಾಡುತ್ತಾನೆ. 10 ಕೋಟಿ ರೂ.ಗಳ ಸಾಲವನ್ನು ತುಂಬದಿದ್ದರೆ ಅವನಿಗೆ ಏನೂ ಆಗುವುದಿಲ್ಲ. ಅವನು ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಕೇವಲ 5 ಲಕ್ಷ ರೂ.ಗಳ ಸಾಲ ಇದ್ದಂಥವನು ಮರ್ಯಾದೆಗೆ ಅಂಜಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ರೈತ ಅಂತಹ ಸ್ವಾಭಿಮಾನಿ ಇದ್ದಾನೆ ಎನ್ನುವಂಥದ್ದಕ್ಕೆ ಇದನ್ನು ಉದಾಹರಣೆ ಕೊಟ್ಟು ಹೇಳಿದೆ. ನಾವು (ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ) ಮಾಡಿಕೊಳ್ಳುತ್ತೇವೆ. ನಾವ್ಯಾರೂ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಅದೇ ರೀತಿ ಯಾವುದೇ industrialist ಕೂಡ ಮಾಡಿಕೊಳ್ಳುವುದಿಲ್ಲ. ಆದರೆ ರೈತ ಮಾತ್ರ ಆತ್ಮಹತ್ಯೆ ಮಾಡಿಕೊಳ್ಳುವಂಥ ಒಂದು ಪರಿಸ್ಥಿತಿಗೆ ಬಂದಿದೆ. ಅದಕ್ಕೆ ತಮ್ಮ ಮೂಲಕ

ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಈ ಒಂದು ತಿಂಗಳೊಳಗೆ ಇಷ್ಟೊಂದು ಆತ್ಮಹತ್ಯೆಗಳು ಆಗಿವೆ.

ಶ್ರೀ ಬಿ. ರಮಾನಾಥ್ ರೈ (ಅರಣ್ಯ ಮತ್ತು ಜೀವಶಾಸ್ತ್ರ ಪರಿಸರ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಶಾಸಕರು xxx ಬಗ್ಗೆ ಬಹಿರಂಗವಾಗಿ ಇಲ್ಲಿ ಹೇಳಿದರೆ ಹೇಗೆ?

xxx (ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ)

ಶ್ರೀ ಎನ್.ಹೆಚ್. ಕೋನರೆಡ್ಡಿ:- ಅದರ ಬಗ್ಗೆ ಹೇಳುತ್ತೇನೆ.

ಶ್ರೀ ಬಿ. ರಮಾನಾಥ್ ರೈ:- ಶಾಸಕರಾಗಿ ಈ ರೀತಿ ಹೇಳಿದರೆ ಹೇಗೆ?

ಶ್ರೀ ಬಿ.ಬಿ. ನಿಂಗಯ್ಯ:- ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಖರ್ಚಾಗಿರುವುದನ್ನು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಮಂಜುನಾಥಗೌಡ:- ಅವರು ಹೇಳಿದ್ದು ಅಲ್ಲ. xxx 5 ವರ್ಷದ ಖರ್ಚು ವೆಚ್ಚಗಳನ್ನೆಲ್ಲಾ ಸೇರಿಸಿ ಹೇಳುತ್ತಿದ್ದಾರೆ. Code of conduct ಬಂದ ಮೇಲೆ ಅಲ್ಲ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ಖರ್ಚು ಮಾಡಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ತಾವು ಆತ್ಮಮುಟ್ಟಿ ನೋಡಿಕೊಳ್ಳಿ, ತಾವು ಎಷ್ಟು ಖರ್ಚು ಮಾಡಿದ್ದೀರಿ? ಎನ್ನುವುದು ನನಗೆ ಗೊತ್ತಿಲ್ಲ. ವ್ಯವಸ್ಥೆಯೊಳಗೆ ಇದ್ದಂಥ ನಮ್ಮ ಪರಿಸ್ಥಿತಿಯನ್ನು ಹೇಳಿದೆ. ಇವತ್ತು ರೈತನಿಗೆ ಆಗತಕ್ಕಂಥ ತೊಂದರೆಯನ್ನು ಹಿಂದೆ ರೈತ ಸಂಘದವರು...

ಉಪಾಧ್ಯಕ್ಷರು:- ಆ ಪದವನ್ನು ಕಡತದಿಂದ ತೆಗೆದುಹಾಕಿ.

xxx (ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ)

ಶ್ರೀ ಎನ್.ಹೆಚ್. ಕೋನರೆಡ್ಡಿ:- ಒಂದು ವ್ಯವಸ್ಥೆಯಲ್ಲಿ ನಾವು ಬಂದಾಗ, ನಮ್ಮ ರೈತರಿಗೆ ಎಷ್ಟು ಸಮಸ್ಯೆಗಳು ಇವೆ? ಎನ್ನುವುದನ್ನು ಯಾರೂ ವಿಚಾರ ಮಾಡುವುದಿಲ್ಲ. ಬೆಳೆ ವಿಮೆಯ ಬಗ್ಗೆ ಇವತ್ತು ಬಸವರಾಜ ಬೊಮ್ಮಾಯಿಯವರು ಬೆಳಕನ್ನು ಚೆಲ್ಲಿದರು. ನಾನು ಕೃಷ್ಣಭೈರೇಗೌಡರಿಗೆ ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದೆ. ನಾನು ನಮ್ಮ Additional Chief Secretary ಅವರ ಹತ್ತಿರ ಕೂಡ ಹೋಗಿದ್ದೆ. ನಾನು 10 ಕೋಟಿ ರೂ.ಗಳ ಪ್ರಿಮಿಯಮ್ ಹಣವನ್ನೂ ತುಂಬಿದರೆ, 30 ಲಕ್ಷ ರೂ.ಗಳ ಪರಿಹಾರ ಬರುತ್ತದೆಂದರೆ ಹೇಗೆ? ಮುಖ್ಯಮಂತ್ರಿಗಳ ಕಚೇರಿಯಾಗಲಿ, ಕೃಷ್ಣಭೈರೇಗೌಡರ ಕಚೇರಿಯಾಗಲಿ, Additional Chief Secretary ಅವರಾಗಲಿ ಈ ಬಗ್ಗೆ ಒಂದು ಸಭೆಯನ್ನೂ ಇವತ್ತಿನವರೆಗೆ ಮಾಡಿದ್ದಾರೆಯೇ? ಎನ್ನುವುದನ್ನು ಕೇಳಿ. ನಾವು ರೈತರ ಬಗ್ಗೆ ಎಲ್ಲಿ ಕೇಳಬೇಕು? ಯಾರು ಈ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯುವವರು? ನಿನ್ನೆ ಕೃಷ್ಣಭೈರೇಗೌಡರು ಉತ್ತರವನ್ನು ಹೇಳಿದರು. ನಿಮ್ಮ ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸುತ್ತೇವೆ, ನಾವು ಮಾಡುತ್ತೇವೆ ಎಂದರು. ನಾನು ಇಡೀ ರಾಜ್ಯದ್ದು ಹೇಳಲಿಲ್ಲ. ನವಲಗುಂದ ಒಂದು ತಾಲ್ಲೂಕಿನ ಪರಿಸ್ಥಿತಿಯನ್ನು ಹೇಳಿದೆ. ಒಂದು ದೊಡ್ಡ ಕಂಪನಿ ಬೆಂಗಳೂರಿನಲ್ಲಿ ಇದೆ. ಇಡೀ ರಾಜ್ಯದ ಎಲ್ಲರೂ ಅದಕ್ಕೆ ನೀವು ಕಡ್ಡಾಯವಾಗಿ ಬೆಳೆವಿಮೆ ತುಂಬಬೇಕೆಂದು ಮಾಡಿದ್ದೀರಿ. ನೀವು ಕಡ್ಡಾಯ ಆದೇಶವನ್ನು ತೆಗೆದು ಬಿಡಿ. ರೈತರ ವಿವೇಚನೆಗೆ ಬಿಡಿ. ಅವರಿಗೆ ಬೇಕಾದರೆ ತುಂಬುತ್ತಾರೆ, ಸಾಕಾದರೆ ಬಿಡುತ್ತಾರೆ. ನೀವು ಕೋಟಿಗಟ್ಟಲೆ ಒಂದು ಕಂಪನಿಗೆ ಲಾಭ ಮಾಡುವುದಕ್ಕೆ ಹೋದರೆ, ಇದೊಂದು ಲಾಟರಿ ದಂಧೆ ಆದಂತೆ ಆಗಿದೆ. ಓಸಿ ಆಡಿ ಬರುವವರ ಪರಿಸ್ಥಿತಿ ರೀತಿ ಆಗುತ್ತಿದೆ. ರೈತ 5 ಲಕ್ಷ ರೂ.ಗಳ ಲೋನ್ ತೆಗೆದುಕೊಂಡರೆ 45 ಸಾವಿರ ರೂ.ಗಳು ಕಟ್ಟಾಗುತ್ತದೆ. ಅದು ರಾಷ್ಟ್ರೀಕೃತ ಬ್ಯಾಂಕ್ ಇರಬಹುದು ಅಥವಾ ಯಾವುದೇ ಬ್ಯಾಂಕ್

ಇರಬಹುದು. ಬ್ಯಾಂಕಿನವರು ಅದು ಇಲ್ಲದಿದ್ದರೆ ಲೋನ್ ಕೊಡುವುದಿಲ್ಲ. ಯಾರು ನೇರವಾಗಿ ತುಂಬುತ್ತಾರೆ ಅವರಿಗೆ ಕೊಡುತ್ತಾರೆ, ಇಲ್ಲದಿದ್ದರೆ ಲೋನ್ ಕೊಡುವುದಿಲ್ಲ. ಯಾರು ನೇರವಾಗಿ ತುಂಬುತ್ತಾರೆ ಅವರಿಗೆ ಕೊಡುತ್ತಾರೆ, ಇಲ್ಲದಿದ್ದರೆ ಇಲ್ಲವೆಂದು ಹೇಳುತ್ತಾರೆ. ಆದರೆ ರೈತರಿಗೆ ಏನಿದೆ, ಒಂದು ಲಕ್ಷ ರೂ.ಗಳಿಗೆ ಬೆಳೆ ವಿಮೆ ಮಾಡಿಸಿದರೆ ಎರಡು-ಮೂರು ಲಕ್ಷ ರೂ.ಗಳು ಬರಬಹುದು ಎನ್ನುವ ನಿರೀಕ್ಷೆ ಇದೆ. ಅದು ಏನಿಲ್ಲ, ಪ್ರತಿ 5 ವರ್ಷದ ಲೆಕ್ಕ ತೆಗೆದು, ನಾನು ಕೃಷ್ಣಭೈರೇಗೌಡರ ಗಮನಕ್ಕೆ ತಂದೆ. 5 ವರ್ಷದ ಅಂಕಿ ಅಂಶಗಳನ್ನು ತೆಗೆಯಿರಿ ಇದು ನಮ್ಮ ರಾಜ್ಯಕ್ಕೆ ಮಾರಕ ಇದೆಯೋ ಇಲ್ಲವೋ ನೋಡಿ. ಇಂತಹ ಒಂದು ದೊಡ್ಡ ಕಂಪನಿ ಕೋಟಿಗಟ್ಟಲೆ ಲಾಭ ಮಾಡಿಕೊಳ್ಳುತ್ತಾರೆ, ಇಲ್ಲವೆಂದರೆ ಹವಾಮಾನ ರದ್ದು ಮಾಡಿ. ಇವತ್ತು ಕೇಂದ್ರ ಸರ್ಕಾರ ಕಡ್ಡಾಯ ಆದೇಶ ಹೊರಡಿಸಿದೆ. ಕೇಂದ್ರ ಸರ್ಕಾರ ಜೊತೆ ಚರ್ಚೆ ಮಾಡಿ ಇವತ್ತು ರೈತರನ್ನು ಕತ್ತಲಲ್ಲಿ ಇಟ್ಟುಕೊಂಡು, ಇಂತಹ ದೊಡ್ಡ ಸಮಸ್ಯೆ ಇಟ್ಟುಕೊಂಡು, ನಾವು ಚರ್ಚೆ ಮಾಡತಕ್ಕಂಥದ್ದು ವಿಧಾನಸಭೆಯಲ್ಲಿ ಗಮನ ಸೆಳೆಯುವುದಕ್ಕೆ ನಮಗೆ ಒಂದು ದೊಡ್ಡ ಹರಸಾಹಸ. ಅದಕ್ಕಾಗಿ ದಯವಿಟ್ಟು ರೈತರ ಸಮಸ್ಯೆಗಳ ಬಗ್ಗೆ ಮಾತನಾಡುವಂಥ ವ್ಯವಸ್ಥೆಯೊಳಗೆ ತಾವು ಪೂರಕವಾಗಿ ಈ ಕೆಲಸವನ್ನು ಮಾಡಬೇಕು. ಈಗ 20 ಹೆಚ್.ಪಿ. ಟ್ರಾಕ್ಟರ್‌ಗಳಿಗೆ ಸಬ್ಸಿಡಿ ಕೊಡುವಂಥ ವ್ಯವಸ್ಥೆ ಇರುತ್ತವೆ. ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ 20 ಹೆಚ್.ಪಿ. ಟ್ರಾಕ್ಟರ್‌ಗಳನ್ನು ಉಪಯೋಗ ಮಾಡುವುದಿಲ್ಲ. ಆ ಯೋಜನೆಯನ್ನು ಹೇಗೆ ಜಾರಿಗೆ ಮಾಡುತ್ತೀರಿ? ಇದಕ್ಕೆ ಬೆಳಕು ಚೆಲ್ಲುವಂಥ ವ್ಯವಸ್ಥೆಗೆ ನಾವು ಪ್ರಯತ್ನ ಮಾಡಬೇಕು. ಬೆಳೆಯ ಹಾನಿಯ ಬಗ್ಗೆ, ನಮ್ಮ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, ಬೆಳೆಹಾನಿಯಾಗಿ 8 ಜಿಲ್ಲೆಗೆ ಕೊಟ್ಟಂತೆ ಧಾರವಾಡ ಜಿಲ್ಲೆಗೆ ಕೊಡುತ್ತೇವೆಂದು ಕೃಷ್ಣಭೈರೇಗೌಡರು ಮತ್ತು ಮುಖ್ಯಮಂತ್ರಿಗಳು ಹೇಳಿದರು ಮತ್ತು ಎಲ್ಲರೂ ಹೇಳಿದರು. ವಿಶೇಷ ಪ್ಯಾಕೇಜ್ ಎಂದು ಹೇಳಿ 25 ಸಾವಿರ ರೂ.ಗಳನ್ನು ಕೊಡಬೇಕೆಂದು ನಿರ್ಣಯ ಮಾಡಿದರು. ನನ್ನ ಕ್ಷೇತ್ರದಲ್ಲಿ ಈರುಳ್ಳಿಗೆ ಬಿಟ್ಟರೆ ಯಾವುದಕ್ಕೂ ಪರಿಹಾರ ಕೊಡಲಿಲ್ಲ. ಅದನ್ನು ಹೇಗೆ ಮಾಡಿದರು ಎಂದರೆ ಅರ್ಧ ತಾಲ್ಲೂಕಿನ ಹಳ್ಳಿಯ ಜನರಿಗೆ ಕೊಟ್ಟರು. ಇನ್ನು

ಅರ್ಧ ತಾಲ್ಲೂಕಿನ ಹಳ್ಳಿಯ ಜನರಿಗೆ ಕೊಡುವುದಿಲ್ಲ. ಎಲೆಕ್ಷನ್‌ಗೋಸ್ಕರ ಈ ಸಾರಿ ಬಾ, ನೋಡುತ್ತೇವೆನ್ನುತ್ತಾರೆ. ರೈತರ ಪರಿಸ್ಥಿತಿ ಅಲ್ಲಿಗೆ ಬಂದಿದೆ. ಪೂರ್ತಿ ರೈತರಿಗೆ ಕೊಡದಿದ್ದರೆ ಆ ಪರಿಸ್ಥಿತಿಯೇ ಬೇರೆ. ಅರ್ಧ ರೈತರಿಗೆ ಕೊಟ್ಟು, ಇನ್ನು ಅರ್ಧ ರೈತರಿಗೆ ಕೊಡದೆ ಇದ್ದರೆ ಹೇಗೆ? ಸರ್ಕಾರಕ್ಕೆ ಈ ಬಗ್ಗೆ ಪತ್ರ ಬರೆಯುವುದೇ ಆಯಿತು. ಇದನ್ನು ಯಾರೂ ಸಹ ನೋಡದೆ ಇದ್ದರೆ, ಈ ಬಗ್ಗೆ ನೋಡುವವರು ಯಾರು? ನಾನು ತೋಟಗಾರಿಕೆ ಸಚಿವರನ್ನು ಭೇಟಿ ಆದೆ, ಸನ್ಮಾನ್ಯ ಕಂದಾಯ ಸಚಿವರನ್ನು ಸಹ ಭೇಟಿಯಾದೆ, ಆದರೆ ಇದಕ್ಕೆ ಯಾವುದೇ ಪರಿಹಾರ ಸಿಗುತ್ತಿಲ್ಲ. ನಾನು ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಈ ರೀತಿಯ ಆತ್ಮಹತ್ಯೆಗಳು ಆಗುವುದಕ್ಕೆ ಕಾರಣ, ಸರ್ಕಾರಗಳು ರೈತರನ್ನು ಸರಿಯಾಗಿ ನೋಡುತ್ತಿಲ್ಲ. ನಾವು ಎಲ್ಲಾ ಸಾಲಗಳ ಬಡ್ಡಿಯನ್ನು ಮನ್ನಾ ಮಾಡುತ್ತೇವೆ. ಒಂದು ಸಲ ರೈತರಿಗೆ ಪೂರ್ತಿ ಸಾಲ ಮನ್ನಾ ಮಾಡುವ ಬಗ್ಗೆ ಘೋಷಣೆ ಮಾಡಿಬಿಡಿ National Bank ನಲ್ಲಿ ಇದೆಯೋ ಅಥವಾ society ಯಲ್ಲಿ ಯಾವುದರಲ್ಲಿ ಇದೆಯೋ ಎಲ್ಲಾ ಸಾಲವೂ ಒಂದು ಸಲ ಮನ್ನಾ ಆಗಿಬಿಡಲಿ. ಉಳಿಕೆಯ ಬಾಬ್ತನ್ನು ಕಡಿಮೆ ಮಾಡಿ. ದಿವಸಕ್ಕೆ 4–4 ಜನ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಈ ಬಗ್ಗೆ ಪೇಪರ್‌ನಲ್ಲಿ ಬರುತ್ತಿದೆ. ನಾವ್ಯಾರೂ ಇದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಇವತ್ತು ನಾನು ಸರ್ಕರಕ್ಕೆ ಕೈಮುಗಿದು ಮನವಿ ಮಾಡುತ್ತೇನೆ. ಇವತ್ತು ರೈತರ ಸಾಲ ಮನ್ನಾದ ಬಗ್ಗೆ ಘೊಷಣೆ ಮಾಡಿ. ಇನ್ನು ಮುಂದೆ ಸಾಲ ಮನ್ನಾ ಮಾಡುವುದಿಲ್ಲ. ನೀವು ಆತ್ಮಹತ್ಯೆ ಮಾಡಿಕೊಳ್ಳಬೇಡಿ ಈ ಸರ್ಕಾರವು ಘೋಷಣೆ ಮಾಡಲಿ.

ಶ್ರೀ ಸಿದ್ದು ಬಿ. ನ್ಯಾಮಗೌಡ:– ಮಾನ್ಯ ಕೋನರೆಡ್ಡಿಯವರೆ, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಕಳೆದ 10 ವರ್ಷಗಳಿಂದಲೂ ನಡೆಯುತ್ತಿತ್ತು. ಆ ಸಂದರ್ಭದಲ್ಲಿಯೂ ಶ್ರೀಮತಿ ಸೋನಿಯಾ ಗಾಂಧಿಯವರು ಬೀದರ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತನ ಮನೆಗೆ ಬಂದಿದ್ದರು. ಆಮೇಲೆ ಅಲ್ಲಿಂದ ಹೋದ ನಂತರ, ದೆಹಲಿಗೆ ಹೋಗಿ ಶ್ರೀ ಮನಮೋಹನಸಿಂಗ್ Prime Minister ರವರ ಜೊತೆಯಲ್ಲಿ ಮಾತನಾಡಿ

ಒಂದೇ ಸಲ ರೈತರ 72,000 ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದರು.

ಶ್ರೀ ಎನ್.ಹೆಚ್. ಕೋನರೆಡ್ಡಿ:- ನಾನು ನಮ್ಮ ಕರ್ನಾಟಕದ ಬಗ್ಗೆ ಮಾತನಾಡುತ್ತಿದ್ದೇನೆ. ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಇದೇ ಸರ್ಕಾರ ಇದ್ದಾಗ ಆತ್ಮಹತ್ಯೆ ನಡೆಯುತ್ತಿದೆ ಎಂದು ಹೇಳುತ್ತಿಲ್ಲ. ಹಿಂದಿನ ಸರ್ಕಾರ ಇದ್ದಾಗಲೂ ಕೂಡ ಆಗಿದೆ. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದ ಮೇಲೆ ಇವತ್ತು ಆತ್ಮಹತ್ಯೆ ಪ್ರಾರಂಭವಾಯಿತು ಎಂದು ಹೇಳುವುದಿಲ್ಲ. ಆದರೆ ಈ ತಿಂಗಳಲ್ಲಿ ರೈತರ ಆತ್ಮಹತ್ಯೆ ಬಹಳ ಹೆಚ್ಚಾಯಿತು. ಅದಕ್ಕಾಗಿ ಗಂಭೀರವಾಗಿ ವಿಚಾರ ಮಾಡಬೇಕಾಗಿದೆ. ನಾನು ಸರ್ಕಾರಕ್ಕೆ ರೈತರ ವಿಷಯವನ್ನು easy ಆಗಿ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ ಎಂದು ಹೇಳಬಯಸುತ್ತೇನೆ. ನೀವು ಕಬ್ಬು ಬೆಳೆಗಾರರಿಗೆ ಮೊನ್ನೆ ಕೊಟ್ಟಿದ್ದೀರಿ. ಅದೇ ವಿಷಯದ ಬಗ್ಗೆ 8-10 ದಿವಸಗಳ ಹಿಂದೆ ನಿರ್ಧಾರ ತೆಗೆದುಕೊಂಡುಬಿಟ್ಟಿದ್ದರೆ, ಇಷ್ಟು ಹೋರಾಟ ಮಾಡುವಂತಹ ವ್ಯವಸ್ಥೆ ಇರುತ್ತಿರಲಿಲ್ಲ. ಅದಕ್ಕಾಗಿ ಸರ್ಕಾರಗಳು ಮುಂದೆ ಏನು ಸಮಸ್ಯೆಗಳು ಬರುತ್ತವೆ ಎಂಬುದನ್ನು ಗ್ರಹಿಸಬೇಕು. ಯಾವುದೇ ಸರ್ಕಾರ ಇರಬಹುದು, ಸರ್ಕಾರದ ಗಮನವನ್ನು ಸೆಳೆಯಬೇಕಾಗಿರುವುದು ನಮ್ಮ ವಿರೋಧಪಕ್ಷದವರ ಕರ್ತವ್ಯ. ನಾವು ಹೋರಾಟ ಮಾಡುತ್ತೇವೆ. ಇಲ್ಲಿ ಸರ್ಕಾರಗಳು ಚಿಂತನೆ ಮಾಡುವುದು ಬಹಳ ಅವಶ್ಯಕತೆ ಇದೆ ಎನ್ನುವುದನ್ನು ತರುವುದಕ್ಕೆ ಬಯಸುತ್ತೇನೆ.

ಉಪಾಧ್ಯಕ್ಷರು:- ತಾವು ಬೇಗನೆ conclude ಮಾಡಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ವಿಠ್ಠಲ್ ಅರೆಬಾವಿಯವರ ಕುಟುಂಬಕ್ಕೆ ಸರ್ಕಾರ 10 ಲಕ್ಷ ರೂ.ಗಳ ಪರಿಹಾರವನ್ನು ಕೊಟ್ಟರು. ಆದರೆ ಉಳಿದ ರೈತರಿಗೆ 1 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿರಿ. ನಮ್ಮಲ್ಲಿ ನಿನ್ನೆ ದಿನ ಒಬ್ಬನು ಬಸ್ಸಿನಲ್ಲಿ ಮಾತನಾಡುತ್ತಿದ್ದನು. ಸುವರ್ಣಸೌಧದ ಎದುರುಗಡೆ ಸತ್ತರೆ 10 ಲಕ್ಷ ರೂ.ಗಳ ಪರಿಹಾರ ಕೊಡುತ್ತಾರೆ. ಆಕಸ್ಮಾತಾಗಿ ಎಲ್ಲಿಯಾದರೂ ಹಳ್ಳಿಯಲ್ಲಿ ಸತ್ತರೆ ಒಂದು ಲಕ್ಷ ರೂ.ಗಳ ಪರಿಹಾರ

ಕೊಡುತ್ತಾರೆ, ಇದು ಯಾವ ಲೆಕ್ಕ? ಎಂಬುದಾಗಿ ನಮ್ಮ ಹಳ್ಳಿಯ ಜನರು ಮಾತನಾಡುತ್ತಾರೆ. ಆದ್ದರಿಂದ, ಕೊಟ್ಟರೆ ಪರಿಹಾರ ಧನವನ್ನು ಎಲ್ಲರಿಗೂ ಒಂದೆ ರೀತಿಯಾಗಿ ಕೊಡಿ. ಇದೊಂದು ವಿಶೇಷ ಪ್ರಕರಣವೆಂದು ಮಾನ್ಯ ಮುಖ್ಯಮಂತ್ರಿಗಳು ಸಮರ್ಥನೆ ಮಾಡಿಕೊಂಡರು. ಇದನ್ನು ಒಪ್ಪಿಕೊಳ್ಳೋಣ. ಒಬ್ಬ ಕಬ್ಬು ಬೆಳೆದಂತಹ ರೈತ, ಮಂಡ್ಯದಲ್ಲಿ ತಾನು ಬೆಳೆದಂತಹ ಕಬ್ಬಿನ ಗದ್ದೆಯಲ್ಲಿ ಬಿದ್ದು ಸಾಯುತ್ತಾನೆಂದರೆ, ಅವನಿಗೆ ಎಷ್ಟು ಸಮಸ್ಯೆಯಾಗಿರಬಹುದು? ಎಂಬುದನ್ನು ಯೋಚಿಸಿ. ಅದೇ ನಮ್ಮ ಹಳ್ಳಿಯಲ್ಲಿದ್ದಂತಹ ಗುರುನಾಥ್ ಎಂಬ ಒಬ್ಬ ರೈತ ತನ್ನ ಸಮಸ್ಯೆಯನ್ನು ಹೇಳಿಕೊಂಡ. ಆ ರೈತರ ಆತ್ಮಹತ್ಯೆಗೆ ಏನು ಪರಿಹಾರ ಎಂದರೆ, ಒಂದು ಲಕ್ಷ ರೂ.ಗಳ ಪರಿಹಾರ ಕೊಡುವುದರ ಮೂಲಕ ರೈತರನ್ನು ನಾವು ಸಮರ್ಥನೆ ಮಾಡುತ್ತೇವೆ ಎಂದಲ್ಲ. ಹತ್ತು ಲಕ್ಷ ರೂ.ಗಳ ಪರಿಹಾರ ಕೊಡುತ್ತಾರೆ ಎಂದು ನಾವು ಯಾರಾದರೂ ಹೋಗಿ ಸಾಯುತ್ತೇವೆಯೇ? ನಾವು ಯಾರೂ ಸಾಯುವುದಿಲ್ಲ. ಆದರೆ ರೈತ ತನ್ನ ಮಾನಕ್ಕೆ ಅಂಜಿ ಪ್ರಾಣವನ್ನು ಕಳೆದುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ರೈತರು ಟ್ರ್ಯಾಕ್ಟರ್ ಸಾಲ ಮಾಡಿರುತ್ತಾರೆ, ಬೆಳೆ ಸಾಲ ಮಾಡಿರುತ್ತಾರೆ, ಹತ್ತು ಹಲವಾರು ಸಮಸ್ಯೆಗಳನ್ನು ಎದುರಿಸಿಕೊಂಡು ಖಾಸಗಿ ಸಾಲಗಳನ್ನು ಮಾಡಿರುತ್ತಾರೆ. ಅದನ್ನು ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಖಾಸಗಿ ಸಾಲಗಳನ್ನು ನಾವು ತೀರಿಸಲಾಗುವುದಿಲ್ಲ. ಇಡೀ ರಾಜ್ಯದಲ್ಲಿ ಕಾನೂನುಬದ್ಧವಾಗಿ ಬ್ಯಾಂಕ್‌ನಲ್ಲಿರುವಂತಹ ಸಾಲ ಸುಮಾರು 19,000 ಕೋಟಿ ರೂ.ಗಳು ಆಗುತ್ತದೆ. ಒಂದು ಬಾರಿ ಮಾನ್ಯ ಸಿದ್ದರಾಮ್ಯನವರು ದೊಡ್ಡ ಮನಸ್ಸು ಅದನ್ನು ಮನ್ನಾ ಮಾಡಿದರೆ ಹೀರೋ ಆಗುತ್ತಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಮನವಿ ಮಾಡುವಂಥದ್ದು, ಮಾನ್ಯ ಸಿದ್ದರಾಮಯ್ಯನವರು ರೈತರ ಸಾಲ ಮನ್ನಾ ಮಾಡುವಂತಹ ಗಟ್ಟಿ ನಿರ್ಣಯ ತೆಗೆದುಕೊಂಡರೆ ಮಾತ್ರ ಈ ಆತ್ಮಹತ್ಯೆಯನ್ನು ತಡೆಯಲು ಸಾಧ್ಯವಿದೆ.

ಶ್ರೀ ಕೆ. ಶಿವಮೂರ್ತಿ:- ಪ್ರಾರಂಭದಲ್ಲಿಯೇ ಕೆಲವು ರಿಕವರಿ ಮಾಡುವುದಕ್ಕೆ ಆಗದೇ ಇರುವ ಸಾಲವನ್ನು ಮನ್ನಾ ಮಾಡಿದ್ದಾರಲ್ಲಾ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ರೈತರದ್ದು ಮಾಡಿಲ್ಲ.

ಶ್ರೀ ಕೆ. ಶಿವಮೂರ್ತಿ:- ಅವರಲ್ಲಿ ರೈತರೂ ಇದ್ದಾರೆ.

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ ಸಚಿವರು):- ಬಡ್ಡಿ ಸಾಹುಕಾರರ ಹತ್ತಿರ ಸಾಲ ಪಡೆದುಕೊಂಡು, ಸಾಲ ತೀರಿಸಲಾಗದೆ ಆತ್ಮಹತ್ಯೆ ಜಾಸ್ತಿಯಾಗುತ್ತಿದೆ. ನಿಜ ಹೇಳಬೇಕೆಂದರೆ, ಸಹಕಾರ ಸಂಘದಿಂದ defaulters ಗೆ ಅನುಕೂಲ ಆಗುವಂಥದ್ದು ಆದರೆ ಮಾಡಬಹುದು. ರೈತರ ಸಾಲ ಮನ್ನಾ ಮಾಡಬೇಕು ಎನ್ನುವುದಕ್ಕೆ ವಿರೋಧವಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ನಾನು ಖಾಸಗಿ ಸಾಲದಿಂದ ಮುಕ್ತಿ ಆಗಬೇಕೆಂದರೆ ಏನು ಮಾಡಬೇಕು?

ಶ್ರೀ ಬಿ. ರಮಾನಾಥ ರೈ:- ಅದಕ್ಕೆ ನಾವು ಬಹಳ ಗಂಭೀರವಾಗಿ ಆಲೋಚನೆ ಮಾಡುವಂಥದ್ದು, ಬಡ್ಡಿ ಸಾಹುಕಾರರು, ಖಾಸಗಿ ಬಡ್ಡಿ ಲೇವಾದೇವಿಗಾರರು ಯಾರಿದ್ದಾರೆ, ಅವರಿಂದ ಮುಕ್ತಿಯಾಗುವುದಕ್ಕೆ ಸೂಕ್ತವಾದಂತಹ ಆಲೋಚನೆ ಮಾಡಬೇಕಾಗಿರುತ್ತದೆ. ಪ್ರತಿವರ್ಷ ರೈತರ ಸಮಸ್ಯೆ ಬಂದಾಗ ನಿಜವಾದಂತಹವರಿಗೆ ಅದರ ಪ್ರಯೋಜನ ಸಿಗುವುದಕ್ಕಿಂಥ ಹೆಚ್ಚಾಗಿ ಬೇರೆಯವರಿಗೆ ಸಿಗುತ್ತದೆ.

ಶ್ರೀ ಬಿ.ಬಿ. ನಿಂಗಯ್ಯ:- ಆ ಸಾವನ್ನು ತಡೆಯಬೇಕಾದರೆ ಎಲ್ಲಾ ರೈತರಿಗೂ ಸಾಲ ಸಿಗುವಂತಹ ವ್ಯವಸ್ಥೆಯಾಗಬೇಕು. ಬಹಳಷ್ಟು ಸೊಸೈಟಿಗಳಲ್ಲಿ ಅದು ಆಗುತ್ತಿಲ್ಲ. ಅದನ್ನು ಮಾಡಿದಲ್ಲಿ ಬಹುಶ: ಈ ಸಾವುಗಳನ್ನು ತಡೆಯುವಂಥದ್ದು ಸಾಧ್ಯವಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಯಾವುದೇ ದೇಶದಲ್ಲಿ ಕೇವಲ ಸಂಕುಚಿತ ಸಾಲ ಪದ್ಧತಿ ಇದ್ದರೆ, ಯಾವುದೇ ಕಾರಣಕ್ಕೂ ಆ ಒಂದು ಉದ್ಯಮವನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಸಂಕುಚಿತ ಸಾಲ ಪದ್ಧತಿ ನಾಶವಾಗಬೇಕು. ಸಂಪೂರ್ಣ ಅವನ ಬದುಕನ್ನು ರಕ್ಷಣೆ ಮಾಡುವಂಥದ್ದು ಮತ್ತು ಅವನು ಉದ್ಯೋಗ ಮಾಡಿ ವಾಪಸ್ಸು ಸಾಲ ತೀರಿಸುವಂತಹ ಸಮಗ್ರ ಆರ್ಥಿಕ ಸಾಲ ನೀತಿ ಕೊಡಬೇಕು. ನಾನು ಮಾತನಾಡಿದಾಗ ಹೇಳಿದೆ,

25 ಲಕ್ಷ ರೂ.ಗಳನ್ನು ಖರ್ಚು ಮಾಡಿ ಬಾಳೆಗಿಡ ಹಾಕಿ ಒಂದು ವರ್ಷ ಐದು ಜನ partners ಆಗಿ, ಆ ಭೂಮಿಯನ್ನು lease ಗೆ ತೆಗೆದುಕೊಂಡು ಮಾಡಿ ಬಾಳೆಹಣ್ಣನ್ನು ಮಾರಿದರೆ, 30 ಲಕ್ಷ ರೂ.ಗಳು ಹೋಯಿತು. 30 ಲಕ್ಷ ರೂ.ಗಳು ಹೋದರೆ ಅವರು ಏನು ಮಾಡಬೇಕು? ಇದಕ್ಕೆ ಕಾರಣ ಯಾರು? ಬಾಳೆಹಣ್ಣನ್ನು ತಿನ್ನುವವರಾ? ಇಲ್ಲ ನೀತಿ ಮಾಡಿದವರಾ? ಬೆಳೆದವರದ್ದೇ? ಬೆಳೆದಾಗ 16 ರೂಪಾಯಿ ಇದ್ದ ಬೆಲೆ ನಂತರ 3 ರೂಪಾಯಿ ಆಯಿತು. ಈ ರೀತಿ ಆದರೆ ಹೇಗೆ ರಕ್ಷಣೆ ಮಾಡುತ್ತೀರಿ? ಅವನು ಹೇಗೆ ಬದುಕಲು ಸಾಧ್ಯ? ನೀವಾಗಲಿ, ನಾನಾಗಲಿ ಹೇಗೆ ಬದುಕುತ್ತೇವೆ? ಇದರ ಬಗ್ಗೆ ಆಲೋಚನೆ ಮಾಡಬೇಕು. ಒಂದು ಸ್ಥಿರವಾದ ಆರ್ಥಿಕ ನೀತಿ ಇಲ್ಲದೇ ಇದ್ದರೆ, ನಾವು ರಕ್ಷಣೆ ಮಾಡುತ್ತೇವೆ ಎಂದರೆ ಹೇಗೆ ರಕ್ಷಣೆ ಮಾಡುತ್ತೀರಿ? ಏಕೆ ಬೇರೆಯವರು ಯಾರೂ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ? ರೈತರೇ ಏಕೆ ಆತ್ಮಹತ್ಯೆ ಮಾಡಿಕೊಳ್ಳಬೇಕು? ನಿಜ, ನಿಮ್ಮ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಖಾಸಗಿ ಸಾಲ ಒಂದು ಭಾಗ. ಇಲ್ಲವೆಂದು ಹೇಳಿಲ್ಲ. ಸಾವಿನ ದಿಕ್ಕು ಹೋಗುತ್ತಿದೆಯಲ್ಲಾ, ಇದನ್ನು ರಕ್ಷಣೆ ಮಾಡುವವರು ಯಾರು? ನಾನೇ ಸಾಯಬಹುದು. ನಾಳೆ ಇನ್ನೊಬ್ಬರು ಸಾಯಬಹುದು. ಹೇಗೆ ರಕ್ಷಣೆ ಮಾಡುತ್ತೀರಿ? ನಾವೆಲ್ಲಾ 175 ಜನ ಎಂ.ಎಲ್.ಎ ಗಳು ಹಳ್ಳಿಯಿಂದ ಬಂದಿದ್ದೇವೆ. ಎಷ್ಟು ದು:ಖಕರವಾದ ಸಂಗತಿ ಎಂದು ಗಂಭೀರವಾಗಿ ಆಲೋಚನೆ ಮಾಡಬೇಕು. ಒಬ್ಬ ಸತ್ತ ಎಂದಾಗ ಇಡೀ ದೇಶ alert ಆಗುತ್ತದೆ. ನೂರು ಜನ ಅಲ್ಲ. ಇದು ದುರಂತ. ಅವುಗಳನ್ನು ನಿರ್ಲಕ್ಷ್ಯ ಮಾಡುವಂತಹ ಆಲೋಚನೆಗಳಿದ್ದರೆ ಯಾರನ್ನು ರಕ್ಷಣೆ ಮಾಡುತ್ತೀರಾ? ನಾನು ಪದೇ ಪದೇ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಉದಾಹರಣೆಗೆ ಒಬ್ಬ ರವಿಯವರು ಪ್ರಾಮಾಣಿಕ ವ್ಯಕ್ತಿ ಸತ್ತರೆ, ಇಡೀ ರಾಜ್ಯದಲ್ಲಿ ಫೋಟೋ ಹಾಕಿಕೊಂಡು ಕಣ್ಣೀರು ಹಾಕುತ್ತಾರೆ. ಅಂದರೆ ಈಗ ಸತ್ತಿರುವವರೆಲ್ಲಾ ಅಪ್ರಾಮಾಣಿಕರೆ? ಈಗ ಸತ್ತಿರುವವರ ಸಾವಿಗೆ ಯಾರಿಗೂ ದು:ಖವೇ ಇಲ್ಲವೇ? ರವಿಯವರ ಸಾವಿನ ಬಗ್ಗೆ CBI ಗೆ ರೆಫರ್ ಮಾಡಿದ್ದಾರೆ. ರೈತರ ಸಾವಿನ ಬಗ್ಗೆ ಯಾರಿಗೆ ರೆಫರ್ ಮಾಡುತ್ತಾರೆ? ಇದನ್ನು ಭಗವಂತನಿಗೆ ರೆಫರ್ ಮಾಡುತ್ತಾರೆಯೇ? ಮೇಲೆ ಹೊಸ CBI ನವರಿದ್ದಾರಲ್ಲ ಅವರನ್ನು

ಕೇಳಬೇಕೇ? ಏನೂ ಮಾಡುವುದಕ್ಕಾಗುವುದಿಲ್ಲವೆಂದು ನಾವೆಲ್ಲಾ, ವಿರೋಧಪಕ್ಷ, ಆಡಳಿತ ಪಕ್ಷ, ನಾನು ಎಲ್ಲರೂ ಹೀಗೆ ಇದ್ದರೆ, ಒಂದು ಸಣ್ಣ resolution ಅನ್ನು ಮಾಡುವುದಕ್ಕೆ ಆಗಿಲ್ಲ. ಮಾನ್ಯ ಉಪಾಧ್ಯಕ್ಷರೆ, ಎಲ್ಲರೂ ಸೇರಿ ಒಂದು ನಿರ್ಣಯ ಮಾಡಿಸಬೇಕು. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಈ ಸಭೆಯಿಂದ ಒಂದು ಸಂದೇಶವನ್ನಾದರೂ ಕೊಡಿ. ಅದಾದರೂ ಮಾಡಿ ಕನಿಷ್ಠ ರಕ್ಷಣೆ ಮಾಡಿದಂತಾಗುತ್ತದೆ, ಇಲ್ಲದೇ ಇದ್ದರೆ ಬಹಳ ಕಷ್ಟವಾಗುತ್ತದೆ, ಸಂಕಟವಾಗುತ್ತದೆ. ಸುಮ್ಮನೆ ನಾವು ಬೇಜಾರು ಕಳೆಯುವುದಕ್ಕೆ ಭಾಷಣ ಮಾಡಿ, ರೆಕಾರ್ಡ್‌ಗೆ ಹೋಗಲಿ ಎಂದು ಮಾತನಾಡುವುದಕ್ಕೆ ಬಂದಿದ್ದೇವೆ ಎನ್ನುವ ತೀರ್ಮಾನವಾಗುತ್ತದೆ.

ಉಪಾಧ್ಯಕ್ಷರು:– ಮಾನ್ಯ ಕೋನರೆಡ್ಡಿಯವರೆ ತಾವು ಮಾತನಾಡುವುದನ್ನು ಬೇಗ ಮುಗಿಸಿ. ತಮಗೆ ಕೊಟ್ಟಿರುವ ಕಾಲಾವಕಾಶ ಮುಗಿಯಿತು.

ಶ್ರೀ ಎನ್.ಹೆಚ್ .ಕೋನರೆಡ್ಡಿ:– ಮಾನ್ಯ ಉಪಾಧ್ಯಕ್ಷರೆ, ಏಕೆ ಈ ಸಮಸ್ಯೆ ಬರುತ್ತದೆ ಎಂದರೆ, ಪ್ರಸ್ತುತ ಸಾಲಿನಲ್ಲಿ ಕೃಷಿ ಇಲಾಖೆಗೆ ಆಯವ್ಯಯದಲ್ಲಿ 3,883 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. PWD ಗಾದರೆ 10,000 ಕೋಟಿ ರೂ.ಗಳು, ನೀರಾವರಿಗಾದರೆ 13,000 ಕೋಟಿ ರೂ.ಗಳನ್ನು ಕೊಡುತ್ತಾರೆ. ಕೃಷಿ ಇಲಾಖೆಗೆ ಆಯವ್ಯಯದಲ್ಲಿ ಕಡಿಮೆ ಹಣ ಮೀಸಲಿಟ್ಟರೆ ರೈತರಿಗೆ ಏನು ಸಹಾಯ ಮಾಡಲಿಕ್ಕೆ ಸಾಧ್ಯವಿದೆ? ಅದೇ ರೀತಿ ರೈತರಿಗೆ ಯಾವ ರೀತಿ ಸಮಸ್ಯೆ ಬರುತ್ತದೆ ಎಂದು ಅಂಕಿ–ಅಂಶವನ್ನು ಕೊಡುತ್ತೇನೆ. ಹುಬ್ಬಳ್ಳಿ ತಾಲ್ಲೂಕಿನಿಂದ 6,51,26,827 ರೂ.ಗಳ ಬೆಳೆ ವಿಮೆ ಪ್ರೀಮಿಯಂ ಕಟ್ಟಿದರೆ 3 ಕೋಟಿ 6 ಲಕ್ಷ ರೂ.ಗಳು ಪರಿಹಾರ ಬಂದಿದೆ. ನವಲಗುಂದ ತಾಲ್ಲೂಕಿನಿಂದ 10,10,78,000 ರೂ.ಗಳನ್ನು ಕಟ್ಟಿದರೆ, 30,48,000 ರೂ.ಗಳು ಪರಿಹಾರ ಬಂದಿದೆ. ಇದರಿಂದ ರೈತರನ್ನು ಹೇಗೆ ಉದ್ಧಾರ ಮಾಡುವುದಕ್ಕೆ ಸಾಧ್ಯವಿದೆ? ಬೆಳೆ ವಿಮೆಯಲ್ಲಿ ಇಷ್ಟು ಕೋಟಿಗಟ್ಟಲೆ ಹಣ ತುಂಬಿ ರೈತರಿಗೆ ಏನೂ ಪರಿಹಾರ ಬರದೇ ಇದ್ದರೆ ಹೇಗೆ? ಹೋಗಲಿ, ನಮ್ಮ ಪ್ರೀಮಿಯಮ್ ತುಂಬಿರುವುದಾದರೂ ಬರುತ್ತದೆ ಎಂದು

ತಿಳಿದುಕೊಂಡಿದ್ದೆವು. ಆದರೆ ಅದೂ ಇಲ್ಲ. ಬೆಳೆ ನಷ್ಟವಾಗಿದೆ. ಈ ಬಾರಿ ಅತಿವೃಷ್ಟಿಯಾಗಿದೆ. ನಾನು disaster management ನವರನ್ನು ಕೇಳಿದೆ. ಅವರು satellite ಮೂಲಕ ಬರುತ್ತದೆ, ನಮ್ಮ ಅಧಿಕಾರಿಗಳಿಗೆ ಏನು ಸಂಬಂಧವಿಲ್ಲ ಎಂದು ಹೇಳುತ್ತಾರೆ. ಮತ್ತೆ ಯಾರಿಗೆ ಸಂಬಂಧ? ಇದರ ಬಗ್ಗೆ ನಾವೆಲ್ಲರೂ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ. ಆದ್ದರಿಂದ ತಮ್ಮ ಮೂಲಕ ವಿನಂತಿ ಮಾಡುವಂಥದ್ದು, ಮಾನ್ಯ ಕೃಷ್ಣ ಬೈರೇಗೌಡರು ನಮ್ಮ ಮಾನ್ಯ ಸಿ. ಬೈರೇಗೌಡರ ಮಗ. ಅವರು ಬಹಳ ಅದ್ಭುತವಾಗಿ ಕೃಷಿ ಸಚಿವರಾಗಿ ಕೆಲಸ ಮಾಡಿದಂಥವರು. ನಾನು ಒಂದು ಬಾರಿ ಅವರನ್ನು ಕರೆದುಕೊಂಡು ಹುಬ್ಬಳ್ಳಿಗೆ ಹೋಗಿದ್ದೆ. ಕೂರ್ಗಿ ಮಾಡುವಂತಹ ಒಂದು factory ಗೆ ಕರೆದುಕೊಂಡು ಹೋದರು. ಅಲ್ಲಿ ಗ್ರಾಮಸೇವಕ ಬರಲಿಲ್ಲ. ಅವರೇ ಕೋಲು ಹಾಕಿ ಬಾ ಇಲ್ಲಿ ಎಂದು ಜಗ್ಗಿ ಈ ಕೂರ್ಗಿ ಹೇಗೆ ಮಾಡುತ್ತಾರೆ ನೋಡು ಎಂದು ತೋರಿಸಿದರು. ಅಂತಹವರ ಹೊಟ್ಟೆಯಲ್ಲಿ ಹುಟ್ಟಿದ ನಿಮಗೆ ಕೃಷಿ ಬಗ್ಗೆ ಚಿಂತನೆ ಇದೆ, ನಿಮಗೆ ಹೊಸ ಹೊಸ Plan ಮಾಡಬೇಕೆಂದು ಇದೆ. ಆದರೆ implement ಮಾಡಬೇಕಾದರೆ ತಾವು ವಿಶೇಷವಾಗಿ ಒಂದು ಒಳ್ಳೆಯ ರೀತಿಯಿಂದ ಕೆಲಸ ಮಾಡಲಿ ಎನ್ನುವ ಶುಭವನ್ನು ಕೋರುತ್ತೇನೆ. ನೀವು ಕೃಷಿ ಭಾಗ್ಯ ಯೋಜನೆಯನ್ನು ಜಾರಿಗೆ ತಂದಿದ್ದೀರಿ. ಕೃಷಿ ಹೊಂಡದ size ಅನ್ನು double ಮಾಡದೇ ಇದ್ದರೆ, ಆ ನೀರಿನ ಶೇಖರಣೆ ಹೆಚ್ಚಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಬಂದಾಗಲೂ ಅವರ ಗಮನಕ್ಕೆ ತಂದೆವು. ಆ ಯೋಜನೆಯಲ್ಲಿ ಹೆಚ್ಚು ಹಣ ಒದಗಿಸುವಂತಹ ವ್ಯವಸ್ಥೆಯನ್ನು ಮಾಡಬೇಕು. ನಮ್ಮ ಉತ್ತರ ಕರ್ನಾಟಕದ ಕಡೆ 20 ಹೆಚ್.ಪಿ. ಗಿಂತ ಹೆಚ್ಚು ಶಕ್ತಿ ಇರುವಂತಹ ಟ್ರ್ಯಾಕ್ಟರ್‌ಗಳಿಗೆ ಮಾತ್ರ ಸಬ್ಸಿಡಿ ಕೊಡುವಂತಹ ವ್ಯವಸ್ಥೆ ಇರಬಹುದು. ಕೆಲವು ವಿಚಾರಗಳಲ್ಲಿ ತಮ್ಮ ಮೂಲಕ ಗಮನಕ್ಕೆ ತಂದಿದ್ದೇನೆ. ವಿಶೇಷವಾಗಿ ರಾಷ್ಟ್ರೀಯ ಬೆಳೆ ವಿಮೆ ಇರಬಹುದು, ಹವಾಮಾನ ಬೆಳೆ ವಿಮೆ ಇರಬಹುದು, ಇದರ ಬಗ್ಗೆ ಗಂಭೀರವಾಗಿ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಮಾಡಿದರೂ ಚಿಂತೆ ಇಲ್ಲ. ಕೆಲವು ಗೊತ್ತಿರುವಂತಹ ಶಾಸಕರನ್ನು ಕರೆದು, ಆ ರೈತರ ಸಮಸ್ಯೆಯನ್ನು ಬಗೆಹರಿಸುವಂತಹ ಕೆಲಸ ಮಾಡಬೇಕು.

ಅತಿವೃಷ್ಟಿಯಿಂದ ಏನು ತೊಂದರೆಯಾಗಿದೆ, ಆ ಜಿಲ್ಲೆಗಳಿಗೆ ಕೊಟ್ಟಂತಹ ವ್ಯವಸ್ಥೆಯನ್ನು ನಮ್ಮ ಧಾರವಾಡ ಜಿಲ್ಲೆಗೂ ಕೊಡಬೇಕು ಎಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ಬಣಕಾರ್‌ರವರು ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರೆ, ಐದು ನಿಮಿಷ ನಾನು ಮಾತನಾಡಿಬಿಡುತ್ತೇನೆ. ನನಗೆ ಇನ್ನೊಂದು programme ಇದೆ. ನಾನು ಮಾತನಾಡಿ ಮುಗಿಸಿ ಹೊರಟು ಬಿಡುತ್ತೇನೆ.

ಶ್ರೀ ಯು.ಬಿ. ಬಣಕಾರ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾರಜೋಳರವರಿಗೆ ಹಲವಾರು ಅವಕಾಶಗಳು ಸಿಗುತ್ತದೆ. ಮಾನ್ಯ ಕಾರಜೋಳರವರೆ, ತಾವು ಪ್ರತಿ ಬಾರಿ ಮಾತನಾಡುತ್ತೀರಿ. ನಮಗೆ ಒಂದು ಬಾರಿ ಅವಕಾಶ ಸಿಕ್ಕಿದರೂ ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ?

ಉಪಾಧ್ಯಕ್ಷರು:- ಆಯಿತು ಮಾತನಾಡಿ.

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):- ಮಾನ್ಯ ಉಪಾಧ್ಯಕ್ಷರೆ, 2015-16ನೇ ಸಾಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅನುದಾನ ಬೇಡಿಕೆಯ ಚರ್ಚೆ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಯಾವುದೇ ಸರ್ಕಾರ ಈ ರಾಜ್ಯದ ಅಭಿವೃದ್ಧಿ ಸಲುವಾಗಿ ಕಾರ್ಯನಿರ್ವಹಿಸುವಂತಹ ಸಂದರ್ಭದಲ್ಲಿ ಪ್ರತಿವರ್ಷ ಆಯವ್ಯಯವನ್ನು ಮಂಡಿಸುವುದು ಸಹಜ. ಆಯವ್ಯಯದ ದಿವಸ ಸರ್ಕಾರ ಯಾವ್ಯಾವ ಹೊಸ ಯೋಜನೆಗಳಿಗೆ ಚಾಲನೆ ಕೊಡುತ್ತದೆ ಎನ್ನುವದರ ಬಗ್ಗೆ ಗಮನಹರಿಸುತ್ತೇವೆ. ಆದರೆ ವರ್ಷದ ಕೊನೆಗೆ ಅವರು ಘೋಷಣೆ ಮಾಡಿದಂತಹ ಯೋಜನೆಗಳು ಫಲಪ್ರದವಾಗಿ ಮುಟ್ಟಿದೆಯೋ ಇಲ್ಲವೋ ಎನ್ನುವದನ್ನು ನಾವು ಯಾರೂ ಗಮನಿಸುವುದಿಲ್ಲ. ಈ ಇಲಾಖೆಯ ನೇತೃತ್ವ ವಹಿಸಿದಂತಹ ಸನ್ಮಾನ್ಯ ಶ್ರೀ ಹೆಚ್.ಕೆ. ಪಾಟೀಲ್‌ರವರಿಗೆ ನಾನು ಎರಡು ಯೋಜನೆಗಳ ಬಗ್ಗೆ ಗಮನ

ಸೆಳೆಯುವಂತಹ ಪ್ರಯತ್ನ ಮಾಡುತ್ತಿದ್ದೇನೆ. ತಾವು ಅತ್ಯಂತ ಕಳಕಳಿಯಿಂದ ಹೊಸದಾಗಿ 'ಗ್ರಾಮ ವಿಕಾಸ' ಯೋಜನೆಯನ್ನು ಜಾರಿಗೆ ತರುವಂತಹ ಪ್ರಯತ್ನ ಮಾಡಿದ್ದೀರಿ. 2014–15 ನೇ ಸಾಲಿನ ಆಯವ್ಯಯ ಘೋಷಣೆ ಮಾಡಿದಿರಿ. ಆದರೆ ಆ ವರ್ಷ ಅದಕ್ಕೆ ಚಾಲನೆ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಈ ವರ್ಷ ಪುನಃ ಅದನ್ನು ತಾವು ಮಾಡುವಂತಹ ಪ್ರಯತ್ನದಲ್ಲಿ ಈ ಹೊಸ ವೇಳಾಪಟ್ಟಿಯನ್ನು ಘೋಷಣೆ ಮಾಡಿದ್ದೀರಿ. 15ನೇ ತಾರೀಖಿನಂದು ಗ್ರಾಮ ವಿಕಾಸ ಹಳ್ಳಿಗಳ ಯಾದಿಯನ್ನು ಜಿಲ್ಲಾ ಪಂಚಾಯಿತಿಗೆ ಕೊಡುವುದಕ್ಕೆ, ರಾಜ್ಯ ಸರ್ಕಾರದ ಮಟ್ಟದಲ್ಲಿ ಅದನ್ನು ಅಂತಿಮಗೊಳಿಸುವುದಕ್ಕೆ ಜುಲೈ 20ನೇ ತಾರೀಖು ಎಂದು ಘೋಷಣೆ ಮಾಡಿದ್ದೀರಿ. ದಯವಿಟ್ಟು ಹೊಸದಾಗಿ 'ಗ್ರಾಮ ವಿಕಾಸ' ಯೋಜನೆಯನ್ನು ಜಾರಿಗೊಳಿಸುವ ದೃಷ್ಟಿಯಿಂದ ಏನು ವೇಳಾಪಟ್ಟಿಯನ್ನು ಘೋಷಣೆ ಮಾಡಿದ್ದೀರಿ, ದಯವಿಟ್ಟು ಆ ವೇಳಾಪಟ್ಟಿಯ ಪ್ರಕಾರ ಈ ಯೋಜನೆಯನ್ನು ಜಾರಿಗೊಳಿಸುವಂತಹ ಪ್ರಯತ್ನ ತಾವು ಮಾಡುತ್ತೀರಿ ಎನ್ನುವ ನಂಬಿಕೆಯನ್ನು ನಾನು ಹೊಂದಿದ್ದೇನೆ. ಇನ್ನೊಂದು ವಿಷಯವೇನೆಂದರೆ, ಕಳೆದ ವರ್ಷ 2000 ಶುದ್ಧ ನೀರಿನ ಘಟಕಗಳನ್ನು ಕೊಡುತ್ತೇವೆನ್ನುವಂತಹ ಮಾತನ್ನು ತಾವು ಹೇಳಿದ್ದಿರಿ. ತಮ್ಮ ಬಹಳಷ್ಟು ಪ್ರಯತ್ನದಿಂದಾಗಿ ನನ್ನ ಜಿಲ್ಲೆಗೆ 38 ಶುದ್ಧ ನಿರಿನ ಘಟಕಗಳು ಬಂದಿದ್ದವು. ಅದರಲ್ಲಿ ಕೇವಲ 5 ಮಾತ್ರ ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗಿದೆ. ಇನ್ನೂ 33 ಘಟಕಗಳು ಆಗುವುದಕ್ಕೆ ಸಾಧ್ಯವಾಗಿರುವುದಿಲ್ಲ. ಯಾವುದು ಆಗಿರುವುದಿಲ್ಲವೋ, ಕಳೆದ ಮಾರ್ಚಿಯೊಳಗಡೆ ಮುಗಿಯಬೇಕಾಗಿತ್ತೋ, ಅದನ್ನು ಮುಗಿಸುವಂತಹ ದಿಕ್ಕಿನಲ್ಲಿ ಸರ್ಕಾರ ಸಾಗಬೇಕಾಗಿದೆ. ಈ ವರ್ಷ ಮತ್ತೆ 4,000 ಶುದ್ದ ನೀರಿನ ಘಟಕಗಳನ್ನು ಕೊಡುತ್ತೀರೆನ್ನುವಂತಹ ಮಾತನ್ನು ತಾವು ಹೇಳಿದ್ದೀರಿ. ಈಗ ಪ್ರಾರಂಭಿಸಬೇಕೆಂದಿರುವ 4,000 ಶುದ್ದ ನೀರಿನ ಘಟಕಗಳ ಜೊತೆಗೆ, ಹೋದ ವರ್ಷ ಮಾಡದೆ ಇರುವಂತಹ ಘಟಕಗಳನ್ನು, ಆದಷ್ಟೂ ಈ ವರ್ಷದೊಳಗೆ ಅವುಗಳು ಪೂರ್ತಿ ಕಾರ್ಯಾರಂಭಗೊಂಡು ಜನತೆಗೆ ಶುದ್ದ ನೀರನ್ನು ಕೊಡುವಂತಹ ಪ್ರಯತ್ನ ತಮ್ಮ ಕಡೆಯಿಂದ ಆಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಹಾತ್ಮಾಗಾಂಧಿ ಉದ್ಯೋಗ ಭರವಸೆ ಯೋಜನೆ

ಅನುಷ್ಠಾನದ ಬಗ್ಗೆ ತಮ್ಮ ಕಳಕಳಿಯನ್ನು ನಾನು ಮೆಚ್ಚಲೇಬೇಕು. ತಾವು ಕಳೆದ ವರ್ಷ 15 ಹೊಸ ಯೋಜನೆಗಳನ್ನು ಈ ಒಂದು ಉದ್ಯೋಗ ಖಾತ್ರಿ ಯೋಜನೆಯೊಳಗಡೆ ಜೋಡಿಸಿದ್ದೀರಿ. ಈ ವರ್ಷ ಮತ್ತೆ 6 ಯೋಜನೆಗಳೂ ಸೇರಿ ಒಟ್ಟು 21 ಹೊಸ ಯೋಜನೆಗಳನ್ನು ಜಾರಿಗೆ ತರುವುದರ ಮೂಲಕ ಗ್ರಾಮಾಂತರ ಪ್ರದೇಶದ ಜನತೆಗೆ ಉತ್ತಮವಾದಂತಹ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸುವುದಕ್ಕೆ ಸಾಧ್ಯವಿದೆ. ತಾವು ಒಳ್ಳೆಯ ಯೋಜನೆಗಳನ್ನು ಸೇರಿಸಿದ್ದೀರಿ. ಬಹುಶ: ಯಾವುದಾದರೂ ಒಂದು ಗ್ರಾಮ ಪಂಚಾಯಿತಿ 70 ರಿಂದ 80 ಲಕ್ಷ ರೂ.ಗಳು ಅಥವಾ 1 ಕೋಟಿ ರೂ.ಗಳನ್ನು ಖರ್ಚು ಮಾಡಿರುವಂತಹ ಸಂದರ್ಭದಲ್ಲಿ ನಿಮ್ಮ ನಿರ್ದೇಶಕರು ಅಲ್ಲಿಗೆ ಹೋಗುತ್ತಾರೆ. ಆದರೆ ಅದೇ ರೀತಿಯಾಗಿ ಹೆಚ್ಚಿಗೆ ಖರ್ಚು ಮಾಡಿರುವಂತಹ ಪಂಚಾಯಿತಿಗಳಿಗೆ ತಾವು ಗಮನವನ್ನು ಹರಿಸುತ್ತೀರಿ. ಅದೇ ರೀತಿಯಾಗಿ ಏನೂ ಖರ್ಚು ಮಾಡದೆ ಇರುವಂತಹ ಪಂಚಾಯಿತಿಗಳು ನಮ್ಮಲ್ಲಿ ಇವೆ. ಉದಾಹರಣೆಗೆ ಹಾವೇರಿ ಜಿಲ್ಲೆಯನ್ನು ತೆಗೆದುಕೊಂಡರೆ, ಸುಮಾರು 33 ಗ್ರಾಮ ಪಂಚಾಯಿತಿಗಳು 8 ಲಕ್ಷ ರೂ.ಗಳಿಗಿಂತ ಕಡಿಮೆ ಹಣವನ್ನು ಖರ್ಚು ಮಾಡಿದ್ದಾರೆ. ಹೆಚ್ಚಿಗೆ ಖರ್ಚು ಮಾಡಿರುವಂತಹ ಪಂಚಾಯಿತಿಗಳಿಗೆ ನೀವು ಗಮನವನ್ನು ಕೊಡುವುದಾದರೆ, ಏನೂ ಕೆಲಸ ಮಾಡದೆ ಇರುವಂತಹ ಗ್ರಾಮ ಪಂಚಾಯಿತಿಗಳಿಗೆ ಮತ್ತು ಎಲ್ಲಿಗೂ ಹೋಗದೆ ಇರುವಂತಹ ಇಂಜಿನಿಯರ್‌ಗಳು ಆಗಲಿ, ಪಿಡಿಓಗಳಾಗಲಿ, ಏಕೆ ನಿರ್ಲಕ್ಷ್ಯ ಮಾಡುತ್ತಿದ್ದಾರೆನ್ನುವುದನ್ನು ನಾವು ನೋಡಬೇಕಾಗಿದೆ. ಇವತ್ತು ಉದ್ಯೋಗ ಖಾತ್ರಿ ಭರವಸೆ ಯೋಜನೆ ಜಾರಿಗೆ ತರುವಂತಹ ಸಂದರ್ಭದಲ್ಲಿ ನಾವು ವರ್ಷದ ಕೊನೆಗೆ ಯಾವುದಾದರೂ ಪಂಚಾಯಿತಿಗಳು ತಪ್ಪು ಮಾಡಿರುವುದನ್ನು ನೋಡುವಂತಹ ಸಂದರ್ಭದಲ್ಲಿ ಇವತ್ತು ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಮತ್ತು ಒಬ್ಬ D.S. ಒಬ್ಬ Nodal Officer ಮತ್ತು ತಾಲ್ಲೂಕಿನ E.O. ಇವರುಗಳು ಪ್ರತಿ ತಿಂಗಳು ಸಹ ಆ ಒಂದು ಯೋಜನೆ ಜಾರಿಗೆ ಬರುವಂತಹ ಸಂದರ್ಭದಲ್ಲಿ ಏನು ತಪ್ಪುಗಳಾಗಿರುತ್ತದೆ, ಆ ಬಗ್ಗೆ ಮಾರ್ಗದರ್ಶನ ಮಾಡುವಂತಹ ಕೆಲಸವನ್ನು ಯಾರೂ ಮಾಡುತ್ತಿಲ್ಲ. ನಾನು ಇವತ್ತು ಈ ಒಂದು ಉದ್ಯೋಗ

ಖಾತ್ರಿ ಭರವಸೆ ಯೋಜನೆಯ review meeting ಕರೆದರೆ, ಜಿಲ್ಲೆಯ ಅಧಿಕಾರಿಗಳು ಬರುವಂತಹ ಪ್ರಯತ್ನ ಆಗಲಿಲ್ಲ. ಆದ್ದರಿಂದ ಈ ಯೋಜನೆಯ ಬಗ್ಗೆ ತಮ್ಮ ಕಳಕಳಿ ಏನಿದೆ, ಇವತ್ತು ಒಂದು ಉದಾಹರಣೆ ಕೊಡುವುದಾದರೆ ತಾವು ಗೋಡೌನ ಕಟ್ಟುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಇದು ಎಷ್ಟು ಒಳ್ಳೆಯ ಯೋಜನೆ ಎಂದರೆ, ಇವತ್ತು ನಮ್ಮ ರೈತರು ಬೆಳೆದಂತಹ ಬೆಳೆಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಸಂಗ್ರಹ ಮಾಡುವುದಕ್ಕೆ ಸಾಧ್ಯವಾಗದೆ ಇರುವಂತಹ ಸಂದರ್ಭದಲ್ಲಿ ಈ ಗೋಡೌನ್ ಅನ್ನು ಉಪಯೋಗ ಮಾಡಿಕೊಂಡು, ಸಂಗ್ರಹ ಮಾಡುವುದಕ್ಕೆ ಸಾಧ್ಯವಿರುವಾಗ, ಪ್ರತಿಯೊಂದು ಗ್ರಾಮ ಪಂಚಾಯಿತಿಗೂ ಆಹಾರ ಧಾನ್ಯಗಳನ್ನು ಸಂಗ್ರಹ ಮಾಡುವುದಕ್ಕಾಗಿ ಗೋಡೌನ್ ಕಟ್ಟಿಸುವಂತಹ ಅವಶ್ಯಕತೆ ಇರುವಂತಹ ಸಂದರ್ಭದಲ್ಲಿ, ಏತಕ್ಕಾಗಿ ಈ ಯೋಜನೆಯನ್ನು ಗ್ರಾಮ ಪಂಚಾಯಿತಿಯಲ್ಲಿ ಜಾರಿ ಮಾಡುವುದಕ್ಕೆ ಸಾಧ್ಯವಾಗಿಲ್ಲವೆಂಬುವುದನ್ನು ನಾವು ಗಮನಿಸಬೇಕಾಗಿದೆ. ಆ ಕಾರಣದಿಂದ ಇವತ್ತು ಕಳಕಳಿಯಿಂದ 21 ಯೋಜನೆಗಳನ್ನು ತಾವು ಗ್ರಾಮಾಂತರ ಪ್ರದೇಶಗಳಿಗೆ ಕೊಟ್ಟಿದ್ದೀರಿ. ಬಹುಶಃ ಅವೆಲ್ಲವನ್ನು ಸಮರ್ಪಕವಾಗಿ ತೆಗೆದುಕೊಂಡು ಹೋಗುವಂತಹ ಕೆಲಸ ಆಗಬೇಕು. ಈ ವರ್ಷ 2015–16ನೇ ಸಾಲಿನಲ್ಲಿ ತಾವು ಏನು ಘೋಷಣೆಗಳನ್ನು ಮಾಡಿದ್ದೀರಿ. ಅವೆಲ್ಲವನ್ನು ಮಾರ್ಚ್‌ನ ಕೊನೆಯೊಳಗೆ ಮುಗಿಸುವ ಬಗ್ಗೆ ತಮ್ಮ ಇಲಾಖೆಯಲ್ಲಿ ಕ್ರಮ ತೆಗೆದುಕೊಳ್ಳುತ್ತೀರೆಂದು ನಂಬಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:– ಮಾನ್ಯ ಗೋವಿಂದ ಎಂ. ಕಾರಜೋಳರವರೆ ತಾವು ಮಾತನಾಡಿ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಉಪಾಧ್ಯಕ್ಷರೆ, ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಉಪಾಧ್ಯಕ್ಷರು:– ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಅವರು ಆಗಿನಿಂದಲೂ ಮಾತನಾಡುವುದಕ್ಕೆ ಅವಕಾಶ ಕೋರುತ್ತಿದ್ದಾರೆ. ಮಾನ್ಯ ಕಾರಜೋಳರವರು senior leader ಆಗಿದ್ದಾರೆ, ಈಗ

ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿದ್ದೇನೆ. ಇಲ್ಲಿ ತಾವು ಮಾತನಾಡುವ ಬಗ್ಗೆ limit ಮಾಡಿಕೊಳ್ಳಬೇಕಷ್ಟೆ. ಆಗ ಎಲ್ಲರೂ ಮಾತನಾಡುವುದಕ್ಕೆ ಅವಕಾಶ ಸಿಗುತ್ತದೆ. ಮಾನ್ಯ ಕಾರಜೋಳರವರೆ ತಾವು brief ಆಗಿ ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):- ಮಾನ್ಯ ಉಪಾಧ್ಯಕ್ಷರೆ, 2015-16ನೇ ಸಾಲಿನ ಕೃಷಿ ಮತ್ತು ತೋಟಗಾರಿಕೆ, ಗ್ರಾಮೀಣಾಭಿವೃದ್ಧಿ ಬೇಡಿಕೆಯ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಭಾರತ ದೇಶವು ಕೃಷಿ ಪ್ರಧಾನವಾದಂತಹ ದೇಶ, ಭಾರತದಲ್ಲಿ ಕೃಷಿಯನ್ನೇ ಅವಲಂಬಿಸಿ ಬದುಕತಕ್ಕಂತಹ ಜನರು 73% ಇದ್ದಾರೆ. ರೈತ ದೇಶದ ಬೆನ್ನಲುಬು ಎನ್ನುವುದನ್ನು ನಾವು ಪ್ರತಿನಿತ್ಯ ಭಾಷಣದಲ್ಲೂ ಉಪಯೋಗ ಮಾಡುತ್ತಿದ್ದೇವೆ. ಪ್ರತಿ ಒಂದು ಗಂಟೆಗೆ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ, ಸುಮಾರು 20 ಜನರು ಆತ್ಮಹತ್ಯೆಗೆ ಪ್ರಯತ್ನ ಮಾಡುತ್ತಾರೆ. ಇದು ಸ್ವಾತಂತ್ರ್ಯ ಬಂದ ನಂತರ, ನಾವು ಕೃಷಿಕರಿಗೆ ಆತ್ಮಹತ್ಯೆಯ ಭಾಗ್ಯವನ್ನು ಕೊಟ್ಟಂತೆ ಆಗಿದೆ. ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ತಾವು ಸಮಯದ ಒತ್ತಡದಲ್ಲಿದ್ದೀರಿ. ಈ ವರ್ಷ 2015-16ನೇ ಸಾಲಿಗೆ 3,883 ಕೋಟಿ ರೂಪಾಯಿಗಳು ಅನುದಾನವನ್ನು ಮಂಜೂರು ಮಾಡಿಕೊಡಬೇಕೆಂದು ಕೃಷಿ ಇಲಾಖೆಯಿಂದ ಬೇಡಿಕೆಯು ಬಂದಿದೆ. ಕಳೆದ ವರ್ಷ 2955 ಕೋಟಿ ರೂಪಾಯಿಗಳು ಯೋಜನೆ ಒಳಗಡೆ 2014-15ನೇ ಸಾಲಿನಲ್ಲಿ ಹಣವನ್ನು ಕೊಟ್ಟಿದ್ದರು. ಸುಮಾರು 1922 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಇದರಲ್ಲಿ 1482 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಂದರೆ 51% ಮಾತ್ರ ಖರ್ಚು ಮಾಡಿದ್ದಾರೆ. ಏಕೆ ಅವರಿಗೆ ಈ ವರ್ಷ 3800 ಕೋಟಿ ರೂಪಾಯಿಗಳನ್ನು ಕೊಡಬೇಕು? ಅವರು ಕೊಟ್ಟಿರುವಂತಹ ಹಣವು ಖರ್ಚು ಮಾಡುವುದಕ್ಕೆ ಆಗಲಿಲ್ಲವೆಂದರೆ ಅವರಿಗೆ ಕೊಡುವಂತಹ ಅವಶ್ಯಕತೆ ಏನಿದೆ? ಅದಕ್ಕಾಗಿ ನಾನು ಮೊಟ್ಟ ಮೊದಲನೆಯದಾಗಿ ವಿರೋಧ ಮಾಡುತ್ತೇನೆ. ಕರ್ನಾಟಕದಲ್ಲಿ 4 ಕೃಷಿ ವಿಶ್ವವಿದ್ಯಾಲಯಗಳನ್ನು ಮಾಡಿದ್ದೇವೆಂದು ನಾವು

ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಮೊದಲು ಬೆಂಗಳೂರು ಮತ್ತು ಧಾರವಾಡದಲ್ಲಿತ್ತು. ನಂತರ ರಾಯಚೂರು ಮತ್ತು ಶಿವಮೊಗ್ಗದಲ್ಲಿ ಕೃಷಿ ವಿಶ್ವವಿದ್ಯಾಲಯಗಳನ್ನು ಮಾಡಿದ್ದಾರೆ. ಇವು ಏನಾಗಿದೆ ಎಂದರೆ Sub-registrar ಗಳನ್ನು ತಯಾರು ಮಾಡುವಂತಹ ಕೇಂದ್ರಗಳಾಗಿವೆ. ಕೃಷಿ ವಿಶ್ವವಿದ್ಯಾಲಯದಲ್ಲಿ ಓದಿ ಕೃಷಿ ವಿಜ್ಞಾನಿಗಳಾಗಿ ನಮ್ಮ ದೇಶದ ರೈತನಿಗೆ ಸಹಕಾರಿಯಾಗಬೇಕು, ಹೊಸ ಹೊಸ ತಳಿಗಳನ್ನು ಕಂಡುಹಿಡಿಯಬೇಕು, ರೈತನ ಬದುಕು ಹಸನಾಗಬೇಕೆನ್ನುವಂತಹ ಉದ್ದೇಶದಿಂದ ಅವರಿಗೆ ಸರ್ಕಾರವು ಹಣವನ್ನು ಖರ್ಚು ಮಾಡಿ ಓದಿಸುವಂತಹದ್ದು ಆಗಿದೆ. ಆದರೆ ದುರ್ದೈವ ಏನಾಗಿದೆ ಎಂದರೆ, ಅವರುಗಳಿಗೆ practical ನಲ್ಲಿ ಹೆಚ್ಚಿಗೆ marks ಕೊಟ್ಟುಬಿಡುತ್ತಾರೆ. ಅವರು ಭಯಂಕರವಾಗಿ merit ಮೇಲೆ ಬರುತ್ತಾರೆ. 99.9% marks ತೆಗೆದುಕೊಳ್ಳುತ್ತಾರೆ. ಹೀಗಾಗಿ ಕೃಷಿ ವಿಶ್ವವಿದ್ಯಾಲಯದಲ್ಲಿ ಓದಿದಂತಹ B.Sc, (Agriculture) Graduates, M.Sc, (Agriculture) Graduates ಇಡೀ ರಾಜ್ಯದಲ್ಲಿ ಸುಮಾರು 200 ಜನ Sub-Registrar ಆಗಿದ್ದಾರೆ. ಅವರುಗಳನ್ನು Sub-Registrar ಮಾಡುವುದಕ್ಕಾಗಿ ನಾವು ವಿಶ್ವವಿದ್ಯಾಲಯಗಳನ್ನು ಇಡಬೇಕೇ? ಇದು ನನ್ನ ಪ್ರಶ್ನೆಯಾಗಿದೆ. ಒಂದು ಕಡೆಯಲ್ಲಿ ಕೃಷಿ ವಿಶ್ವವಿದ್ಯಾಲಯದವರು ಯಾವುದೇ ಹೊಸ ತಳಿಗಳ ಅಭಿವೃದ್ಧಿ ಮಾಡಲಿಲ್ಲ.

ಶ್ರೀ ಕೆ. ಶಿವಮೂರ್ತಿ:- University ಯಲ್ಲಿ ಓದತಕ್ಕಂತಹ ಹಳ್ಳಿಯ ಮಕ್ಕಳಿಗೆ, ಗ್ರಾಮೀಣ ಪ್ರದೇಶದಿಂದ ಬರುವವರಿಗೆ ವಿಶೇಷವಾಗಿ ಪ್ರೋತ್ಸಾಹ ನೀಡುವುದಕ್ಕಾಗಿ ಹಿಂದೆ ಗ್ರಾಮೀಣ ಕೃಪಾಂಕವೆಂದು ಕೊಡುತ್ತಿದ್ದರು.

ಶ್ರೀ ಗೋವಿಂದ ಎಂ. ಕಾರಜೋಳ:- ನಮ್ಮ ಕೃಷಿ ವಿಜ್ಞಾನಿಗಳು, ವಿಶ್ವವಿದ್ಯಾಲಯದಲ್ಲಿ ಏನು professors, Head of the Department ಮತ್ತು Vice Chancellor ಗಳು ಇದ್ದಾರೆ. ಇಲ್ಲಿ ಅವರುಗಳ ಕೆಲಸ ಏನು? ಈ ದೇಶದಲ್ಲಿ ಅತ್ಯುತ್ತಮ ತಳಿಗಳನ್ನು ಕಂಡುಹಿಡಿಯಬೇಕು. ನಾವು ಬೆಳೆದಂತಹ ಬೆಳೆ ವಿಶ್ವದ ಎಲ್ಲಾ ದೇಶಗಳಿಗೆ ರಫ್ತಾಗುವಂತಹ quality ಉತ್ತಮ ಗುಣಮಟ್ಟದ ಆಹಾರಧಾನ್ಯಗಳನ್ನು ಹುಡುಕತಕ್ಕಂತಹದ್ದು ಆಗಬೇಕಾಗಿದೆ.

ಆದರೆ ಅವರುಗಳು ಮಾಡಿದ್ದೇನು? ಈ ಕೆಲಸವನ್ನು ಒಬ್ಬರೂ ಸಹ ಮಾಡುತ್ತಿಲ್ಲ. ದುರ್ದೈವ ಎಂದರೆ ಇದೇ Government, ಅದೇ Government ಎಂದೇನೂ ಅಲ್ಲ. ಎಲ್ಲಾ Government ನಲ್ಲಿಯೂ ಏನಾಗಿದೆ ಎಂದರೆ...

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾರಜೋಳರವರೆ, ಇಲ್ಲಿ ಸ್ವಲ್ಪ correction ಮಾಡಿಕೊಳ್ಳಬೇಕು. ಭಾರತ ದೇಶದಲ್ಲಿ ವಿಶೇಷವಾಗಿ Karnataka ದ Agriculture University ಏನಿದೆ, ಅದು ಶ್ರೇಷ್ಠ University ಎನಿಸಿಕೊಂಡಿದೆ. ಆನಂತರ ಈ ಬಗ್ಗೆ ತಮಗೆ ಹೇಳುತ್ತೇನೆ ಕೇಳಿ. ಇವತ್ತು ನೀವು ದೆಹಲಿಗೆ ಹೋದಾಗ ನಿಮಗೆ ಈ ಬಗ್ಗೆ ಅರಿವಾಗುತ್ತದೆ. ಅಲ್ಲಿರತಕ್ಕಂತಹ Research Institution ನಲ್ಲಿರತಕ್ಕಂತಹ scientist ಗಳು ಮತ್ತು ಅಯ್ಯಪ್ಪನ್ ಅಂತಹವರು ಅಲ್ಲಿಗೆ ಕರ್ನಾಟಕದಿಂದಲೇ ಹೋಗಿದ್ದಾರೆ. ಅಲ್ಲಿ ಎಲ್ಲರೂ department head ಮಾಡುತ್ತಾರೆ. ತಾವು ತಳಿಗಳ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ, ಮಾನ್ಯ ಕಾರಜೋಳರವರೆ, ತಾವು ಕಬ್ಬು ಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಟ್ಟಿದ್ದೀರಿ, ತಮಗೆ ಬೇರೆ ಕಡೆ ಲಕ್ಷ ಇರುವುದಿಲ್ಲ. ಜೋಳದಲ್ಲಿ ಹೊಸ ತಳಿಗಳನ್ನು ಕಂಡು ಹಿಡಿದ್ದಿದ್ದಾರೆ. minor millets ಅಂದರೆ ನಾವು ಹೇಳತಕ್ಕಂತಹದ್ದು ನವಣೆ, ಬರಗ, ಅರ್ಕ, ಇವೆಲ್ಲಾ ಕೂಡ ಹೊಸದಾಗಿ ಇರುವಂತಹ ತಳಿಗಳಾಗಿವೆ.

ಶ್ರೀ ಗೋವಿಂದ ಎಂ. ಕಾರಜೋಳ:- ಅದನ್ನು ನಾವು ಸಣ್ಣವರಿದ್ದಾಗ ಬೆಳೆಯುತ್ತಿದ್ದರು. ನಾವು ಶಾಲೆಗೆ ಹೋಗುತ್ತಿದ್ದೆವಲ್ಲಾ, ಆಗ ಇದನ್ನು ಬೆಳೆಯುತ್ತಿದ್ದರು. ಇವತ್ತು ನವಣೆ ಎಲ್ಲಿ ಬೆಳೆಯುತ್ತಿದ್ದಾರೆ, ಎಲ್ಲಿ ಅರ್ಕ ಬೆಳೆಯುತ್ತಾರೆ ತೋರಿಸಿ. ಬಿಜಾಪುರ ಜಿಲ್ಲೆಯೊಳಗಡೆ ಒಂದು ಹೆಕ್ಟೇರ್ ಬೆಳೆದಿರುವುದನ್ನು ತೋರಿಸ ನಡೆಯಿರಿ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಕಾರಜೋಳರವರೆ, ತಮಗೆ ನವಣೆ ಬೇಕೇ?

ಶ್ರೀ ಗೋವಿಂದ ಎಂ. ಕಾರಜೋಳ:- ಎಲ್ಲವೂ ಬಂದ್ ಆಗಿದೆ. ಇದನ್ನು ಯಾರೂ ಕೂಡ ಬೆಳೆಯುವುದಿಲ್ಲ.

ಉಪಾಧ್ಯಕ್ಷರು:- ಕೆಲವು ಕಡೆಯಲ್ಲಿ ಬೆಳೆಯುತ್ತಾರೆ.

ಶ್ರೀ ಬಿ.ಆರ್. ಪಾಟೀಲ್:- ಕೆಲವು ಕಡೆಯಲ್ಲಿ ಬೆಳೆಯುವವರು ಇದ್ದಾರೆ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಗೋವಿಂದ ಎಂ. ಕಾರಜೋಳ:- ಬಹಳ ಕಡಿಮೆ ಇದ್ದಾರೆ. ಆಮೇಲೆ ತಾವು ತಮ್ಮ ಅಭಿಪ್ರಾಯವನ್ನು ಹೇಳಿ. ಒಳ್ಳೆಯದು ಇದ್ದರೆ ತಾವು ಹೇಳಿ.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ:- ನಾನು ಅದಕ್ಕಾಗಿ ತಮಗೆ ಹೇಳಲಿಲ್ಲ. ನಾವು ಕರ್ನಾಟಕದವರಾಗಿ ಏನು ಕೆಲಸ ಮಾಡುತ್ತಿಲ್ಲ ಎನ್ನುವಂತಹ ಸಂದೇಶವನ್ನು ಇಲ್ಲಿ ಹೇಳಿದೆವು ಅಂದರೆ ತಪ್ಪು ಸಂದೇಶ ಜನರಿಗೆ ಹೋಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ:- ಜನರಿಗೆ ತಪ್ಪು ಸಂದೇಶ ಹೋಗಿಲ್ಲ. ಜನರ ಸಂದೇಶವನ್ನೇ ನಾನು ಇಲ್ಲಿ ತಂದಿದ್ದೇನೆ.

(ಗೊಂದಲ)

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ:- ತಾವು ಈ ರೀತಿಯಾಗಿ ಹೇಳುವುದು ಸರಿಯಲ್ಲ ಎಂಬುದಷ್ಟೆ ನನ್ನ ಅಭಿಪ್ರಾಯವಾಗಿದೆ.

ಶ್ರೀ ಗೋವಿಂದ ಎಂ. ಕಾರಜೋಳ:- ನೀವು ಸರ್ಕಾರದಲ್ಲಿದ್ದೀರಿ ಎಂದು defend ಮಾಡಿಕೊಂಡು ಮಾತನಾಡಿದರೆ ಆ ಬಗ್ಗೆ ನನ್ನದೇನೂ ತಕರಾರು ಇಲ್ಲ. ನಾನು ಕೃಷಿ ವಿಶ್ವವಿದ್ಯಾಲಯಗಳ ಬಗ್ಗೆ ಏನು comment ಮಾಡಿದೆ ಎಂದರೆ ಹೊಸ ಹೊಸ ತಳಿಗಳನ್ನು ಹುಡುಕಲಿಲ್ಲ. ಹೆಚ್ಚು ಇಳುವರಿ ಕೊಡತಕ್ಕಂತಹ ತಳಿಗಳನ್ನು ಹುಡುಕಲಿಲ್ಲ. ಕೃಷಿ ವಿಜ್ಞಾನಿಗಳನ್ನು ತಯಾರು ಮಾಡುವುದರಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಕಾರ್ಯಗಳನ್ನು ಮಾಡಲಿಲ್ಲ.

ಆ ಕಾರಣಕ್ಕಾಗಿ ಇವತ್ತು agriculture graduates, post-graduates ಎಲ್ಲಾ Sub Registrar ಆಗಲಿಕ್ಕೆ ಹೋಗುತ್ತಿದ್ದಾರೆ ಎನ್ನುವುದು ನನ್ನ ಆತಂಕ.

ಶ್ರೀ ಶಿವಾನಂದ ಎಸ್. ಪಾಟೀಲ್:- ತಾವೇ ಬಾಗಲಕೋಟೆಯಲ್ಲಿ ಒಂದು ತೋಟಗಾರಿಕೆ ವಿಶ್ವವಿದ್ಯಾಲಯ ಮಾಡಿದ್ದೀರಲ್ಲಾ, ಅಲ್ಲೇನು ನಡೆದಿದೆ ಎಂದು ಅದರ ಬಗ್ಗೆ ಕೂಡ ಸ್ವಲ್ಪ ಬೆಳಕು ಚೆಲ್ಲಬೇಕು.

ಶ್ರೀ ಗೋವಿಂದ ಎಂ. ಕಾರಜೋಳ:- ನಾನು ಅದನ್ನು last time ಹೇಳಿದ್ದೇನೆ. ನೀವು ಇರಲಿಲ್ಲ ಎಂದು ಕಾಣಿಸುತ್ತದೆ. ನೀವು ಬಂದಿರಲಿಲ್ಲ. ಅದರ ಬಗ್ಗೆ ಕೂಡ ಹೇಳಿದ್ದೇನೆ. ಮಾನ್ಯ ಸಭಾಧ್ಯಕ್ಷರೆ, ಇವತ್ತು ಕೃಷಿ ಇಲಾಖೆಯಲ್ಲಿ ಇನ್ನೊಂದು ಬಹಳ ಮಹತ್ವವಾದ ವಿಚಾರ ಇದೆ. ಜಲಾನಯನ ಅಭಿವೃದ್ಧಿ ಮಾಡುವಂಥದ್ದು. ಅದು ಭ್ರಷ್ಟರ ಪಾಲಿಗೆ ಬಂಗಾರದ ಗಣಿಯಾಗಿದೆ. ಎಲ್ಲರೂ ಅಲ್ಲಿಯೇ ಪ್ರಯತ್ನ ಮಾಡಿ ಹೋಗುತ್ತಿದ್ದರು. ಆದರೇನೋ ಕೃಷ್ಣಬೈರೇಗೌಡರು ಅದನ್ನು ಸ್ವಲ್ಪ merge ಮಾಡಿ, ಅದನ್ನು ಸ್ವಲ್ಪ ಹತೋಟಿಗೆ ತಂದಿದ್ದಾರೆ. ಅದಕ್ಕೆ ನಿಮಗೆ ಅಭಿನಂದನೆಗಳನ್ನು ಹೇಳುತ್ತೇನೆ. ಅದೊಂದು ಒಳ್ಳೆಯ ಕೆಲಸ ಮಾಡಿದ್ದೀರಿ. ಮೊದಲೇನಾಗಿತ್ತೆಂದರೆ ಅದೇ ಬೇರೆ wing, ಇದೇ ಬೇರೆ wing. ಅವರು ಎಲ್ಲಿಯೂ ಒಂದು ಕೃಷಿ ಹೊಂಡ ಮಾಡಲಿಲ್ಲ. ನಿಮಗೆ ನಾನು ಒತ್ತಾಯ ಮಾಡುತ್ತೇನೆ. ಎಂದಿನಿಂದ ಕೃಷಿ ಹೊಂಡ ಪ್ರಾರಂಭ ಮಾಡಿದ್ದಾರೆ? ಇವತ್ತಿನವರೆಗೆ ಎಷ್ಟು ಮಾಡಿದ್ದಾರೆಂದು investigation ಮಾಡಿ, ಸದನಕ್ಕೆ ಅಂಕಿ ಅಂಶವನ್ನು ಕೊಡಿ. ಇವತ್ತಿನವರೆಗೆ ಎಲ್ಲಿಯೂ ಮಾಡಲಿಲ್ಲ. ಕೆಲವು ಅಧಿಕಾರಿಗಳು ನೇರವಾಗಿ ಬೆಂಗಳೂರಿನಿಂದ posting ತೆಗೆದುಕೊಂಡು ಬಂದು, ರೈತರಿಗೆ 25% ಕೊಟ್ಟು, 75% ಅವರೇ ತಿಂದು ಎಲ್ಲಿಯೂ ಕೃಷಿ ಹೊಂಡ ಮಾಡಲಿಲ್ಲ. ಇದು ನನ್ನ ನೇರವಾದಂಥ ಆರೋಪ. ಬೇಕಾದರೆ ಎಲ್ಲೆಲ್ಲಿ ಎಂದು ತೋರಿಸುತ್ತೇನೆ. ಒಂದೊಂದು ಊರಿನಲ್ಲಿ 500 ಗಟ್ಟಲೆ ಕೃಷಿಹೊಂಡ ಮಾಡಿದ್ದೇವೆಂದು ಲೆಕ್ಕ ತೋರಿಸಿದ್ದಾರೆ. 500 ಬೇಡ, 50 ಕೃಷಿ ಹೊಂಡ ಮಾಡಿರುವ ಬಗ್ಗೆ ತೋರಿಸಿಬಿಡಲಿ, 10% ತೋರಿಸಲಿ. ಕೃಷಿ ಇಲಾಖೆಯಲ್ಲಿ ಆಗತಕ್ಕಂಥ ಇಂಥ ಬೆಳವಣಿಗೆ ಒಳ್ಳೆಯದಲ್ಲ. ಒಬ್ಬ

Agriculture Assistant ಯಾವ ರೈತನ ಹೊಲಕ್ಕೆ ಹೋಗಿ ಬೆಳೆ ನೋಡುವುದಿಲ್ಲ, ಅವರಿಗೆ ಮಾರ್ಗದರ್ಶನ ಮಾಡುವುದಿಲ್ಲ ಮತ್ತು ರೈತನಿಗೆ ಸಿಗಬೇಕಾದಂಥ ಸೌಲಭ್ಯಗಳನ್ನು ತಿಳಿಸಿ ಹೇಳುವುದನ್ನು ಒಬ್ಬರೂ ಮಾಡುವುದಿಲ್ಲ. ರೈತರು ಏನಾದರೂ ಕೇಳುವುದಿತ್ತು ಎಂದರೆ ರೇಡಿಯೋದಲ್ಲಿ ಕೇಳಬೇಕು. ಆದರೆ ಊರಿಗೊಬ್ಬ Agriculture Assistant ಇಟ್ಟಿದ್ದಾರೆ. ಸಾಕಷ್ಟು ಕೃಷಿ ಹುದ್ದೆಗಳನ್ನು create ಮಾಡಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಒಂದು Assistant Director ಇದ್ದುದನ್ನು ಜಿಲ್ಲಾ ಮಟ್ಟದಲ್ಲಿ ಒಂದು Deputy Director ಇದ್ದುದನ್ನು ಹೆಚ್ಚು ಮಾಡಿದ್ದಾರೆ. ಇಬ್ಬರು Deputy Director, ಒಬ್ಬರು Joint Director, ಪ್ರತಿ ಸಬ್ ಡಿವಿಷನ್‌ಗೆ ಒಬ್ಬ Deputy Director, ಈ ರೀತಿಯ ಹುದ್ದೆಗಳನ್ನು create ಮಾಡಿದ್ದಾರೆ. ಇಷ್ಟೊಂದು ಬಜೆಟ್ ಅನ್ನು ಅವರ ಹೆಂಡತಿ ಮಕ್ಕಳನ್ನು ಸಾಕುವ ಸಲುವಾಗಿ ಅನುಮೋದನೆ ಮಾಡುವುದು ನನಗೆ ಮಾತ್ರ ಸಹಮತವಿಲ್ಲ. ಕೃಷಿ ಇಲಾಖೆ ಎಂದರೆ ಏನು? ನಮ್ಮ ರೈತರು, ನಮ್ಮ ಪೂರ್ವಜರು, ಅವರಿಗೆ ಯಾರೊಬ್ಬರ ಮಾರ್ಗದರ್ಶನ ಇಲ್ಲದೆ ಅತ್ಯುತ್ತಮವಾದಂಥ ಬೀಜಗಳನ್ನು ಇಟ್ಟಿದ್ದರು. ಇವತ್ತು ಆ ಯಾವ ಬೀಜಗಳು ಉಳಿದಿಲ್ಲ. ಏನೋ ನಾಡಗೌಡರು ಹೇಳಿದರು, ಆರ್ಕ ಎಂಬ ಧಾನ್ಯವನ್ನು ನೀವು ನನಗೆ ತೋರಿಸಬೇಕು. ಆರ್ಕ್ ಧಾನ್ಯವನ್ನು ನಾನು ಇತ್ತೀಚಿನ ದಿನಗಳಲ್ಲಿ ನೋಡಿಲ್ಲ. ನವಣೆಯನ್ನು ತಪ್ಪಿ ಎಲ್ಲಾದರೂ ನೋಡಿದ್ದೇನೆ. ಆರ್ಕ ನೋಡಿಲ್ಲ. ಆರ್ಕ ಬಹಳ ಚೆನ್ನಾಗಿತ್ತು. ಹೆಚ್.ಕೆ. ಪಾಟೀಲ ಸಾಹೇಬರೇ ಬಹುಶ: ತಾವು ತಿಂದಿರಬೆಕು. ನಮ್ಮ ಮನೆಗಳಲ್ಲಿ ಆರ್ಕ್‌ನಿಂದ ಹೋಳಿಗೆ ಮಾಡುತ್ತಿದ್ದರು. ಆರ್ಕ್ ಬೀಸಿ ಎಣ್ಣೆ ಹಚ್ಚುವುದರ ಬದಲಿಗೆ, ಆ ಹಿಟ್ಟನ್ನು ಹಚ್ಚಿ ಹೋಳಿಗೆ ಮಾಡಿದರೆಂದರೆ ಹೋಳಿಗೆ ಮೆತ್ತಗೆ ಇರುತ್ತಿತ್ತು.

ಅಧ್ಯಕ್ಷರು:– ಯಾವುದದು?

ಶ್ರೀ ಗೋವಿಂದ ಎಂ. ಕಾರಜೋಳ:– ಆರ್ಕ್ ಬಿಳಿ ಬಣ್ಣದಲ್ಲಿ ನವಣೆ ರೀತಿ ಇರುತ್ತದೆ. ಅದರ ಮೇಲೆ...

ಶ್ರೀ ಹೆಚ್.ಕೆ. ಪಾಟೀಲ್:- ನವಣೆ, ಆರ್ಕ್, ಬರ್ಗ್ ಇವೆಲ್ಲಾ ಒಂದೇ variety ಧಾನ್ಯಗಳು.

ಶ್ರೀ ಗೋವಿಂದ ಎಂ. ಕಾರಜೋಳ:- ಇಲ್ಲ, ಇವೆಲ್ಲ ಒಂದೇ ರೀತಿ ಇರುವುದಿಲ್ಲ ಸರ್, ನವಣೆ yellow ಇರುತ್ತದೆ. ಆರ್ಕ್ white ಇರುತ್ತದೆ. ಅದು ಅನ್ನ ಮಾಡಿ ತಿನ್ನುವಂಥದ್ದು. ಅದನ್ನು ಮೊದಲು ನಮ್ಮಲ್ಲೆಲ್ಲಾ ರೈತರು ಬೆಳೆಯುತ್ತಿದ್ದರು, ಈಗ ಬೆಳೆಯುವುದಿಲ್ಲ. ಅವೆಲ್ಲಾ ಹೋಗಿಯೇ ಬಿಟ್ಟಿವೆ. ಬದನೆಕಾಯಿ ಬೆಳೆಯುತ್ತಿದ್ದರು, ನಾವು ಚಿಕನ್, ಮಟನ್ ತಿನ್ನುವುದು ಒಲ್ಲೆ ಎನ್ನುತ್ತಿದ್ದೆವು. ನಮ್ಮ ಆ ಬದನೆಕಾಯಿ ಅಷ್ಟು taste ಇರುತ್ತಿತ್ತು. ಇವತ್ತು ಆ ಬದನೆಕಾಯಿಯೇ ಇಲ್ಲ. ಬದನೆಕಾಯಿ ಇವತ್ತು ಹೇಗಿದೆ ನಾಡಗೌಡರೆ, ಕಲ್ನಾರು ಎಳೆಯಿದ್ದ ಹಾಗಿ ಬರುತ್ತವೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ:- ಈಗ ಕೋಲಾರದಲ್ಲಿ ಏನು ತಳಿ ಇದೆ. ನೀವು ಅದನ್ನು ಸ್ವಲ್ಪ ವೃದ್ಧಿಪಡಿಸಿ. ಅದೇ ಬದನೆಕಾಯಿ ತಳಿ ಇದೆ, ಅನದ್ನು ನೀವು ವೃದ್ಧಿಪಡಿಸಿ.

ಶ್ರೀ ಗೋವಿಂದ ಎಂ. ಕಾರಜೋಳ:- ಏನಾಗಿದೆ ಇವರು ಅವನ್ನು ಉಳಿಸಲೇ ಇಲ್ಲ. ಅಂಥ ತಳಿ ಒಂದೂ ಇಲ್ಲ ಸರ್.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಅಧ್ಯಕ್ಷರೆ, ಹಿಂದೆ ಆರ್ಕ್ ಎನ್ನುವುದು ಹಿಂದೆ ಬಡವರೆಲ್ಲಾ ಅಕ್ಕಿ ರೂಪದಲ್ಲಿ ಅನ್ನ ಮಾಡಿ ಊಟ ಮಾಡುತ್ತಿದ್ದರು. ಬಡವರೆಲ್ಲಾ ಆರ್ಕ್ ಅನ್ನು ಮಿಲ್ ಮಾಡಿಸಿ, ಕುಟ್ಟಿ ಸಿಪ್ಪೆ ತೆಗೆದು, ಅನ್ನ ಮಾಡಿಕೊಂಡು ಊಟ ಮಾಡುತ್ತಿದ್ದರು. ಅದು ಈಗ ಇಲ್ಲ, ಅದು ಬಹಳ ರುಚಿ. ಮನುಷ್ಯರು ಗಟ್ಟಿಯಿರುತ್ತಿದ್ದರು. ಮಜ್ಜಿಗೆಗೆ ಹಾಕಿಕೊಂಡು, ಇಷ್ಟಿಷ್ಟು ಅನ್ನ ಹಾಕಿಕೊಂಡು, ಊಟ ಮಾಡಿಬಿಟ್ಟರೆ ಬಹಳ ಗಟ್ಟಿಯಿರುತ್ತಿದ್ದರು. ಈಗ ಅವೆಲ್ಲಾ ಇಲ್ಲ, ಹೋಗಿವೆ, ಈಗೇನಿದ್ದರು ಪಾಲಿಷ್ ಮಾಡಿರುವ ಅಕ್ಕಿ ಅಷ್ಟೇ ಸಿಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ:- ನಾವೆಲ್ಲಾ ಭತ್ತ ಬೆಳೆಯುತ್ತಿರಲಿಲ್ಲ.

ಶ್ರೀ ಎಂ.ಬಿ. ಪಾಟೀಲ್:- ಅಧ್ಯಕ್ಷರೆ, ಕಾರಜೋಳರವರು ಸುಳ್ಳು ಹೇಳುತ್ತಿದ್ದಾರೆ, ಅವರು ಕೆಜಿಗಟ್ಟಲೆ ಬೇರೆ ಊಟ ಮಾಡುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ:- ಆಗ ಮಟನ್ ಬೇಡವೆಂದು ಬದನೆಕಾಯಿ ತಿನ್ನುತ್ತಿದ್ದೆವು. ಆಗ ಅಂಥ ರುಚಿ ಇರುತ್ತಿತ್ತು. ನನ್ನ ಜೀವನದಲ್ಲಿ ಬಹುಶ: 40–50 ಟನ್ ತಿಂದಿರಬೇಕು. ಆ ವಿಷಯ ಬೇರೆ, ಆದರೆ ಏನಾಗಿದೆ, ನಾನು compare ಏಕೆ ಮಾಡಿದೆ ಎಂದರೆ ಅಂಥ ಉತ್ತಮವಾದ ತಳಿಗಳಿದ್ದವು. ಅವನ್ನು ಕಾಪಾಡಲಿಕ್ಕೆ ಇವರಿಗೆ ಆಗಲಿಲ್ಲ, ಅವನ್ನು ಉಳಿಸಲಿಕ್ಕೆ ಆಗಲಿಲ್ಲ.

ಅಧ್ಯಕ್ಷರು:- ಈಗ ಏನು ಮಾಡಬೇಕು? ಅದನ್ನು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:- ಅಧ್ಯಕ್ಷರೆ, ಅಂಥ ದೇಸಿ ತಳಿಗಳನ್ನು ಎನು ನಮ್ಮ ಪೂರ್ವಜರು ಉಳಿಸಿದ್ದರಲ್ಲ, ಅಂಥ ತಳಿಗಳನ್ನು ತೆಗೆದುಕೊಂಡು ಬನ್ನಿ, ರುಚಿಕರವಾದಂಥ ಆಹಾರ ಅದು.

ಅಧ್ಯಕ್ಷರು:- ಆಗಲೇ ಇನ್ನೊಂದು ವಿಷಯ ಹೇಳುತ್ತಿದ್ದಿರಿ, ಇಷ್ಟೊಂದು ಅಧಿಕಾರಿಗಳು ಅದಾಗಿದ್ದಾರೆ, ಇದಾಗಿದ್ದಾರೆ ಎಂದು ಹೇಳುತ್ತಿದ್ದರಲ್ಲ, ಈಗ ಸುಧಾರಣೆ ಯಾವ ರೀತಿ ಮಾಡಬೇಕು? ಅದನ್ನು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:- ಸುಧಾರಣೆ ಬಗ್ಗೆ ಹೇಳುತ್ತೇನೆ ಅಧ್ಯಕ್ಷರೆ, ಸುಧಾರಣೆ ಅನ್ನುವುದು ಏನಿಲ್ಲ. ರೈತರ ಜೊತೆಯಲ್ಲಿ ಇವರು ರೈತರಾಗಿ ಅವರಿಗೆ ಮಾರ್ಗದರ್ಶನ ಮಾಡಿ, ಅವರ ಕಡೆಯಿಂದ ಬೆಳೆಯುವುದಕ್ಕೆ ಹಚ್ಚಬೇಕು. ಬೇರೇನಿಲ್ಲ. ಇವರೇನು ತೋರಿಸುತ್ತಾರೆ, ಅಂಗೈಯಲ್ಲಿ ಅರಮನೆ ತೋರಿಸಿದಂತೆ ಎಷ್ಟು ಕ್ವಿಂಟಾಲ್ yield ಬಂತು, ಅಷ್ಟು ಕ್ವಿಂಟಾಲ್ yield ಬಂದು ಅನ್ನುತ್ತಾ hybrid variety ಗೆ ಹೋಗುತ್ತಾರೆ. Hybrid variety ಗೆ ಹೋದರೆ ಅಂದರೆ ಏನು ಪರಿಸ್ಥಿತಿ ಎಂದರೆ, ಏಕೆಂದರೆ ಹಾವೇರಿಯೊಳಗೆ ಎರಡು ವರ್ಷಗಳ ಹಿಂದೆ ಬಿ.ಟಿ.ಹತ್ತಿ ತೆಗೆದುಕೊಂಡಿದ್ದರು.

ನಾನು ಅಲ್ಲಿಗೆ ಹೋಗಿದ್ದೆ. ಬಿ.ಟಿ.ಹತ್ತಿ ಎಲ್ಲ failure ಆಗಿತ್ತು. ಆ ರೀತಿ failure ಆದಾಗ ರೈತರೆಲ್ಲಾ ಕಣ್ಣೀರು ಹಾಕಿ ಧರಣಿ ಮಾಡುತ್ತಿದ್ದರು. ಧರಣಿ ಜಾಗಕ್ಕೆ ನಾನು ಹೋಗಿದ್ದೆನು. ಅಲ್ಲಿಗೆ ಹೋದಾಗ ಸರ್ಕಾರಕ್ಕೂ ಮನವಿ ಕೊಟ್ಟೆವು. ಸರ್ ಒಂದು ಕಂಪನಿಯವರು ಬಿ.ಟಿ.ಹತ್ತಿಯದ್ದು ಎಷ್ಟು ಹಾನಿ ಮಾಡಿದರೆಂದರೆ 36 ಕೋಟಿ ರೂಪಾಯಿಗಳನ್ನು ಇವರು Government ನಿಂದ ಪರಿಹಾರ ಕೊಟ್ಟರು. ಆದರೆ ರೈತರದ್ದು ಕನಿಷ್ಠ ಒಂದು ನೂರು ಕೋಟಿ ರೂಪಾಯಿಗಳಷ್ಟು ಹಾನಿಯಾಯಿತು. ಪಾಪ! ಅವರು ಅಷ್ಟೊಂದು ಬಿತ್ತಿ ರೈತರೆಲ್ಲಾ ಬೆಳೆ ಮಾಡಿದ್ದರು. ಯಾರಿಗೂ ಕೂಡ ಸಿಗಲಿಲ್ಲ. ಅಂಥ ಸಂದರ್ಭದಲ್ಲಿ ಎಷ್ಟೋ ಜನ ರೈತರು ಆತ್ಮಹತ್ಯೆ ಮಾಡಿಕೊಂಡರು, ಹೋರಾಟ ಮಾಡಿದರು. ಆದರೆ ಏನಾಯಿತು? ಕಂಪನಿಯವರ ಕಡೆಯಿಂದ ಕೇಸ್ ಮಾಡಿಸುತ್ತೇವೆಂದು ಹೆದರಿಸಿ, 10 ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಜಮಾ ತೆಗೆದುಕೊಂಡು, ಸರ್ಕಾರದಿಂದ 22 ಕೋಟಿ ರೂಪಾಯಿಗಳನ್ನು ಹಾಕಿ ಪರಿಹಾರ ಕೊಟ್ಟಿದ್ದೇವೆಂದು ಕೈತೊಳೆದುಕೊಂಡರು. ಇದಾಗಬಾರದು. ಏಕೆ ಸರ್, agriculture ಅಧಿಕಾರಿಗಳಿಗೆ ಏನಾಗಿದೆ? ತಾಲ್ಲೂಕು ಮಟ್ಟದಲ್ಲಿದ್ದಾರೆ, ಹೋಬಳಿ ಮಟ್ಟದಲ್ಲಿದ್ದಾರೆ, ಹಳ್ಳಿ ಮಟ್ಟದಲ್ಲಿದ್ದಾರೆ.

ಶ್ರೀ ಕೃಷ್ಣ ಬೈರೇಗೌಡ (ಮಾನ್ಯ ಕೃಷಿ ಸಚಿವರು):- ತಮಗೆ ಮಾಹಿತಿ ಇದೆಯೋ ಇಲ್ಲವೋ? ಏಕೆಂದರೆ ಇದನ್ನು ಕೇಳಿದಾಗ ಏನಾಗುತ್ತದೆ, ನಾಳೆ ದಿವಸ ನಾವೇನು ಉತ್ತರ ಕೊಡುತ್ತೇವೆ ಅದನ್ನು ಯಾರೂ ಕೇಳಿಸಿಕೊಳ್ಳುವುದಿಲ್ಲ. ಆ ಕಂಪನಿ ಮೇಲೆ ಮೊಕದ್ದಮೆ ದಾಖಲು ಮಾಡಿ, ಅ ಕಂಪನಿಯನ್ನು ಕಪ್ಪು ಪಟ್ಟಿಗೂ ಸಹ ಸೇರಿಸಿದ್ದೇವೆ. ಅದಾದ ಮೇಲೆ ಅವರು ನ್ಯಾಯಾಲಯದಲ್ಲಿ ಹೋಗಿ ಏನೋ ಒಂದು relief ತೆಗೆದುಕೊಂಡು ಬಂದಿದ್ದಾರೆ. ಆದರೆ ನಮ್ಮ ಕಡೆಯಿಂದ ಅವರ ಮೇಲೆ ಮೊಕದ್ದಮೆ ಹೂಡಿ, ಕಪ್ಪು ಪಟ್ಟಿಗೂ ಸಹ ಸೇರಿಸಿದ್ದೇವೆ. ಇದು ತಮಗೆ ಗೊತ್ತಿಲ್ಲದೇ ಇರಬಹುದು.

ಆದರೆ ದಾಖಲೆಗೆ ಹೋಗುವಾಗ ನಾವು ಸರಿಯಾದ ವಿಚಾರವನ್ನು ಹೇಳಬೇಕಾಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ:- ನೀವು ಒಳ್ಳೆಯದನ್ನು ಮಾಡಿರುವುದನ್ನು ನಾನು ಹೇಳಿದ್ದೇನೆ. ಕೇವಲ ಟೀಕೆ ಮಾಡಬೇಕೆನ್ನುವುದು ನನ್ನ ಉದ್ದೇಶವಿಲ್ಲ. ಆದರೆ ಅಧಿಕಾರಿಗಳು ಏನು ಮಾಡುತ್ತಾರೆ? ನಿದ್ದೆ ಮಾಡುತ್ತಾರೆಯೇ?

ಶ್ರೀ ಜಿ.ಟಿ. ಪಾಟೀಲ್:- ಇದರಿಂದ ರೈತರಿಗೆ ಏನು ಪರಿಹಾರ ಸಿಕ್ಕಿದೆ ಕೇಳಿ ಸರ್. ಆದರೆ ಕಂಪನಿಯವರು relief ಮಾಡಿಕೊಂಡು ಬಂದರು, ಅದಾಯಿತು. ಆದರೆ ರೈತನಿಗೆ ಆಗಿರುವ ಹಾನಿಗೆ ಯಾರು ಜವಾಬ್ದಾರಿ?

ಶ್ರೀ ಗೋವಿಂದ ಎಂ. ಕಾರಜೋಳ:- ಅದನ್ನೇ ನಾನು ಹೇಳಿದ್ದು. ನೂರಾರು ಕೋಟಿ ರೂಪಾಯಿಗಳು ಹಾನಿಯಾಯಿತು. ಕೇವಲ ಒಟ್ಟು 32 ಕೋಟಿ ರೂಪಾಯಿಗಳ ಪರಿಹಾರ ಸರ್ಕಾರ 22 ಕೋಟಿ ರೂಪಾಯಿಗಳು, ಅವರು ಹತ್ತು ಕೋಟಿ ರೂಪಾಯಿಗಳನ್ನು ಕೊಟ್ಟು ಕೈತೊಳೆದುಕೊಂಡರು ಎಂದು ಹೇಳಿದೆ, ಅದಾಗಬಾರದು. ಮಾನ್ಯ ಸಭಾಧ್ಯಕ್ಷರೆ, ಇನ್ನು implements ಬಗ್ಗೆ ಹೇಳುವುದಾದರೆ ರೈತರಿಗೆ agriculture implements ಅನ್ನು ಸಬ್ಸಿಡಿ ಮೇಲೆ ಕೊಡುತ್ತೇವೆ. ರೈತರಿಗೆ rotavator ಕೊಡುತ್ತೇವೆ. Rotavotor ಗೆ ಸರ್ಕಾರದಿಂದ ರೂ. 65,000 ಸಬ್ಸಿಡಿ ಕೊಡುತ್ತೇವೆ. ಮಾರ್ಕೆಟ್‌ನಲ್ಲಿ 95,000–00 ರೂಪಾಯಿಗಳಿವೆ. Approved rate 1,30,000-00 ರೂ. ಇದೆ. ಹೀಗಾಗಿ ರೈತನಿಗೆ ಲಾಭವಾಗುವುದಿಲ್ಲ. ಸರ್ಕಾರ ಕೊಡುವ ಸಬ್ಸಿಡಿ ಕಂಪನಿಯವರೆ ತಿಂದು ಬಿಡುತ್ತಾರೆ. ಅಧಿಕಾರಿಗಳು ಅದನ್ನು ನೋಡಿ ಜವಾಬ್ದಾರಿಯಿಂದ ಖರೀದಿ ಮಾಡುವುದು, rate fix ಮಾಡುವುದು ಮಾಡಬೇಕು. ಕಬ್ಬಿಣದ ನೇಗಿಲು ಕೊಡುತ್ತೇವೆ. 37,000–00 ರೂಪಾಯಿಗಳನ್ನು ಸಬ್ಸಿಡಿ ಕೊಡುತ್ತೇವೆ. 55,000–00 ರೂಪಾಯಿಗಳು ಮಾರ್ಕೆಟ್‌ನಲ್ಲಿದೆ. 72,000–00

ರೂಪಾಯಿಗಳಂತೆ rate fix ಮಾಡಿದ್ದಾರೆ. Approved government rate ಮಾಡುತ್ತೇವೆ. ಅದಕ್ಕೆ ಈ ರೀತಿ ಆದರೆ ರೈತರಿಗೆ ಅನುಕೂಲವಾಗುತ್ತದೆ.

ಮಾನ್ಯ ಅಧ್ಯಕ್ಷರೆ, ಆದ್ದರಿಂದ, ಅಧಿಕಾರಿಗಳು ಸ್ವಲ್ಪ ಪ್ರಾಮಾಣಿಕತೆಯಿಂದ, ಇದು ಮಂತ್ರಿಗಳು ಮಾಡುವಂಥ ಕೆಲಸ ಅಲ್ಲ. ಇದು ಅಧಿಕಾರಿಗಳು ಮಾಡುವಂಥ ಕೆಲಸ. ಇದನ್ನು ಸ್ವಲ್ಪ ಪ್ರಾಮಾಣಿಕತೆಯಿಂದ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ ಹೊರತು ಮತ್ತೇನಿಲ್ಲ.

ಶ್ರೀ ಕೃಷ್ಣ ಬೈರೇಗೌಡ (ಕೃಷಿ ರಾಜ್ಯ ಸಚಿವರು):- ನಾನು ಪದೇ ಪದೇ ಮಧ್ಯ ಪ್ರವೇಶ ಮಾಡುವುದಕ್ಕೆ ದಯವಿಟ್ಟು ಕ್ಷಮಿಸಬೇಕು. ಆದರೂ ಸಹ ತಮ್ಮ ಮಾಹಿತಿಗೆ....

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಅಧ್ಯಕ್ಷರೆ, ನೀವು ಪಾರದರ್ಶಕವಾಗಿ ಟೆಂಡರ್ ಕರೆದಿರಬೇಕು, Re-tendering ಮಾಡಿರಬೇಕು.

ಶ್ರೀ ಕೃಷ್ಣ ಬೈರೇಗೌಡ (ಕೃಷಿ ರಾಜ್ಯ ಸಚಿವರು):- ಮಾನ್ಯ ಕಾರಜೋಳರವರೆ, ನಾನು ಅದನ್ನು ಹೇಳುವುದಿಲ್ಲ. ಆ ಉತ್ತರ ಹೇಳುವುದಿಲ್ಲ. ನಾವು ಇದನ್ನು ಅರ್ಥ ಮಾಡಿಕೊಂಡು, ಇದೆಲ್ಲಾ ಯಾರ ಬಳುವಳಿ ಎಂದು ನಾನು ತಮಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದೆಲ್ಲಾ ಯಾರ ಬಳುವಳಿ ಎಂದು ನಿಮಗೂ ಗೊತ್ತಿದೆ. ಇದಕ್ಕೆ ಪರಿಹಾರ ಏನು ಎಂದರೆ, ಅಧಿಕಾರಿಗಳ ಮೇಲೆ ಬಿಟ್ಟರೆ ಇದು ಪರಿಹಾರ ಆಗುವುದಿಲ್ಲವೆಂದು, ನಾವು ಬದಲಾವಣೆಯನ್ನು ತೆಗೆದುಕೊಂಡು ಬಂದು. ಸರ್ಕಾರದ ಸಹಾಯಧನ ನೇರವಾಗಿ ರೈತರ ಅಕೌಂಟ್‌ಗೆ ಹಾಕಿ, ರೈತರೇ ಮಾರುಕಟ್ಟೆ ದರದಲ್ಲಿ ಮಾರುಕಟ್ಟೆಯಲ್ಲಿಯೇ ತೆಗೆದುಕೊಳ್ಳುವ ತರಹ ಸ್ವಾಯತ್ತತೆಯನ್ನು ಈಗ ರೈತರಿಗೆ ಕೊಟ್ಟಿದ್ದೇವೆ. ಇಲಾಖೆಯಲ್ಲಿ ಸರಬರಾಜು ಮಾಡಿದರೆ ಇದೇ ದರ. ನಾವು ಇದನ್ನು ಗಮನಿಸಿದ್ದೇವೆ. ಇದಕ್ಕೆ ಪರಿಹಾರ ಏನೆಂದರೆ, ರೈತನಿಗೆ ಸ್ವಾತಂತ್ರ್ಯ ಕೊಡೋಣ. ಮಾರುಕಟ್ಟೆಯಲ್ಲಿ ಆತ ಖರೀದಿ ಮಾಡಲಿ. ಆದರೆ, ನಮ್ಮ Approved list ಪ್ರಕಾರ, ಏಕೆಂದರೆ ಯಾವ್ಯಾವುದೋ ಖರೀದಿ ಮಾಡಿ ಅನಾಹುತ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲವೆಂದು, ನಮ್ಮ

ಮಂಜೂರಾತಿಯನ್ನು ಪಡೆದುಕೊಂಡಿರುವ ಸಂಸ್ಥೆಗಳಿಂದ ಮಾರುಕಟ್ಟೆಯಲ್ಲಿ ಖರೀದಿ ಮಾಡಿಕೊಂಡು, ನಾವು ನಮ್ಮ ಸಹಾಯಧನವನ್ನು ರೈತರ ಅಕೌಂಟ್‌ಗೆ ಹಾಕುವ ತರಹ ಬದಲಾವಣೆಯನ್ನು ತೆಗೆದುಕೊಂಡು ಬಂದಿದ್ದೇವೆ. ಅದರಿಂದ ಸಾಕಷ್ಟು ಸುಧಾರಣೆ ಆಗಿದೆ. ಆದರೆ, ನೂರಕ್ಕೆ ನೂರು ಆಗಿಲ್ಲ. ಆದರೆ, ಒಂದು ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಸಚಿವರೆ, ನಿಮ್ಮ ಸಂಸ್ಥೆಗಳೇನಿವೆ ಅವರು ಕಡಿಮೆ ರೇಟ್‌ಗೆ ಕೊಡಬೇಕಲ್ಲ. ಅವರು ಮಾರುಕಟ್ಟೆ ರೇಟ್‌ಗೆ ಕೊಡಬೇಕಲ್ಲ? ಒಬ್ಬ ಕೂಲಿಕಾರ ಒಂದು ಕಬ್ಬಿಣದ ಟ್ರ್ಯಾಕ್ಟರ್ ನೇಗಿಲನ್ನು 25,000/- ರೂ.ಗಳಿಗೆ ಮಾಡುತ್ತಾನೆ. ನಿಮ್ಮ ಕಂಪನಿಗೆ ಕಬ್ಬಿಣದ ನೇಗಿಲನ್ನು ಸರಬರಾಜು ಮಾಡುವವನು ಇವನು. ಯಾರು ನಿಜವಾದ ಈ ಕೂಲಿಕಾರ ಇರುತ್ತಾನೆ, ಆತ ತೆಗೆದುಕೊಂಡು ಹೋಗಿ ಆ ಕಂಪನಿಯವರಿಗೆ ಕೊಡುತ್ತಾನೆ. ಅವನು ನಿಮಗೆ ಸರಬರಾಜು ಮಾಡುತ್ತಾನೆ. ಇದರಿಂದ ಯಾರಿಗೆ ಲಾಭ ಆಯಿತು? ಈ ಕೂಲಿಕಾರನಿಗೂ ಆಗಲಿಲ್ಲ. ಈ ಕಡೆ ಆತನಿಗೂ ಆಗಲಿಲ್ಲ. ಈ ಕಡೆ ರೈತರಿಗೂ ಸಿಗಲಿಲ್ಲ.

ಶ್ರೀ ಕೃಷ್ಣ ಬೈರೇಗೌಡ (ಕೃಷಿ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಬಹುಶ: ಅವರು ಕೇಳಿಸಿಕೊಳ್ಳಲಿಲ್ಲ.

ಅಧ್ಯಕ್ಷರು:- ಅವರು ಏನು ಹೇಳಿದ್ದು ಅಂದರೆ, ಅವನು ಯಾವ ಅಂಗಡಿಯಲ್ಲಿ ಸಿಗುತ್ತದೆ ಅಲ್ಲಿ ತೆಗೆದುಕೊಳ್ಳಲಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಆ ಕಂಪನಿ ಅಂಥವು. Manipulate ಮಾಡಿಕೊಂಡು ರಚನೆ ಆಗಿರುವ ಕಂಪನಿಗಳು ಅವರು.

ಶ್ರೀ ಕೃಷ್ಣ ಬೈರೇಗೌಡ (ಕೃಷಿ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಅವರು ಪೂರ್ಣವಾಗಿ ಕೇಳಿಸಿಕೊಂಡಿಲ್ಲ. ಅವರು ಏನು ಹೇಳಿದರು ಎಂದರೆ, ಮಾರುಕಟ್ಟೆ ದರಕ್ಕೂ ನಮ್ಮ ಇಲಾಖೆಯ ದರಕ್ಕೂ ಬಹಳ ವ್ಯತ್ಯಾಸ ಇದೆ ನಿಜ, ಅದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಹಾಗಾಗಿ, ನಾವು ಮಾರುಕಟ್ಟೆ ದರದಲ್ಲಿ ಖರೀದಿ ಮಾಡಿ ಎಂದು ರೈತರಿಗೆ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆ.

ಅಲ್ಲಿ ಇನ್ನೂ ಸ್ವಲ್ಪ ಚೌಕಾಸಿ ಮಾಡಿ ಇನ್ನೂ ಕಡಿಮೆ ರೇಟ್‌ಗೆ ಬೇಕಾದರೂ ಖರೀದಿ ಮಾಡಿ. ನಾವು ಕೊಡುವ ಸಹಾಯಧನವನ್ನು ನಿಮಗೆ ಕೊಟ್ಟೇ ಕೊಡುತ್ತೇವೆ ಎನ್ನುವಂಥ ಭರವಸೆ ಹಿನ್ನೆಲೆಯಲ್ಲಿ ರೈತರಿಗೆ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಆ ಕಂಪನಿ ಬಿಡಿ. ಆತ ಎಲ್ಲಿಯಾದರೂ ತೆಗೆದುಕೊಳ್ಳುತ್ತಾನೆ. ಅವನ ನೇಗಿಲನ್ನು ನೋಡಿ ನೀವು ಸಬ್ಸಿಡಿ ಕೊಡಿ.

ಶ್ರೀ ಕೃಷ್ಣ ಬೈರೇಗೌಡ (ಕೃಷಿ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ದರದಲ್ಲಿ ವ್ಯತ್ಯಾಸ ಇರುವುದನ್ನು ಅವರೇ ಹೇಳಿದರಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ನೀವು ಆ ಕಂಪನಿಯವನಿಂದ ತೆಗೆದುಕೊಳ್ಳಬೇಕೆಂದರೆ ಹೇಗೆ? ಆ ಕಂಪನಿಯವನು 45,000/- ರೂ.ಗಳನ್ನು ಹೇಳುತ್ತಾನೆ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಗೌಡರೆ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಸ್ವಲ್ಪ ಕಾಲಾವಕಾಶ ಕೊಟ್ಟಿದ್ದಾರೆ.

ಅಧ್ಯಕ್ಷರು:- ಆಯಿತು. ಮಾನ್ಯ ಕಾರಜೋಳರವರೆ, ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಅಧ್ಯಕ್ಷರೆ, ನಾನು ಸ್ವಲ್ಪ ಸ್ವಲ್ಪ ಹೇಳುತ್ತೇನೆ. ಏಕೆಂದರೆ ಜಾಸ್ತಿ ಹೇಳುವುದಕ್ಕೆ ಟೈಮ್ ಇಲ್ಲ. ಕಳೆದ ವರ್ಷ 2014-15ನೇ ಸಾಲಿಗೆ ಕೆಲವುಗಳಿಗೆ ಅನುದಾನ ಕೊಟ್ಟಿರುವುದನ್ನು ನಾನು ಹೇಳುತ್ತೇನೆ. ಹತ್ತಿಗೆ ತಾಂತ್ರಿಕ ಆಯೋಗದ ಅಡಿ ಕಿರು ಆಯೋಗಕ್ಕೆ 78 ಲಕ್ಷ ರೂ.ಗಳನ್ನು ಕೊಟ್ಟಿದ್ದರು. ಕೇವಲ 7.50 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದಾರೆ. ರಾಷ್ಟ್ರೀಯ ಎಣ್ಣೆಕಾಳು ಮತ್ತು ತಾಳೆ ಬೆಳೆ ಅಭಿಯಾನದ ಬಗ್ಗೆ 5.2 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಅದರಲ್ಲಿ 2.69 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. ರಾಷ್ಟ್ರೀಯ ಕೃಷಿ ತಂತ್ರಜ್ಞಾನ ಅಭಿಯಾನದ ಬಗ್ಗೆ 22 ಕೋಟಿ ಕೊಟ್ಟಿದ್ದಾರೆ. ಅದರಲ್ಲಿ 7.50 ಕೋಟಿ ರೂ.ಗಳು ಖರ್ಚು ಆಗಿದೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯೊಳಗೆ 32 ಕೋಟಿ 78 ಲಕ್ಷ

ರೂ.ಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಕೇವಲ 20 ಕೋಟಿ ರೂ.ಗಳ ಖರ್ಚು ಆಗಿದೆ. ನಾನು ಕೃಷಿ ಇಲಾಖೆಗೆ ಏಕೆ ಇಷ್ಟೊಂದು ಹಣ ಅವಶ್ಯಕತೆ ಇಲ್ಲ ಎಂದು ಹೇಳುತ್ತಿದ್ದೇನೆಂದರೆ, ಕೊಟ್ಟಿದ್ದನ್ನು ಖರ್ಚು ಮಾಡುವುದಕ್ಕೆ ಆಗಿಲ್ಲ. ಇದು ಯಾವ ರೀತಿ? ಕರ್ನಾಟಕ ಬೀಜ ನಿಗಮ (RKVY)ಕ್ಕೆ 8 ಕೋಟಿ 50 ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಖರ್ಚು ಆಗಿಲ್ಲ. ಇನ್ನೊಂದು ಕೆಪೆಕ್, RKVY ದೊಳಗೆ 4 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ, ಖರ್ಚು ಆಗಿಲ್ಲ. ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ 15 ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. ಒಂದು ರೂಪಾಯಿಯೂ ಖರ್ಚು ಆಗಿಲ್ಲ. ಅದೇನೋ ಪುಣ್ಯಕ್ಕೆ ಮೈಸೂರು ತಂಬಾಕು ಸಂಸ್ಥೆಯವರು ಮಾತ್ರ 100% ಖರ್ಚು ಮಾಡಿದ್ದಾರೆ. 8 ಕೋಟಿ 59 ಲಕ್ಷ ರೂ.ಗಳಿಗೆ, 8 ಕೋಟಿ 59 ಲಕ್ಷ ರೂ.ಗಳನ್ನು ಸಹ ಖರ್ಚು ಮಾಡಿದ್ದಾರೆ. ಈ ರೀತಿ ಕೃಷಿ ಇಲಾಖೆ ಕೆಲಸ ಮಾಡಿದರೆ, ನಮ್ಮ ಕೃಷಿ ಯೋಜನೆಗಳು ಯಶಸ್ವಿ ಆಗುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಕೊಟ್ಟಂಥ ಹಣವನ್ನು ಸಂಪೂರ್ಣ ಖರ್ಚು ಮಾಡಿ, ಒಂದು ಆಸ್ತಿ ಆಗುವ ಹಾಗೆ ಮಾಡಬೇಕು. ಕೃಷಿ ಭಾಗ್ಯ ಯೋಜನೆ ಬಗ್ಗೆ ದಿನಾಂಕ: 22.07.2014 ರಂದು ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಮೇಲ್ವಿಚಾರಣೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದಾರೆ. ಅದರಲ್ಲಿ ಪ್ರಧಾನ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯಿತಿ CEO ಗಳಿದ್ದಾರೆ, ಕೃಷಿ ಭಾಗ್ಯ ಯೋಜನೆ ಇಲಾಖೆಗೆ ಸಂಬಂಧಪಟ್ಟಂಥ ಇನ್ನಿತರ ಅಧಿಕಾರಿಗಳಿದ್ದಾರೆ. ಇವತ್ತಿಗೂ ಸಹ ಇದರ ಅನುಷ್ಠಾನ ಸರಿಯಾಗಿ ಆಗಿಲ್ಲ. ಇದು ಕಳೆದ ವರ್ಷದ್ದು ಆಗಿದೆ. ಅದೇ ರೀತಿಯಲ್ಲಿ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಕೂಡ ಕೆಲವು ಅಧಿಕಾರಿಗಳಿಗೆ directions ಕೊಟ್ಟಿದ್ದಾರೆ. ಇನ್ನೊಂದು ಬಹಳ ಮಹತ್ವದ ವಿಚಾರವೆಂದರೆ, ನಾವು ಬೆಳೆಯತಕ್ಕಂಥ ಆಹಾರಧಾನ್ಯಗಳ ಬೆಳೆ ಕಡಿಮೆ ಆಗುತ್ತಿವೆ. ಆಹಾರ ಧಾನ್ಯಗಳನ್ನು ಬೆಳೆಯತಕ್ಕಂಥದ್ದಕ್ಕೆ ಹೆಚ್ಚಿನ ಒಂದು ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ. ಇವತ್ತಿನ ದಿವಸ 310 ಕ್ವಿಂಟಾಲ್‌ಗಳಷ್ಟು ಸಂಕರ್ಣ ಭತ್ತದ ಬೀಜಗಳನ್ನು ವಿತರಣೆ ಮಾಡಬೇಕಾಗಿತ್ತು. ಕೇವಲ 24 ಕ್ವಿಂಟಾಲ್ ಮಾಡಿದ್ದಾರೆ. ಅಧಿಕ ಇಳುವರಿ ಕೊಡತಕ್ಕಂಥ ಬಿತ್ತನೆ ಬೀಜಗಳನ್ನು 40,000

ಕ್ವಿಂಟಾಲ್ ಮಾಡಬೇಕಾಗಿತ್ತು. 4,847 ಕ್ವಿಂಟಾಲ್ ಮಾಡಿದ್ದಾರೆ, 40,000 ಕ್ವಿಂಟಾಲ್ ಆಗುವ ಜಾಗದಲ್ಲಿ ಕೇವಲ 4,847 ಆಗಿದೆ. ಇದು ನನ್ನದು ಅಲ್ಲ, ಅವರು ಕೊಟ್ಟಿರುವುದು. ಕೃಷಿ ಇಲಾಖೆಯಲ್ಲಿ ಏಕೋ ಅಧಿಕಾರಿಗಳು ಬಹಳ ಬೇಜವಾಬ್ದಾರಿತನದಿಂದ ಕೆಲಸ ಮಾಡುತ್ತಾರೆಂದು ನನಗೆ ಅನ್ನಿಸುತ್ತದೆ. ಎಲ್ಲಾವನ್ನೂ ಮಾರ್ಕ್ ಮಾಡಿ ಇಟ್ಟಿದ್ದೇನೆ. ಆದರೆ, ಕಾಲಾವಕಾಶ ಇಲ್ಲ. ಸ್ವಲ್ಪ ಸ್ವಲ್ಪ ಹೇಳುತ್ತೇನೆ. ದ್ವಿದಳ ಧಾನ್ಯಗಳನ್ನು ಬೆಳೆಯತಕ್ಕಂಥದ್ದು ಬಹಳ ಕಡಿಮೆ ಆಗಿದೆ. ಜೋಳ ಬೆಳೆಯುವುದು ಕಡಿಮೆ ಆಗಿದೆ. ಈ ವರ್ಷ 14 ಲಕ್ಷ ಟನ್ ಗುರಿ ಇತ್ತು. 12 ಲಕ್ಷ ಟನ್ ಮಾತ್ರ ಆಗಿದೆ. ಜೋಳ ಬೆಳೆಯುವವರ ಸಂಖ್ಯೆ ಕಡಿಮೆ ಆಗುತ್ತದೆ. ಏಕೆಂದರೆ, ಜೋಳಕ್ಕೆ ರೇಟ್ ಬರುವುದಿಲ್ಲ. ಹೀಗಾಗಿ, ಜೋಳ ಬೆಳೆಯುವುದೇ ಬೇಡವೆಂದು ಹೇಳುತ್ತಾರೆ. ಗೋಧಿ ಬೆಳೆಯತಕ್ಕಂಥದ್ದು 2.29 ಲಕ್ಷ ಮೆ.ಟನ್ ಗುರಿ ಇತ್ತು, ಬೆಳೆದಿರತಕ್ಕಂಥದ್ದು 1.86 ಲಕ್ಷ ಮೆಟ್ರಿಕ್ ಟನ್. ಅದೇ ರೀತಿ ದ್ವಿದಳ ಧಾನ್ಯ ಬೆಳೆಯಬೇಕಾದದ್ದು ಬಹಳಷ್ಟು ಕಡಿಮೆ ಆಗಿದೆ. ತೊಗರಿ 5.15 ಲಕ್ಷ ಗುರಿ ಇದ್ದರೆ 4.64 ಆಗಿದೆ. ನಾವು ದಿನನಿತ್ಯ ಉಪಯೋಗ ಮಾಡತಕ್ಕಂಥ ಹೆಸರು 1 ಲಕ್ಷ ಮೆಟ್ರಿಕ್ ಟನ್ ಇದ್ದರೆ ಕೇವಲ 56,000 ಆಗಿದೆ. ಅವರೆ ಬೆಳೆಯತಕ್ಕಂಥದ್ದು ಕಡಿಮೆ ಆಗಿದೆ. ಒಟ್ಟಾರೆ ವರ್ಷದಿಂದ ವರ್ಷಕ್ಕೆ ಆಹಾ ಧಾನ್ಯ ಬೆಳೆಯತಕ್ಕಂಥದ್ದು ಬಹಳಷ್ಟು ಕಡಿಮೆ ಆಗುತ್ತಿದೆ. ಅದಕ್ಕಾಗಿ, ನಾನು ಸರ್ಕಾರಕ್ಕೆ ಏನು ಸಲಹೆ ಮಾಡುತ್ತೇನೆಂದರೆ, ನಾವು ಈ ಆಹಾರ ಧಾನ್ಯಗಳನ್ನು ಬೆಳೆಯತಕ್ಕಂಥದ್ದರ ಬಗ್ಗೆ ಹೆಚ್ಚು ಗಮನ ಕೊಡಬೇಕಾಗಿದೆ. ಯಾವುದೇ ಕಾರ್ಖಾನೆಗಳಲ್ಲಿ ಆಹಾರ ಧಾನ್ಯಗಳನ್ನು ಉತ್ಪಾದನೆ ಮಾಡುವುದಕ್ಕೆ ಆಗುವುದಿಲ್ಲ. ಚೈನಾದೊಳಗೆ plastic egg ತಯಾರು ಮಾಡುತ್ತಾರೆಂದು ನಾನು ಟಿವಿಯಲ್ಲಿ ನೋಡಿದ್ದೆ. ಟಿವಿಯಲ್ಲಿ ಅದನ್ನು ಬೇಯಿಸುವುದನ್ನು ತೋರಿಸಿದರು. ಆ ತರಹ plastic ತಿನ್ನತಕ್ಕಂಥ ಪರಿಸ್ಥಿತಿ ಬರಬಾರದು. ಅದಕ್ಕಾಗಿ, ನಾನು ಸರ್ಕಾರಕ್ಕೆ ಏನು ಸಲಹೆ ಮಾಡುತ್ತೇನೆಂದರೆ, ಆಹಾರ ಧಾನ್ಯಗಳನ್ನು ಬೆಳೆಯತಕ್ಕಂಥವರನ್ನು ಹೆಚ್ಚಿಗೆ ಪ್ರೋತ್ಸಾಹ ಮಾಡಿ. ಅವರಿಗೆ ಮಾರುಕಟ್ಟೆಯಲ್ಲಿ ರೇಟ್ ಸಿಗದಿದ್ದರೂ ಸಹ, ಸರ್ಕಾರ ಅವರಿಗೆ ಹೆಚ್ಚಿನ ಸಬ್ಸಿಡಿ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಬೆಳೆಯುವುದಕ್ಕೆ ಪ್ರೋತ್ಸಾಹ ಮಾಡಬೇಕು. ದಿನನಿತ್ಯ ನಮ್ಮ

ಜನಸಂಖ್ಯೆ ಹೆಚ್ಚಾಗುತ್ತಿದೆ. ಆದರೆ, ಆಹಾರ ಧಾನ್ಯ ಬೆಳೆಯುವುದು ಕಡಿಮೆ ಆಗುತ್ತಿದೆ. ಅದೇ ಕಾರಣದಿಂದಾಗಿ ಕಬ್ಬಿನದ್ದು ಈ ಪರಿಸ್ಥಿತಿ ಬಂದಿದೆ. ನಾವು ನಮ್ಮ ದೇಶದಲ್ಲಿ ಕಬ್ಬು ಬೆಳೆಯತಕ್ಕಂಥದ್ದು 20 ವರ್ಷದಿಂದ 4 ಪಟ್ಟು ಹೆಚ್ಚಾಗಿದೆ. ಕರ್ನಾಟಕದಲ್ಲಿಯೇ 50 ಲಕ್ಷ ಟನ್ ಸಕ್ಕರೆ ಉತ್ಪಾದನೆ ಮಾಡುತ್ತೇವೆ. ನಾವು 4,56,000 ಎಕರೆಯಲ್ಲಿ ಕಬ್ಬನ್ನು ಬೆಳೆಯುತ್ತಿದ್ದೇವೆ. ನಾವು ಇದನ್ನು ಎಲ್ಲೋ ಒಂದು ಕಡೆ control ಮಾಡತಕ್ಕಂಥದ್ದು ಆಗಬೇಕು. ಆಹಾರ ಧಾನ್ಯಗಳನ್ನು ಬೆಳೆಯತಕ್ಕಂಥವರನ್ನು ಹೆಚ್ಚಿನ ಪ್ರೋತ್ಸಾಹ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಈಗ ಊಟದ ಸಮಯ ಆಗಿದೆ, ಜನನೂ ಖಾಲಿಯಾಗಿದ್ದಾರೆ, ಅದಕ್ಕೆ, ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಈ ಜಲಾನಯನ ಅಭಿವೃದ್ಧಿ ಯೋಜನೆಯು ಬಹಳ ಉತ್ತಮವಾದಂಥ ಯೋಜನೆ.

ಅಧ್ಯಕ್ಷರು:– ಈಗ ಪ್ರಶ್ನೋತ್ತರವನ್ನು ಪೂರೈಸೋಣ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಮಾಡಿ. ಜಲಾನಯನ ಅಭಿವೃದ್ಧಿ ಯೋಜನೆಯು ಸರಿಯಾಗಿ ಆಗುತ್ತಿಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಮಾನ್ಯ ಅಧ್ಯಕ್ಷರೆ, ಇಲ್ಲಿ ಕೇಳುವವರು ಇಲ್ಲ. ಹೇಳುವವರು ಇಲ್ಲ.

ಅಧ್ಯಕ್ಷರು:– ಮಾನ್ಯ ಸಿದ್ದುರವರೆ, ತಾವು ಮಾತನಾಡುತ್ತೀರಾ?

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಹೇಳುತ್ತೇನೆ. ಕೃಷಿ ಇಲಾಖೆಗೆ 3,883 ಕೋಟಿ ಕೊಡುವುದನ್ನು ನಾನು ವಿರೋಧ ಮಾಡುತ್ತೇನೆ.

ಶ್ರೀ ಸಿದ್ದು ಬಿ. ನ್ಯಾಮಗೌಡ (ಜಮಖಂಡಿ):– ಮಾನ್ಯ ಅಧ್ಯಕ್ಷರೆ, ಸರ್ ಈಗಾಗಲೇ ಬಹಳಷ್ಟು ಶಾಸಕರು ಕೃಷಿ ಬಗ್ಗೆ ಮತ್ತು ಪಂಚಾಯತ್ ರಾಜ್ ಇಲಾಖೆ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗದೇ ಒಂದೆರಡ್ಮೂರು ವಿಷಯಗಳ ಬಗ್ಗೆ ಮಾತ್ರ ಹೇಳುತ್ತೇನೆ. ಮೊದಲನೆಯದಾಗಿ, ತೋಟಗಾರಿಕೆ ಬೆಳೆ ಬಗ್ಗೆ ಹೇಳುವುದಾದರೆ, ತಮಗೆಲ್ಲಾ

ಗೊತ್ತಿರುವ ಹಾಗೆ, ನಾವು ಸಾಕಷ್ಟು ಸಲ ನೋಡಿದ್ದೇವೆ. ಈರುಳ್ಳಿ ಬೆಳೆ ಹೆಚ್ಚು ಬೆಳೆದಾಗ rate ಬರುವುದಿಲ್ಲ. ಆಗ ಎಲ್ಲೋ ಮಾರಾಟ ಮಾಡಿ ಬಿಡುತ್ತೇವೆ. ಟೊಮೆಟೊ ಬೆಳೆಯುತ್ತೇವೆ, ಅದನ್ನು ತಂದು ರಸ್ತೆಗೆ ಸುರಿಯುತ್ತೇವೆ. ಹೀಗೆ ರೈತರಿಗೆ ಬಹಳಷ್ಟು ಹಾನಿಯಾಗುತ್ತದೆ. ಆದರೆ, ಇಲ್ಲಿ ನಿಮ್ಮ ಬಜೆಟ್‌ನಲ್ಲಿ ನಾವು ನೋಡಿದ್ದೇವೆ. ಈ ಹಣ್ಣು ಸಂಸ್ಕರಣಾ ಘಟಕಗಳನ್ನು ಏಕೆ ತೆಗೆಯಬಾರದು? ಏಕೆ ಪ್ರೋತ್ಸಾಹ ಕೊಡಬಾರದು? ಏಕಂದರೆ, ನಮ್ಮ ದೇಶದಲ್ಲಿ ಹಣ್ಣು ಸಂಸ್ಕರಣೆ ಮಾಡುವ ಘಟಕಗಳು ಬಹಳ ಕಡಿಮೆಯಿವೆ. ನಾವು food processing units ಅನ್ನು ಕೇವಲ ಅಂದರೆ ಹಣ್ಣನ್ನು ಸಂಸ್ಕರಣೆ ಮಾಡುವುದು ಕೇವಲ 6 ರಿಂದ 7% ಮಾತ್ರ ಮಾಡುತ್ತೇವೆ. ಅದೇ ಹೊರದೇಶಗಳಲ್ಲಿ 75–80% ಹಣ್ಣು ಸಂಸ್ಕರಣೆ ಮಾಡಿ ಮಾರಾಟ ಮಾಡುತ್ತಾರೆ. ಅದರಿಂದ ರೈತನಿಗೆ ಯೋಗ್ಯ ಬೆಲೆ ಬರುತ್ತದೆ ಹಾಗೂ ಹೆಚ್ಚು ಬೆಲೆ ಬರುತ್ತದೆ. ಹಾಗಾಗಿ ಅಂತಹ ಘಟಕಗಳನ್ನು ಸ್ಥಾಪನೆ ಮಾಡುವುದಕ್ಕೆ ಮುಂಬರುವ ಬಜೆಟ್‌ನಲ್ಲಿ ಹೆಚ್ಚು ಆದ್ಯತೆ ಕೊಟ್ಟು, ಹೆಚ್ಚು ಸಬ್ಸಿಡಿ ಕೊಟ್ಟು, ಅಂತಹ ಘಟಕಗಳು ಬರುವುದಕ್ಕೆ ಅನುಕೂಲ ಮಾಡಿಕೊಡಬೇಕು. ಹಣ್ಣು ಸಂಸ್ಕರಣಾ ಘಟಕಗಳು ಅದು, ಅಂದರೆ processing industries ಆಗುತ್ತದೆ. ನಮ್ಮ ಮೈಸೂರಿನಲ್ಲಿ CFTRI ಇದೆ. ಬೇಕಾದಂತಹ technology ಅವರು ನಮಗೆ ಕೊಡುತ್ತಾರೆ. ನಮಗೆ ಯಾವುದು ಬೇಕೋ ಆ ಹಣ್ಣು ಸಂಸ್ಕರಣೆ ಮಾಡುವುದಕ್ಕೆ ಬೇಕಾದ ತಂತ್ರಜ್ಞಾನ easy ಯಾಗಿ ಸಿಗುತ್ತದೆ. ಆದರೆ, ಮಾಡುವವರು ಯಾರೂ ಮುಂದೆ ಬರುತ್ತಿಲ್ಲ. ಸರ್ಕಾರದ ಪೋತ್ಸಾಹ ಇಲ್ಲಿ ಏನೂ ಇಲ್ಲ. ಈಗ ಮಾನ್ಯ ಶರದ್ ಪವಾರ್‌ವರು ಮಹಾರಾಷ್ಟ್ರದಲ್ಲಿ ಇಂತಹ ಘಟಕಗಳನ್ನು ಮಾಡಿದ್ದಾರೆ. ಯಾರು ಬಾರಾಮತಿಗೆ ಬಂದು industries ಹಾಕುತ್ತಾರೋ, ಅಲ್ಲಿ 10 ವರ್ಷಗಳ ಕಾಲ ಅವರಿಗೆ tax ನಿಂದ relief ಮಾಡಿಬಿಟ್ಟಿದ್ದಾರೆ. 10 ವರ್ಷಗಳ ಕಾಲ tax ಕೊಡುವ ಅವಶ್ಯಕತೆಯೇ ಇಲ್ಲ. ಅಂತಹದ್ದು ಏನಾದರೂ concession ಅನ್ನು ನಮ್ಮ ಉತ್ತರ ಕರ್ನಾಟಕಕ್ಕೆ ಕೊಟ್ಟರೆ, ಇಲ್ಲಿಯೇ industries ಬರುವುದಕ್ಕೆ ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಎರಡನೆಯದಾಗಿ, ಇವತ್ತು ಕಬ್ಬು ಬೆಳೆಗಾಗರಿಗೆ ನೀರು ಎಷ್ಟು ಹೆಚ್ಚು ಹೋಗುತ್ತದೆ ಎಂಬುದು ತಮಗೆಲ್ಲಾ

ಗೊತ್ತಿದೆ. ಇವತ್ತು ಕಬ್ಬಿಗೆ ಸಂಬಂಧಿಸಿದಂತೆ ನಮ್ಮಲ್ಲಿ ಎಲ್ಲೆಲ್ಲಿ ನೀರಾವರಿಯಾಗಿದೆ? ಇವತ್ತು ನಮ್ಮ ರಾಜ್ಯದಲ್ಲಿ ಹೆಚ್ಚು-ಕಡಿಮೆ 6 ಲಕ್ಷ ಎಕರೆ ಜಮೀನು ಸವಳು-ಜವಳು ಆಗಿ ಹೋಗಿದೆ. ಒಂದು ಕಡೆಯಲ್ಲಿ ನಾವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ನೀರಾವರಿ ಮಾಡುತ್ತೇವೆ. ಅದರ ಹಿಂದೆಯೇ ಸವಳು-ಜವಳು ಆಗುವುದಕ್ಕೆ ಶುರುವಾಗಿದೆ. ಸವಳು-ಜವಳಿನ ಬಗ್ಗೆ ಸಾಕಷ್ಟು ಯೋಜನೆಗಳಿದ್ದರೂ ಕೂಡ ಸರಿಯಾಗಿ implement ಆಗುತ್ತಿಲ್ಲ, ತುಂಬಾ late ಆಗುತ್ತಿದೆ. ಅದಕ್ಕೆ ಅಲ್ಲಿಂದ ಇಲ್ಲಿಂದ ಮಾಡಿದರೂ ಕೂಡ ಸಮರ್ಪಕವಾಗಿ ಸರಿಯಾಗಿ ಮಾಡುವುದಿಲ್ಲ. ಮತ್ತೆ ಒಂದೆರಡು ವರ್ಷಗಳಲ್ಲಿ ಮುಚ್ಚಿಕೊಂಡು ಹೋಗಿ ಮತ್ತೆ ಅದೇ ಪರಿಸ್ಥಿತಿ ಬರುತ್ತದೆ. ಅದಕ್ಕೋಸ್ಕರ ಈ ಸವಳು-ಜವಳಿನ ಬಗ್ಗೆ ನಮ್ಮ ಕೃಷಿ ಇಲಾಖೆಯವರು ಅದು ಆಗದ ರೀತಿಯಲ್ಲಿ drip irrigation ಮಾಡಬೇಕು. Drip irrigation ಮಾಡಿದರೆ ಸವಳು-ಜವಳು ಸಮಸ್ಯೆ ತನ್ನಿಂದ ತಾನೇ ನಿವಾರಣೆಯಾಗುತ್ತದೆ. ಇವತ್ತು ನೀರಾವರಿ ಇಲಾಖೆಯಲ್ಲಿ ನಮ್ಮ ಮಾನ್ಯ ಶ್ರೀ ಎಂ.ಬಿ. ಪಾಟೀಲ್‌ರವರು ಒಂದು ಯೋಜನೆ ತಂದಿದ್ದಾರೆ. ತುಬಚಿ ಮತ್ತು ಬಬಲೇಶ್ವರ ಯೋಜನೆಗೆ ನೀರಾವರಿ ಯೋಜನೆ ತರುತ್ತೇವೆಂದು ಹೇಳಿದ್ದಾರೆ. ಅದೇ ರೀತಿಯಾಗಿ ಇವತ್ತು ಏನು 12 ಲಕ್ಷ ಎಕರೆ ಕಬ್ಬು...

ಅಧ್ಯಕ್ಷರು:- ಮಾನ್ಯ ನ್ಯಾಮಗೌಡರೇ, ನೀವೆಲ್ಲಾ ನೀರಾವರಿ ಪ್ರದೇಶದಲ್ಲಿ ಈಗ ಬರುತ್ತಿದ್ದೀರಿ ತಾನೇ?

ಶ್ರೀ ಸಿದ್ದು ಬಿ. ನ್ಯಾಮಗೌಡ:- ಹೌದು ಸಾರ್.

ಅಧ್ಯಕ್ಷರು:- ನೀರಾವರಿಯನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳದೇ ಹೋದರೆ ಸವಳು-ಜವಳು ಭೂಮಿಯೇ ಆಗುತ್ತದೆ. ಅದಕ್ಕೆ ನೀರಾವರಿ ಬಂದಾಗ ಅದರ ಬಗ್ಗೆ ಸ್ವಲ್ಪ ವಿಶೇಷವಾಗಿ ಒತ್ತು ಕೊಟ್ಟು ನೀವೆಲ್ಲಾ ಮಾತನಾಡಿ. ನಾನು ನಿಮಗೆ ಏಕೆ ಹೇಳುತ್ತೇನೆಂದು ಕೇಳಿ. ನಾನು ಇಲ್ಲಿಂದ ಹೋಗಬೇಕಾದರೆ ಚನ್ನಗಿರಿ ಮೇಲೆ ಹೋಗುತ್ತೇನೆ. ಅಲ್ಲಿ ಮತ್ತು ದಾವಣಗೆರೆ ಭಾಗದಲ್ಲೆಲ್ಲ ಅಡಿಕೆ ತೋಟ ಬಂದಿವೆ. ನೀರಾವರಿ ಪ್ರದೇಶದಲ್ಲಿ ಅಡಕೆ ತೋಟ ಬಂದುಬಿಟ್ಟಿದೆ. ಅದು ಏನೂ ಇಲ್ಲ. ಚಾನಲ್‌ನಲ್ಲಿ ನೀರು

ಬರುತ್ತಿದೆಯೆಲ್ಲಾ? ಅದನ್ನೇ ಅಡಕೆ ತೋಟಕ್ಕೆ ಬಿಟ್ಟು ಬಿಡುವುದು, ಎಷ್ಟಾದರೂ ಹೋಗುತ್ತದೆ, ಎಷ್ಟಾದರೂ ಬರುತ್ತದೆ.

ಶ್ರೀ ಸಿದ್ದು ಬಿ. ನ್ಯಾಮಗೌಡ:- ನಮ್ಮಲ್ಲಿ ಹಾಗೆಯೇ ಆಗಿದೆ ಸರ್. ಕಬ್ಬಿಗೆ ಅದೇ ರೀತಿ ಮಾಡುತ್ತಾರೆ ಸರ್. ಅದರಿಂದ ಕೃಷಿ ಭೂಮಿ ಹಾಳಾಗಿದೆ.

ಅಧ್ಯಕ್ಷರು:- ಅದಕ್ಕೆ ರೈತರಲ್ಲಿ ಜಾಗೃತಿ ಮೂಡಿಸಬೇಕು, ಆ ಬಗ್ಗೆ ಹೇಳಿ.

ಶ್ರೀ ಬಸವರಾಜ್ ರಾಯರೆಡ್ಡಿ:- Water management ಇಲ್ಲ.

ಅಧ್ಯಕ್ಷರು:- ಅದು ಹೇಳಿ. ಇದರಿಂದ ಅಪಾಯವಿದೆ. ಅದರಲ್ಲಿಯೂ black cotton soil ಇದೆಯೆಲ್ಲಾ, ಇದರಲ್ಲಿ ಸವಳು ಬಹಳ ಬೇಗ ಬರುತ್ತದೆ.

ಶ್ರೀ ಸಿದ್ದು ಬಿ. ನ್ಯಾಮಗೌಡ:- ಹೌದು, ಬಹಳ ಬೇಗ ಬರುತ್ತದೆ ಸರ್.

ಶ್ರೀ ಬಸವರಾಜ್ ರಾಯರೆಡ್ಡಿ:- ಉದಾಹರಣೆಗೆ ನಮ್ಮ ರಾಯಚೂರು ಜಿಲ್ಲೆ ಇದೆಯೆಲ್ಲಾ ಸರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆ entire black cotton soil ನಿಂದ ಕೂಡಿದೆ. ತುಂಗಭದ್ರ ಅಣೆಕಟ್ಟಿನಿಂದ ಏನು ನೀರಾವರಿಯಾಗುತ್ತದೆ, ಅದು ಪೂರ್ತಿ ಸವಳು ಬಂದುಬಿಟ್ಟಿದೆ. ಅಲ್ಲಿ ಏನನ್ನೂ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ಭತ್ತ ಬೆಳೆಯುತ್ತಿದ್ದರೆ, ಅಲ್ಲಿಗೆ ಗೊಬ್ಬರ ಹಾಕಿದರೆ ಮಾತ್ರ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಏನನ್ನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು:- ಅದಕ್ಕೆ ಸ್ವಲ್ಪ ನಿಮ್ಮಂತಹ ಬುದ್ಧಿವಂತರು ಆ ನೀರಾವರಿ ವಿಷಯ ಚರ್ಚೆ ಬಂದಂತಹ ಕಾಲದಲ್ಲಿ ಮಾತನಾಡಬೇಕು. ಸುಮ್ಮನೆ channel ಮಾಡಿ, field channel ಮಾಡಿ open ಬಿಡುವುದಲ್ಲ, ಎಲ್ಲಿಗೆ ಗೇಟ್ ಹಾಕಬೇಕು ಎಂಬುದನ್ನು ನೋಡಿಕೊಂಡು ಸರಿಯಾದ ವ್ಯವಸ್ಥೆ ಮಾಡಬೇಕು.

ಶ್ರೀ ಬಸವರಾಜ್ ರಾಯರೆಡ್ಡಿ:- ಅದಕ್ಕೆ ಮೊದಲೇ ಮಾಡಿದ್ದಾರೆ. ವಾರಬಂಧಿ ಸಿಸ್ಟಮ್ ಇದೆ. ಅದು ಯಾರೂ ನಡೆಸುವ ಹಾಗೆ ಇಲ್ಲ.

ಅಧ್ಯಕ್ಷರು:- ನಡೆಸುವ ಹಾಗೆ ಇಲ್ಲವೆಂದರೆ ರೈತರಿಗೂ ಆಸಕ್ತಿಯಿಲ್ಲ, ಇಲಾಖೆಗೂ ಆಸಕ್ತಿಯಿಲ್ಲ. ಹಾಗೆ ಆಗಿದೆ.

ಶ್ರೀ ಸಿದ್ದು ಬಿ. ನ್ಯಾಮಗೌಡ:- ನೀರಾವರಿ ಇಲಾಖೆಯವರು ಒಂದು ಯೋಜನೆ ತಂದಿದ್ದಾರೆ. ಕಬ್ಬಿನ ಬೆಳೆಗೆ ಡ್ರಿಪ್ ಇರಿಗೇಷನ್ ಮಾಡಬೇಕೆಂದು ಯೋಜನೆ ತಂದಿದ್ದಾರೆ. ಸುಮಾರು 12 ಲಕ್ಷ ಎಕರೆ ನೀರಾವರಿ ಪ್ರದೇಶದಲ್ಲಿ ಕಬ್ಬಿದೆ. ಅದಕ್ಕೆ drip irrigation ಮಾಡಿದರೆ 186 ಟಿ.ಎಂ.ಸಿ. ನೀರು ಉಳಿತಾಯವಾಗುತ್ತದೆ ಸರ್.

ಶ್ರೀ ಖಮರುಲ್ ಇಸ್ಲಾಂ:- ವಿರೋಧ ಪಕ್ಷದ ಕಡೆಯಲ್ಲಿ ಒಬ್ಬರೂ ಇಲ್ಲ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- ಇಷ್ಟು ದಿನಗಳು ಆಡಳಿತ ಪಕ್ಷದ ಮಂತ್ರಿಗಳಿಲ್ಲ, ಶಾಸಕರಿಲ್ಲ ಎಂದು ಹೇಳುತ್ತಿದ್ದರು. ಈಗ ವಿರೋಧ ಪಕ್ಷದವರಿಲ್ಲ. ಆ ಕಡೆಯಲ್ಲಿ ನಮ್ಮವರೇ ಒಬ್ಬರು ಕುಳಿತಿದ್ದಾರೆ. ವಿರೋಧ ಪಕ್ಷದವರು 5 ಜನರಿದ್ದಾರೆ, Only five are there.

(ಗೊಂದಲ)

ಶ್ರೀ ಸಿದ್ದು ಬಿ. ನ್ಯಾಮಗೌಡ:- ಅವರಿಗೆ ಆಸಕ್ತಿಯಿಲ್ಲ ಬಿಡಿ.

(ಗೊಂದಲ)

ಶ್ರೀ ಖಮರುಲ್ಲಾ ಇಸ್ಲಾಂ:- ರೈತರು ಹೋರಾಟ ಮಾಡುತ್ತಿದ್ದಾರೆ, ಅದು ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದರು. ಈಗ ಯಾರೂ ಇಲ್ಲ.

(ಗೊಂದಲ)

ಶ್ರೀ ಪಿ.ಎಂ. ಅಶೋಕ್:- ಮಾನ್ಯ ಸಿದ್ದು ನ್ಯಾಮಗೌಡ್ರೆ, ನೀವು ತಿಂಡಿ ಜಾಸ್ತಿ ತಿಂದುಕೊಂಡು ಬಂದಿರುವ ಹಾಗೆ ಕಾಣುತ್ತೀರಿ. ಅದು ಅರಗುವವರೆಗೆ ಮಾತನಾಡುವಂತೆ ಕಾಣುತ್ತಿದ್ದೀರಿ. ಬಹಳ ಜನರು Sugar patients ಇದ್ದಾರೆ. ದಯವಿಟ್ಟು ಅವರಿಗೆ time ಆಗಿ ಹೋಯಿತು.

(ಗೊಂದಲ)

ಶ್ರೀ ಸಿದ್ದು ಬಿ. ನ್ಯಾಮಗೌಡ:- ನಮಗೆ ಈಗ ಕೊನೆಗೆ ಕೊಟ್ಟಿದ್ದೀರಿ, ಎರಡೇ ನಿಮಿಷ ಮುಗಿಸುತ್ತೇನೆ. ಹೆಚ್ಚಿಗೆ ಮಾತನಾಡುವುದಿಲ್ಲ ಬಿಡಿ. ಹಾಗಾಗಿ drip irrigation ಮಾಡಬೇಕಾದರೆ ಒಂದೇ ಇಲಾಖೆಯಿಂದ ಆಗುವುದಿಲ್ಲ. ನಿಮ್ಮ ಕೃಷಿ ಇಲಾಖೆಯವರೂ ಸೇರಿಕೊಂಡು ಈ ಯೋಜನೆ ಮಾಡಿದರೆ 186 ಟಿ.ಎಂ.ಸಿ. ನೀರು ಉಳಿಯುತ್ತದೆ. ಒಂದು ಆಲಮಟ್ಟಿ ಯೋಜನೆ ಕಟ್ಟಿದರೆ ಎಷ್ಟಾಗುತ್ತದೆ? ಇದರಲ್ಲಿ ಯಾವ ಭೂಮಿ ಮುಳುಗುವುದಿಲ್ಲ, ಏನೂ ಇಲ್ಲ. ಆದರೆ, ನೀರು ಸಿಗುತ್ತದೆ. ಇದು ಯಶಸ್ವಿಯಾಗಬೇಕಾದರೆ ನೀರಾವರಿ ಇಲಾಖೆ ಮತ್ತು ಕೃಷಿ ಇಲಾಖೆ ಎರಡೂ ಸೇರಿಕೊಂಡು ಅಂದರೆ ಕೃಷಿ ಇಲಾಖೆಯಿಂದ ಸ್ವಲ್ಪ ಹಣ ಹಾಕಬೇಕು. ನೀರಾವರಿಗೂ ಹಾಕಿದರೆ ರೈತರಿಗೆ ಬಹಳ ಅನುಕೂಲವಾಗುತ್ತದೆ ಸರ್. ಸಬ್ಸಿಡಿ ಮೂಲಕ 50% ಸರ್ಕಾರ ಕೊಡಬೇಕು, 50% ರೈತರು ಕೊಡುತ್ತಾರೆ. ಅದರಿಂದ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆಮೇಲೆ ನಮ್ಮ ಗ್ರಾಮೀಣಾಭಿವೃದ್ಧಿ ಇಲಾಖೆಯ ಪಂಚಾಯತಿಯಲ್ಲಿ PDO ಗಳ ಬಗ್ಗೆ ಎಲ್ಲರೂ ಹೇಳಿದ್ದಾರೆ. ನಾನು ಆ ವಿಷಯವನ್ನು ಹೇಳುತ್ತೇನೆ. ಸರ್ ಈ PDO ಗಳ ಕಡೆಯಿಂದ ಕೆಲಸ ಮಾಡಿಸಿಕೊಳ್ಳುವುದು ಬಹಳ ಕಷ್ಟವಿದೆ ಸರ್. ಅವರು ಸಿಗುವುದೇ ಇಲ್ಲ ಸರ್. ಒಂದು ದಿವಸವೂ ಸಹಿತ ಹಳ್ಳಿಗಳಿಗೆ ಹೋಗುವುದಿಲ್ಲ. ಪಂಚಾಯತಿಗೆ ಹೋಗುವುದಿಲ್ಲ. ಹೋಗುವವರು ಬಹಳ ಕಡಿಮೆಯಿದ್ದಾರೆ. ಅಲ್ಲಿ PDO ಗಳ shortage ಬಹಳವಿದೆ. ನಮ್ಮಲ್ಲಿ ಕೂಡ ಎರಡೆರಡು ಗ್ರಾಮ ಪಂಚಾಯಿತಿಗೆ ಒಂದೊಂದು PDO ಗಳಿದ್ದಾರೆ. ಒಂದು ಸಲ ಕೇಳಿದರೆ, ಅಲ್ಲಿ ಇದ್ದೇನೆ ಎಂದು ಹೇಳುತ್ತಾರೆ, ಒಂದು ಸಲ ಕೇಳಿದರೆ ಇಲ್ಲಿದ್ದೇನೆ ಎಂದು ಹೇಳುತ್ತಾರೆ. ಹಾಗಾಗಿ PDO ಗಳ recruitment ಆಗಬೇಕು. Secretary ಗಳ recruitment ಸಹ ಆಗಬೇಕು. ಆಮೇಲೆ ಈ ರಸ್ತೆಗಳ ಬಗ್ಗೆ ಹೇಳುವುದಾದರೆ

'ನಮ್ಮ ಗ್ರಾಮ ನಮ್ಮ ರಸ್ತೆ', ನಮ್ಮ ಹೊಲ ನಮ್ಮ ರಸ್ತೆ' ಇವೆಲ್ಲಾ ಕಾರ್ಯಕ್ರಮಗಳು ಅನುಷ್ಠಾನ ಅಷ್ಟೊಂದು ಸರಿಯಾಗಿ ನಮ್ಮಲ್ಲಿ ಆಗುತ್ತಿಲ್ಲ. ನೀರಾವರಿ ಇರುವುದರಿಂದ ಜಾಗ ಯಾರು ಕೊಡುವುದಿಲ್ಲ, ಬಹಳ ತೊಂದರೆಯಾಗುತ್ತಿದೆ, ಕಷ್ಟವಿದೆ. ಜೊತೆಗೆ ಇವತ್ತು ನಿಮ್ಮಲ್ಲಿ 'ಬಹು ಹಳ್ಳಿಗಳ ಕುಡಿಯುವ ನೀರಿನ ಯೋಜನೆ'ಯಿದೆ. ಎಲ್ಲವೂ ಹೆಚ್ಚು ಕಡಿಮೆ ಬಹಳ failure ಆಗಿವೆ ಎಂದು ಹೇಳಿದರು. ಅದರಲ್ಲಿ ಸತ್ಯವಿದೆ. ನಮ್ಮ ಕ್ಷೇತ್ರದಲ್ಲಿ ನಾಲ್ಕು ಬಹು ಹಳ್ಳಿಗಳ ಕುಡಿಯುವ ನೀರಿನ ಯೋಜನೆಗೆ ಮಂಜೂರಾತಿಯಾಗಿದೆ. ಎಲ್ಲಾ ಯೋಜನೆಗಳಿಗೆ ಸೇರಿ ಸುಮಾರು ರೂ.30 ಕೋಟಿ ರೂ.ಗಳು ಖರ್ಚಾಗಿದೆ. ಆದರೆ, ಇಲ್ಲಿಯವರೆಗೂ ಒಂದು ಹನಿ ನೀರು ಕೂಡ ಯಾರಿಗೂ ಸಿಕ್ಕಿಲ್ಲ.

ಅಧ್ಯಕ್ಷರು:– ಏಕೆ? ಏತಕ್ಕಾಗಿ?

ಶ್ರೀ ಸಿದ್ದು ಬಿ. ನ್ಯಾಮಗೌಡ:– ಇಲ್ಲಿಯತನಕ ಒಂದು ಹನಿ ನೀರು ಸಹ ಯಾರಿಗೂ ಸಿಕ್ಕಿಲ್ಲ. ಒಂದೇ ಒಂದು ಉದಾಹರಣೆ ಹೇಳುತ್ತೇನೆ. ನಮ್ಮಲ್ಲಿ ತುಂಗಳ ಎಂದು ಒಂದು village ಇದೆ. ಮಾನ್ಯ ಸಚಿವರು ಇದನ್ನು ನೋಟ್ ಮಾಡಿಕೊಳ್ಳಬೇಕು. ಕೃಷ್ಣಾ ನದಿಯಿಂದ 8 ಕಿ.ಮೀ. ದೂರದಲ್ಲಿ ಆ ಹಳ್ಳಿಯಿದೆ. ಮಾನ್ಯ ಹೆಚ್.ಕೆ. ಪಾಟೀಲ್‌ರವರ ಬೀಗರ ಊರು ಅದು. ಮಾನ್ಯ ಹೆಚ್.ಕೆ. ಪಾಟೀಲ್‌ರವರ ಸಂಬಂಧಿಕರು ಅಲ್ಲಿ ಇದ್ದಾರೆ. ಅಲ್ಲಿ ಮೂರುವರೆ ಕೋಟಿ ರೂಪಾಯಿಗಳ ಒಂದು ಯೋಜನೆ ಶುರು ಮಾಡಿದ್ದಾರೆ ಸರ್. ಅದನ್ನು ಶುರು ಮಾಡಿ ಮೂರು ವರ್ಷಗಳಾಯಿತು. ಅದಕ್ಕೆ ದುಡ್ಡು ಎಲ್ಲಾ payment ಆಗಿದೆ. ಆದರೆ, ಇಲ್ಲಿಯತನಕ ನೀರು ಬರುತ್ತಿಲ್ಲ. ಮೋಟಾರ್ ಚಾಲೂ ಮಾಡಿದರೆ ಪೈಪ್ ಎಲ್ಲಾ blast ಆಗಿ ಬಿಡುತ್ತದೆ. 3–4 ತಿಂಗಳುಗಳಿಂದ guard, quality control ಇಲ್ಲ ಸರ್. ಯಾರು ಹಾಕುತ್ತಾರೋ ಏನು ಮಾಡುತ್ತಾರೋ ಗೊತ್ತಿಲ್ಲ. ಅವರ ಮೇಲೆ ಏನೂ action ತೆಗೆದುಕೊಂಡಿಲ್ಲ. ನಾನು ಎಲ್ಲರನ್ನೂ ಕರೆದು 2–3 ಸಲ ಮೀಟಿಂಗ್ ಮಾಡಿದೆ. ಇನ್ನು 15 ದಿವಸಗಳಲ್ಲಿ ಸರಿ ಮಾಡಿಕೊಡುತ್ತೇವೆ ಎಂದು ಹೇಳಿದರು. ಇಲ್ಲಿಯತನಕ ಆಗಿಲ್ಲ. ಒಂದು ಯೋಜನೆಯನ್ನು ಆರು ಹಳ್ಳಿಗಳಿಗೆ ಮಾಡಿದ್ದಾರೆ. ಕೃಷ್ಣಾ

ನದಿ ವ್ಯಾಪ್ತಿಯಲ್ಲಿ ಚಿನಗುಂಡಿ ಎಂದು ಒಂದು village ಇದೆ. ಅದು down stream ನಲ್ಲಿದೆ. ಆ stream ನಲ್ಲಿ ಹಿಪ್ಪರಗಿಯಿದೆ ಸರ್. ಚಿನಗುಂಡಿಯಲ್ಲಿ ಮೋಟಾರ್ ಅಳವಡಿಸಿದ್ದಾರೆ. ಚಿನಗುಂಡಿಯಲ್ಲಿ ಕೆಳಗಿಳಿದಂತಹ down stream ನಲ್ಲಿರುವಂತಹ ನೀರು ಅದು upstream ಗೆ ಹೋಗಬೇಕು. ಅದು ಕೂಡ ಮೂರು ಹಳ್ಳಿಗಳಿಗೆ ನೀರು ಸಿಗುತ್ತದೆ, ನಾಲ್ಕು ಹಳ್ಳಿಗಳಿಗೆ ನೀರು ಸಿಗುವುದಿಲ್ಲ, ಅದು fail ಆಗಿದೆ. ಅದು ಆರು ವರ್ಷಗಳ ಹಿಂದೆ ಮಾಡಿದ್ದಾರೆ. ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆಮೇಲೆ ಇನ್ನೂ ಎರಡು schemes ಇದೆ. ಒಂದು ಎಂಟು ಹಳ್ಳಿಗಳದ್ದು ಇನ್ನೊಂದು ಆರು ಹಳ್ಳಿಗಳದ್ದು ಇದೆ. ಅವೆಲ್ಲಕ್ಕೂ ದುಡ್ಡು payment ಆಗಿದೆ. ಒಂದಕ್ಕೆ ರೂ. 5 ಕೋಟಿ ರೂ.ಗಳಾಗಿದೆ. ಒಂದಕ್ಕೆ ರೂ. 18 ಕೋಟಿ ರೂ.ಗಳಾಗಿದೆ. ರೂ. 18 ಕೋಟಿ ರೂ.ಗಳಲ್ಲಿ ಸುಮಾರು ರೂ. 11 ಕೋಟಿ ರೂ.ಗಳಿಗೆ payment ಆಗಿದೆ. ಇನ್ನೂ ಒಂದು ಹನಿ ನೀರು ಸಿಕ್ಕಿಲ್ಲ. ಮೂರು ವರ್ಷಗಳಾಯಿತು. ಕೇವಲ time extension ಕೊಡುತ್ತಾರೆ. ಇದರ ಮೇಲೆ ಯಾರದೇ control ಇಲ್ಲ. ಇಡೀ ಸದನದಲ್ಲಿ ಮಾತನಾಡುವಾಗ ಹೆಚ್ಚು ಕಡಿಮೆ ನಾವು ನೋಡಿದ್ದೇವೆ. ಬಹುಹಳ್ಳಿಗಳ ಕುಡಿಯುವ ನೀರಿನ ಯೋಜನೆ ಬಗ್ಗೆ ಬಹಳಷ್ಟು ಶಾಸಕರು ಮಾತನಾಡಿದರು ಈ ಯೋಜನೆ ಬಹಳ ಚೆನ್ನಾಗಿದೆ, ಉತ್ತಮ ಯೋಜನೆಯಾಗಿದೆ. ಆದರೆ implementation ಆಗುತ್ತಿಲ್ಲ. ಯಾವುದೇ ಇಂಜಿನಿಯರ್‌ಗಳ ಮೇಲೆ ಕಂಟ್ರೋಲ್ ಇಲ್ಲ. ತುಂಗಳವೊಂದೇ ಮೂರುವರೆ ಕೋಟಿ ರೂ.ಗಳ ಯೋಜನೆಯಾಗಿದೆ. ಏನೂ ಪ್ರಯೋಜನವಿಲ್ಲ. ನಮ್ಮಲ್ಲಿ ವಿದ್ಯಾಭ್ಯಾಸ ಕಲಿಯದ ರೈತರು 8–12 ಕಿ.ಮೀ.ವರೆಗೆ ಪೈಪ್‌ಲೈನ್ ಹಾಕುತ್ತಾರೆ. ಮೋಟಾರ್ ಚಾಲೋ ಮಾಡಿದ ತಕ್ಷಣ ನೀರು ಬರುತ್ತದೆ. ಯಾರೊಬ್ಬರ ಪೈಪ್ ಒಡೆಯುವುದಿಲ್ಲ. ನಮ್ಮ ಊರಿನಲ್ಲಿ ಬ್ಯಾಂಕ್ ಸಾಲಕ್ಕೆ ಸಾದಾ ಒಬ್ಬ Diploma Engineer ಡಿಸೈನ್ ಮಾಡಿಕೊಡುತ್ತಾನೆ. ಅದಕ್ಕೆ ಬೆಳೆ ಸಾಲ, ಪೈಪ್‌ಲೈನ್ ಮಂಜೂರಾಗುತ್ತದೆ. ಅವರೆಲ್ಲಾ ಆರಾಮವಾಗಿ ಪೈಪ್‌ಲೈನ್ ಮಾಡಿದ್ದಾರೆ. ತುಂಗಳ ಊರಿನಲ್ಲಿ 10 ವರ್ಷಗಳಿಂದ 2,000 ಟನ್ ಕಬ್ಬು ಬರುತ್ತಿರಲಿಲ್ಲ. ಇವತ್ತು 30,000 ರಷ್ಟು ಕಬ್ಬು ಬರುತ್ತದೆ. ಕಾರಣವೇನೆಂದರೆ ಅವರೆಲ್ಲಾ ಚೆನ್ನಾಗಿ ಪೈಪ್‌ಲೈನ್ ಮಾಡಿದ್ದು, ನೀರು

ಹೋಗುತ್ತದೆ. ಕುಡಿಯುವ ನೀರಿನ ಯೋಜನೆ ಮಾತ್ರ ಇಲ್ಲಿಯವರೆಗೆ ಫೇಲ್ ಆಗಿದೆ.

ಅಧ್ಯಕ್ಷರು:- ಅಲ್ಲಿ ಯಾರು ಮಾಡಿದರು?

ಶ್ರೀ ಸಿದ್ದು ಬಿ. ನ್ಯಾಮಗೌಡ:- ಅಲ್ಲೆಲ್ಲಾ ಖಾಸಗಿಯಾಗಿ ರೈತರು ಪೈಪ್‌ಲೈನ್ ಮಾಡಿದ್ದಾರೆ. ಇಲ್ಲಿ ಪಂಚಾಯತ್ ರಾಜ್ ಇಲಾಖೆಯ ಜಿಲ್ಲಾ ಪಂಚಾಯತ್ ರವರು ಮಾಡಿದ್ದಾರೆ.

ಶ್ರೀ ಹೆಚ್.ಕೆ. ಪಾಟೀಲ್:- ಇಲ್ಲಿ ಮಾಡಿರುವುದು ಗುತ್ತಿಗೆದಾರರು, ಅಲ್ಲಿ ಮಾಡಿರುವುದು ರೈತರು. ನಿಮ್ಮ ಮಾಹಿತಿಯನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಏಕೆಂದರೆ ನೀವು ಸ್ಥಳೀಯವಾಗಿ ಸಮಸ್ಯೆಗಳನ್ನು ಗಮನಿಸಿದ್ದೀರಿ, ಅದರ ಬಗ್ಗೆ ಸಾಕಷ್ಟು ಚರ್ಚೆಯನ್ನು ತಾವು ಮಾಡಿದ್ದೀರಿ. ಅಲ್ಲಿ ಏನು ಮಾಡಬೇಕೆಂದು ಹೇಳಿದರೆ, ಅದರ ಮುಖಾಂತರ ಮುಂದಿನ ಹೆಜ್ಜೆ ಇಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಸಿದ್ದು ಬಿ. ನ್ಯಾಮಗೌಡ:- ನೀವು ಮೊದಲು ಮಾಡಬೇಕಾದ ಕೆಲಸವೇನೆಂದರೆ, ಡಿಸೈನ್ ಮಾಡಿರುವ ಇಂಜಿನಿಯರ್‌ರವರನ್ನು ಹಿಡಿಯಿರಿ, ಅದನ್ನು ಯಾರು ಸೂಪರ್‌ವೈಸ್ ಮಾಡಿದ್ದಾರೆ, ಅವರ ಮೇಲೆ ಕ್ರಮ ಕೈಗೊಳ್ಳಿ, ಎಲ್ಲಾ ಸರಿಯಾಗುತ್ತದೆ.

ಅಧ್ಯಕ್ಷರು:- ನ್ಯಾಮಗೌಡರೆ defective implementation ಆಗುವುದಕ್ಕೆ ಕಾರಣರಾದವರ ಮೇಲೆ ಕ್ರಮ ಕೈಗೊಳ್ಳುವುದು ಒಂದು ಭಾಗ. ಸಮರ್ಪಕವಾಗಿ ನೀರು ಕೊಡುವುದಕ್ಕೆ ಏನು ಮಾಡಬೇಕೆಂದು ಹೇಳಿ.

ಶ್ರೀ ಸಿದ್ದು ಬಿ. ನ್ಯಾಮಗೌಡ:- ಒಡೆದಿರುವುದಕ್ಕೆ ಮತ್ತೊಮ್ಮೆ estimate ಮಾಡಿ, ಮತ್ತೊಂದು ಪೈಪ್‌ಲೈನ್ ಹಾಕುತ್ತಾರೆ. ಮತ್ತೆ ಮೂರು ಕೋಟಿ ರೂ.ಗಳನ್ನು ಕೊಡುತ್ತಾರೆ.

ಅಧ್ಯಕ್ಷರು:- ಅದಕ್ಕೆ ಪೈಪ್ ಬೇಕಾ ಅಥವಾ ಏನು ಮಾಡಬೇಕು?

ಶ್ರೀ ಸಿದ್ದು ಬಿ. ನ್ಯಾಮಗೌಡ:- ಕಳಪೆ ಪೈಪ್‌ಲೈನ್ ಹಾಕುತ್ತಾರೆ, ಕ್ವಾಲಿಟಿ ಪೈಪ್‌ಲೈನ್ ಹಾಕುವುದಿಲ್ಲ. 10 ಕೆ.ಜಿ. ತೂಕದ ಪೈಪ್ ಹಾಕಬೇಕೆಂದಿದೆ. ಆದರೆ ನಾಲ್ಕು ಅಥವಾ ಆರು ಕೆ.ಜಿ. ಇರುವ ಪೈಪ್ ಮೇಲೆ 10 ಕೆ.ಜಿ ಎಂದು ಠಸ್ಸೆ ಹೊಡೆದಿರುತ್ತಾರೆ, ಅದು ಪಾಸ್ ಆಗುತ್ತದೆ. ಅಲ್ಲಿ Quality Controller ಏನು ಮಾಡುತ್ತಾರೆ? Quality Control Agency ಮತ್ತು Contractor ಎಲ್ಲಾ ಸೇರಿಕೊಂಡು ಇಂತಹ ಕೆಲಸ ಮಾಡುವ ಕಾರಣ ಈ ರೀತಿಯ ರಾದ್ಧಾಂತವಾಗುತ್ತದೆ. Quality Controller ಏನನ್ನೂ ಪರಿಶೀಲಿಸುವುದಿಲ್ಲ. ಅವರಿಗೆ 1% ರಿಂದ 2% ಸರ್ಕಾರ free ಕೊಡುತ್ತದೆ. ಕೊಟ್ಟರೂ ಕೂಡ ನಿಯಂತ್ರಣವಾಗುವುದಿಲ್ಲ. ಇವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳಬೇಕಲ್ಲವೇ? Project fail ಆದರೆ ಯಾರ ಮೇಲೆ ಕ್ರಮ ಕೈಗೊಳ್ಳಬೇಕು? ಇಲಾಖೆ ಕ್ರಮ ಕೈಗೊಳ್ಳಬೇಕಲ್ಲವೇ? ಇಲ್ಲಿಯವರೆಗೆ ಯಾರ ಮೇಲೆ ಕ್ರಮ ಕೈಗೊಂಡಿದ್ದಾರೆಂದು ಕೇಳಿ. ನೀರು ಏಕೆ ಹೋಗಿಲ್ಲವೆಂದು ಅವರನ್ನು ಕೇಳಬೇಕಲ್ಲವೇ? ಏನು ಮಾಡಿದ್ದಾರೆಂದು ಕೇಳಿ. ದಯಮಾಡಿ ಈ ವಿಷಯದ ಮೇಲೆ ಬೆಳಕು ಚೆಲ್ಲಿ, ಯಾರ‍್ಯಾರು ತಪ್ಪು ಮಾಡಿದ್ದಾರೆ? ಎಲ್ಲೆಲ್ಲಿ ಇಂತಹ ಬಹು ಹಳ್ಳಿಗಳ ಯೋಜನೆಗಳು ಬಂದ್ ಆಗಿವೆ? ಅದರ ಪುನರುಜ್ಜೀವ ಮಾಡಿ. ಅವು ಬಂದಾಗಲು ಯಾರು ಕಾರಣ ಎಂಬ ಬಗ್ಗೆ ಸಂಶೋಧನೆ ಮಾಡಿ. ವಿಚಾರಣೆ ಮಾಡಿ ಅವರ ಮೇಲೆ ನೇರವಾಗಿ ದಿಟ್ಟ ಕ್ರಮ ಕೈಗೊಂಡರೆ ಮಾತ್ರ ವ್ಯವಸ್ಥೆ ಸರಿಯಾಗುತ್ತದೆ. ಅವರಿಗೆ ಎಲ್ಲಾ knowledge ಇದೆ ಎಲ್ಲಾ ಗೊತ್ತಿದೆ ಅದರೆ ಮಾಡುವುದಿಲ್ಲ. ನಮ್ಮ ಕ್ಷೇತ್ರದಲ್ಲಿ ನಾಲ್ಕು ಯೋಜನೆಗಳಿಗೆ ಒಂದು ಹನಿ ನೀರು ಕೊಟ್ಟಿಲ್ಲ, ಎಲ್ಲಾ ಬಂದ ಆಗಿವೆ. ಇದಕ್ಕೆ ನಮ್ಮ ಸರ್ಕಾರ 30 ಕೋಟಿ ರೂ.ಗಳನ್ನು ಖರ್ಚು ಮಾಡಿದೆ. ದಯಮಾಡಿ ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು.

ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ):- ಮಾನ್ಯ ಅಧ್ಯಕ್ಷರೆ, ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು

ಅರ್ಪಿಸುತ್ತೇನೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಕೃಷಿ ಮತ್ತು ತೋಟಗಾರಿಕೆ ಇಲಾಖೆ ಬಗ್ಗೆ ಎರಡು ನಿಮಿಷಗಳ ಕಾಲ ಮಾತನಾಡುತ್ತೇನೆ. ಸಾಕಷ್ಟು ವಿಷಯಗಳನ್ನು ಈಗಾಗಲೇ ಶಾಸಕರುಗಳು ಹೇಳಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಂಕಿ ಅಂಶಗಳ ಪ್ರಕಾರ ಈ ರಾಜ್ಯದಲ್ಲಿ ಸುಮಾರು 59,753 ಹಳ್ಳಿಗಳಿವೆ. ನಮ್ಮ ಹಳ್ಳಿಗಳ ಅಭಿವೃದ್ಧಿಗಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸಂವಿಧಾನದ ಕಾಯಿದೆಯ 73ಕ್ಕೆ 1993 ರಲ್ಲಿ ತಿದ್ದುಪಡಿ ತಂದು, ಇವೆಲ್ಲಾ ಅಸ್ತಿತ್ವಕ್ಕೆ ಬಂದಿವೆ. ಹಳ್ಳಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮೂಲಕ ಹಳ್ಳಿಗರ ಜೀವನ ಸುಧಾರಣೆಯಾಗಬೇಕು ಮತ್ತು ಅವರು ನೆಮ್ಮದಿಯ ಬದುಕನ್ನು ನಡೆಸುವುದ್ಕಕೆ ಅವಕಾಶ ಮಾಡಿಕೊಡಬೇಕೆಂಬ ಸದುದ್ದೇಶದಿಂದ ಈ ಇಲಾಖೆ ಸೃಷ್ಟಿಯಾಗಿದೆ. ಮಾನ್ಯ ಹೆಚ್.ಕೆ. ಪಾಟೀಲ್ ರವರು ಈ ಇಲಾಖೆಯ ಮಂತ್ರಿಯಾದ ನಂತರ ಬಹಳ ದಕ್ಷತೆಯಿಂದ ಈ ಇಲಾಖೆಯನ್ನು ನಡೆಸುತ್ತಿರುವ ಕಾರಣ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಾವು ಇಷ್ಟು ವರ್ಷ ರಾಜಕಾರಣ ಮಾಡಿದ ನಂತರ, ಅಂದರೆ ಕಳೆದ ಎರಡು ವರ್ಷಗಳಿಂದ ಮಂತ್ರಿಯಾಗಿದ್ದ ಇವರು, ಇಲಾಖೆಯಲ್ಲಿ ಆಗಿರುವಂಥಹ ಅಭಿವೃದ್ಧಿ ಬಗ್ಗೆ ಸವಿವರವಾದ ಮಾಹಿತಿಯನ್ನೊಳಗೊಂಡ ಪುಸ್ತಕವನ್ನು ಇಡೀ ರಾಜ್ಯದ 189 ಶಾಸಕರಿಗೆ ಕೊಟ್ಟಿದ್ದಾರೆ. ಈ ಇಲಾಖೆಯಲ್ಲಿ ಏನೇನು ಕೆಲಸವಾಗಿದೆಯೆಂಬುದು ಸಂಪೂರ್ಣವಾಗಿ ನಮಗೆ ಮನದಟ್ಟಾಗುತ್ತದೆ. ಇದು ವಿಶೇಷ, ಏಕೆಂದರೆ ನಮ್ಮಲ್ಲಿ ಸುಮಾರು 32–33 ಇಲಾಖೆಗಳಿದ್ದು, ಬೇರೆ ಯಾವ ಇಲಾಖೆಯಿಂದ ಕೂಡ ಇಂತಹ ಮಾಹಿತಿಯನ್ನು ಒದಗಿಸುವ ಕೆಲಸವಾಗಿಲ್ಲ. ಅದಕ್ಕಾಗಿ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇವತ್ತು 6,000 ಕ್ಕೂ ಹೆಚ್ಚು ಪಂಚಾಯಿತಿಗಳಿವೆ. ಈಗಷ್ಟೇ ಪಂಚಾಯಿತಿಗಳ ಚುನಾವಣೆ ಮುಗಿದಿದೆ. ಆ ಚುನಾವಣೆ ವ್ಯವಸ್ಥೆ ಬಗ್ಗೆ ಮಾತನಾಡುವುದಕ್ಕೆ ನನಗೆ ಸಮಯವಿಲ್ಲ. ಆದರೆ ರಮೇಶ್ ಕುಮಾರ್‌ರವರ ನೇತೃತ್ವದ ಕೆಲವೊಂದು ಉತ್ಕೃಷ್ಟ ಸಲಹೆಗಳನ್ನು ಕೊಟ್ಟಿದೆ. ನಿನ್ನೆ ಅವರು ತಮ್ಮ ಅಸಂತೋಷವನ್ನು, ದುಗುಡವನ್ನು, ಅಸಾಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಮುಂದಾದರೂ ಕೂಡ ಆ ಸಮಿತಿ ಶಿಫಾರಸ್ಸುಗಳನ್ನು

ಅದನ್ನು ಜಾರಿಗೆ ತರುವ ಮೂಲಕ ಈ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ತಾವು ಮುಂದಾಗಬೇಕು. That will be a feather on your cap. ಅದನ್ನು ಮಾಡುವ ಪ್ರಯತ್ನ ಮಾಡುವ ಮೂಲಕ, ವ್ಯವಸ್ಥೆಯನ್ನು ಸರಿ ದಾರಿಗೆ ತರುವಂತಹ ಪ್ರಯತ್ನವನ್ನು ತಾವು ಮಾಡಬೇಕೆಂದು ವಿನಂತಿ ಮಾಡುತ್ತಾ, ಎರಡು ಮೂರು ಸಲಹೆಗಳನ್ನು ಕೊಡುತ್ತೇನೆ. ಇದು ನಿನ್ನೆ ಮಾನ್ಯ ರಮೇಶ್ ಕುಮಾರ್‌ರವರೇ ಮಾತನಾಡಿದ ವಿಷಯ. ಸಾಮಾನ್ಯ ವರ್ಗದಲ್ಲಿ ಗೆದ್ದಿದ್ದವರಿಗಿಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ಗೆದ್ದಂತವರ ಮತ ಜಾಸ್ತಿಯಾಗಿದ್ದರೆ, ಸಾಮಾನ್ಯ ವರ್ಗದಲ್ಲಿ ಗೆದ್ದಿರುವವರು ಹೋಗಿ ಇವನು ಮೇಲೆ ಬರುತ್ತಾನೆ ಎನ್ನುವಂತಹ ವಿಷಯ ಎಲ್ಲೋ ಒಂದು ಕಡೆ ಆ ವರ್ಗಕ್ಕೆ ಆಗುವಂತಹ ಅನ್ಯಾಯ ಮತ್ತು ಅಸಮಾಧಾನವಾಗಿದೆ. ಅದನ್ನು ಸರಿಪಡಿಸುವ ಕೆಲಸವಾಗಬೇಕು. ಎರಡನೆಯದಾಗಿ, ನೇರವಾಗಿ ಅಧ್ಯಕ್ಷರ ಚುನಾವಣೆ ಮಾಡಬೇಕೆಂಬ ಸಲಹೆ ಬಂದಿದ್ದು, ಬಹುಶಃ ಅದು ಆಗಿದ್ದರೆ, ಈಗ ಯಾವ ಪಕ್ಷದ ಚಿಹ್ನೆಯಿಂದ ಗೆಲ್ಲುವುದಿಲ್ಲ. ಆದರೆ ಗೆದ್ದ ನಂತರ ಆ ಪಕ್ಷದ ಹೆಸರಿನಿಂದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ನಾವು ಗುರುತ್ತಿಸುತ್ತೇವೆ. ಈಗ ಅವರನ್ನು ಹೊರುವಂತಹ ಕೆಲಸ ಪ್ರಾರಂಭವಾಗಿದೆ. ನೇರವಾಗಿ ಪಂಚಾಯಿತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆ ಆಗಿದ್ದರೆ ಹೊರುವಂತಹ ವ್ಯವಸ್ಥೆ ಬರುತ್ತಿರಲಿಲ್ಲ ಮತ್ತು ಭ್ರಷ್ಟಾಚಾರ ಮಿತಿಮೀರಿ ನಡೆಯುತ್ತಿರಲಿಲ್ಲ. ನನ್ನ ಕ್ಷೇತ್ರದ ಚುನಾವಣೆಯಲ್ಲಿ ಇಬ್ಬರು ಘಟಾನುಘಟಿಗಳು ನಿಂತು ಒಬ್ಬ 12 ಲಕ್ಷ, ಮತ್ತೊಬ್ಬ 13 ಲಕ್ಷ ರೂ.ಗಳು ಒಟ್ಟು 25 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದಾರೆ, ಇದನ್ನು ತಾವು ನಂಬುವುದಿಲ್ಲ. ಈ ಮಟ್ಟಕ್ಕೆ ಹೋಗುತ್ತದೆ. ನೇರವಾಗಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ತಂದರೆ ಇಂತಹವರು ಅಧ್ಯಕ್ಷರಾಗುವುದರಿಂದ ಭ್ರಷ್ಟಾಚಾರಕ್ಕೆ ತಡೆ ಹಾಕಬಹುದೆಂಬುದು ನನ್ನ ಭಾವನೆಯಾಗಿದೆ. ಮೂಲಭೂತ ಸೌಕರ್ಯಗಳಲ್ಲಿ ಒಂದಾದ ಕುಡಿಯುವ ನೀರನ್ನು ಕೊಳವೆ ಬಾವಿಗಳ ಮತ್ತು ಪೈಪ್‌ಲೈನ್ ಮೂಲಕ ಕೊಡುವಂತಹ ವ್ಯವಸ್ಥೆಯಿದೆ. ಆದರೆ Multi Village Drinking Water Scheme ಬಗ್ಗೆ ನಿನ್ನೆ ಪ್ರಸ್ತಾಪ ಮಾಡುವಾಗ ಈ ಯೋಜನೆ ಬಹಳ ನಿಧಾನಗತಿಯಲ್ಲಿ

ಸಾಗುತ್ತಿದೆಯೆಂದು ಎಲ್ಲಾ ಸದಸ್ಯರು ಹೇಳಿದ್ದಾರೆ. ಬಹುತೇಕ ನಮ್ಮ ಮತ್ತು ನಿಮ್ಮ ಕ್ಷೇತ್ರ ಮಲೆನಾಡು ಆಗಿದ್ದು, ಅಲ್ಲಿ ನೀರಿನ ಸಮಸ್ಯೆಯಿಲ್ಲ. ಪೈಪ್‌ಲೈನ್ ಮೂಲಕ ನೀರು ಕೊಡುವುದು ಇನ್ನೂ ಬಹಳಷ್ಟು ಬಾಕಿಯಿದೆ. ಅದಕ್ಕೆ ಹೆಚ್ಚು ಒತ್ತು ಕೊಡಬೇಕು. ಶುದ್ಧ ಕುಡಿಯುವ ನೀರನ್ನು ಮಲೆನಾಡು ಭಾಗಕ್ಕೆ ಹೆಚ್ಚು ಕೊಡಬೇಕು. ಮುಂದುವರೆದು ನನ್ನ ಕ್ಷೇತ್ರದ ಒಂದು ಹೋಬಳಿ ಸಂಪೂರ್ಣವಾಗಿ ಬಯಲು ಸೀಮೆಯಾಗಿದೆ. ಇದು ಯಗಚಿ ಪ್ರಾಜೆಕ್ಟ್ ಭಾಗದಲ್ಲಿ ಬರುತ್ತದೆ. ಅಲ್ಲಿ ಹಳ್ಳಿಗಳು ಸಂಪೂರ್ಣವಾಗಿ ಕುಡಿಯುವ ನೀರಿಗಾಗಿ ಪರದಾಟಪಡುವ ಪರಿಸ್ಥಿತಿ ಇದೆ. ಯಗಚಿ ಆಣೆಕಟ್ಟಿನಿಂದ ನೀರನ್ನು ಕೊಡುವ ವ್ಯವಸ್ಥೆ ಆಗಬೇಕು. ಅದಕ್ಕೆ ಪ್ರಾಜೆಕ್ಟ್-1 ಮತ್ತು ಪ್ರಾಜೆಕ್ಟ್-2 ಎಂದು ಪ್ರಸ್ತಾವನೆ ಕಳುಹಿಸಿಕೊಟ್ಟಿದ್ದೇವೆ. ಇಲ್ಲಿ ಬೃಹತ್ ನೀರಾವರಿ ಸಚಿವರಿದ್ದಾರೆ. ಅವರ ಇಲಾಖೆಯಿಂದ ಇದಕ್ಕೆ ಒಪ್ಪಿಗೆ ಬೇಕು. ಸುಮಾರು 46 ಹಳ್ಳಿಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ತುಂಬಾ ಹದಗೆಟ್ಟಿದೆ. ಅಲ್ಲಿ ಫ್ಲೋರೈಡ್ ಇದೆ, ಬಹುಶಃ arsenic ಇರಬಹುದು, ಆ ದೃಷ್ಟಿಯಿಂದ ಆ ಹಳ್ಳಿಗಳಿಗೆ ಯಗಚಿ ಪ್ರಾಜೆಕ್ಟ್‌ನಿಂದ ನೀರನ್ನು ಕೊಡುವಂತಹ ಪ್ರಾಜೆಕ್ಟ್ ತಯಾರಾಗಿ ತಮ್ಮ ಮುಂದಿದ್ದು, ತಾವಿಬ್ಬರು ಕುಳಿತು ಚರ್ಚೆ ಮಾಡಿ, ಇದಕ್ಕೆ ಅವಕಾಶ ಮಾಡಿಕೊಡಬೇಕು. ಈ ಸಂದರ್ಭದಲ್ಲಿ ದಿವಂಗತ ನಜೀರ್ ಸಾಹೇಬರನ್ನು ನೆನಪಿಸಿಕೊಳ್ಳಬೇಕು. ನಾನು, ಮಹದೇವಪ್ಪನವರು, ಯಾವಗಲ್ ರವರು ಅವತ್ತಿನ ಸಂದರ್ಭದಲ್ಲಿ ಬಿಲ್ ಬರುವುದಕ್ಕೆ ಸಾಕ್ಷಿಯಾಗಿದ್ದೇವೆ. S.K.Dey ಎಂಬ ವ್ಯಕ್ತಿಯನ್ನು ಪಶ್ಚಿಮ ಬಂಗಾಳದಿಂದ ಕರೆಸಿ, ಅದರ ಬಗ್ಗೆ ವಿಸ್ತೃತವಾದ ವಿವರಣೆಯನ್ನು ಕೊಟ್ಟು, ಮಂಡಲ ಮತ್ತು ಗ್ರಾಮ ಪಂಚಾಯತಿ ಎನ್ನುವ ವ್ಯವಸ್ಥೆಯನ್ನು ಮಾನ್ಯ ರಾಮಕೃಷ್ಣ ಹೆಗಡೆಯವರು ಜಾರಿಗೆ ತಂದರು. ಇವತ್ತು ಅಷ್ಟೇ ಉತ್ಕೃಷ್ಟವಾದ ಆಲೋಚನೆ ನಿಮಗಿದೆ. ಸಣ್ಣ ಸಣ್ಣ ಗ್ರಾಮ ಪಂಚಾಯಿತಿಗಳನ್ನು ಮಾಡಿದ್ದೀರಿ. ಮಂಡಲ ಪಂಚಾಯಿತಿ ಹೋದ ಮೇಲೆ ಮಲೆನಾಡಿನಲ್ಲಿ ಮೂರು ಗ್ರಾಮ ಪಂಚಾಯಿತಿಗಳು ಆಗಿವೆ. overhead charges ಜಾಸ್ತಿಯಾಯಿತು. ಮೂಗಿಗಿಂತ ಮೂಗುತಿ ಭಾರವೆನ್ನುವ ರೀತಿಯಲ್ಲಿ Overhead charges ಜಾಸ್ತಿ ಹೋಗುತ್ತಿದೆ. ಆದ್ದರಿಂದ ಆ ದಿಸೆಯಲ್ಲಿ ಮಾಡಿರುವಂತಹ ಸಣ್ಣ ಸಣ್ಣ

ಪಂಚಾಯಿತಿಗಳನ್ನು ಪುನರ್ ಪರಿಶೀಲನೆ ಮಾಡುವುದು ಒಳ್ಳೆಯದೆಂದು ನನ್ನ ಸಲಹೆ. ಮಾನ್ಯ ನಜೀರ್ ಸಾಬ್‌ರನ್ನು ನೀರ್ ಸಾಹೇಬರು ಎಂದು ಇಡೀ ರಾಜ್ಯ ಕರೆಯಿತು. ಮಾನ್ಯ ಅಧ್ಯಕ್ಷರೇ, ತಾವು ಹಿರಿಯರು. ಇಂದು ತಾಲ್ಲೂಕು ಪಂಚಾಯಿತಿಗಳಿಗೆ ಅನುದಾನವನ್ನು ಎಷ್ಟು ಕೊಡುತ್ತಿದ್ದೀರಿ? 176 ತಾಲ್ಲೂಕುಗಳಲ್ಲಿ, ಒಂದೊಂದು ತಾಲ್ಲೂಕಿಗೆ ಒಂದು ಕೋಟಿ ರೂ.ಗಳ ಅನುದಾನವನ್ನು ಕೊಡುತ್ತೀರಿ. ಚಿಕ್ಕಮಗಳೂರು ಜಿಲ್ಲೆ ಒಂದರಲ್ಲೇ 24 ಸದಸ್ಯರು ಹಾಗೂ ಮೂಡಿಗೆರೆಯಲ್ಲಿ 13 ಜನ ಸದಸ್ಯರಿದ್ದಾರೆ. ಈ ರೀತಿಯಿದ್ದಾಗ ಅವರಿಗೆ ಯಾವ ರೀತಿ ಕೆಲಸ ಮಾಡುವುದಕ್ಕಾಗುತ್ತದೆ? ಆ ದೃಷ್ಟಿಯಿಂದ ತಾಲ್ಲೂಕು ಪಂಚಾಯಿತಿ ಬೇಕೋ ಬೇಡವೋ ಎನ್ನುವ ಚರ್ಚೆ ಜಿಜ್ಞಾಸೆ ಒಳಗೂ ಮತ್ತು ಹೊರಗೂ ಇದೆ. ಹಾಗಾಗಿ ಇದರ ಬಗ್ಗೆಯೂ ಚಿಂತನೆ ಮಾಡಬೇಕೆಂದು ಸಲಹೆಯನ್ನು ಕೊಟ್ಟು, ರಸ್ತೆಗಳ ಬಗ್ಗೆ ಹೇಳುವುದಾದರೆ......

ಶ್ರೀ ಬಿ. ರಮಾನಾಥ್ ರೈ (ಮಾನ್ಯ ಅರಣ್ಯ ಸಚಿವರು):- ಸಣ್ಣ ಪಂಚಾಯಿತಿಗಳು ಬೇಡವೆಂದು ಹೇಳುತ್ತಿದ್ದೀರಿ. ಏಕೆ ಈ ರೀತಿ ಹೇಳುತ್ತಿದ್ದೀರಿ? ಎನ್ನುವುದು ತಿಳಿಯುತ್ತಿಲ್ಲ.

ಶ್ರೀ ಬಿ.ಬಿ. ನಿಂಗಯ್ಯ:- ಸಣ್ಣ ಪಂಚಾಯಿತಿ ಎಂದು ಹೇಳಿದೆ, ಹಾಗೆಯೇ ಮೂಗಿಗಿಂತ ಮೂಗುತಿ ಭಾರವೆಂದು ಹೇಳಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಸಣ್ಣ ಪಂಚಾಯಿತಿ ಅಲ್ಲ. ಮಹಾತ್ಮಾ ಗಾಂಧೀಜಿಯವರು ಹೇಳಿರುವುದೇನೆಂದರೆ, ಒಂದೊಂದು ಹಳ್ಳಿ ಒಂದೊಂದು ಸರ್ಕಾರ ಆಗಬೇಕು. ಬೇಡವೆಂದು ಹೇಳುತ್ತಿಲ್ಲ. ಸಂಪನ್ಮೂಲವನ್ನು ಕೊಡದೇ ಎಷ್ಟು ಪಂಚಾಯಿತಿ ಮಾಡಿದರೂ ಏನು ಮಾಡುವುದಕ್ಕೆ ಸಾಧ್ಯ?

ಶ್ರೀ ಬಿ.ಬಿ. ನಿಂಗಯ್ಯ:- ಹಾಗಾಗಿ ತಾವು ಆ ದಿಸೆಯಲ್ಲಿ ಆಲೋಚನೆ ಮಾಡಬೇಕು. ರಸ್ತೆಗಳ ಬಗ್ಗೆ ಹೇಳುವುದಾದರೆ, CMGSY ಯೋಜನೆಯಡಿಯಲ್ಲಿ ಡಾಂಬರೀಕರಣ ಮಾಡುವ ಸಂದರ್ಭದಲ್ಲಿ 20mm ಜೆಲ್ಲಿ ಹಾಕಿ, ಕಾಲು ಭಾಗದಷ್ಟು ಇಂಚು ಮಾತ್ರ ದಪ್ಪ ಕೊಡುತ್ತಾರೆ. ನಮ್ಮ

ನಿಮ್ಮ ಭಾಗದಲ್ಲಿ 150–300 ಇಂಚುಗಳಷ್ಟು ಮಳೆ ಬೀಳುತ್ತದೆ. ಮುಂದಿನ ವರ್ಷಕ್ಕೆ ಆ ರಸ್ತೆ ಕೊಚ್ಚಿಕೊಂಡು ಹೋಗುತ್ತದೆ. ಮಾನ್ಯ PWD ಮಂತ್ರಿಗಳೂ ಸಹ ಸದನದಲ್ಲೇ ಇದ್ದಾರೆ. ಆದ್ದರಿಂದ ಮಲೆನಾಡು ಮತ್ತು ಬಯಲು ಪ್ರದೇಶ ಎರಡೂ ಬೇರೆ ಬೇರೆ. ಮಳೆ ಬೀಳತಕ್ಕಂತಹ ಪ್ರಮಾಣವನ್ನು ವೈಜ್ಞಾನಿಕವಾದ ರೀತಿಯಲ್ಲಿ ವಿಶ್ಲೇಷಣೆ ಮಾಡಿ. ಎಷ್ಟು ಗಾತ್ರದಲ್ಲಿ ಜೆಲ್ಲಿ ಹಾಕಿ, ಡಾಂಬರೀಕರಣ ಮಾಡಿದರೆ, ಗಟ್ಟಿಯಾಗಿ motorable road ಆಗಿ, ಸರ್ವಋತು ರಸ್ತೆಯಾಗಿ ಉಳಿಯುತ್ತದೆನ್ನುವ ಬಗ್ಗೆಯೂ ಒಂದು ಚರ್ಚೆಯಾಗಬೇಕು. ಕೋಲಾರದಲ್ಲಿ 10 ಇಂಚು ಸಹ ಮಳೆ ಬೀಳುವುದಿಲ್ಲ ಮತ್ತು ನನ್ನ ಕ್ಷೇತ್ರದ ಬೈರಾಪುರ ಎಂಬ ಗ್ರಾಮದಲ್ಲಿ 300 ಇಂಚು ಮಳೆ ಬೀಳುತ್ತದೆ. ಆದರೆ ಎರಡೂ ಕಡೆಯಲ್ಲಿಯೂ ಒಂದೇ ರೇಟ್ ಹಾಕುತ್ತಾರೆ. ಈ ರೀತಿಯಾದರೆ ರಸ್ತೆಗಳು ಹೇಗೆ ಉಳಿಯುತ್ತವೆ? ಆದ್ದರಿಂದ ಇಂಜಿನಿಯರಿಂಗ್ ಡಿವಿಷನ್‌ನಲ್ಲಿ ಇದರ ಬಗ್ಗೆ ವಿಸ್ತೃತವಾಗಿ ಚರ್ಚೆಯಾಗಬೇಕು ಮತ್ತು ಮಲೆನಾಡಿಗೆ ಹಾಗೂ ಬಯಲುಸೀಮೆಗೆ ರಸ್ತೆಯನ್ನು ಮಾಡುವಾಗ ಹೊಸ ರೀತಿಯ ಆಲೋಚನೆಯಾಗಬೇಕು. ಎರಡೂ ಕಡೆಗಳಲ್ಲಿ number of vehicles movement ಎಷ್ಟಿದೆ? ಮತ್ತು ಮಳೆ ಎಷ್ಟು ಪ್ರಮಾಣದಲ್ಲಿ ಬೀಳುತ್ತದೆ? ಎಂಬುದನ್ನು ಆಲೋಚನೆ ಮಾಡಿ, ಮಲೆನಾಡಿನಲ್ಲಿ ಹಣ ಕೊಡುವಂತದ್ದು ಆಗಬೇಕೆಂದು ಸಲಹೆ ಮಾಡುತ್ತೇನೆ. ಗ್ರಾಮ ವಿಕಾಸ ಯೋಜನೆ ಬಗ್ಗೆ ಹೇಳುವುದೇನೆಂದರೆ, ಇದರಲ್ಲಿ ಜನಸಂಖ್ಯೆಯನ್ನು ಆಧಾರವಾಗಿ ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ. ತಮ್ಮ ಜಿಲ್ಲೆ, ನಮ್ಮ ಜಿಲ್ಲೆ ಮತ್ತು ಮಾನ್ಯ ಸಚಿವರಾದ ರಮಾನಾಥ್ ರೈ ಅವರ ಜಿಲ್ಲೆಗಳಲ್ಲಿ density of population ಇಲ್ಲ. ಮಲೆನಾಡಿನಲ್ಲಿ ಸಣ್ಣ ಸಣ್ಣ ಹಳ್ಳಿಗಳು ಇವೆ. ಆದರೆ ಜನಸಂಖ್ಯೆ ಕಡಿಮೆ ಇದೆ. ಬಯಲುಸೀಮೆಯಲ್ಲಿ ಒಂದೇ ಹಳ್ಳಿಯಲ್ಲಿ 2,000 ದಿಂದ 3,000 ಮತದಾರರಿರುತ್ತಾರೆ. ನಮ್ಮಲ್ಲಿ ನಾಲ್ಕೈದು ಹಳ್ಳಿಗಳನ್ನು ಸೇರಿಸಿದರೆ 800 ಜನ ಮತದಾರರಾಗುತ್ತಾರೆ. ಆ ದೃಷ್ಟಿಯಿಂದ ತಾವು ಅಲ್ಲಿರುವ ನಿಬಂಧನೆ ಮತ್ತು ಷರತ್ತುಗಳನ್ನು ಸಡಿಲಿಸಬೇಕು. ಮಲೆನಾಡು ಪ್ರದೇಶಕ್ಕೆ, ಹಳ್ಳಿ ಪ್ರದೇಶಕ್ಕೆ ಬೇರೆ ಬೇರೆ ಮಾರ್ಗಸೂಚಿ ಇರಬೇಕೆಂಬ ಸಲಹೆಯನ್ನು ಮಾಡಬೇಕು. ತಮಗೆ ಹೆಚ್ಚು

ಸಮಯವಿಲ್ಲ. ತಾವು ಒಳ್ಳೆಯ ಕೆಲಸವನ್ನು ಮಾಡುತ್ತಿರುವುದರಿಂದ ನಮಗೆ ಸಂತೋಷವಿದೆ. ಹೆಚ್ಚು ಕೆಲಸವನ್ನು ನಮ್ಮ ಹಳ್ಳಿಗಳಿಗೆ ಕೊಡಿ. ಪ್ರಾದೇಶಿಕವಾಗಿ ನಮ್ಮ ಜಿಲ್ಲೆ ಬಹಳ ದೊಡ್ಡದು. ಸಿಟಿಯೊಳಗೆ ಕೇವಲ 10 ಕಿ.ಮೀ. ರೇಡಿಯಸ್ ಒಳಗೆ ಒಂದು ಮತಕ್ಷೇತ್ರಕ್ಕೆ 3-4 ಲಕ್ಷ ಜನಸಂಖ್ಯೆ ಇರುತ್ತಾರೆ. ನನ್ನ ಮತಕ್ಷೇತ್ರ 156 ಕಿ.ಮೀ.ನಷ್ಟಿದೆ, ಕುದುರೆಮುಖ ಬಾರ್ಡರ್‌ನಿಂದ ಬೇಲೂರು ಬಾರ್ಡರ್‌ವರೆಗೆ ಇದೆ. ಮಾನ್ಯ ಅಧ್ಯಕ್ಷರಿಗೆ, ತಮಗೆ ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾದ ಮಹದೇವಪ್ಪನವರಿಗೂ ಮತ್ತು ಅರಣ್ಯ ಸಚಿವರಾದ ರಮಾನಾಥ ರೈ ಅವರಿಗೂ ಇದು ಗೊತ್ತಿದೆ. ದೊಡ್ಡ ಪ್ರಮಾಣದ ಮತ ಕ್ಷೇತ್ರವಾಗಿದ್ದು, ನಮ್ಮಲ್ಲಿ 1073 ಹಳ್ಳಿಗಳು ಬರುತ್ತವೆ. ಆದರೆ ನೀವು 20 ಕಿ.ಮೀ.ಗಳಿಗೆ ಮಾತ್ರ ಕೊಡುತ್ತೀರಿ. ಈ ರೀತಿ ಕೊಟ್ಟರೆ ನಾವು ಎಷ್ಟು ವರ್ಷಗಳ ಕಾಲ ಮಾಡಬೇಕಾಗುತ್ತದೆ. ಹಾಗಾಗಿ ತಾವು ಇದರ ಬಗ್ಗೆ ವಿಶೇಷವಾಗಿ ಗಮನ ನೀಡಬೇಕು. ಐದು ಹಳ್ಳಿಗಳು ಮೂರು ವರ್ಷಕ್ಕೆಂದು ಕೊಟ್ಟಿದ್ದೀರಿ. ಒಟ್ಟಾರೆ ಹಳ್ಳಿಗಳನ್ನು ತಲುಪುವುದಕ್ಕೆ ಎಷ್ಟು ವರ್ಷ ಬೇಕಾಗುತ್ತದೆಂಬುದನ್ನು ಯೋಚಿಸಬೇಕಾಗುತ್ತದೆ. 1,58,000 ಕಿ.ಮೀ. ರಸ್ತೆಯಿದ್ದು, 58,000 ಕಿ.ಮೀ. ರಸ್ತೆ ಮಾತ್ರ ಡಾಂಬರೀಕರಣವಾಗಿದೆ. ಇನ್ನೂ ಸುಮಾರು 1,00,000 ಕಿ.ಮೀ. ರಸ್ತೆಗೆ ಡಾಂಬರೀಕರಣವಾಗುವುದು ಯಾವಾಗ? ಇದಕ್ಕೆ ತಾವು ವಿಶೇಷವಾಗಿ ನಬಾರ್ಡ್‌ನಿಂದ ಸಾಲ ತೆಗೆದುಕೊಳ್ಳುತ್ತೀರೋ ಅಥವಾ ಯಾವುದರಲ್ಲಿ ತೆಗೆದುಕೊಳ್ಳುತ್ತೀರೋ ಗೊತ್ತಿಲ್ಲ. ಒಟ್ಟಾರೆ ಹೆಚ್ಚಿನ ಹಣವನ್ನು ಹಾಕಿ ಈ ರಸ್ತೆಗಳನ್ನು ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಕೃಷಿ ಇಲಾಖೆ ಬಗ್ಗೆ ಹೇಳುವುದಾದರೆ, ಮಾನ್ಯ ಕೃಷ್ಣ ಬೈರೇಗೌಡರು ಮತ್ತು ನಾವೆಲ್ಲರೂ ಹಳ್ಳಿಗರು. ಕೃಷಿಯೇ ನಮ್ಮ ಜೀವನಕ್ಕೆ ಆಧಾರ. ಅವರು ಸಚಿವರಾಗಿ ಚುರುಕಾಗಿ ಕೆಲಸ ಮಾಡುತ್ತಿರುವುದು ಪತ್ರಿಕೆಯಲ್ಲಿ ನೋಡಿದ್ದೀರಿ. ಬೈರೇಗೌಡರ ಜೊತೆ ನನಗೂ ಮಂತ್ರಿಯಾಗುವುದಕ್ಕೆ ಅವಕಾಶವಿತ್ತು. ಅವರೊಬ್ಬ ದಕ್ಷ, ಪ್ರಾಮಾಣಿಕ ಮಂತ್ರಿಯಾಗಿ ರಾಜ್ಯ ಮರೆಯುವುದಕ್ಕೆ ಸಾಧ್ಯವಾಗದ ಹೆಸರನ್ನು ಮಾಡಿದ್ದಾರೆ. ಅಂದಿನ ಕಾಲಕ್ಕೆ ಅವರು ಕೃಷಿ ನೀತಿಯೊಂದನ್ನು ಜಾರಿಗೆ ತಂದರು. ಆದರೆ ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಹೇಳಿದ ಹಾಗೆ ಸಮಗ್ರ ಕೃಷಿ

ನೀತಿಯೊಂದು ಬೇಕಾಗಿದೆ. ನಿಮ್ಮಲ್ಲಿ ಉತ್ಸಾಹ ಹಾಗೂ ಅನುಭವವಿದೆ ಮತ್ತು ನಿಮ್ಮ ತಂದೆಯವರು ಮಾಡಿದ ಕೆಲಸದ ಅನುಭವದ ಹಿನ್ನೆಲೆ ಸಹ ನಿಮಗಿದೆ. ಇದನ್ನು ನೀವು ಗಮನದಲ್ಲಿಟ್ಟುಕೊಳ್ಳಬೇಕು. ಮಾನ್ಯ ಅಧ್ಯಕ್ಷರೆ, ಆರು ತಿಂಗಳಲ್ಲಿ 15 ಜಿಲ್ಲೆಗಳಿಗೆ ಸೇರಿದಂತೆ, 40 ಜನ ರೈತರ ಸರಣಿ ಆತ್ಮಹತ್ಯೆ ಆಗಿದೆ. ಮೈಸೂರು, ಮಂಡ್ಯ, ಉತ್ತರ ಕನ್ನಡ, ಬೆಳಗಾವಿ, ಕಲಬುರಗಿ, ಚಿಕ್ಕಮಗಳೂರು, ಕೊಪ್ಪಳ, ಹಾಸನ, ಗದಗ, ರಾಯಚೂರು, ಚಾಮರಾಜನಗರ, ಹಾವೇರಿ, ಯಾದಗಿರಿ ಮತ್ತು ರಾಮನಗರ ಜಿಲ್ಲೆಗಳಲ್ಲಿ 40 ಸಾವುಗಳು ಆಗಿರುವ ಬಗ್ಗೆ ಆರ್ಟಿಕಲ್ ಮಾಡಿ ಬರೆದಿದ್ದಾರೆ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು 70 ಕಿ.ಮೀ. ಗಳ ಪಾದಯಾತ್ರೆಯನ್ನು ಈ ಭಾಗದಲ್ಲಿ ಮಾಡಿದೆವು. ರೈತರು ಸಾಯುತ್ತಿದ್ದಾರೆ, ಅವರಿಗೆ ಆತ್ಮವಿಶ್ವಾಸ ಮತ್ತು ಭರವಸೆಯನ್ನು ಕೊಡಬೇಕು. ವಿಧಾನಸಭೆ ನಡೆಯುತ್ತಿದ್ದು ಅಲ್ಲಿ ಅವರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ, ಶಾಶ್ವತವಾದ ಪರಿಹಾರವನ್ನು ಹುಡುಕಬೇಕು. ಈ ಬಗ್ಗೆ ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಬಹಳ ನೋವಿನಿಂದ ಮಾತನಾಡಿದರು. ಇಡೀ ವಿಧಾನಸಭೆ resolution ಮಾಡಿ, ದೇಶಕ್ಕೆ ಅನ್ನ ಕೊಡತಕ್ಕಂತಹ ರೈತರಿಗೆ, ನಿಮ್ಮ ಕೈ ಮುಗಿಯುತ್ತೇವೆ, ಯಾವುದೇ ಕಾರಣಕ್ಕೂ ಆತ್ಮಹತ್ಯೆ ಮಾಡಿಕೊಳ್ಳಬಾರದೆನ್ನುವ ಸಂದೇಶವನ್ನು ತಲುಪಿಸಬೇಕು.

ಅಧ್ಯಕ್ಷರು:- ಅಂದು ಚರ್ಚೆ ಮಾಡುವುದಕ್ಕೆ ನಾನು ಸಹ ಮಾಹಿತಿ ತರಿಸಿದ್ದೆ. ವಿಷಯ ಪ್ರಸ್ತಾಪವಾಗಲಿಲ್ಲವೆಂದು ನಾನು ಕಾಯುತ್ತಿದ್ದೇನೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಆವತ್ತಿನ ದಿವಸ ಇದೇ ಸದನದಲ್ಲಿ ಕೈಮುಗಿದು ಆತ್ಮಹತ್ಯೆಯಂತಹ ಕೆಲಸಕ್ಕೆ ಕೈ ಹಾಕಬೇಡಿ ಎನ್ನುವ ನಿವೇದನೆ ಮಾಡಿ, ವಿನಂತಿ ಮಾಡಿಕೊಂಡಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ಸಮಗ್ರ ರೈತರ ಆತ್ಮಹತ್ಯೆ ಬಗ್ಗೆ ಒಂದು ದಿವಸ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:- OK, ಮಾಡೋಣ.

ಶ್ರೀ ಬಿ.ಬಿ. ನಿಂಗಯ್ಯ:- ಮಾನ್ಯ ಅಧ್ಯಕ್ಷರೆ, ಕೈ ಮುಗಿದ ತಕ್ಷಣ ಅವರ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ನಿನ್ನೆ ಮಾನ್ಯ ಸದಸ್ಯರಾದ ಎ.ಎಸ್. ಪಾಟೀಲ್ (ನಡಹಳ್ಳಿ) ಅವರು ಮಾತನಾಡುವ ಸಂದರ್ಭದಲ್ಲಿ ಕೃಷಿಗೆ ಸಹಕಾರಿ ಬ್ಯಾಂಕುಗಳು, ಸಂಘಗಳು ಸಾಲವನ್ನು ಕೊಡುತ್ತಿದ್ದು, ಅದರಲ್ಲಿ ಶೇ.50 ರಷ್ಟು ಸರಿಯಾಗಿ ತಲುಪುತ್ತಿಲ್ಲ. ಇದ್ದವರಿಗೆ renewal ಮಾಡುವಂತಹದ್ದಾಗಿದೆ. Book adjustment........

ಅಧ್ಯಕ್ಷರು:- Demand ಇರುವುದರಿಂದ, ಆ ವಿಷಯ ಬಂದಾಗ ಹೇಳಿ.

ಶ್ರೀ ಬಿ.ಬಿ. ನಿಂಗಯ್ಯ:- ಆದ್ದರಿಂದ ಮಾನ್ಯ ಸಹಕಾರ ಸಚಿವರು ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಬಾರಿ ಕೃಷಿ ಮಾಡುವಂತಹ ಸಂದರ್ಭದಲ್ಲಿ ಯಾವ ರೈತ ಸಾಲವನ್ನು ಬಯಸುತ್ತಾನೋ, ಅವರಿಗೆ ಹೊಸದಾಗಿ ಸಾಲವನ್ನು ಕೊಡುವಂತಹ ಪ್ರಯತ್ನ ಮಾಡಬೇಕು. ವಿಶೇಷವಾಗಿ money lenderes ಏನಿರುತ್ತಾರೆ, ಅವರು ಮೀಟರ್ ಬಡ್ಡಿ ಹಾಕುವುದರಿಂದ ರೈತ ಸಾಯುವುದಕ್ಕೆ ಅದೂ ಒಂದು ಕಾರಣವಾಗಿದೆ. ಆದ್ದರಿಂದ ತುರ್ತಾಗಿ ಡಿ.ಸಿ.ಗೆ ಅಧಿಕಾರವನ್ನು ಕೊಟ್ಟು, ರಾಜ್ಯದಲ್ಲಿರುವ ಎಲ್ಲಾ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ರೈತರಿಗೆ ಆಗುತ್ತಿರುವ ತೊಂದರೆಯನ್ನು ಆದಷ್ಟು ಬೇಗ ನಿಗ್ರಹಿಸಬೇಕು ಮತ್ತು ಇದರಿಂದ ರೈತರು ಸಾಯುವುದನ್ನು ತಡೆಯಬೇಕು. ಆತ್ಮಹತ್ಯೆ ಆಗುವುದನ್ನು ನಿಲ್ಲಿಸಬೇಕೆನ್ನುವ ಮಾತನ್ನು ಹೇಳುತ್ತಿದ್ದೇನೆ.

ಕೃಷಿ ಹೊಂಡಗಳನ್ನು ಮಾಡಿದ್ದೀರಿ. ಬಹಳ ಕಡೆಗಳಲ್ಲಿ ಕೃಷಿ ಹೊಂಡಗಳಿಗೆ ಬೇಲಿ ಇಲ್ಲದೇ, ಅದರಲ್ಲಿ ಮಕ್ಕಳು, ಹೆಂಗಸರು, ಬಹಳಷ್ಟು ಪ್ರಾಣಿಗಳು ಬಿದ್ದು ಸತ್ತು ಹೋಗುತ್ತಿದ್ದಾರೆ. ಆ ಹೊಂಡಗಳಿಗೆ ಬೇಲಿ ಹಾಕುವ ನಿರ್ದೇಶನವನ್ನು ಕೊಡಬೇಕು, ಇಲ್ಲದಿದ್ದರೆ ತೊಂದರೆಯಾಗುತ್ತದೆ. ಇಷ್ಟು ಮಾತುಗಳನ್ನು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಯಾವಗಲ್ ಅವರೆ ಮಾತನಾಡುತ್ತೀರಾ? ತಾವು ಮಾತನಾಡುವುದಾದರೆ, ಬೇಗ ಬೇಗ ಮಾತನಾಡಿ.

ಶ್ರೀ ಬಿ.ಆರ್. ಯಾವಗಲ್ (ನರಗುಂದ):– ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ, ಕೃಷಿ ಇಲಾಖೆ ಬೇಡಿಕೆಯನ್ನು ಬೆಂಬಲಿಸುತ್ತನೆ. ಇದರ ಬಗ್ಗೆ ಹಿಂದೆಯೂ ಪ್ರಸ್ತಾಪ ಮಾಡಿದ್ದೇನೆ. ಈ ಪಂಚಾಯಿತಿ ಘಟಕವೆನ್ನುವದು ಕೇವಲ ಆರ್ಥಿಕತ್ವ, ಅದೊಂದು implementation agency ರೀತಿಯಲ್ಲಿ ಪರಿವರ್ತನೆಯಾಗಿರುವುದು ಸ್ವಲ್ಪ ಅನುಕೂಲವಾಗಿದೆ. ಯಾವ ಉದ್ದೇಶಕ್ಕೆ ರಚನೆಯಾಗಿತ್ತೋ, ಆ ಉದ್ದೇಶದ ದಾರಿಯಲ್ಲಿ ಹೋಗುತ್ತಿಲ್ಲ ಎನ್ನುವ ಭಾವನೆ ಬರುತ್ತಿದೆ. ಈ ಹಿಂದೆಯೂ ಮಂಡಲ ಪಂಚಾಯಿತಿಯ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅವು ಒಂದು ದೊಡ್ಡ viable ಘಟಕಗಳಾಗಿ ಯೂನಿಟ್‌ಗಳಾಗಿ ಕೆಲಸ ಮಾಡುವಂತಹ ಸೈದ್ಧಾಂತಿಕ ಹಿನ್ನೆಲೆ ಮತ್ತು ತಳಹದಿಯನ್ನು ಅದಕ್ಕೆ ನೀಡಲಾಗಿತ್ತು. ಜೊತೆಗೆ ಅವುಗಳನ್ನು ಚಿಕ್ಕದಾಗಿ ಮಾಡುವುದರಲ್ಲಿ ಅದರ ಹಿನ್ನೆಲೆ ಏನಿತ್ತೋ, ತತ್ವಕ್ಕೆ ಮತ್ತು ಸಿದ್ಧಾಂತಕ್ಕೆ ಅಂಟಿಕೊಂಡು ಏನಿತ್ತೋ, ಅದು ಆಗಲಿಲ್ಲ. ಆಗ ಅದನ್ನು ಬದುಕಿಸುವ ಭಾವನೆ ಆಯಿತು. ಹಾಗಾಗಿ ಈ ಒಂದು ಘಟಕವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡುವುದಕ್ಕೆ ಬೆಳೆಸಿ ಅದಕ್ಕೊಂದು ರೂಪವನ್ನು ಕೊಡಲಿ. ಅದೊಂದು ಅಭಿವೃದ್ಧಿಯ vibrant ಘಟಕವಾಗಲಿ. ಅಲ್ಲಿ ಕೆಲಸ ಕಾರ್ಯಗಳು ಏನೇನು ಆಗಬೇಕೋ ಅದನ್ನು ಮಾಡುವ ಪದ್ಧತಿ ಮತ್ತು ಅದು ಅಗತ್ಯವಿದೆಯೆಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ಪಂಚಾಯಿತಿಗಳನ್ನು ನೋಡಿದರೆ ನಿರಾಸೆಯಾಗುತ್ತದೆ. ಅಲ್ಲಿ ಅಧಿಕಾರ ಹಿಡಿದುಕೊಳ್ಳುವುದು, ಒಂದು ರೀತಿಯಲ್ಲಿ ಉಳ್ಳವರು ಮತ್ತು ಇಲ್ಲದೇ ಇದ್ದವರ ಮಧ್ಯೆ ಒಂದು ರೀತಿಯ ಸಂಘರ್ಷಗಳಾಗುವುದು. ಆಳುವವರ ಗುಂಪೇ ಬೇರೆ ಇರುತ್ತದೆ. ಅಲ್ಲಿರುವ ಜನರ ಅಗತ್ಯಗಳು, ಸಮಸ್ಯೆಗಳೇ ಬೇರೆ ಎನ್ನುವ ಭಾವನೆ ಬರುತ್ತಿದೆ. ಪಂಚಾಯಿತಿ ಮಾತ್ರವೇ ಅಲ್ಲದೇ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ತಮ್ಮ ಮೂಲ ಗುರಿಯನ್ನು ಬಿಟ್ಟು

ವಿಚಲಿತವಾಗುತ್ತಿದೆ. ಅದಕ್ಕೆ ಕಾಯಕಲ್ಪ ಮಾಡುವ ಅಗತ್ಯವಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾವು ಅನೇಕ ಇಲಾಖೆಗಳ ಮೂಲಕ ಆ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ. ಹಿಂದೆ ತಮಗೆ ನೆನಪಿರಬೇಕು. ಜಿಲ್ಲಾ ಡೆವಲಪ್‌ಮೆಂಟ್ ಸಮಿತಿಗಳಿತ್ತು, ಇವತ್ತು ಅದು ಜಿಲ್ಲಾ ಪಂಚಾಯತಿಯಾಗಿ replace ಆಗಿದೆ. ಆದರೆ, ಜಿಲ್ಲಾ ಪಂಚಾಯತಿಯ ಉದ್ದೇಶವೇನಿದೆ, ಅದರ object, ಗುರಿಯೇನಿದೆ ಅದು ಈಡೇರದೇ ಇದ್ದಾಗ ಎಲ್ಲಾ ಇಲಾಖೆಗಳು ಸೇರಿಕೊಂಡು ಅಭಿವೃದ್ಧಿ ಮಾಡುವಂಥ ಮೂಲ ಪಂಚಾಯಿತಿ ಘಟಕ ಇರಬಹುದು, ಜಿಲ್ಲಾ ಪಂಚಾಯತಿ ಮೂಲಕ ಮಾಡುವುದಾಗಿರಬಹುದು, ಅದು ಸ್ವಲ್ಪ ಕುಂಠಿತವಾಗಿದೆ ಎನ್ನುವ ಭಾವನೆಯಿದೆ. ಇದನ್ನು ಪುನರಪಿ ಸ್ಥಾಪನೆ ಮಾಡಬೇಕು. ಎಲ್ಲಾ ಇಲಾಖೆಗಳನ್ನು ಸೇರಿಸಿಕೊಂಡು ಆ ಘಟಕಕ್ಕೆ, ಆ ಹಳ್ಳಿಗೆ ಬರುವಂಥ, ಪಂಚಾಯತಿ ವ್ಯಾಪ್ತಿಗೆ ಬರುವಂಥ ಇಲಾಖೆಗಳ ಕಾರ್ಯಕ್ರಮಗಳನ್ನು ಒಂದಕ್ಕೊಂದು integrate ಮಾಡಬೇಕು. Synergize ಮಾಡುವಂಥ ಅಗತ್ಯವಿದೆ ಎಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಗ್ರಾಮ ವಿಕಾಸ ಯೋಜನೆ ಬಹಳ ಮುಖ್ಯವಾದಂಥ ಯೋಜನೆ. ಇದು ಮೊದಲು ಸ್ವಚ್ಛ ಗ್ರಾಮ ಎಂದು, ನಂತರ ಸುವರ್ಣ ಗ್ರಾಮ ಯೋಜನೆ ಎಂದು ಬಂದಿತು. ಇವತ್ತು ಇನ್ನೂ ಹೆಚ್ಚು ಅರ್ಥಪೂರ್ಣವಾಗಿ ಹೆಚ್ಚು ಹಳ್ಳಿಗಳನ್ನು ತೆಗೆದುಕೊಂಡು, ಅದಕ್ಕೊಂದು ಈ ರೀತಿಯಾದಂಥ conceptionalise ಮಾಡಿ, ಇದೇ ವಿಧವಾಗಿ ಆಗಬೇಕು, ಇದಕ್ಕೇ ಖರ್ಚಾಗಬೇಕೆಂದು ಐದ್ಯೆದು ಪಂಚಾಯತಿಗಳನ್ನು ಆಯ್ದುಕೊಳ್ಳುವುದಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಸುಮಾರು ಮೂರುವರೆ ಕೋಟಿ ರೂ.ಗಳಷ್ಟು ಅನುದಾನ ನೀಡಿದ್ದಾರೆ. ಇದು ಬಹಳ ಸೂಕ್ತವಾದ, ಉಪಯುಕ್ತವಾದಂಥ ಯೋಜನೆ. ಆದರೆ, ಅದನ್ನು ಮತ್ತೆ ಬೇರೆ ಬೇರೆ ಕೆಲಸಕ್ಕೆ ಇಂತಿಷ್ಟು ತೆಗೆದುಕೊಳ್ಳಬೇಕು, ಎಲ್ಲಾ ಕೆಲಸಗಳನ್ನು ತೆಗೆದುಕೊಳ್ಳಬಹುದು ಅಥವಾ ತೆಗೆದುಕೊಳ್ಳದೇ ಇರಬಹುದು, ಆ ಹಣ ಸಾಲದು ಎನ್ನುವಂಥ ಭಾವನೆ ನಮಗೆಲ್ಲಾ ಇದೆ. 75 ಲಕ್ಷ ರೂ.ಗಳು ಹಣ ಒಂದು ಪಂಚಾಯತಿಗೆ ಸಾಲುವುದಿಲ್ಲ. ಅದನ್ನು ಇನ್ನಷ್ಟು ಹೆಚ್ಚು

ಮಾಡಬೇಕು. ಜೊತೆಗೆ ಇವತ್ತು ತಾವು ನೋಡುತ್ತಿದ್ದೀರಿ, ದೇಶದಲ್ಲಿ smart city concept ಬಂತು, ಬರುತ್ತಾ ಇದೆ. ಕೋಟಿಗಟ್ಟಲೆ, ಲಕ್ಷಗಟ್ಟಲೆ ಹಣವನ್ನು ಅದರ ಮೇಲೆ ಖರ್ಚು ಮಾಡುತ್ತಾರೆ. ಇವತ್ತು ನಮ್ಮ ಪರಿಸ್ಥಿತಿಯೇನಿದೆಯೆಂದು ಹೇಳಿದರೆ, ನಾವು ಎಷ್ಟೇ ಹೇಳಿದರೂ, ಎಷ್ಟೇ ನಾವು ವಾದ ಮಾಡಿದರೂ, ಸುಮಾರು 60%ಕ್ಕಿಂತಲೂ ಜಾಸ್ತಿ ಇರುವಂಥ ಗ್ರಾಮೀಣ ಜನರ ಗ್ರಾಮಗಳ ವಿಕಾಸಕ್ಕೆ ಅದರ ಮೇಲೆ ಖರ್ಚಾಗುವಂಥ ಹಣ 5% ಇದ್ದರೆ, ನಗರಗಳಲ್ಲಿ 6% ಇದೆ. ಸುಮಾರು 10 ಸಾವಿರ ಕೋಟಿ ಗ್ರಾಮಗಳಲ್ಲಿ ಆದರೆ, 12 ಸಾವಿರ ಕೋಟಿ ನಗರಗಳ ಮೇಲೆ ಆಗುತ್ತದೆ. ಇನ್ನೂ ಆ imbalance ಜಾಸ್ತಿಯಾಗುತ್ತದೆ. ಇದೇ ವಿಧವಾಗಿ ಹೋದರೆ ಯಾವ ಕಾಲಕ್ಕೆ ಹೋಗಿ ನಾವು ಹಳ್ಳಿಗಳನ್ನು ಉದ್ಧಾರ ಮಾಡುವುದಕ್ಕೆ ಸಾಧ್ಯವಿದೆ? ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಅದಕ್ಕಾಗಿ 5ರ ಬದಲಾಗಿ, ಇದು 2 ವರ್ಷ-3 ವರ್ಷಗಳಲ್ಲಿ spread ಆಗುವ ಸಾಧ್ಯತೆಗಳಿದೆ, ಅದರ ಬದಲಾಗಿ ಹೆಚ್ಚು ಪಂಚಾಯತಿಗಳನ್ನು, ಹೆಚ್ಚು ಗ್ರಾಮಗಳನ್ನು ತೆಗೆದುಕೊಳ್ಳುವುದಕ್ಕೆ ಬರುವ ವರ್ಷದಲ್ಲಿ ಮಾನ್ಯ ಸಚಿವರು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ಸಲಹೆಯನ್ನು ಮಾಡುತ್ತೇನೆ. ಈ concept ಏನಿದೆ, ಇದು ಬಹಳ ಉತ್ತಮವಾದುದು, ಶ್ರೇಷ್ಠವಾದುದು, ಅದರ ಜೊತೆಗೆ ಬೇರೆ ಇಲಾಖೆಗಳನ್ನು ಸಹಿತ synergize ಮಾಡಬಹುದು ಎಂದು ಹೇಳಬಯಸುತ್ತೇನೆ. ಗ್ರಾಮ ವಿಕಾಸ ಯೋಜನೆಯಲ್ಲಿ ಬಹಳ ಮಹತ್ವಪೂರ್ಣವಾದಂಥ ಕೆಲಸಗಳನ್ನು ಕೆಲವು ಕಡೆ ವಿಶೇಷವಾಗಿ ಕೊಪ್ಪಳ ಜಿಲ್ಲೆ, ಗದಗದಲ್ಲಿರಬಹುದು ವಿಶೇಷವಾಗಿ ತಿಪ್ಪೆ, ಗೊಬ್ಬರವನ್ನು ಸಂಸ್ಕರಣೆ ಮಾಡುವಂಥ ಒಂದು ನೂತನ ಕಾರ್ಯಕ್ರಮವಿದೆ. ಬಹಳ ಕಡಿಮೆ ಖರ್ಚಿನಲ್ಲಿ ಆ culture ನ್ನು ಉಪಯೋಗ ಮಾಡಿ, ಸುಮಾರು ನಮ್ಮ ತಾಲ್ಲೂಕಿನಲ್ಲಿದ್ದಂಥ 33 ಹಳ್ಳಿಗಳಲ್ಲಿ ಬರಿ ನಾವು 10 ಲಕ್ಷ ರೂಪಾಯಿಗಳ culture ನ್ನು ಉಪಯೋಗ ಮಾಡಿ ಅಲ್ಲಿರುವಂಥ ತಿಪ್ಪೆಗಳಿಗೆ ಅವುಗಳನ್ನು ಸಿಂಪಡಣೆ ಮಾಡಿ, ನೀರು ಹಾಕಿ ಅಲ್ಲಿ ನಿರ್ವಹಣೆ ಮಾಡಿ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಬಂದಿದ್ದರು. ಕೃಷ್ಣ ಬೈರೇಗೌಡರವರು ಬರಬೇಕಾಗಿತ್ತು. ಅವತ್ತೇನೋ ಕಾರಣಕ್ಕೆ ಬರಲಿಲ್ಲ.

ಅದನ್ನು ಮಾಡಿದರೆ, ಆ ಗ್ರಾಮಗಳನ್ನು ಸ್ವಚ್ಛ ಇಡುವುದರ ಮುಖಾಂತರ ಯಾವ ರೀತಿ ನಾವು ಶೌಚಾಲಯಗಳಿಗೆ ಬಹಳಷ್ಟು ಒತ್ತು ಕೊಟ್ಟು ಮಾಡುತ್ತಿದ್ದೇವೆ. ಈಗ implementation ಆಗುವುದಕ್ಕೆ ಪ್ರಾರಂಭವಾಗಿದೆ. ಆ ರೀತಿ ತಿಪ್ಪೆಗಳನ್ನು ಗೊಬ್ಬರಗಳನ್ನು ಸಂಸ್ಕರಣೆ ಮಾಡಿದರೆ ಆ ಪರಿಸರ ಸ್ವಚ್ಛವಾಗುವುದರಲ್ಲಿ ಸಂಶಯವಿಲ್ಲ ಎನ್ನುವ ಮಾತನ್ನು ಹೇಳುತ್ತೇವೆ. ಜೊತೆಗೆ, ತಮಗೆ ಗೊತ್ತಿದೆ ಸ್ಮಶಾನಗಳ ಪರಿಸ್ಥಿತಿ ಹೇಗಿದೆಯೆಂದು, ಸ್ಮಶಾನಗಳನ್ನು ಸಹ ಬಹಳ ಕಡಿಮೆ ಖರ್ಚಿನಲ್ಲಿ ಅಭಿವೃದ್ಧಿಪಡಿಸುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಶೌಚಾಲಯ ಕೆಲಸ ಸಾಕಷ್ಟು ಪ್ರಗತಿಯಲ್ಲಿದೆ. ಇನ್ನೂ ಅದಕ್ಕೆ ಬೇಕಾದಂಥ ಹಣ ಸಾಕಾಗುವುದಿಲ್ಲವೆಂದು ಸಹೋದರಿ ಶ್ರೀಮತಿ ಶಶಿಕಲಾ ಜೊಲ್ಲೆಯವರು ಹೇಳಿದರು. ಸುಮಾರು 18 ರಿಂದ 20 ಸಾವಿರಗಳವರೆಗೆ ಅನುದಾನ ಕೊಟ್ಟರೆ ಉತ್ತಮ ದರ್ಜೆಯ readymade ಶೌಚಾಲಯ ಸಿಗುವುದಕ್ಕೆ ಸಾಧ್ಯತೆಯಿದೆ. ಅದಕ್ಕಾಗಿ ಆ unit cost ನ್ನು ಸಹ ಜಾಸ್ತಿ ಮಾಡಬೇಕು. ಸುಮರು 2000 ಯೂನಿಟ್‌ಗಳನ್ನು ನಮ್ಮ ಸ್ನಾನ ಗೃಹದ ಜೊತೆಗೆ ಮಾಡುವುದು ಬಹಳ ಉತ್ತಮವಾದ ಕೆಲಸವಾಗಿದೆ. ತಮಗೆ ಗೊತ್ತಿದೆ, ಹಳ್ಳಿಗಾಡಿನಲ್ಲಿ ವಾಸ ಮಾಡುವುದಕ್ಕೆ ಚಿಕ್ಕ ಚಿಕ್ಕ ಮನೆಗಳಿವೆ. ಅದರಲ್ಲೇ ದನ, ಆಡು, ಕುರಿ, ಕೋಳಿಗಳನ್ನು ಸಾಕಿಕೊಳ್ಳಬೇಕು. ಈ ಸ್ನಾನಗೃಹ ಹಾಗೂ ಶೌಚಾಲಯದ concept ಬಗ್ಗೆ ಅವರಿಗೆ ಎಂದೂ ಕಲ್ಪನೆಯೇ ಇಲ್ಲ. ಇದು ಅಗತ್ಯವಾದುದು ಎಂದು ಗೊತ್ತೇ ಇಲ್ಲ. ಸ್ನಾನ ಮಾಡುವುದು ಸಹ ಎಲ್ಲೋ ಮೂಲೆಯಲ್ಲಿ ಅಥವಾ ನಮ್ಮ ಊರುಗಳ ಕಡೆ ಮನೆಗೆ enter ಆಗುವ ಮುಂಬಾಗಿಲ ಮುಂದೆ ಬಾಗಿಲು ಹಾಕಿಕೊಂಡು ಅಲ್ಲಿ ಸ್ನಾನ ಮಾಡಿ, ನೀರು ಹೊರಗೆ ಹೋಗುವಂತೆ ಮಾಡಿಕೊಂಡಿದ್ದಾರೆ. ಅದಕ್ಕಾಗಿ ಆ ಯೋಜನೆಗೂ ಸಹ ಹೆಚ್ಚು ಹಣವನ್ನು ಒದಗಿಸಿ ಉತ್ತಮ ದರ್ಜೆಯ ಶೌಚಾಲಯಗಳನ್ನು ನಿರ್ಮಾಣ ಮಾಡುವುದಕ್ಕೆ ಅನುವು ಮಾಡಿಕೊಡಬೇಕು. ಇನ್ನು ನಮ್ಮ ಹೊಲ ನಮ್ಮ ರಸ್ತೆ ಯೋಜನೆಯ ಚರ್ಚೆಗೆ ಬರುತ್ತೇನೆ. ಅದೊಂದು ಉತ್ತಮವಾದ ಕೆಲಸ. ತಮಗೆ ಗೊತ್ತಿದೆ, ಜಿಲ್ಲಾ ಪಂಚಾಯತಿ ಒಟ್ಟು ರೋಡ್‌ಗಳ ಉದ್ದಳತೆ ಒಂದೂವರೆ ಲಕ್ಷ ಕಿ.ಮೀ. ಎಂದು ಅಳತೆ ಮಾಡುತ್ತಾರೆ. ಅದರ 2-3 ಪಟ್ಟು

ಈ ಹೊಲಗಳ ರಸ್ತೆಯಿದೆ. ಒಂದು ಊರು ಇದ್ದರೆ, ನಾಲ್ಕಾರು ದಿಕ್ಕುಗಳಲ್ಲಿ ಹೊಲಗಳಿಗೆ ರಸ್ತೆಯಿರುತ್ತದೆ. ಇವತ್ತು ಪರಿಸ್ಥಿತಿ ಹೇಗಿದೆಯೆಂದರೆ ಹಳೆಕಾಲಕ್ಕೆ ಹೊರದೇಶ ಇದ್ದಂಗೆ ಇರಲಿಲ್ಲ. ಆದರೆ, ಇವತ್ತು ಆ ರಸ್ತೆಗಳಲ್ಲಿ ಹೋಗುವುದಕ್ಕೆ ಸಾಧ್ಯವಿಲ್ಲ. ಇದೇನು ನಾವು ಬಳ್ಳಾರಿ ಜಾಲಿ ಎಂದು ಹೇಳುತ್ತೇವೆ. ಜಾಲಿ ಇರಬಹುದು, ಕಂಟಿ ಇರಬಹುದು ಅಥವಾ ಎರಡೂ ಕಡೆ ಒತ್ತುವರಿ ಮಾಡಿದ್ದಿರಬಹುದು, ಬೇರೆ ಹೋಗುವಾಗ ಟ್ರಾಕ್ಟರ್‌ಗಳಿಗೆಲ್ಲಾ ರಸ್ತೆ ಹಾಳಾಗಿರಬಹುದು. ಯಾರೂ ನೇರವಾಗಿ ಹೊಲಗಳಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಸಮೀಪ ಸುಮಾರು ಒಂದು ಕಿ.ಮೀ. ರಸ್ತೆ ಪಕ್ಕದಲ್ಲೇ ಇದ್ದರೂ ಅದನ್ನು ಮುಟ್ಟುವುದಕ್ಕೆ ಹತ್ತಾರು ಕಿ.ಮೀ. ಸುತ್ತಿಕೊಂಡು ಬರುವಂಥ ಪರಿಸ್ಥಿತಿಯಿದೆ. ಹಾಗಾಗಿ, ನಮ್ಮ ಹೊಲ ನಮ್ಮ ರಸ್ತೆ ಕೆಲಸವೇನಿದೆ, ಆ ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಎರಡು ವರ್ಷಗಳಲ್ಲಿ ಸದನದ ಗಮನಕ್ಕೆ ತರಬಯಸುತ್ತೇನೆ. ಬಹಳ ಕಡಿಮೆ ಖರ್ಚಿನಲ್ಲಿ PWD estimates ಏನಿತ್ತು, Schedule of rates ಏನಿತ್ತು, ಆದರೆ 10% ಹಣದಲ್ಲಿ ಅದು ಆಗುತ್ತದೆ. Formation ಆಗಬೇಕು. ಬರಿ formation ಮಾಡಿದ್ದೀರಪ್ಪಾ, ನೀವೇನು ಮಾಡಿದ್ದೀರಿ, ಸ್ವಲ್ಪ invest ಮಾಡಿದ್ದೀರಿ, ಒಂದು ಮಳೆಯಾದರೆ ಸ್ವಲ್ಪ ಕುಸಿದು ಹೋಗಬಹುದು ಅಥವಾ ಹಾಳಾಗಿ ಹೋಗಬಹುದು. ಹೋಗುವುದಕ್ಕೆ ಸಾಧ್ಯವಾಗದೆ ಹೋಗಬಹುದು. ಕನಿಷ್ಠ ಅಲ್ಲಿರುವಂಥ ಹಳೆಯ ರಸ್ತೆಗಳ ಮ್ಯಾಪ್‌ಗಳೇನಿತ್ತು, ಅದರಂತೆ 33 ಫೀಟ್ ರಸ್ತೆಯಿರಬೇಕೆಂದು ಇತ್ತು. ಯಾರೂ 33 ಫೀಟ್ ರಸ್ತೆಯನ್ನು ಬಿಟ್ಟಿರುವುದಿಲ್ಲ ಒತ್ತುವರಿ ಮಾಡಿ 5 ಅಥವಾ 10 ಫೀಟ್ ಅಥವಾ ಕಾಲ್ನಡಿಗೆಯಲಿ ಹೋಗುವುದಷ್ಟೇ ಆಗಿದೆ. ಅವನ್ನು ಏರಿಸಿ ಕನಿಷ್ಠ 33 ಫೀಟ್ ರಸ್ತೆಯನ್ನು ಮಾಡುವುದಕ್ಕೆ ಸಾಧ್ಯವಾಗುವುದು ದೊಡ್ಡ ಸಾಧನೆ ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಹೊಸ technology ಉಪಯೋಗ ಮಾಡಿ ಅವನ್ನು ಹೆಚ್ಚು ಬಾಳಿಕೆ ಬರುವಂತೆ ಮಾಡುವುದಕ್ಕೆ ಸಾಧ್ಯವಿದೆ. ನಾನು ಮತ್ತೊಂದು ಸಲಹೆಯನ್ನು ಮಾಡುತ್ತೇನೆ. ಇವತ್ತು ಬಹುತೇಕ ಇಲಾಖೆಗಳಲ್ಲಿ, ಜಿಲ್ಲಾ ಪಂಚಾಯತಿ ಮತ್ತು ಬಹಳಷ್ಟು ಇಲಾಖೆಗಳಲ್ಲಿ ಪ್ರತಿಯೊಂದು estimate ಗಳು ಬೆಂಗಳೂರಿಗೆ ಹೋಗಬೇಕು. ಒಂದು ಕಾಲ ಇತ್ತು, ನಾವೆಲ್ಲಾ

30 ವರ್ಷಗಳ ಹಿಂದೆ, ಅವುಗಳೆಲ್ಲಾ ಬಹುತೇಕ delegate ಆಗಿದ್ದವು. ಇವತ್ತು ವ್ಯವಸ್ಥೆ ಇದ್ದಂತೆ ಇಲ್ಲ. ಪ್ರತಿಯೊಂದು ಸಮಾಜ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ ಇರಬಹುದು, ಎಲ್ಲಾ ಇಲಾಖೆಗಳಲ್ಲಿ estimate ಗಳ administiative approval, technical approval ಇವುಗಳನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳಿದ್ದಾರೆ. CEO ಗಳಿದ್ದಾರೆ ಅವರಿಗೆ ಆ ಒಂದು ಅವಕಾಶವನ್ನು ನೀಡಬೇಕು. ನಾವು ಯಾವಾಗ ಕೇಳಿದಾಗಲೂ, ಏನು ಕೇಳಿದಾಗಲೂ ಬೆಂಗಳೂರಿಗೆ ಹೋಗಿದೆ ಎಂದು ಹೇಳುತ್ತಾರೆ. ಅದನ್ನು ತಪ್ಪಿಸಬೇಕು ಎಂದು ಹೇಳುತ್ತಿದ್ದೇನೆ. ಒಂದು ಕಾಲಕ್ಕೆ privacy ಇತ್ತು, ಜಿಲ್ಲಾ ಪಂಚಾಯತಿಯಿದ್ದಾಗ ಆ ವ್ಯವಸ್ಥೆಯಿತ್ತು ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. CMGSY, ಜೈಕಾ(JICA) ಈ ಯೋಜನೆಗಳು ಏಕೆ ಇಷ್ಟು ವಿಳಂಬವಾಗುತ್ತಿವೆ? ಎಂದು ಗೊತ್ತಾಗುತ್ತಿಲ್ಲ. ಈ ವಿಳಂಬವನ್ನು ತಪ್ಪಿಸಬೇಕು. ಅಖಂಡ ಗದಗ ಜಿಲ್ಲಾ ವ್ಯಾಪ್ತಿಗೆ ಕುಡಿಯುವ ನೀರನ್ನು ತುಂಗಭದ್ರಾದಿಂದ 3 ತಾಲ್ಲೂಕುಗಳಿಗೆ, ಮಲಪ್ರಭಾದಿಂದ 2 ತಾಲ್ಲೂಕುಗಳಿಗೆ ನೇರವಾಗಿ ಕೊಳಾಯಿ ಮೂಲಕ ನೀರನ್ನು ತಂದು ಕೊಡಿಸುವಂಥ ವ್ಯವಸ್ಥೆ ಮಾಡುತ್ತಿದ್ದಾರೆ. ಇದು ಆ time over ನಲ್ಲಿ ಮಾಡದೆ ಆದಷ್ಟು ಬೇಗ ಮಾಡಬೇಕು. ಇದರ ಹೆಗ್ಗಳಿಕೆಯನ್ನು ಮಾನ್ಯ ಸಿದ್ದರಾಮಯ್ಯನವರಿಗೆ ಮತ್ತು credit ನ್ನು ಮಾನ್ಯ ಹೆಚ್.ಕೆ. ಪಾಟೀಲ್‌ರವರಿಗೆ ಕೊಡುತ್ತೇವೆ. ಅವರು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಒಳ್ಳೆಯ ನೀರು, ಶುದ್ಧವಾದ ನೀರು, treated water ಬರಬೇಕು. ನೇರವಾಗಿ 12 ತಿಂಗಳು ನೀರು ಸಿಗುವಂಥ ರೀತಿಯಲ್ಲಿ ಆಗಬೇಕು. ಆದರೆ, ಇದರಲ್ಲಿ ಇನ್ನೊಂದು ತೊಂದರೆ ಬರುತ್ತದೆ. ಆ ನೀರು ಬಹಳ ದೂರದ ನೀರು, ಬಹಳ ತುಟ್ಟಿ ನೀರು, ಹೆಚ್ಚು ಖರ್ಚು ಮಾಡಿ ತರುವಂಥ ನೀರು, ಅದರ ಉಪಯೋಗ ಕುಡಿಯುವುದಕ್ಕೆ ಮಾತ್ರವೇ, ಬಳಕೆಗೆ ಮಾತ್ರವೇ, ದನಗಳಿಗೆ ಕುಡಿಸುವುದಕ್ಕೆ ಅದಕ್ಕೇನು ಬದಲಿ ವ್ಯವಸ್ಥೆ ಎನ್ನುವುದರ ಬಗ್ಗೆ ಸಹಿತ ಚಿಂತನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಕೃಷಿ ಇಲಾಖೆಯ ಬಗ್ಗೆ ಎರಡು ಮಾತುಗಳನ್ನು ನಾನು ಹೇಳಲೇಬೇಕು. ಆತ್ಮಹತ್ಯೆ ಪ್ರಕರಣದ ಬಗ್ಗೆ ತಾವು ಹೇಳಿದಿರಿ. ಅನೇಕ ವಿಚಾರಗಳು ಚರ್ಚೆಯಾದವು. ಇದು ಕೇವಲ ಇವರ ಮೇಲೆ ಹಾಕುವುದು ಮಹಾ ತಪ್ಪು. ಎಲ್ಲ ಹೆಚ್ಚಿನ ಬಡ್ಡಿಯವರು. ನಮ್ಮ ಕಡೆ ಪಠಾಣರ ಬಡ್ಡಿ. ಈ ಕಡೆ ಆ ಶಬ್ದವನ್ನು ಬೇರೇನೂ ಹೇಳುತ್ತಾರೆ. ಆ ವಿಧವಾಗಿ ಬಹಳಷ್ಟು ಹೆಚ್ಚು ಬಡ್ಡಿ ಮಾಡುವವರು, ಅವರ ಮೇಲೆ ದೌರ್ಜನ್ಯ, ದಬ್ಬಾಳಿಕೆ ಮಾಡಿ ಅವರಿಗೆ ಹಿಂಸೆ ಕೊಡುತ್ತಾರೆ. ಅದೊಂದೇ ಕಾರಣ. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದಂತೆ ಸಮಾಜದಲ್ಲಿರುವ, ದೇಶದಲ್ಲಿರುವ ಆರ್ಥಿಕ ವ್ಯವಸ್ಥೆಯು ಸಹಿತ, ಸರ್ಕಾರದ ನೀತಿ ಮತ್ತು ಧೋರಣೆಯೂ ಸಹ ಇದಕ್ಕೆ ಕಾರಣವಾಗುತ್ತದೆ. ಇದನ್ನು ಸರಿಪಡಿಸುವಂತಹ ಸಮಗ್ರವಾದ ಚಿಂತನೆ ನಡೆಯಬೇಕು. ಒಂದು ಬದಲಾವಣೆಯನ್ನು ತರಬೇಕು. ಇಲ್ಲದಿದ್ದರೆ ತಮಗೆ ಗೊತ್ತಿದೆ. ಇಂದು media ಬಹಳ sensed ಆಗಿದೆ. ಆ ಕಾರಣಕ್ಕಾಗಿದೆಯೋ, ಇಲ್ಲವೋ ಎಲ್ಲವನ್ನೂ ಆ ರೀತಿ ಚಿತ್ರಣ ಕೊಡುವ ಸನ್ನಿವೇಶವೂ ಇದೆ, ಇಲ್ಲವೆಂದಲ್ಲ. ಆದರೆ ಅದರ ಜೊತೆಗೆ ನಾವು ನೋಡುತ್ತೇವೆ. ಇಂತಹ ಪ್ರಕರಣಗಳು ಕೇವಲ ಕೃಷಿಕ ಸಮಾಜದಲ್ಲಿ ಅಲ್ಲ, ಹೊರಗೂ ಸಹ ಆತ್ಮಹತ್ಯೆ ಪ್ರಕರಣಗಳು ಜಾಸ್ತಿಯಾಗುತ್ತಿವೆ. ಇದಕ್ಕೆ ಏನು ಕಾರಣ? ಮನೋವೈಜ್ಞಾನಿಕವಾದ ಕಾರಣವೋ, ಆರ್ಥಿಕವಾದ ಕಾರಣವೋ ಎಂಬುದರ ಕುರಿತು ಬಹಳ ಗಂಭೀರವಾಗಿ ಅಧ್ಯಯನ ಆಗಬೇಕು. ತಾವು ಗಮನ ಹರಿಸಬೇಕು. ಏನು ಇದಕ್ಕೆ ಪರಿಹಾರ ಕೊಡುತ್ತಾರೆ? ನಾನು ಕೃಷಿ ಸಚಿವರಿಗೆ ಹೇಳುತ್ತೇನೆ. ಅವರು ಯುವಕರು, ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ಅದರಲ್ಲಿ ಎರಡು ಪ್ರಶ್ನೆ ಇಲ್ಲ. ಆದರೆ, ಪರಿಹಾರ ಪಡೆಯುವುದಕ್ಕೆ ವರ್ಷಗಟ್ಟಲೆ ಕಾಯಬೇಕು. ನಮ್ಮ ಮತಕ್ಷೇತ್ರದಲ್ಲಿ ಒಬ್ಬರು ಒಂದು ವರ್ಷದ ಹಿಂದೆ ತೀರಿಕೊಂಡರು. ಪಾಪ! ಎಲ್ಲಿಯೋ ಹೋಗಿ ಜಮೀನಿನಲ್ಲಿ ವಿಷ ಕುಡಿದು ಸತ್ತಿದ್ದ. ಅವನು ಸತ್ತ ಎರಡು ದಿನಗಳ ನಂತರ ಗೊತ್ತಾಯಿತು. ಆ ಶವವೂ ಸಹಿತ decompose ಆಗುವಂತಹ ಪರಿಸ್ಥಿತಿ ಬಂದಿತ್ತು. ಅದಕ್ಕೆ ಪರಿಹಾರ ಕೊಡುವುದಕ್ಕೆ ಎರಡೆರಡು ವರ್ಷವಾಯಿತು. ಅದಕ್ಕಾಗಿ ನಾನು ಮನವಿ ಮಾಡುತ್ತೇನೆ. ಇಂತಹ ಪ್ರಕರಣಗಳಲ್ಲಿ ಮಾನವೀಯ ದೃಷ್ಟಿಯಿಂದ ಆದಷ್ಟು ಬೇಗ, ಕನಿಷ್ಟ

15 ದಿನಗಳು ಅಥವಾ ಒಂದು ತಿಂಗಳ ಅವಧಿಯಲ್ಲಿ ಪರಿಹಾರ ಸಿಗುವ ರೀತಿಯ ವ್ಯವಸ್ಥೆ ಮಾಡಬೇಕೆನ್ನುವ ಮಾತನ್ನು ಹೇಳುತ್ತೇನೆ. Insurance ಬಗ್ಗೆ ಹೇಳುತ್ತಿದ್ದರು. Insurance ಬಹಳ ಗೊಂದಲದಲ್ಲಿದೆ. ನಾವು ಯಾವ ವಿಧವಾಗಿ ರೈತರಿಗೆ ಅನುಕೂಲ ಮಾಡಬೇಕು? ಒಂದು ಕಡೆ ಮಾರುಕಟ್ಟೆಯಲ್ಲಿ ಬೆಲೆ ಸಿಗುವುದಕ್ಕೂ ಅನುಕೂಲ ಮಾಡುತ್ತಿಲ್ಲ. ಗೋವಿನ ಜೋಳದ ಬೆಲೆ 1300/- ರೂ. ಬೆಂಬಲ ಬೆಲೆ ಇದ್ದರೆ, ಹೋದ ಬಾರಿ 1100/- ರೂ.ಗಳಿಗೆ ಕಳುಹಿಸಿದ್ದೇವೆ. ಅದು ರಾಜ್ಯ ಸರ್ಕಾರದ ತಪ್ಪು ಎಂದು ನಾನು ಹೇಳುವುದಿಲ್ಲ. ಕೇಂದ್ರ ಸರ್ಕಾರದವರು 1300/- ರೂ.ಗಳನ್ನು ಏನು ಕೊಡುತ್ತಿದ್ದರು, ಅದನ್ನು ತೆಗೆದು ಹಾಕಿದರು. ಕಾರಣವೇನು? PDS system ನಲ್ಲಿ ಇದು ಬರುವುದಿಲ್ಲ ಎಂದು ತೆಗೆದಿದ್ದಾರೆ. ಇದರಿಂದ ಲಕ್ಷಾಂತರ ರೈತರಿಗೆ ನಷ್ಟವಾಯಿತು. ರೈತರ ಪರ ಎಂದು ನಾವೆಲ್ಲಾ ಹೇಳುತ್ತೇವೆ. ನಾವೂ ಹೇಳುತ್ತೇವೆ, ಅವರೂ ಹೇಳುತ್ತಾರೆ. ಆದರೆ ಮಾಡುವಾಗ ಮಾತ್ರ ಕೃತಿಗೆ ಬಂದಾಗ ಇಂತಹ ಘಟನೆಗಳು ಆಗುತ್ತಿವೆ. ಇದನ್ನು restore ಮಾಡಲು ಸಾಧ್ಯವಿಲ್ಲ. Insurance ಏನೋ, ತಾವು ಇಲ್ಲಿಯೇ ಇದ್ದೀರಿ. ಈಗ ಮಳೆಯಾಗಲಿಲ್ಲ. ಒಂದು ತಿಂಗಳು ಆಗಲಿಲ್ಲ. ಮುಂಗಾರು ಬೆಳೆ ಹೋಯಿತು. ನೀವು insurance ಮಾಡಲಿಕ್ಕೆ ಹೋದರೂ ನಮಗೆ ಪರಿಹಾರ ಸಿಗುವುದಿಲ್ಲ. ಆ ಬೆಳೆ ಬರುವುದಿಲ್ಲ. ಇದನ್ನು ಬಹಳ ವ್ಯವಸ್ಥಿತವಾಗಿ ಮಾಡುವಂತಹ, ಅದಕ್ಕೇನಾದರೂ ದಾರಿ ತೋರಿಸುವಂತಹ insurance ಲಭ್ಯವಾಗಬೇಕು. Insurance ಪಡೆಯುವುದು ಮಾತ್ರವಲ್ಲ. ಕೆಲವರು 3% ಹೇಳಿದರು, 5% ಎಂದು ಹೇಳಿದರು. ಎಷ್ಟು ದುಡ್ಡು ಆಗುತ್ತದೆ ಅಧ್ಯಕ್ಷರೆ, ಆ ಹಣ ನಾವು ಕೊಡುವುದಿಲ್ಲ ಎಂದರೂ ಕೇಳುವುದಿಲ್ಲ. ಅವರು ಸಾಲದಲ್ಲಿಯೇ ಕಟ್ ಮಾಡಿ ಕೊಡುತ್ತಾರೆ. ಅದು ಮಾನ್ಯ ಸಚಿವರವರಿಗೆ ಹೋಯಿತು. ರೈತರ ಪರವಾಗಿರುವಂತಹ ಒಂದು system ಅನ್ನು develop ಮಾಡಬೇಕು. ಇಲ್ಲದಿದ್ದರೆ ಕೋಟಿಗಟ್ಟಲೆ ಹೇಳಿದರು. 300 ಕೋಟಿ ರೂ. collect ಆಗಿದೆ, 200 ಕೋಟಿ collect ಆಗಿದೆ ಎಂದು. Insurance ಹಣವೇ ಅಷ್ಟಾಯಿತು. ಅಷ್ಟು ಬಂದರೂ ಕೊಡುವುದಿಲ್ಲ. 100 ಕೋಟಿ ಆಗಿದೆ ಎಂದು ಹೇಳಿದರು. ನಿಜ, ಸತ್ಯದ ಮಾತು. ಹಾಗಾಗಿ ಇಂದು ಆ ರೀತಿ ಆಗಬಾರದು.

ಚರ್ಚೆ ಮಾಡುವಾಗ ಒಂದು ವಿಷಯ ಬಂತು. ಪೋಲಿಸರು two wheeler, four wheeler ಹೋಗುವಾಗ license ಇಲ್ಲದ್ದಕ್ಕೋ, ಮತ್ತೊಂದಕ್ಕೋ ದಂಡ ಹಾಕಿ ಬಂದ ದುಡ್ಡು 200 ಕೋಟಿ ರೂ.ಗಳಿವೆ ಎಂದು ಹೇಳಿದರು. ನೀವು ದಂಡ ವಸೂಲಿ ಮಾಡಲಿಕ್ಕೆ ದಂಡ ಹಾಕುತ್ತೀರೋ ಅಥವಾ ಅವರ ಸುಧಾರಣೆ ಮಾಡಲು ದಂಡ ಹಾಕುತ್ತೀರೋ ಎಂದು ನಾನು ಅವರನ್ನು ಕೇಳಿದೆ. ಅವರಿಗೆ ಉತ್ತರ ಹೇಳಲು ಸಾಧ್ಯವಾಗಲಿಲ್ಲ. ಆ ರೀತಿ ಆಗಬಾರದು. 300 ಕೋಟಿ ರೂ. ಹಣ ಕನಿಷ್ಟ ರೈತರಿಗೆ ಹಾಕಿ. ಇದೇನೋ ಯಾವ insurance company ಕೊಡುವುದಿಲ್ಲ. Insurance committee ಕೇವಲ monitor ಮಾಡುತ್ತದೆ, ಇದೆಲ್ಲಾ ವ್ಯವಸ್ಥೆಯನ್ನು ಮಾಡುತ್ತದೆ. ಆ ಹಣವನ್ನು ಅರ್ಧ ರಾಜ್ಯ ಸರ್ಕಾರ ಮತ್ತು ಉಳಿದ ಅರ್ಧ ಕೇಂದ್ರ ಸರ್ಕಾರ ಕೊಡಬೇಕು. ರೈತರ ಪರವಾದ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಕೃಷಿ ಸಚಿವರನ್ನು ಕೇಳುತ್ತೇನೆ. ಬೆಳೆ ಪರಿಹಾರ ಬರುವುದೇ ಇಲ್ಲ. ಈರುಳ್ಳಿ ಬೆಳೆ ಪರಿಹಾರ ಬರುವುದಿಲ್ಲ, ಯಾವುದೂ ಬರುವುದಿಲ್ಲ. ಒದ್ದಾಡಿ, ಒದ್ದಾಡಿ ತರಿಸಿಕೊಳ್ಳಬೇಕು. ಕೃಷಿ ಸಹಾಯಕರ ವಿಷಯ ಪ್ರಸ್ತಾಪಕ್ಕೆ ಬಂತು. ಕೃಷಿ ಸಹಾಯಕರು ಎಂದು ಇದ್ದರು. ಅವರು ಇರುವಾಗ ಒಂದು ರೀತಿಯಲ್ಲಿ ರೈತರಿಗೂ ಮತ್ತು ಸರ್ಕಾರಕ್ಕೂ ಲಿಂಕ್ ಇತ್ತು. ಅನುವುಗಾರರು ಎಂದು ತಾವೇನು ಹೇಳುತ್ತೀರಿ. Outsource ಮಾಡಿ ಅಥವಾ ಬೇರೆ ರೀತಿಯಲ್ಲಿ ತೆಗೆದುಕೊಳ್ಳುತ್ತೀರಿ, ಅವರಿಗೆ training ಇಲ್ಲ. ಅವರಿಗೆ authority ಇಲ್ಲ. ಯಾರೂ ಅವರನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಈಗೆಲ್ಲಾ ಕೃಷಿ ಇಲಾಖೆ ಎನ್ನುವದು ಕೇವಲ ಮಾರಾಟ ಮಾಡುವ ವ್ಯವಸ್ಥೆಯಾಗಿದ್ದು, ಬಂದಂತಹ ಸಾಮಾನುಗಳನ್ನು ಹಂಚುವುದಾಗಿದೆ. ತಾಂತ್ರಿಕ ತಿಳುವಳಿಕೆಯನ್ನು ಯಾರು ಕೊಡುತ್ತೀರಿ? ಆ ಇಲಾಖೆಯವರು ಕೊಡವುದಿಲ್ಲ. ವಿಶ್ವವಿದ್ಯಾಲಯದವರು ಕೊಡುವುದಿಲ್ಲ. ರೈತರೇ ಹೋಗಿ ಕೇಳಿದರೂ ಸಿಗುವುದಿಲ್ಲ. ಸಬ್ಸಿಡಿ ಅಥವಾ ಪರಿಕರಗಳು ಬಂದದ್ದನ್ನು ಹಂಚಿಕೆ ಮಾಡುವುದು, ಮತ್ತೊಂದು ಮಾಡುತ್ತಾರೆ. ಪರಿಹಾರವನ್ನು ಕೊಡುವುದಿಲ್ಲ. ಇಷ್ಟಕ್ಕೆ ಸೀಮಿತವಾಗಿದೆ. ಬೀಜದ ಬಗ್ಗೆ ಹೇಳಬೇಕಾದರೆ,.........

ಅಧ್ಯಕ್ಷರು:- ಏನು ಸುಧಾರಣೆ ಮಾಡಬೇಕೆಂದು ಹೇಳಿ?

ಶ್ರೀ ಬಿ.ಆರ್. ಯಾವಗಲ್:- ಯಾವುದು?

ಅಧ್ಯಕ್ಷರು:- ರೈತರಿಗೆ ತಾಂತ್ರಿಕ ಮಾಹಿತಿಯನ್ನು ಕೊಡುವ ವಿಚಾರದಲ್ಲಿ ಅನುವುಗಾರರಿಂದ ಏನು ಮಾಡಬೇಕು?

ಶ್ರೀ ಬಿ.ಆರ್. ಯಾವಗಲ್:- ಮಾನ್ಯ ಅಧ್ಯಕ್ಷರೆ, ಮೊದಲು ವ್ಯವಸ್ಥೆ ಇತ್ತು. University ಯವರು extension department ನಿಂದ ಪ್ರತಿಯೊಂದು ಹಳ್ಳಿಗೂ, ಅವರವರಿಗೆ allot ಆದಂತಹ ಹಳ್ಳಿಗಳಿಗೆ ಹೋಗಿ ರೈತರ ಜೊತೆ ಸಂವಾದ ಮಾಡುತ್ತಿದ್ದರು. ಬೀಜ ಬಿತ್ತನೆ ಮಾಡುವಾಗ, ಬೆಳೆಯುವಾಗೇನಾದರೂ ರೋಗ-ರುಜಿನಗಳು ಬಂದರೆ ಅಥವಾ ಮತ್ಯಾವುದೋ ರೀತಿ ಸಮಸ್ಯೆ ಬಂದರೆ ಆ ಎಲ್ಲಾ ಸಮಸ್ಯೆಗಳಿಗೆ ಉತ್ತರ ಹೇಳುತ್ತಿದ್ದರು, ಕರೆದುಕೊಂಡು ಹೋಗಿ ತೋರಿಸುತ್ತಿದ್ದರು. Laboratory ಯಲ್ಲಿ ಹೋಗಿ test ಮಾಡುತ್ತಿದ್ದರು. ಅದಕ್ಕೆ ಪರಿಹಾರವನ್ನು ಹೇಳುತ್ತಿದ್ದರು. ಇಲಾಖೆಯವರು ಸಹ ಅಲ್ಲಿ ಬಂದು ಸಮಸ್ಯೆ ತಿಳಿದುಕೊಂಡು ತಾಂತ್ರಿಕ ಸಿಬ್ಬಂದಿಗಳ ಬಳಿ ಹೋಗಿ ಕೇಳಿಕೊಂಡು, ಮೇಲಧಿಕಾರಿಗಳಿಗೆ ಹೇಳಿಕೊಂಡು ಅಥವಾ ಬೇರೆ ವಿಧವಾಗಿ university ಯವರನ್ನು approach ಮಾಡಿ ತಂದು ಹೇಳುತ್ತಿದ್ದರು. ಇವತ್ತು ಆ ವ್ಯವಸ್ಥೆ ಇಲ್ಲ. ಸಿಬ್ಬಂದಿಯೇ ಇಲ್ಲ ಎಂದು ಮಾನ್ಯ ಸಚಿವರು ಹೇಳಿದರು. ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳಿದ್ದಾರೆ. ಸಹಾಯಕರು ಇಲ್ಲವೇ ಇಲ್ಲ ಎಂದು ಅವರೇ ಹೇಳಿದರು. ಇಂದು extension program ಅನ್ನು ಯಾರ ಮೂಲಕ ಮಾಡುತ್ತಾರೆ? AEP ಯಲ್ಲಿ ಎಲ್ಲಾ ಗ್ರಾಮ ಸೇವಕರನ್ನು ತೆಗೆದುಕೊಂಡಿದ್ದರು. ಅದು ಸಿಬ್ಬಂದಿ ನೇಮಕಾತಿ ಇದ್ದಂತಿಲ್ಲ. ಎಲ್ಲಾ retired ಆಗಿ ಹೋದರು. 30-35 ವರ್ಷದ ಹಿಂದೆ ತೆಗೆದುಕೊಂಡವರು. ಆ ಗ್ಯಾಪನ್ನು ತುಂಬುವುದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕು. ಅದೇನು impart ಮಾಡುತ್ತೀರಿ, ತಾಂತ್ರಿಕ ಜ್ಞಾನವನ್ನು ಏನು ಕೊಡುತ್ತೀರಿ, ಅದಕ್ಕಾದರೂ ವ್ಯವಸ್ಥೆ ಇರಬೇಕು. ಇರುವ ಕೃಷಿ ಕೇಂದ್ರಗಳೆಲ್ಲವೂ ಮಾರಾಟ ಕೇಂದ್ರಗಳಾಗಿವೆ. ತಾಂತ್ರಿಕ ಜ್ಞಾನವನ್ನು ಕೊಡುವುದಿಲ್ಲ. ಆ ವ್ಯವಸ್ಥೆಯೂ ಆಗಬೇಕೆಂದು ನಾನು ಹೇಳುತ್ತೇನೆ.

ಪರಿಹಾರ ಎಂದರೆ ಆ ಸಿಬ್ಬಂದಿಯನ್ನು ನೇಮಿಸಬೇಕು, interaction ಮಾಡಬೇಕು, training ಮಾಡಬೇಕು. ಅವರಿಗೆ ಹೇಳಬೇಕು, ಇದು ಹೀಗಾಯಿತಪ್ಪ, ಮಳೆ ಹೀಗಾಯಿತು, ಈ ರೀತಿಯ ಸಾಧ್ಯತೆ ಇದೆ, ಇಂತಹ disease ಬಂದಿದೆ, ಇಂತಹ insect ಬಂದಿದೆ, ಎಲ್ಲವನ್ನು control ಮಾಡುವುದಕ್ಕೆ ಏನು ಮಾಡಬೇಕೆಂದು ಹೇಳುವವರು ಬೇಕು, ಅದು ಆಗುತ್ತಿಲ್ಲ. ಆದರೆ ಮಾಡಲು ಸಾಧ್ಯವಿದೆ. ಒಂದು ಕಾಲದಲ್ಲಿ ಇತ್ತು. 30–35 ವರ್ಷದ ಹಿಂದೆ ಆ ರೀತಿಯ ವ್ಯವಸ್ಥೆ ಇತ್ತೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇನ್ನು ಬೀಜದ ಬಗ್ಗೆ ಹೇಳಬೇಕಿಲ್ಲ. ಇದೊಂದು ದೊಡ್ಡ ಮೋಸದ ಜಾಲ 'truthful label' ಎಂದು ಒಂದು ಬರುತ್ತದೆ. certified ಎಂದು ಒಂದು ಬರುತ್ತದೆ. ಬಹುತೇಕ ಮಾರಾಟವಾಗುವ ಬೀಜಗಳೆಲ್ಲವೂ truthful label ಅವರ್‍ಯಾರು, ಎಲ್ಲಿ ಯಾವ ರೈತ ಒಂದು ಬಾರಿ ಬೀಜ ಹಾಕಿ ಅವೇನಾದರೂ ಮೋಸದ ಬೀಜವಾದರೆ, ಅವು ಸರಿಯಾಗಿ generate ಆಗದಿದ್ದರೆ, ಸರಿಯಾಗಿ ಬೆಳೆ ಬರದಿದ್ದರೆ, ಫಸಲು ಕೊಡದಿದ್ದರೆ ಆ ವರ್ಷದ ಅವನ ಭವಿಷ್ಯ ಸರ್ವನಾಶವಾಗುತ್ತದೆ. ಆಗ ಏನೂ ಮಾಡಲು ಸಾಧ್ಯವಿಲ್ಲ. ಅದಕ್ಕಾಗಿ ಹೆಚ್ಚು ಹೆಚ್ಚು ಪರಿಣಾಮಕಾರಿಯಾದ certified ಬೀಜಗಳನ್ನು ಕೊಡಬೇಕು. Truthful label seeds ಏನು ಮಾಡುತ್ತಾರೋ ಅವರನ್ನು ಕಡ್ಡಾಯವಾಗಿ ಜೈಲಿಗೆ ಹಾಕಬೇಕು. ಆ ರೀತಿಯ ಕ್ರಮಗಳನ್ನು ತೆಗೆದುಕೊಂಡಾಗ ಮಾತ್ರ ಸಾಧ್ಯವಿದೆ ಎಂಬ ಮಾತನ್ನು ತಮ್ಮ ಗಮನಕ್ಕೆ ತಂದು ತಾವು ನೀಡಿದ ಅವಕಾಶಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ, ನಮಸ್ಕಾರ.

ಅಧ್ಯಕ್ಷರು:– ಈಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಗಿದೆ. ಇದಕ್ಕೆ ಉತ್ತರವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಕೊಡಲಾಗುತ್ತದೆ. ಈಗ ಮಾನ್ಯ ಸಹಕಾರ ಸಚಿವರು ತಮ್ಮ ಬೇಡಿಕೆಯನ್ನು ಮಂಡಿಸಬೇಕು.

(ಆ) 2015–16ನೇ ಸಾಲಿನ ಅನುದಾನ ಬೇಡಿಕೆಗಳು

ಬೇಡಿಕೆ ಸಂಖ್ಯೆ 09 – ಸಹಕಾರ

ಬೇಡಿಕೆ ಮಂಡನೆ

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಸಹಕಾರ ಮತ್ತು ಸಕ್ಕರೆ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಹಕಾರ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 120248.00 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 12010.00 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016ರಂದು ಕೊನೆಗೊಳ್ಳವ ಆರ್ಥಿಕ ವರ್ಷದಲ್ಲಿ 'ಸಹಕಾರ' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 120248.00 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 12010.00 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಪ್ರಸ್ತಾವದ ಪರವಾಗಿರುವವರು 'ಹೌದು' ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರು 'ಇಲ್ಲ' ಎಂದು ಸೂಚಿಸಬೇಕು.

ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅಂಗೀಕಾರ ದೊರಕಿದೆ.

ಪ್ರಸ್ತಾವವನ್ನು ಮಂಡಿಸಲಾಗಿದೆ

ಅಧ್ಯಕ್ಷರು:- ಚರ್ಚೆಯನ್ನು ಸೋಮವಾರದಿಂದ ಪ್ರಾರಂಭ ಮಾಡೋಣ. ಏನೆಂದರೆ, ಬಹಳ ಜನರ ಗಮನ ಸೆಳೆಯುವ ಸೂಚನೆಗಳು, ಪ್ರಶ್ನೆಗಳು ಇವೆಲ್ಲಾ ಇವೆ. ಇಂದು ಕೊನೆಯ ದಿನ ಎಂದು ಸದಸ್ಯರು ಗೈರು ಹಾಜರಗಿದ್ದಾರೆ. ಈ ಸಂದರ್ಭದಲ್ಲಿ ಕೇಳಿದರೆ, ಕೇಳಬಹುದೇ ಏನ: ಎಲ್ಲರಿಗೂ ಅವಕಾಶ ಸಿಗುವುದಿಲ್ಲ. ಆದ್ದರಿಂದ, ಎಲ್ಲವನ್ನೂ ಸೋಮವಾರಕ್ಕೆ ಹಾಕಿಕೊಂಡಿದ್ದೇನೆ. ಆದುದರಿಂದ, ಈಗ ಸದನವನ್ನು ಮುಂದೂಡಿ, ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಪುನಃ ಸೇರೋಣ.

(ಸದನವನ್ನು ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು. ಸದನವು ಪುನಃ ದಿನಾಂಕ 06.07.2015ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)